ಗುರುವಾರ, ಜೂನ್ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 168 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಗ್ರಾಮೀಣ ಬ್ಯಾಂಕ್‌ನಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಸ್ಪರ್ಧಾರ್ಥಿಗಳು ಯಾವ ರೀತಿ ಸಿದ್ಧತೆ ನಡೆಸಬೇಕು ಎಂಬುದರ ವಿವರ ಇಲ್ಲಿದೆ.



ಸೆನ್ಸೆಕ್ಸ್	ನಿಫ್ಟಿ	₹/$
52,502 ▼	15,767 ▼	73.32 ▼



ರಾಜ್ಯ ಕೋವಿಡ್ ಅಂಕಿ-ಅಂಶ

27,84,355 ▲	ಒಟ್ಟು ಸೋಂಕಿತರು (27,77,010 ನಿನ್ನೆಯ ವಿವರ)
1,51,566 ▼	ಸಕ್ರಿಯ ಪ್ರಕರಣಗಳು
25,99,472 ▲	ಗುಣಮುಖರಾದವರು
33,296 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	7,345	▲
ಗುಣಮುಖ	17,913	▲
ಸಾವು	148	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸಚಿವರ ಮೌನ: ಪ್ರತ್ಯೇಕವಾಗಿ ಸಿಂಗ್ ಭೇಟಿಗೆ ಯೋಗೇಶ್ವರ್ ನಿರ್ಧಾರ

ಬಿಜೆಪಿ: ಅಹವಾಲೇ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕತ್ವ ಬದಲಾವಣೆ, ಸರ್ಕಾರದ ಕಾರ್ಯವೈಖರಿ ಬಗ್ಗೆ ಶಾಸಕರ ಅಸಮಾಧಾನ ಆಲಿಸಲು ಬೆಂಗಳೂರಿಗೆ ಬುಧವಾರ ಬಂದಿರುವ ಬಿಜೆಪಿಯ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಎದುರು ದೂರು–ಪ್ರತಿದೂರು ಸಲ್ಲಿಸಿ, ತಮಗಿರುವ ಆಕ್ರೋಶ ಹೊರಹಾಕಲು ಆ ಪಕ್ಷದ ಇಬ್ಬಣಗಳ ಶಾಸಕರು ಸಜ್ಜಾಗಿದ್ದಾರೆ. ಇದರಿಂದಾಗಿ ಅಹವಾಲುಗಳ ಸುರಿಮಳೆಯನ್ನೇ ಎದುರಿಸುವ ಸವಾಲು ಉಸ್ತುವಾರಿಗೆ ಎದುರಾಗಿದೆ.


ಅರುಣ್ ಸಿಂಗ್

ಯಡಿಯೂರಪ್ಪ ಪರ ಮತ್ತು ವಿರೋಧಿ ಬಣಗಳು ಈಗಾಗಲೇ ತಾವು ಹೇಳಬೇಕಾಗಿರುವ ಅಂಶಗಳ ದೂರು–ಪ್ರತಿ ದೂರುಗಳ ಪಟ್ಟಿಯನ್ನು ಸಿದ್ಧ ಮಾಡಿಕೊಂಡಿದ್ದು, ಅದನ್ನು ಗುರುವಾರ(ಜೂ.17) ಅರುಣ್‌ಸಿಂಗ್‌ಗೆ ಒಪ್ಪಿಸಲಿದ್ದಾರೆ. ಎಲ್ಲ ಶಾಸಕರ ಅಹವಾಲುಗಳನ್ನು ಕೇಳುವುದಾಗಿಯೂ ಸಿಂಗ್ ಸ್ಪಷ್ಟಪಡಿಸಿದ್ದಾರೆ.

‘ನಾಯಕತ್ವ ಬದಲಾವಣೆಗಾಗಿ ಕೆಲವು ಶಾಸಕರು ದೆಹಲಿಗೆ ಹೋಗಿದ್ದು ನಿಜ’ ಎಂದು ಸಚಿವ ಈಶ್ವರಪ್ಪ ಹೇಳಿರುವುದು ಚರ್ಚೆಗೆ ಒಳಗಾದ ಬೆನ್ನಲ್ಲೇ, ‘ನಾಯಕತ್ವದ ಬಗ್ಗೆ ಚರ್ಚೆಗೆ ಇಲ್ಲಿಗೆ ಬಂದಿಲ್ಲ’ ಎಂದೂ ಅರುಣ್‌ಸಿಂಗ್ ಪ್ರತಿಕ್ರಿಯಿಸಿದ್ದಾರೆ. ಗುರುವಾರದ ಸಭೆಯಲ್ಲಿ ಇವೆಲ್ಲವೂ ಪ್ರಸ್ತಾಪವಾಗುವ ಸಾಧ್ಯತೆ ಇದೆ.



> **ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಾಯಕತ್ವ ಬದಲಾವಣೆ ಮಾಡುವ ಪ್ರಶ್ನೆಯೇ ಇಲ್ಲ. ಸಚಿವರ ಸಭೆಯಲ್ಲಿ ಅದು ಪ್ರಸ್ತಾಪ ಕೂಡ ಆಗಿಲ್ಲ**
> **ನಳಿನ್ ಕುಮಾರ್ ಕಟೀಲ್**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಪಕ್ಷದ ಕಚೇರಿ ‘ಜಗನ್ನಾಥ ಭವನ’ದಲ್ಲಿ ಬುಧವಾರ ಸಂಜೆ ನಡೆದ ಸಚಿವರ ಸಭೆಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ಜತೆ ಮುಖ್ಯಮಂತ್ರಿ ಯಡಿಯೂರಪ್ಪ ಹಾಜರಿದ್ದ ಕಾರಣ, ಯಾವುದೇ ಸಚಿವರು ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಾಧ್ಯವಾಗಲಿಲ್ಲ. ತಾವು ಹೇಳಬೇಕಾಗಿರುವ ಅಂಶಗಳನ್ನು ಹೇಳಿದ ಅರುಣ್‌ಸಿಂಗ್, ಬೇಗನೆ ಸಭೆ ಮುಗಿಸಿದರು ಎಂದು ಮೂಲಗಳು ಹೇಳಿವೆ.

ಸಚಿವರಾದ ಜೆ.ಸಿ.ಮಾಧುಸ್ವಾಮಿ, ಶಶಿಕಲಾ ಜೊಲ್ಲೆ ಮುಂತಾದವರು ತಮ್ಮ ಇಲಾಖೆಯ ಸಾಧನೆಗಳ ಬಗ್ಗೆ ಚುಟುಕಾಗಿ ವಿವರಿಸಿದರು ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

‘ನಾಯಕತ್ವ ಬದಲಿಸುವುದಿದ್ದರೆ ತಕ್ಷಣವೇ ಮಾಡಿ’

ಬೆಂಗಳೂರು: ‘ನಾಯಕತ್ವ ಬದಲಾವಣೆ ಆಗಲೇಬೇಕು. ಮಾಡುವಂತಿದ್ದರೆ, ಜುಲೈ ಒಳಗೆ ಮಾಡಿ. ಇಲ್ಲವಾದರೆ ಮಾಡಲೇಬೇಡಿ’ ಎಂದು ಬಿಜೆಪಿಯ ಕೆಲವು ನಾಯಕರು ಅರುಣ್‌ಸಿಂಗ್ ಅವರಿಗೆ ಸ್ಪಷ್ಟವಾಗಿ ಹೇಳಿದ್ದಾರೆ.

ಕುಮಾರಕೃಪಾ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಿರುವ ಸಿಂಗ್ ಅವರನ್ನು ತಡರಾತ್ರಿ ಭೇಟಿ ಮಾಡಿದ ಕೆಲವು ನಾಯಕರು ಈ ಬಗ್ಗೆ ಮಾತುಕತೆ ನಡೆಸಿದರು.

‘ಆಡಳಿತ ವೈಖರಿಯ ಲೋಪ, ಕುಟುಂಬ ಹಸ್ತಕ್ಷೇಪ, ಶಾಸಕರ ನಿರ್ಲಕ್ಷ್ಯದ ಬಗ್ಗೆ ಗಮನ ಸೆಳೆದಾಗ ತಾಳ್ಮೆಯಿಂದ ಇರಿ ಎಂದಷ್ಟೇ ಅವರು ಹೇಳಿದರು’ ಎಂದು ಹೆಸರು ಬಹಿರಂಗ ಪಡಿಸಲು ಒಪ್ಪದ ಮುಖಂಡರೊಬ್ಬರು ತಿಳಿಸಿದರು.

‘ನಾಯಕತ್ವ ಬದಲಾವಣೆ ವಿಷಯದಲ್ಲಿ ಹೇಳಿಕೆ ಕೊಡುತ್ತಾ ಸುಮ್ಮನೆ ಕಾಲಹರಣ ಮಾಡುವುದರಿಂದ ಪ್ರಯೋಜನವಿಲ್ಲ. ಇದರಿಂದ ಸರ್ಕಾರ ಮತ್ತು ಪಕ್ಷದ ವರ್ಚಸ್ಸು ಕುಗ್ಗುತ್ತದೆ ಎಂದು ಹೇಳಿದೆ. ಮಾತು ಆಲಿಸಿದ ಅವರು, ಸ್ಪಷ್ಟ ಭರವಸೆ ನೀಡಲಿಲ್ಲ’ ಎಂದರು.

‘ನಾಯಕತ್ವ ಬದಲಾವಣೆ ಯತ್ನ ನಿಜ’



‘ಯಡಿಯೂರಪ್ಪ ನಾಯಕತ್ವ ಬದಲಾವಣೆಗಾಗಿ ಕೆಲವು ಶಾಸಕರು ದೆಹಲಿಗೆ ಹೋಗಿದ್ದು ನಿಜ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಕೆಲವು ಶಾಸಕರು ಯಡಿಯೂರಪ್ಪನವರೇ 2 ವರ್ಷ ಮುಂದುವರಿಯಲಿ ಎಂದರೆ, ಇನ್ನು ಕೆಲವರು ಬದಲಾಯಿಸಬೇಕು ಎನ್ನುತ್ತಿದ್ದಾರೆ. ವರಿಷ್ಠರ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಬೇಕಾಗುತ್ತದೆ. ನಾಯಕತ್ವ ವಿಚಾರದಲ್ಲಿ ಏನು ಬೇಕಾದರೂ ಆಗಬಹುದು. ಪಕ್ಷದಲ್ಲಿ ಗೊಂದಲ ಇರುವುದು ನಿಜ’ ಎಂದರು.

ಟ್ವಿಟರ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಲಖನೌ: ‘ಕೋಮು ದ್ವೇಷಕ್ಕೆ ಕುಮ್ಮಕ್ಕು’ ನೀಡಿದ ಆರೋಪದಲ್ಲಿ ಟ್ವಿಟರ್ ವಿರುದ್ಧ ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಪ್ರಕರಣ ದಾಖಲಾಗಿದೆ.

ಟ್ವಿಟರ್ ಸಂಸ್ಥೆಯು ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಅನುಸರಿಸದ ಕಾರಣಕ್ಕೆ ಕಾನೂನು ರಕ್ಷಣೆ ನಷ್ಟವಾದ ಬಳಿಕ ದಾಖಲಾದ ಮೊದಲ ಪ್ರಕರಣ ಇದು.

ಪತ್ರಕರ್ತೆ ಸಬಾ ನಖ್ವಿ, ಸುದ್ದಿ ಪೋರ್ಟಲ್ ‘ದಿ ವೈರ್’ ಮತ್ತು ಟ್ವಿಟರ್ ಅಧಿಕಾರಿಗಳು ಸೇರಿ 9 ಮಂದಿಯ ವಿರುದ್ಧ ದೂರು ದಾಖಲಿಸಲಾಗಿದೆ.

ಅಬ್ದುಲ್ ಸಮದ್ ಎಂಬ ವ್ಯಕ್ತಿಯ ಗಡ್ಡ ಕತ್ತರಿಸಿ, ಹಲ್ಲೆ ನಡೆಸಿ, ‘ಜೈಶ್ರೀರಾಂ’ ಎಂದು ಘೋಷಣೆ ಕೂಗಲು ಬಲವಂತ ಮಾಡಿದ ಪ್ರಕರಣ ಗಾಜಿಯಾಬಾದ್ ಜಿಲ್ಲೆಯ ಲೋನಿ ಎಂಬಲ್ಲಿ ಇದೇ 5ರಂದು ನಡೆದಿದೆ ಎಂದು ಹೇಳಲಾಗಿತ್ತು.

9ನೇ ಪುಟ ನೋಡಿ

ಎಸ್ಸೆಸ್ಸೆಲ್ಸಿ : ಮಾದರಿ ಪ್ರಶ್ನೆ ಪತ್ರಿಕೆ ಬಿಡುಗಡೆ

ಬೆಂಗಳೂರು: ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಎರಡು ಪರೀಕ್ಷೆಗಳು ಜುಲೈ ಮೂರನೇ ವಾರದಲ್ಲಿ ನಡೆಯಲಿದ್ದು, ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಒಎಂಆರ್ ಶೀಟ್ ಮಾಹಿತಿಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬಿಡುಗಡೆ ಮಾಡಿದೆ.

5

ರಸಗೊಬ್ಬರ ಸಬ್ಸಿಡಿ ಹೆಚ್ಚಿಸಿದ ಕೇಂದ್ರ

ನವದೆಹಲಿ (ಪಿಟಿಐ): ಡಿಎಪಿ ಮತ್ತು ಯೂರಿಯಾ ರಹಿತ ಇತರ ಕೆಲವು ರಸಗೊಬ್ಬರಗಳಿಗೆ ₹14,775 ಕೋಟಿ ಸಬ್ಸಿಡಿ ನೀಡಲು ಕೇಂದ್ರ ಸಚಿವ ಸಂಪುಟ ಬುಧವಾರ ನಿರ್ಧರಿಸಿದೆ.

ಕೇಂದ್ರದ ಈ ತೀರ್ಮಾನದಿಂದ ರೈತರಿಗೆ ರಸಗೊಬ್ಬರದ ಮೇಲಿನ ಹೊರೆ ಕಡಿಮೆಯಾಗಲಿದೆ.

11

ಆರ್ಥೋಹರ್ಬ್ ನಿಂದಾಗಿ, ಈ ವರ್ಷ ನಾನು ಖಂಡಿತವಾಗಿ ಕಬ್ಬು ಕುಯ್ಯಲು ಹೋಗುತ್ತೇನೆ.



6-7 ವರ್ಷದಿಂದ ಮೊಣಕಾಲು ನೋವು ಶುರುವಾಗಿದೆ. ಮೊದಲಿಗೆ ನೋವನ್ನು ನಿರ್ಲಕ್ಷಿಸುತ್ತಿದ್ದೆ. ಆಗ ನಡೆಯಲು ಕಷ್ಟವಾಗತೊಡಗಿತು. ದೈನಂದಿನ ಕೆಲಸಗಳನ್ನು ಸಹ ಮಾಡಲು ಕಷ್ಟಕರವಾಗಿತ್ತು. ಅನೇಕ ಪರಿಹಾರಗಳನ್ನು ಪ್ರಯತ್ನಿಸಿ ನೋಡಿದೆ. ಫಲಕಾರಿಯಾಗಲಿಲ್ಲ.
ಮೊಣಕಾಲು ನೋವಿನಿಂದಾಗಿ ನನ್ನ ಜೀವನದಲ್ಲಿ ಮೊದಲ ಬಾರಿಗೆ ಕಬ್ಬು ಕುಯ್ಯಲು ಹೋಗಲು ಸಾಧ್ಯವಾಗಲಿಲ್ಲ. ಈ ಸಮಯದಲ್ಲಿ ಪಂಕಜಕಸ್ತೂರಿ ಆರ್ಥೋಹರ್ಬ್‌ನ ಬಗ್ಗೆ ಅರಿವಾಯಿತು. 3 ತಿಂಗಳು ಆರ್ಥೋಹರ್ಬ್ ಮಾತ್ರೆಗಳನ್ನು ತೆಗೆದುಕೊಂಡ ನಂತರ, ನೋವು ಗಮನಾರ್ಹವಾಗಿ ಕಡಿಮೆಯಾಯಿತು. ನಾನು ಈಗ ಚೆನ್ನಾಗಿದ್ದೇನೆ. ಈಗ ಇನ್ನೂ ನಾನು ಆರ್ಥೋಹರ್ಬ್ ಮಾತ್ರೆ ಸೇವಿಸುತ್ತಿದ್ದೇನೆ. ನಡೆಯಲು ಮತ್ತು ಕೆಲಸ ತೆಗೆದುಕೊಳ್ಳಲು ನನಗೆ ಯಾವ ರೀತಿಯ ತೊಂದರೆ ಇಲ್ಲ. ಈ ವರ್ಷ ನಾನು ಕಬ್ಬು ಕುಯ್ಯಲು ಹೋಗುತ್ತೇನೆ.

ಎಸ್.ಎಂ. ಚಿಟ್ಟೇಗೌಡ
ವಯಸ್ಸು : 51 ವರ್ಷ, ಮಂಡ್ಯ

KERALA AYURVEDA | 100% HERBAL | NO PRESERVATIVES CHEMICALS

ಇದು ಆರ್ಥೋಹರ್ಬ್ ನಿಂದ ಸಂತೃಪ್ತರಾದ ಲಕ್ಷಗಟ್ಟಲೆ ಗ್ರಾಹಕರಲ್ಲಿ ಉಪಯೋಗಿಯೊಬ್ಬರ ಅನುಭವ. ಎಷ್ಟೇ ದಿನದಿಂದ ಕೀಲು ನೋವಿದ್ದರೂ, ಆರ್ಥೋಹರ್ಬ್ ಟ್ಯಾಬ್ಲೆಟ್ಸ್ ನಿಂದ ಅದನ್ನು ನಿಯಂತ್ರಿಸಬಹುದು ಎಂದು ಇದರಿಂದ ರುಜುವಾತಾಗುತ್ತದೆ. ಕೆಮಿಕಲ್‌ಗಳಿಲ್ಲ, ಅಡ್ಡ ಪರಿಣಾಮಗಳಿಲ್ಲ, ಪಥ್ಯ ಇಲ್ಲ.



30 ಮಾತ್ರೆಗಳು ₹150/- | 60 ಮಾತ್ರೆಗಳು ₹275/- | 100 ml ತೈಲ ₹110/-

ಪಂಕಜಕಸ್ತೂರಿ® ಆರ್ಥೋಹರ್ಬ್ ಮಾತ್ರೆಗಳು & ತೈಲ
ದಿನನಿತ್ಯ ಆರ್ಥೋಹರ್ಬ್ ಬಳಸಿ, ಕೀಲು ನೋವಿಗೆ ಗುಡ್‌ಬೈ ಹೇಳಿ.

ಹೆಚ್ಚಿನ ವಿವರಗಳಿಗೆ, ಸಂಪರ್ಕಿಸಿ : 99019 46194
ಎಲ್ಲಾ ವೈದ್ಯಕೀಯ, ಆಯುರ್ವೇದ, ಅಪೊಲೊ ಫಾರ್ಮಸಿ ಮತ್ತು ಮೆಡ್‌ಪ್ಲಸ್ ಅಂಗಡಿಗಳಲ್ಲಿ ಸಿಗುತ್ತದೆ
ಸೇವನೆಯ ಪ್ರಮಾಣ: ಆರಂಭದಲ್ಲಿ, ದಿನಕ್ಕೆ 3 ಬಾರಿ 2 ಮಾತ್ರೆಗಳು ಊಟದ ನಂತರ ಪ್ರತಿದಿನ. ನೋವು ಕಡಿಮೆಯಾದ ಮೇಲೆ ದಿನಕ್ಕೆ ಎರಡುಬಾರಿ 2 ಮಾತ್ರೆಗಳು ಊಟದ ನಂತರ ಪ್ರತಿದಿನ

Pankajakasthuri Herbals India (P) Ltd. • Ph: 0472 289 5301/6301 • info@pkhil.com • www.pankajakasthuri.in

ಆರ್ಥೋಹರ್ಬ್‌ನ ಫಲಿತಾಂಶವು ವ್ಯಕ್ತಿಯಿಂದ ವ್ಯಕ್ತಿಗೆ ಅವರ ಆರೋಗ್ಯ ಪರಿಸ್ಥಿತಿ ಮತ್ತು ರೋಗದ ಅವಧಿಯನ್ನು ಆಧರಿಸಿ ಬದಲಾಗಬಹುದು. ನಿಮ್ಮ ವೈದ್ಯರ ಸಲಹೆಯನ್ನು ಸಹ ನೀವು ಪಡೆಯಬಹುದು. ಇದು ನಿಜವಾದ ಅನುಭವದ ಮರು ಸೃಷ್ಟಿಯಾಗಿದೆ.



ಈಗ ಸುರಿಯಲಿದೆ ಆಶ್ಚರ್ಯಗಳ ಮಳೆ
QR ಕೋಡ್ ಸ್ಕ್ಯಾನ್ ಮಾಡಿ

ರೇನ್ ಸೂಟ್
ರೇನ್ ಜಾಕೆಟ್ ಮತ್ತು ಚಿಟರ್
ರೇನ್‌ಕೋಟ್ | ಪೊಂಚೊ
ರೇಂಜ್ ₹1049 ರಿಂದ ಆರಂಭ

LIGHTWEIGHT | NON-PVC | ODOUR-FREE

WILDCRAFT
READY FOR ANYTHING

Exclusive Online Partner
Flipkart Myntra

ನಿಮ್ಮ ಸಮೀಪದ ಮತ್ತು ಲೀಡಿಂಗ್ ಡೀಲರ್ ಔಟ್‌ಲೆಟ್ಸ್ ಮತ್ತು ವೈಲ್ಡ್‌ಕ್ರಾಫ್ಟ್ ಎಕ್ಸ್‌ಕ್ಲೂಸಿವ್ ಸ್ಟೋರ್ಸ್ !
ಫೀಟ್ ಫ್ಯಾಶನ್ – ಬೆಂಗಳೂರು – 7022573030 | ಫೀಟ್ ಶಾಪ್–ಬೆಂಗಳೂರು – 8884775200 | ಮಂಜು ಬ್ಯಾಗ್ – ಉಳ್ಳಾಲ ಮುಖ್ಯ ರಸ್ತೆ – 9538305795
ಫೀಟ್ ಮ್ಯಾಚ್ – ಯಲಹಂಕಾ – 9964778368 | ಕಾವೇರಿ ಕ್ರಾಫ್ಟ್ ಎಂಪೋರಿಯಮ್ – ವಿಜಯನಗರ – 9341963527 | ವ್ಯಾಪಾರ ವಿಚಾರಣೆಗಾಗಿ ಸಂಪರ್ಕಿಸಿ : 9620350367

ಗುರುವಾರದ ಉಷ್ಣಾಂಶ 28° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಆಗಾಗ ಮಳೆಯಾಗುವ ಸಾಧ್ಯತೆ ಇದೆ.

ಹವಾಮಾನ: ಶುಕ್ರವಾರ 29° 21° | ಶನಿವಾರ 28° 21° | ಭಾನುವಾರ 29° 20°

ಸೂರ್ಯೋದಯ: 5:53 ಸೂರ್ಯಾಸ್ತ: 6:47 ಚಂದ್ರೋದಯ: ಬೆ. 10:46 ಚಂದ್ರಾಸ್ತ: ರಾ. 11:38

ಬುಧವಾರದ ಹವಾಮಾನ : ಗರಿಷ್ಠ 28° ಕನಿಷ್ಠ 21°

ಇಂದಿನಿಂದ 21ರವರೆಗೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 17ರಿಂದ 21ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಪ್ರದೇಶಗಳು: ಮೋನಿಕಾ ಕಾರ್ನರ್ ಹೋಟೆಲ್, ಐಡಿಯಲ್ ಹೋಮ್ಸ್ ಸುತ್ತ-ಮುತ್ತ, ಗ್ಲೋಬಲ್ ಕಾಲೇಜು ರಸ್ತೆ, ವಾಸ್ತು ಹಿಲ್ ವೀವ್, ಮಾರಪ್ಪ ಬಡಾವಣೆ ಆಟೊ ನಿಲ್ದಾಣ, ಸ್ಪರ್ಶ ಆಸ್ಪತ್ರೆ, ಸುಭಾಷನಗರ, ನೇತಾಜಿ ಉದ್ಯಾನ, ಪೆಟ್ರೋಲ್ ಬಂಕ್ ರಸ್ತೆ ಸುತ್ತ-ಮುತ್ತ.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562 114. ಬೆಂಗಳೂರು (ಗ್ರಾ) ಜಿಲ್ಲೆ.
ದೂರವಾಣಿ / ಫ್ಯಾಕ್ಸ್ : 080–2793 4470, 080–2793 5412,
ಇ–ಮೇಲ್ : hosakote.pa@gmail.com ವೆಬ್‌ಸೈಟ್ : www.hoskote.tpa.gov.in

ಸಂಖ್ಯೆ : ಹೊಯೋಪ್ರಾ/ಎಲ್.ಎ.ಓ/31/2007–08 ದಿನಾಂಕ : 09–06–2021

ಸಾರ್ವಜನಿಕ ಪ್ರಕಟಣೆ

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ. ನಂ. 159 ಮತ್ತು 160 (ಹೊಸ ಸ. ನಂ. 160ಪಿ1) ರಲ್ಲಿನ ಒಟ್ಟು 42 ಎಕರೆ 32 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ವಿನ್ಯಾಸದಲ್ಲಿನ ಮೂಲಭೂತ ಸೌಕರ್ಯಗಳನ್ನು (ಸಿವಿಲ್ ಕಾಮಗಾರಿಗಳನ್ನು) ನಿರ್ಮಿಸದೇ ಇರುವ ಬಗ್ಗೆ ನಿವೇಶನಗಳ ಮಾಲೀಕರುಗಳು ದೂರನ್ನು ಸಲ್ಲಿಸಿರುವ ಬಗ್ಗೆ.

ಉಲ್ಲೇಖ : 1) ಈ ಕಛೇರಿ ಸಮ ಸಂಖ್ಯೆ ಮಂಜೂರಾತಿ ಆದೇಶದ ದಿನಾಂಕ : 15–09–2008. 2) ದೂರುದಾರರಾದ ಮಾಸ್ ಇಂಡಿಯಾ ಎನ್.ಜಿ.ಓ. ಉಪಾಧ್ಯಕ್ಷರಾದ ಶ್ರೀ ಜಿ. ಎ. ಕೋಟೆಯಾರ್ ರವರ ದೂರು ಪತ್ರ ಸಂಖ್ಯೆ : Ltr/JN-02/2017, ದಿನಾಂಕ : 18–12–2019, 21–07–2020 ಮತ್ತು 05–01–2021. 3) ಶ್ರೀ ಜಿ. ಸುಧಾಕರ್, ಪಾಲುದಾರರು, ಮೆ॥ ಐಶ್ವರ್ಯ ಹೋಮ್ಸ್, ಬೆಂಗಳೂರು ರವರಿಗೆ ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ : 27–10–2020 ಮತ್ತು 20–01–2021. 4) ದೂರುದಾರರಾದ ಮಾಸ್ ಇಂಡಿಯಾ ಎನ್.ಜಿ.ಓ. ಉಪಾಧ್ಯಕ್ಷರಾದ ಶ್ರೀ ಜಿ.ಎ. ಕೋಟೆಯಾರ್ ರವರ ದೂರು ಪತ್ರ ಸಂಖ್ಯೆ : Ltr/JN-02/2017, ದಿನಾಂಕ : 11–02–2021.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ (1) ರ ಈ ಕಛೇರಿ ಪತ್ರದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ. ನಂ. 159 ಮತ್ತು 160 (ಹೊಸ ಸ.ನಂ. 160ಪಿ1) ರಲ್ಲಿನ ಒಟ್ಟು 42 ಎಕರೆ 32 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ. 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದರೆ, ವಿನ್ಯಾಸದ ಮಾಲೀಕರು ಇಲ್ಲಿಯವರೆಗೆ ಅಂದರೆ ಸುಮಾರು 12 ವರ್ಷ ಕಳೆದರೂ ವಸತಿ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸದೇ ನಿವೇಶನ ಖರೀದಿಸಿದಂತಹ ಮಾಲೀಕರುಗಳಿಗೆ ಅನಾನುಕೂಲ ಉಂಟು ಮಾಡಲಾಗಿರುತ್ತದೆ. ಈ ಬಗ್ಗೆ ದೂರುದಾರರಾದ ಮಾಸ್ ಇಂಡಿಯಾ ಎನ್.ಜಿ.ಓ. ಉಪಾಧ್ಯಕ್ಷರಾದ ಶ್ರೀ ಜಿ.ಎ. ಕೋಟೆಯಾರ್ ರವರು ತಮ್ಮ ಮನವಿ ಪತ್ರದೊಂದಿಗೆ ಸುಮಾರು 64 ನಿವೇಶನಗಳ ಮಾಲೀಕರ ಸಹಿವುಳ್ಳ ದೂರನ್ನು ಮಾನ್ಯ ಮುಖ್ಯಮಂತ್ರಿಗಳಿಗೆ, ನಗರಾಭಿವೃದ್ಧಿ ಇಲಾಖೆಗೆ, ಮಹಾನಗರ ಆಯುಕ್ತರಿಗೆ, ಪೊಲೀಸ್ ಠಾಣೆಗೆ ಹಾಗೂ ಈ ಕಛೇರಿಗೆ ಹಲವು ಬಾರಿ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರುದಾರರಲ್ಲದೇ ಇತರೆ ನಿವೇಶನದ ಮಾಲೀಕರುಗಳು ಸಹ ಈ ಬಗ್ಗೆ ಅನೇಕ ಪತ್ರಗಳನ್ನು ಸಹ ಈ ಕಛೇರಿಗೆ ಕಳುಹಿಸಿ ವಿನ್ಯಾಸದಲ್ಲಿ ಕಲ್ಪಿಸಬೇಕಾದಂತಹ ಮೂಲ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರಿನ ಸೌಲಭ್ಯ, ಒಳಚರಂಡಿ, ಬೀದಿದೀಪ, ಎಸ್.ಟಿ.ಪಿ., ಓ.ಹೆಚ್.ಟಿ., ಉದ್ಯಾನವನ ಮತ್ತು ಬಯಲು ಜಾಗದ ಅಭಿವೃದ್ಧಿ ಕಾರ್ಯಗಳ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸದೇ ನಿವೇಶನ ಖರೀದಿಸಿದ ಮಾಲೀಕರುಗಳಿಗೆ ಅನ್ಯಾಯವೆಸಗಿರುತ್ತಾರೆ ಎಂದು ದೂರನ್ನು ಸಲ್ಲಿಸಿ ತುರ್ತಾಗಿ ಸದರಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಲು ಸಹಕರಿಸುವಂತೆ ಈ ಕಛೇರಿಯನ್ನು ಅನೇಕ ಬಾರಿ ಕೋರಿರುತ್ತಾರೆ.

ಉಲ್ಲೇಖ (2) ರಲ್ಲಿ ನೀಡಿದಂತಹ ದೂರುಗಳಿಗೆ ಸಂಬಂಧಿಸಿದಂತೆ ವಿನ್ಯಾಸದ ಮಾಲೀಕರು / ಅಭಿವೃದ್ಧಿದಾರರು / ಪಾಲುದಾರರಾದ ಶ್ರೀ ಜಿ. ಸುಧಾಕರ್ ಮತ್ತು ಇತರರಿಗೆ ದೂರುಗಳ ಪ್ರತಿಯೊಂದಿಗೆ ನೋಂದಾಯಿತ ಅಂಚೆ ಮೂಲಕ ತಮಗೆ ಈಗಾಗಲೇ ಈ ಕಛೇರಿಯಿಂದ ಪತ್ರ ಬರೆಯಲಾಗಿರುತ್ತದೆ. ಆದರೆ, ಸದರಿ ಪತ್ರಗಳು ತಮ್ಮ ವಿಳಾಸದಲ್ಲಿ ತಾವುಗಳು ಲಭ್ಯವಿಲ್ಲದೇ ಇರುವ ಕಾರಣ ಪತ್ರಗಳು ಈ ಕಛೇರಿಗೆ ಹಿಂದಿರುಗಿರುತ್ತದೆ. ಹಾಗಾಗಿ, ಈ ಸಾರ್ವಜನಿಕ ಪ್ರಕಟಣೆಯನ್ನೇ ಪತ್ರ / ನೋಟಿಸ್ ಎಂದು ಪರಿಗಣಿಸಿ ಉಲ್ಲೇಖ (2) ಮತ್ತು (4) ರಲ್ಲಿ ನೀಡಿದಂತಹ ನಿವೇಶನದ ಮಾಲೀಕರುಗಳ ದೂರಿಗೆ ಸಂಬಂಧಿಸಿದಂತೆ ತುರ್ತಾಗಿ ಸ್ಪಂದಿಸಿ ವಿನ್ಯಾಸದಲ್ಲಿನ ಪೂರ್ಣ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಹಾಗೂ ಸರ್ಕಾರದ ಆದೇಶದ ಅನುಸಾರ ಅಗತ್ಯ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ಪ್ರಸ್ತಾಪಿತ ವಿನ್ಯಾಸದಲ್ಲಿನ ಉಳಿಕೆ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿಕೊಳ್ಳಲು ಅಗತ್ಯ ನಿರಾಕ್ಷೇಪಣಾ ಪತ್ರಗಳೊಂದಿಗೆ ಮನವಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಮುಂದುವರೆದು, ಈ ಸಾರ್ವಜನಿಕ ಪ್ರಕಟಣೆಗೂ ಸಹ ತಾವುಗಳು ಸ್ಪಂದಿಸದೇ ಇದ್ದಲ್ಲಿ ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಮತ್ತೊಮ್ಮೆ ಈ ಮೂಲಕ ತಿಳಿಸಲಾಗಿದೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ,
ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/62/2021–22

ಕೋವಿಡ್-19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನನ್ನ ಹೋರಾಟ ಜಾತಿ ವಿರುದ್ಧ ಅಲ್ಲ: ನಟ ಚೇತನ್

ಪ್ರಜಾವಾಣಿ ವಾರ್ತೆ



ಚೇತನ್

ಬೆಂಗಳೂರು: 'ನನ್ನ ಹೋರಾಟ ಭೇದ-ಭಾವ, ಅಸಮಾನತೆಗಳ ವಿರುದ್ಧವೇ ಹೊರತು ಯಾವುದೇ ಜಾತಿ, ಜನಾಂಗದ ವಿರುದ್ಧವಲ್ಲ. ನನ್ನ ಹೇಳಿಕೆಯಿಂದ ಹಿಂದೆ ಸರಿಯುವುದಿಲ್ಲ. ಈ ಹೋರಾಟ ಮುಂದುವರಿಯುತ್ತದೆ' ಎಂದು ನಟ ಚೇತನ್ ತಿಳಿಸಿದರು.

ಚೇತನ್ ಅವರು ಬ್ರಾಹ್ಮಣ್ಯದ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ದೂರಿ ವಿಪ್ರ ಯುವ ವೇದಿಕೆ ಅಧ್ಯಕ್ಷ ಪವನ್ ಕುಮಾರ್ ಶರ್ಮಾ ನೀಡಿದ್ದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಿಕೊಂಡಿದ್ದ ಬಸವನಗುಡಿ ಪೊಲೀಸರು, ವಿಚಾರಣೆಗೆ ಬರುವಂತೆ ಚೇತನ್ ಅವರಿಗೆ ಮಂಗಳವಾರ ನೋಟಿಸ್ ನೀಡಿದ್ದರು. ಚೇತನ್ ಅವರು ಬುಧವಾರ ವಿಚಾರಣೆಗೆ ಹಾಜರಾದರು.

ವಿಚಾರಣೆ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ನಾನು ಜಾತಿಯ ವಿರುದ್ಧ ಹೋರಾಟ ನಡೆಸುತ್ತಿಲ್ಲ. ಹುಟ್ಟಿದ ತಕ್ಷಣವೇ ಶ್ರೇಷ್ಠ ಹಾಗೂ ಕನಿಷ್ಠ ಎನ್ನುವ ಮನಸ್ಥಿತಿ ಹಾಗೂ ವ್ಯವಸ್ಥೆಯ ವಿರುದ್ಧ ಹೋರಾಟ ಮುಂದುವರಿಯಲಿದೆ' ಎಂದರು.

'ಯಾವುದೇ ಧರ್ಮದ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಮನುಷ್ಯರ ನಡುವೆ ಜೀವಂತವಾಗಿರುವ ಭೇದ ಭಾವನೆಯನ್ನು ಪ್ರಶ್ನಿಸುತ್ತಿದ್ದೇನೆ. ಪ್ರಕರಣ ಸಂಬಂಧ ವಿಚಾರಣೆಗೆ ಕರೆದಿದ್ದರು. ಅಧಿಕಾರಿಗಳ ಪ್ರಶ್ನೆಗೆ ಉತ್ತರಿಸಿದ್ದೇನೆ. ತನಿಖೆಗೆ ಎಲ್ಲ ರೀತಿಯಲ್ಲಿ ಸಹಕರಿಸುತ್ತೇನೆ' ಎಂದೂ ಅವರು ಹೇಳಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ರಸ್ತೆ ಮೂಲಸೌಕರ್ಯ ವಿಭಾಗ, ಬಿಬಿಎಂಪಿ, ಎನ್. ಆರ್ ವೃತ್ತ, ಬೆಂಗಳೂರು–560002

ಸಂ:ಕಾಪಾಅ/ರಮೂಸೌ/ಕೊಟೇಷನ್/01/2021–22 ದಿನಾಂಕ:15.06.2021

ಕೊಟೇಷನ್‌ಗಾಗಿ ಆಹ್ವಾನ

ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಸೌಕರ್ಯ ವಿಭಾಗ ಇವರು ಅರ್ಹ ಸಂಸ್ಥೆಗಳು /ಏಜೆನ್ಸಿಗಳು/ಗುತ್ತಿಗೆದಾರರುಗಳಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ವಿವರ	ಯೂನಿಟ್
1	ಮೆಟ್ರೋ ನಿಲ್ದಾಣದ ಪ್ಲಾಟ್‌ಫಾರಂಗಳು ಮತ್ತು ಪಿಲ್ಲರ್‌ಗಳ ಮೇಲೆ ಕಲಾತ್ಮಕ ಚಿತ್ರಕಲೆಯನ್ನು ಒದಗಿಸುವುದು, ಅಂಡರ್‌ಪಾಸ್‌ಗಳು ಮತ್ತು ಫ್ಲೈಓವರ್‌ಗಳ ಕಾಂಕ್ರೀಟ್ ಮೇಲ್ಮೈಗಳ ಮೇಲೆ ಹಾಲಿ ಇರುವ ಬಣ್ಣ ತೆಗೆದುಹಾಕುವುದು / ಧೂಳು ಸ್ವಚ್ಛಗೊಳಿಸುವುದು, ಎರಡು ಕೋಟ್‌ಗಳ ಪ್ರೈಮರ್ ಬಳಿಯುವುದು ಮತ್ತು ವಿನ್ಯಾಸಕ್ಕೆ ಅನುಗುಣವಾಗಿ ಪಿಲ್ಲರ್‌ಗಳ ಸುತ್ತ ರೇಖಾಚಿತ್ರವನ್ನು ಚಿತ್ರಿಸುವುದು, ಅಂಡರ್‌ಪಾಸ್‌ಗಳು ಮತ್ತು ಫ್ಲೈಓವರ್‌ಗಳ ಕಾಂಕ್ರೀಟ್ ಮೇಲ್ಮೈಗಳ ಮೇಲೆ ಅನುಮೋದಿತ ಬ್ರಾಂಡ್‌ನ ಅಕ್ರಿಲಿಕ್ ಆಧಾರಿತ ತೊಳೆಯಬಹುದಾದ ಬಣ್ಣದಿಂದ ವಿನ್ಯಾಸಕ್ಕೆ ಅನುಗುಣವಾಗಿ ಚಿತ್ರಿಸುವುದು. ಗುಣಮಟ್ಟವು ಸ್ಟೇನ್ ಪ್ರೂಫ್, ಹವಾಮಾನ ನಿರೋಧಕ ವಾಗಿರಬೇಕು. ಕೊಟೇಷನ್‌ಗಳು ವಸ್ತುಗಳ ವೆಚ್ಚ, ಕಾರ್ಮಿಕರ ವೆಚ್ಚ, ಸ್ಕ್ಯಾಫೋಲ್ಡಿಂಗ್ ಶುಲ್ಕಗಳು ಇತ್ಯಾದಿ ಸೇರಿದಂತೆ ಎಲ್ಲಾ ವೆಚ್ಚಗಳ ಪ್ರಕಾರ ಪೂರ್ಣವಾಗಿರಬೇಕು. ಕಾಮಗಾರಿಯನ್ನು ಎಂಜಿನಿಯರ್–ಇನ್–ಚಾರ್ಜ್‌ರವರ ನಿರ್ದೇಶನದಂತೆ ಪೂರ್ಣಗೊಳಿಸಬೇಕಾಗಿರುತ್ತದೆ.	Sqm

1) ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ ವಿಭಾಗರವರ ಕಛೇರಿಯಲ್ಲಿ ಸೀಲ್ ಮಾಡಿದ ಕೊಟೇಷನ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.06.2021. 2) ನಿಗದಿತ ಸಮಯದ ನಂತರ ಸಲ್ಲಿಸಿದ ಕೊಟೇಷನ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. 3) ಕಂಡೀಷನಲ್ ಕೊಟೇಷನ್‌ಗಳನ್ನು ತಿರಸ್ಕರಿಸಲಾಗುವುದು. 4) ಸಲ್ಲಿಸಿದ ಕೋಟೇಷನ್‌ನಲ್ಲಿ ಎಲ್ಲಾ ತೆರಿಗೆಗಳು, ಸೇಲ್ಸ್ ಟ್ಯಾಕ್ಸ್, ಜಿಎಸ್‌ಟಿ, ಮುನಿಸಿಪಲ್ ಟ್ಯಾಕ್ಸ್, ಇಎಸ್‌ಐ, ಎಲ್ಲಾ ರಾಯಲ್ಟಿಗಳು, ಪೇಟೆಂಟ್ ಹಕ್ಕುಗಳು ಮತ್ತು ಇತರೆ ಅವಶ್ಯಕ ವೆಚ್ಚಗಳು ಸೇರಿರಬೇಕು. 5) ಸೀಲ್ ಮಾಡಿದ ಕೊಟೇಷನ್‌ಗಳನ್ನು, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ ವಿಭಾಗರವರ ಕಛೇರಿಯಲ್ಲಿ ದಿನಾಂಕ 24.06.2021ರ ಸಂಜೆ 4.00 ಗಂಟೆಗೆ ತೆರೆಯಲಾಗುವುದು. 6) ಭಾಗವಹಿಸಲು ನಿಬಂಧನೆಗಳು: ಈ ಕೊಟೇಷನ್‌ಗಳು ಮಾರುಕಟ್ಟೆ ದರವನ್ನು ತಿಳಿದುಕೊಳ್ಳಲು ಮಾತ್ರ. ಕಡಿಮೆ ದರ ನಮೂದಿಸಿದ ಬಿಡ್‌ದಾರರಿಗೆ ಟೆಂಡರ್ ನೀಡಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ ವಿಭಾಗ.

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"

ಕೋವಿಡ್-19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಿಯಕರನೊಂದಿಗೆ ಗಾಂಜಾ ಮಾರಾಟ: ಯುವತಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿಯಕರನ ಜೊತೆ ಸೇರಿ ಗಾಂಜಾ ಮಾರಾಟದಲ್ಲಿ ತೊಡಗಿದ್ದ ಆರೋಪದಡಿ ಆಂಧ್ರಪ್ರದೇಶದ ಯುವತಿ ಸೇರಿದಂತೆ ಇಬ್ಬರನ್ನು ಸದಾಶಿವನಗರ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ರೇಣುಕಾ (25) ಹಾಗೂ ಬಿಹಾರದ ಸುಧಾಂಶು (21) ಬಂಧಿತರು.

ತಲೆಮರೆಸಿಕೊಂಡಿರುವ ಪ್ರಿಯಕರ ಕಡಪದ ಸಿದ್ಧಾರ್ಥ್ ಹಾಗೂ ಗಾಂಜಾ ಪೂರೈಸುತ್ತಿದ್ದ ಗೋಪಾಲ್‌ಗಾಗಿ ಶೋಧ ಮುಂದುವರಿಸಿದ್ದಾರೆ.

ಕೆಲಸ ತೊರೆದು ಗಾಂಜಾ ದಂಧೆಗೆ: 'ಚೆನ್ನೈನ ಖಾಸಗಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ ವೇಳೆ ರೇಣುಕಾ ಹಾಗೂ ಸಿದ್ಧಾರ್ಥ್ ಪ್ರೀತಿಸಿದ್ದರು. ಪದವಿ ಪೂರ್ಣಗೊಂಡ ನಂತರ ಚೆನ್ನೈನಲ್ಲೇ ರೇಣುಕಾ ಕೆಲಸ ಮಾಡುತ್ತಿದ್ದಳು'.

'ಮೋಜಿನ ಜೀವನ ನಡೆಸಲು ಗಾಂಜಾ ಮಾರಾಟದ ದಂಧೆಗೆ ಇಳಿದಿದ್ದ ಪ್ರಿಯಕರ ಸಿದ್ಧಾರ್ಥ್, 'ಹೊಸ ಉದ್ಯಮ ಆರಂಭಿಸಿದ್ದೇನೆ. ನೀನೂ ಜೊತೆಯಾದರೆ, ಹೆಚ್ಚು ಹಣ ಸಂಪಾದಿಸಬಹುದು' ಎಂದು ರೇಣುಕಾಳನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದ. ಗಾಂಜಾ ವ್ಯವಹಾರದಲ್ಲಿ ತೊಡಗಿದ್ದ ಸುಧಾಂಶುನನ್ನು ಆಕೆಗೆ ಪರಿಚಯಿಸಿದ್ದ. ಮಾರತ್ತಹಳ್ಳಿಯಲ್ಲಿ ರೂಂನಲ್ಲಿ ಯುವತಿಯನ್ನು ಇರಿಸಿದ್ದ' ಎಂದು ಮೂಲಗಳು ತಿಳಿಸಿವೆ.

'ಒಡಿಶಾ ಹಾಗೂ ವಿಶಾಖಪಟ್ಟಣಗಳಿಂದ ಗೋಪಾಲ್ ಎಂಬುವನಿಂದ ಖರೀದಿಸಿದ ಗಾಂಜಾವನ್ನು ಸಿದ್ಧಾರ್ಥ್, ಯುವತಿಯ ಕೋಣೆಯಲ್ಲಿರಿಸುತ್ತಿದ್ದ'.

'ಗಾಂಜಾವನ್ನು 50 ಗ್ರಾಂ ಸೇರಿದಂತೆ ವಿವಿಧ ಪ್ರಮಾಣಗಳಲ್ಲಿ ಬೇರ್ಪಡಿಸಿ, ಸದಾಶಿವನಗರ ಸೇರಿದಂತೆ ನಗರದ ವಿವಿಧ ಉದ್ಯಾನಗಳು ಹಾಗೂ ರಸ್ತೆಗಳಲ್ಲಿ ನಿಂತು ಸಾವಿರಾರು ರೂಪಾಯಿಗೆ ಗಾಂಜಾ ಮಾರುತ್ತಿದ್ದರು'.

'ಈ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದಾಗ ಯುವತಿ ಹಾಗೂ ಸುಧಾಂಶು ಸಿಕ್ಕಿಬಿದ್ದರು. ಅವರ ಬಳಿ ಇದ್ದ 2.5 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಗೂಂಡಾ ಕಾಯ್ದೆಯಡಿ ಬಂಧನ



ಅಬ್ದುಲ್ಲಾ

ಬೆಂಗಳೂರು: ದರೋಡೆ, ಸುಲಿಗೆ, ಹಲ್ಲೆ, ಕಳವು, ಮಾರಕಾಸ್ತ್ರಗಳಿಂದ ಜೀವ ಬೆದರಿಕೆ ಸೇರಿದಂತೆ ಹಲವು ಅಪರಾಧಗಳಲ್ಲಿ ನಿರಂತರವಾಗಿ ಸಕ್ರಿಯವಾಗಿದ್ದ ಆರೋಪದಡಿ ಚಂದ್ರಾ ಬಡಾವಣೆಯ ರೌಡಿಶೀಟರ್ ಎ.ಅಬ್ದುಲ್ಲಾನನ್ನು (28) ಗೂಂಡಾ ಕಾಯ್ದೆಯಡಿ ಪೊಲೀಸರು ಬಂಧಿಸಿದ್ದಾರೆ.

'ಚಂದ್ರಾ ಬಡಾವಣೆಯಲ್ಲಿ ವಾಸವಿದ್ದ ಆರೋಪಿ, 2017ರಿಂದ ವಿಜಯನಗರ, ಅನ್ನಪೂರ್ಣೇಶ್ವರಿನಗರ, ಬ್ಯಾಟರಾಯನಪುರ ಹಾಗೂ ಚಂದ್ರಾ ಬಡಾವಣೆಯ ಠಾಣೆಗಳಲ್ಲಿ 11 ಪ್ರಕರಣಗಳಲ್ಲಿ ಭಾಗಿಯಾಗಿದ್ದ. ನ್ಯಾಯಾಲಯದ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ನೀಡಿದ ನಂತರ ಷರತ್ತುಬದ್ಧ ಜಾಮೀನಿನ ಮೇಲೆ ಹೊರ ಬಂದು, ಅಪರಾಧ ಚಟುವಟಿಕೆಗಳಲ್ಲಿ ಮುಂದುವರಿದಿದ್ದ' ಎಂದು ಪೊಲೀಸರು ತಿಳಿಸಿದರು.

'ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತಿದ್ದ ಅಬ್ದುಲ್ಲಾನನ್ನು ಬಂಧಿಸಲು ನಗರ ಪೊಲೀಸ್ ಕಮಿಷನರ್‌ಗೆ ವರದಿ ಸಲ್ಲಿಸಲಾಗಿತ್ತು. ಅವರ ಆದೇಶದ ಮೇರೆಗೆ ಗೂಂಡಾ ಕಾಯ್ದೆಯಡಿ ಆರೋಪಿಯನ್ನು ಬಂಧಿಸಿ, ಪರಪ್ಪನ ಅಗ್ರಹಾರಕ್ಕೆ ಕಳುಹಿಸಲಾಗಿದೆ' ಎಂದೂ ಮಾಹಿತಿ ನೀಡಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ತಪ್ಪದೇ ಮಾಸ್ಕ್ ಧರಿಸಿ

IN THE HIGH COURT OF KARNATAKA AT BENGALURU
Notice to the Respondent No.2 vide Court Order dated: 07.06.2021
WRIT PETITION NO. 1314/2021 (L-PF)

The Regional Provident Fund Commissioner, Employees Provident Fund Organization, Sub-Regional Office "Bhavishyanidhi Bhavan", 2nd Stage, Gayathripuram, Mysuru-570019. Karnataka (M R Shalamala, Adv.,) ... **PETITIONER**

V/S

M/s Biligiri Granites, B R Hills Road, Chamaraja Nagar District-571441, Rep. by Proprietor, Sri V Anantha Kumar and another... **RESPONDENTS**

To: **Respondent No.2**: M/s Prasad Granites, No.S-113, First Main, Kodandaramapuram Main Road, Malleswaram, Bengaluru-560003. Rep. by Partner, Sri S Krishna Prasad.

WHEREAS the Writ Petition filed by the above named petitioner under Article 226 & 227 of the Constitution of India, praying to direct the respondent no.1 herein to deposit 50% of the dues determined by the petitioner herein in No:KN/PF/SRO/MYS/ENF/ 3050/2016-17 dated: 24-11-2016 on the file of the petitioner herein, and consequently stay Annexure-A dated 17/06/2020 passed by CGIT-cum-LC, Bangalore in EPF/ITB/276/2017.

Notice is hereby given to you to appear in this Court either in person or through Counsel duly instructed or through some one authorized by law, to Act for you in the above Writ Petition on **14.07.2021** at 10.30 A.M. in case you intend to contest the Writ petition. If you fail to appear, the same will be dealt with, heard and decided in your absence.

Issued under my hand and the seal of this Court, this 07th DAY OF JUNE, 2021.

By order of the Court, Asst. Registrar, High Court of Karnataka, Bangalore.

ಮಾದಕ ವಸ್ತು ಮಾರಾಟ ವಿದೇಶಿ ಪ್ರಜೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಾದಕ ವಸ್ತು ಕೊಕೇನ್ ಮಾರುತ್ತಿದ್ದ ಆರೋಪದಡಿ ವಿದೇಶಿ ಪ್ರಜೆಯನ್ನು ಸಿಸಿಬಿಯ ಮಾದಕವಸ್ತು ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ನಗರದಲ್ಲಿ ವಾಸವಿದ್ದ ನೈಜೀರಿಯಾದ ಕೆಲ್ವಿನ್ ಇಡಿಕಾ ಒಕೊರೊ (28) ಬಂಧಿತ ಡ್ರಗ್ ಪೆಡ್ಲರ್. ಹೊರಮಾವು ಸಿಗ್ನಲ್ ಬಳಿಯ ಕಲ್ಲುಮಂಟಪ ಸರ್ವೀಸ್ ರಸ್ತೆಯ ಬಳಿ ಆರೋಪಿ ಕೊಕೇನ್ ಮಾರಾಟ ಮಾಡುತ್ತಿದ್ದ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ದಾಳಿ ನಡೆಸಿದ ವೇಳೆ ಆರೋಪಿ ಸಿಕ್ಕಿಬಿದ್ದಿದ್ದಾನೆ.

'ಆರೋಪಿ ಬಳಿಯಿದ್ದ ₹4 ಲಕ್ಷ ಮೌಲ್ಯದ 54 ಗ್ರಾಂ. ಕೊಕೇನ್, ದ್ವಿಚಕ್ರ ವಾಹನ, ಮೂರು ಮೊಬೈಲ್ ಹಾಗೂ ತೂಕದ ಯಂತ್ರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿ ವಿದ್ಯಾರ್ಥಿ ವೀಸಾ ಪಡೆದು ಭಾರತಕ್ಕೆ ಬಂದಿದ್ದ. ಇಲ್ಲಿ ಮಾದಕ ವಸ್ತುಗಳ ಮಾರಾಟ ಜಾಲದಲ್ಲಿ ಸಕ್ರಿಯನಾಗಿದ್ದ. ನೈಜೀರಿಯಾದ ವ್ಯಕ್ತಿಯೊಬ್ಬನಿಂದ ಮುಂಬೈನಲ್ಲಿ ಕೊಕೇನ್ ಖರೀದಿಸಿ, ಬಳಿಕ ಬೆಂಗಳೂರಿನಲ್ಲಿ ಮಾರಾಟ ಮಾಡಿ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದ' ಎಂದು ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ ಮಾಹಿತಿ ನೀಡಿದರು.

'ಆರೋಪಿ ವಿರುದ್ಧ ಸಂಪಿಗೆಹಳ್ಳಿ ಠಾಣೆಯಲ್ಲಿ ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಹಾಗೂ ವಿದೇಶಿಯರ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದೂ ಹೇಳಿದರು.



ಪೊಲೀಸರು ಜಪ್ತಿ ಮಾಡಿದ ಕೊಕೇನ್



ಕೆಲ್ವಿನ್ ಇಡಿಕಾ ಒಕೊರೊ

ಕಲ್ಲಿನಿಂದ ಹೊಡೆದು ವ್ಯಕ್ತಿ ಕೊಲೆ

ಬೆಂಗಳೂರು: ಹಣದ ವಿಚಾರವಾಗಿ ವ್ಯಕ್ತಿಯೊಬ್ಬರನ್ನು ಕಲ್ಲಿನಿಂದ ಹೊಡೆದು ಕೊಲೆ ಮಾಡಿರುವ ಘಟನೆ ರಾಜಗೋಪಾಲನಗರ ಠಾಣಾ ವ್ಯಾಪ್ತಿಯ ಜಿಕೆಡಬ್ಲ್ಯು ಬಡಾವಣೆಯಲ್ಲಿ ನಡೆದಿದೆ.

ಮೃತರನ್ನು ಕಾರ್ತಿಕ್ (42) ಎಂದು ಗುರುತಿಸಲಾಗಿದೆ. ಇವರನ್ನು ಮೋಹನ್ (24) ಎಂಬ ಯುವಕ ಕೊಲೆ ಮಾಡಿದ್ದಾನೆ ಎನ್ನಲಾಗಿದೆ.

'ಆರೋಪಿ ಮೋಹನ್, ದೊಡ್ಡ ಕಲ್ಲಿನಿಂದ ಕಾರ್ತಿಕ್ ಅವರ ತಲೆಗೆ ಹೊಡೆದಿರುವ ಪರಿಣಾಮ ಮೃತಪಟ್ಟಿದ್ದಾರೆ. ಬಳಿಕ ಮೋಹನ್ ತಲೆಮರೆಸಿಕೊಂಡಿದ್ದಾನೆ. ಹಣದ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ನಡೆದಿರಬಹುದು ಎಂದು ಮೇಲ್ನೋಟಕ್ಕೆ ತಿಳಿದು ಬಂದಿದೆ' ಎಂದು ಪೊಲೀಸರು ತಿಳಿಸಿದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

31ನೇ ಮಾರ್ಚ್ 2021ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ವರ್ಷಕ್ಕೆ ಕೊನೆಗೊಂಡ	
		31 ಮಾರ್ಚ್ 2021 ಪರಿಶೋಧಿತ (ಟಿಪ್ಪಣಿ 5ನ್ನು ನೋಡಿ)	31 ಡಿಸೆಂಬರ್ 2020 ಅಪರಿಶೋಧಿತ	31 ಮಾರ್ಚ್ 2020 ಪರಿಶೋಧಿತ (ಟಿಪ್ಪಣಿ 5ನ್ನು ನೋಡಿ)	31 ಮಾರ್ಚ್ 2021 ಪರಿಶೋಧಿತ	31 ಮಾರ್ಚ್ 2020 ಪರಿಶೋಧಿತ
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	2,090.79	2,178.07	2,328.53	8,232.21	8,986.21
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು ಮತ್ತು / ಅಥವಾ ಸಹವರ್ತಿಗಳ ಲಾಭದ ಪಾಲು)	17.68	98.88	140.64	194.29	340.21
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ನಂತರ ಮತ್ತು / ಅಥವಾ ವಿಶೇಷ ವಸ್ತುಗಳು ಮತ್ತು / ಅಥವಾ ಸಹವರ್ತಿಗಳ ಲಾಭದ ಪಾಲು)	17.68	98.88	35.37	194.29	234.94
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ನಂತರ, (ವಿನಾಯಿತಿ ಪಡೆದ ನಂತರ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	9.06	78.52	30.39	120.39	161.15
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	12.22	77.35	34.70	113.77	173.26
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)	128.85	128.85	128.85	128.85	128.85
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ)	–	–	–	2,101.99	1,922.54
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ					
	ಎ) ಮೂಲಭೂತ:	0.49	5.94	2.58	13.31	15.47
	ಬಿ) ಡೈಲ್ಯೂಟೆಡ್:	0.49	5.93	2.57	13.30	15.45

ಸೂಚನೆ :

1. 31 ಮಾರ್ಚ್ 2021ರ ತ್ರೈಮಾಸಿಕದ ಹಾಗೂ ವರ್ಷಕ್ಕೆ ಕೊನೆಗೊಂಡ ಪ್ರತ್ಯೇಕವಾದ ಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ (ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ವರ್ಷಕ್ಕೆ ಕೊನೆಗೊಂಡ	
	31 ಮಾರ್ಚ್ 2021 ಪರಿಶೋಧಿತ (ಟಿಪ್ಪಣಿ 5ನ್ನು ನೋಡಿ)	31 ಡಿಸೆಂಬರ್ 2020 ಅಪರಿಶೋಧಿತ	31 ಮಾರ್ಚ್ 2020 ಪರಿಶೋಧಿತ (ಟಿಪ್ಪಣಿ 5ನ್ನು ನೋಡಿ)	31 ಮಾರ್ಚ್ 2021 ಪರಿಶೋಧಿತ	31 ಮಾರ್ಚ್ 2020 ಪರಿಶೋಧಿತ
ನಿರ್ವಹಣೆಯಿಂದ ಬಂದ ನಿವ್ವಳ ಮಾರಾಟ / ವರಮಾನ	971.14	1,060.37	1,241.22	4,283.87	4,867.00
ಲಾಭ / (ನಷ್ಟ) ತೆರಿಗೆಯ ಮುಂಚೆ	16.01	99.03	56.49	331.25	347.82
ಲಾಭ / (ನಷ್ಟ) ತೆರಿಗೆಯ ನಂತರ	4.53	73.76	44.32	240.81	252.36

2. ಮೇಲಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 14ನೇ ಜೂನ್, 2021 ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 15ನೇ ಜೂನ್, 2021 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಕಂಪನಿಯ ನಿರ್ದೇಶಕರ ಮಂಡಳಿಯು ಜೂನ್ 15, 2021 ರಂದು ನಡೆದ ಸಭೆಯಲ್ಲಿ, ಮಾರ್ಚ್ 31, 2021ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಅವಧಿಗೆ ಷೇರು ಬಂಡವಾಳದ ಮೇಲೆ ಪ್ರತಿ 10 ರೂ. ಷೇರಿಗೆ ರೂ. 2/– ಡಿವಿಡೆಂಡ್ ಅನ್ನು ಶಿಫಾರಸು ಮಾಡಿದೆ. ಈ ಅಂತಿಮ ಡಿವಿಡೆಂಡ್ ಅನ್ನು, ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.
4. ಮೇಲಿರುವ ತ್ರೈಮಾಸಿಕಕ್ಕೆ ಕೊನೆಗೊಂಡ, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪ ಮತ್ತು ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಸಂಕ್ಷಿಪ್ತ ರೂಪವಾಗಿದೆ. ಸಮಗ್ರ ಹಣಕಾಸಿನ ಪ್ರತ್ಯೇಕವಾದ ಫಲಿತಾಂಶಗಳ ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.
5. ಪ್ರಸಕ್ತ ಮತ್ತು ಹಿಂದಿನ ವರ್ಷಗಳ ಮಾರ್ಚ್ 31 ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಂಕಿ ಅಂಶಗಳು ಪೂರ್ಣ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಿತ ಅಂಕಿಅಂಶಗಳ ನಡುವಿನ ಸಮತೋಲನ ಅಂಕಿ ಅಂಶಗಳು ಮತ್ತು ಆಯಾ ವರ್ಷಗಳಲ್ಲಿ ಡಿಸೆಂಬರ್ 31 ಕ್ಕೆ ಕೊನೆಗೊಂಡ ಒಂಬತ್ತು ತಿಂಗಳುಗಳ ಲೆಕ್ಕಪರಿಶೋಧಿತ ವರ್ಷದಿಂದ ದಿನಾಂಕದ, ಸೀಮಿತ ವರ್ಷದ ಪರಿಶೀಲನೆಗೆ ಒಳಪಟ್ಟ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದ ಅಂತ್ಯದ ಅಂಕಿಅಂಶಗಳು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: ಜೂನ್ 15, 2021

ಯೋಗ ದಿನ: ಮನೆಯಲ್ಲೇ ಆಚರಣೆಗೆ ಸೂಚನೆ

ಬೆಂಗಳೂರು: ಕೋವಿಡ್ ಕಾರಣ ಈ ಬಾರಿ ಕೂಡ ಅಂತರರಾಷ್ಟ್ರೀಯ ಯೋಗ ದಿನವನ್ನು ಆನ್‌ಲೈನ್ ವೇದಿಕೆಯ ಮೂಲಕ ಮನೆಯಲ್ಲಿಯೇ ಆಚರಿಸಬೇಕು ಎಂದು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಆಯುಷ್ ಇಲಾಖೆ ಸೂಚಿಸಿದೆ.

ಇದೇ 21ಕ್ಕೆ 7ನೇ ಅಂತರರಾಷ್ಟ್ರೀಯ ಯೋಗ ದಿನ ನಡೆಯಲಿದೆ. 'ಮನೆಯಲ್ಲೇ ಇದ್ದು, ಯೋಗವನ್ನು ಆಚರಿಸಿ' ಎನ್ನುವುದು ಈ ಬಾರಿಯ ಘೋಷವಾಕ್ಯ.

'ಯೋಗ ದಿನದಂದು ಬೆಳಿಗ್ಗೆ 7 ಗಂಟೆಯಿಂದ ಯೋಗಾಭ್ಯಾಸ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರು ಇಲಾಖೆಯ ಜಾಲತಾಣ ಅಥವಾ ಯೋಗವನ್ನು ಪ್ರೋತ್ಸಾಹಿಸುವ ಸಂಘ ಸಂಸ್ಥೆಗಳ ಜಾಲತಾಣಗಳ ಮೂಲಕ ತರಬೇತಿ ಪಡೆದುಕೊಳ್ಳಬಹುದು. ಯೋಗಾಸನಗಳಿಂದ ಮಾನಸಿಕ ಮತ್ತು ದೈಹಿಕ ಸದೃಢತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯ' ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ. ಮಹಮ್ಮದ್ ರಫಿ ಎಚ್. ಹಕೀಮ್ ತಿಳಿಸಿದ್ದಾರೆ.

ಸಿಮ್ ಪರಿಶೀಲನೆಯ ನೆಪದಲ್ಲಿ ಹಣ ವಂಚನೆ

ಪ್ರಜಾವಾಣಿ ವಾರ್ತೆ

ತುಮಕೂರು: ವ್ಯಕ್ತಿಯೊಬ್ಬರ ಮೊಬೈಲ್ ಸಿಮ್ ಪರಿಶೀಲನೆ ನೆಪದಲ್ಲಿ ಮಾಹಿತಿ ಪಡೆದು ಬ್ಯಾಂಕ್ ಖಾತೆಯಿಂದ ಹಣ ಪಡೆದುಕೊಂಡು ವಂಚಿಸಲಾಗಿದೆ.

ಲಿಂಗಾಪುರದ ಪರಮ್ ಹನ್ಸ್ ತ್ರಿಪಾಠಿ ಎಂಬುವವರ ಮೊಬೈಲ್‌ಗೆ ಮೆಸೇಜ್ ಬಂದಿದ್ದು, ಅವರು ಆ ಸಂಖ್ಯೆಗೆ ಕರೆ ಮಾಡಿದಾಗ 'ನಿಮ್ಮ ಮೊಬೈಲ್ ಸಿಮ್ ವೆರಿಫಿಕೇಷನ್ ಪ್ರೋಸೆಸ್ ಮಾಡಬೇಕು. ಅದಕ್ಕಾಗಿ ₹10 ಕಳುಹಿಸುವಂತೆ ಹೇಳಿದ್ದಾರೆ. ಅವರು ಕಳುಹಿಸಿದ ಲಿಂಕ್ ಓಪನ್ ಮಾಡಿಕೊಂಡು ಕ್ವಿಕ್ ಸಪೋರ್ಟ್ ಡೌನ್‌ಲೋಡ್ ಮಾಡಿಕೊಂಡು ಹಣ ಕಳುಹಿಸುವಂತೆ ತಿಳಿಸಿದ್ದಾರೆ'.

ಅದರಂತೆ ಲಿಂಕ್ ತೆರೆದು ಅದರಲ್ಲಿ ಎಟಿಎಂ ಕಾರ್ಡ್, ಒಟಿಪಿ ವಿವರಗಳನ್ನು ನೀಡಿದ್ದಾರೆ. ನಂತರ ಕೆನರಾ ಬ್ಯಾಂಕ್ ಖಾತೆಯಿಂದ ಹಂತಹಂತವಾಗಿ ಒಟ್ಟು ₹69,973 ಕಡಿತಗೊಂಡಿದೆ. ಮೋಸ ಮಾಡಿದವರನ್ನು ಪತ್ತೆಮಾಡಿ ಹಣ ವಾಪಸ್ ಕೊಡಿಸುವಂತೆ ದೂರು ನೀಡಿದ್ದು, ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Finance

LOANS: WE Assist To Avail Govt Awaaz Yogana,Rozgar Yogana, Business & Industrial Loans Call: 080-43029162

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

REAL ESTATE SELLING

House

Basaveshwaranagar

HOUSE SALE: 39X60 W/F, 2 Floor, Car-parking (16k Sqft. Fixed) 8th Main, Basaveswara Nagar, Bangalore. 7975999568.

PERSONAL

Change of Name

14833664L, SEP/MT, Lahane Santosh Rodiba, ASC Centre & College, father name records RODIBA instead of RODIBA TRYABAK LAHANE notary KV Mani, Bangalore.

14833664L, SEP/MT, Lahane Santosh Rodiba, ASC Centre & College, mother name records SUNJHER BAI instead of SUNDAR BAI RODIBA LAHANE notary KV Mani, Bangalore.

I,SATHYAM GOYAL resident at No.E-909, 9th Floor, Platinum City, E Block, HMT main road, Yeshwanthpur, Bangalore-560022 have changed my name to M SATHYAM GOYAL vide affidavit dated 14.06.2021 sworn before notary Ambika.S, Bangalore-54.

JOB OPPORTUNITIES


Call Centre

WANTED FEMALE TELE-CALLERS in Bangalore immediately, Food with Accommodation Available. Salary:15000 to 25000 Call:77605-70162

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಕೋವಿಡ್ ಹಿಮ್ಮೆಟ್ಟಿಸಿದ ಸರ್ಕಾರ



‘ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದಿದ್ದರೂ ಸಂಕಷ್ಟದಲ್ಲಿ ಇರುವವರ ನೆರವಿಗೆ ಬಂದಿದ್ದೇವೆ. ನಿಮ್ಮ ಜತೆ ನಾವಿದ್ದೇವೆ, ಯಾರೂ ಧೈರ್ಯಗೆಡಬೇಕಿಲ್ಲ ಎಂಬ ಸಂದೇಶ ನೀಡಿದ್ದೇವೆ. ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಆದಷ್ಟು ಬೇಗ ಪರಿಹಾರದ ಮೊತ್ತವನ್ನು ನೇರವಾಗಿ ಪಾವತಿ ಮಾಡಲಾಗುವುದು’

–ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

ಬಡವರ ಕಷ್ಟಕ್ಕೆ ಮಿಡಿದ ಮುಖ್ಯಮಂತ್ರಿ ಬಿಎಸ್‌ವೈ



ನರೇಂದ್ರ ಮೋದಿ, ಪ್ರಧಾನ ಮಂತ್ರಿ

ತಜ್ಞರ ಸಲಹೆ ಮೇರೆಗೆ ನಿಯಮ ಸಡಿಲಿಕೆ

- ಎಲ್ಲ ಕಾರ್ಖಾನೆಗಳಲ್ಲಿ ಶೇ 50 ರಷ್ಟು ಸಿಬ್ಬಂದಿ ಹಾಗೂ ಗಾರ್ಮೆಂಟ್ಸ್‌ಗಳಲ್ಲಿ ಶೇ 30 ರಷ್ಟು ಹಾಜರಾತಿಯೊಂದಿಗೆ ಕಾರ್ಯ ನಿರ್ವಹಿಸಬಹುದು.
- ಅಗತ್ಯ ವಸ್ತುಗಳ ಮಾರಾಟದ ಅಂಗಡಿಗಳು ಬೆಳಿಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಹಿವಾಟು ನಡೆಸಬಹುದು.
- ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿ ನಡೆಸಲು ಅವಕಾಶ. ಅದಕ್ಕೆ ಪೂರಕವಾದ ಸಾಮಗ್ರಿಗಳು, ಸ್ಟೀಲ್ ಮತ್ತು ಸಿಮೆಂಟ್ ಮಾರಾಟಕ್ಕೆ ಅವಕಾಶ
- ಉದ್ಯಾನಗಳಲ್ಲಿ ಬೆಳಿಗ್ಗೆ 5 ಗಂಟೆಯಿಂದ ಬೆಳಿಗ್ಗೆ 10 ಗಂಟೆಯವರೆಗೆ ವಾಯುವಿಹಾರ ಮಾಡಬಹುದು
- ಬೀದಿ ವ್ಯಾಪಾರಿಗಳು ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಾರಾಟ ಮಾಡಬಹುದು
- ಆಟೋ ಮತ್ತು ಟ್ಯಾಕ್ಸಿಗಳಲ್ಲಿ ಇಬ್ಬರು ಪ್ರಯಾಣಿಕರಿಗೆ ಅವಕಾಶ. ಆದರೆ, ಬಿಎಂಟಿಸಿ ಮತ್ತು ಇತರ ಸಮೂಹ ಸಾರಿಗೆಗಳಿಗೆ ಅವಕಾಶವಿಲ್ಲ.
- ತುರ್ತು ಕಾರ್ಯದ ನಿಮಿತ್ತ ಅಂತರ್ ಜಿಲ್ಲಾ ಪ್ರಯಾಣಕ್ಕೆ ಅವಕಾಶ.

ಬೆಂಗಳೂರು: ರಾಜ್ಯದ ಉದ್ದಗಲಕ್ಕೆ ವ್ಯಾಪಿಸುತ್ತಿದ್ದ ಕೋವಿಡ್ ಎರಡನೇ ಅಲೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಅನಿವಾರ್ಯವಾಗಿ ಏ. 28ರಿಂದ ಲಾಕ್‌ಡೌನ್ ಜಾರಿಗೊಳಿಸಿದೆ. ಬಹುತೇಕ ಎಲ್ಲ ಚಟುವಟಿಕೆಗಳೂ ಬಂದ್ ಆಗಿರುವುದರಿಂದ ಸಹಜವಾಗಿಯೇ ದುಡಿಯುವ ವರ್ಗದ ಜನರು ಹೆಚ್ಚು ಸಂಕಷ್ಟದಲ್ಲಿದ್ದಾರೆ. ₹ 1,750 ಕೋಟಿ ಮೊತ್ತದ ಎರಡು ಪರಿಹಾರ ಪ್ಯಾಕೇಜ್ ಘೋಷಿಸಿರುವ ರಾಜ್ಯ ಸರ್ಕಾರ, ದುಡಿಯುವ ವರ್ಗದ ಸಂಕಷ್ಟಗಳಿಗೆ ಸ್ಪಂದಿಸಿದೆ.

ಲಾಕ್‌ಡೌನ್‌ನಿಂದ ತೊಂದರೆಗೆ ಸಿಲುಕಿರುವ ಅಸಂಘಟಿತ ವಲಯದ ಕಾರ್ಮಿಕರು, ರೈತರು, ಚಾಲಕರು, ಅನುದಾನಿತ ಶಾಲೆಗಳ ಶಿಕ್ಷಕರು, ಅರ್ಚಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಸೇರಿದಂತೆ ಅನೇಕ ಕ್ಷೇತ್ರಗಳ ದುಡಿಯುವ ವರ್ಗದ ಜನರಿಗೆ ಆರ್ಥಿಕ ಪ್ಯಾಕೇಜ್ ಮೂಲಕ ನೆರವಿನ ಹಸ್ತ ಚಾಚುವ ಕೆಲಸವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಮಾಡುತ್ತಿದೆ.

ಮೇ 19ರಂದು ₹ 1,250 ಕೋಟಿ ಮೊತ್ತದ ಮೊದಲ ಪರಿಹಾರ ಪ್ಯಾಕೇಜ್ ಘೋಷಿಸಲಾಗಿತ್ತು. ಹೆಚ್ಚಿದ ಬೇಡಿಕೆಯನ್ನು ಆಧರಿಸಿ ಜೂನ್ 3ರಂದು ₹ 500 ಕೋಟಿ ಮೊತ್ತದ ಎರಡನೇ ಪ್ಯಾಕೇಜ್ ಪ್ರಕಟಿಸಲಾಯಿತು. ಮುಖ್ಯಮಂತ್ರಿಯವರ ಸೂಚನೆಯಂತೆ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಿದ್ದು, ನೇರ ನಗದು ವರ್ಗಾವಣೆ ಮೂಲಕ ವೇಗವಾಗಿ ಸಹಾಯಧನ ತಲುಪಿಸುವ ಕೆಲಸವೂ ಆಗುತ್ತಿದೆ.

ರೈತರ ಸಾಲದ ಮೇಲಿನ ಬಡ್ಡಿ ಮನ್ನಾ

ಸ್ವಸಹಾಯ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ರೈತರು ಪಡೆದ ಸಣ್ಣ, ಮಧ್ಯಮ ಮತ್ತು ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ 2020ರ ಮೇ 1ರಿಂದ ಮರುಪಾವತಿ ಮಾಡಬೇಕಾಗಿದ್ದ ಕಂತುಗಳನ್ನು 2021ರ ಜುಲೈ 31ರವರೆಗೆ ವಿಸ್ತರಿಸಲಾಗಿದೆ.

ಈ ಅವಧಿಯ ಬಡ್ಡಿ ಮೊತ್ತವನ್ನು ಸರ್ಕಾರವೇ ಪಾವತಿಸಲಿದೆ. 4.25 ಲಕ್ಷ ರೈತರಿಗೆ ಇದರಿಂದ ಅನುಕೂಲವಾಗಲಿದೆ. ರೈತರ ಸಾಲದ ಮೇಲಿನ ಬಡ್ಡಿ ಪಾವತಿಗಾಗಿ ಸರ್ಕಾರ ₹134.38 ಕೋಟಿ ಭರಿಸುತ್ತಿದೆ.

ಆಹಾರ ಭದ್ರತೆಯ ಖಾತರಿ: ದುಡಿಮೆ ಇಲ್ಲದ ಆಹಾರ ಪದಾರ್ಥಗಳನ್ನು ಖರೀದಿಸುವುದಕ್ಕೂ ಕಷ್ಟಪಡುತ್ತಿರುವ ಜನರಿಗೆ ಆಹಾರ ಭದ್ರತೆಯನ್ನು ಖಾತರಿಪಡಿಸುವ ಪ್ರಯತ್ನವನ್ನು ಪ್ಯಾಕೇಜ್ ಮೂಲಕ ಮಾಡಲಾಗಿದೆ. ಆಹಾರ ಧಾನ್ಯ ಮತ್ತು ಸಿದ್ಧಪಡಿಸಿದ ಆಹಾರ ವಿತರಿಸುವ ಮೂರು ಯೋಜನೆಗಳಿಗಾಗಿ ₹ 229 ಕೋಟಿ ವೆಚ್ಚ ಮಾಡಲಾಗುತ್ತಿದೆ.

ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಪ್ರತಿ ಸದಸ್ಯರಿಗೆ ‘ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್’ ಯೋಜನೆಯಡಿ ಮೇ ಮತ್ತು ಜೂನ್ ತಿಂಗಳಲ್ಲಿ ತಲಾ 5 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ರಾಜ್ಯದಲ್ಲಿ ಹೆಚ್ಚುವರಿಯಾಗಿ 30 ಲಕ್ಷ ಫಲಾನುಭವಿಗಳನ್ನು ಈ ಯೋಜನೆಯ ವ್ಯಾಪ್ತಿಗೆ ಸೇರಿಸಿದ್ದು, ಇದಕ್ಕಾಗಿ ರಾಜ್ಯ ಸರ್ಕಾರ ₹ 180 ಕೋಟಿ ಭರಿಸುತ್ತಿದೆ.

ಬಿಪಿಎಲ್ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿರುವ ಎಲ್ಲ ಕುಟುಂಬಗಳಿಗೆ ಮೇ ಮತ್ತು ಜೂನ್ ತಿಂಗಳಿನಲ್ಲಿ ತಲಾ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಎಪಿಎಲ್ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿರುವ ಕುಟುಂಬಗಳಿಗೆ ಪ್ರತಿ ಕೆ.ಜಿ.ಗೆ ₹ 15ರ ದರದಲ್ಲಿ ತಲಾ 10 ಕೆ.ಜಿ. ಅಕ್ಕಿ ವಿತರಿಸಲಾಗುತ್ತಿದೆ. ಇದಕ್ಕಾಗಿ ₹ 24 ಕೋಟಿ ವೆಚ್ಚ ಮಾಡಲಾಗುತ್ತಿದೆ.

ಬಿಬಿಎಂಪಿ ಮತ್ತು ರಾಜ್ಯದ ಇತರ ನಗರಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳ ಮೂಲಕ ನಿತ್ಯ 6 ಲಕ್ಷ ಬಡವರಿಗೆ ಉಚಿತವಾಗಿ ಊಟ, ಉಪಾಹಾರ ವಿತರಿಸಲಾಗುತ್ತಿದೆ. ಈ ಉದ್ದೇಶಕ್ಕೆ ರಾಜ್ಯ ಸರ್ಕಾರ ₹ 25 ಕೋಟಿ ವೆಚ್ಚ ಮಾಡುತ್ತಿದೆ.

ನೆರವಿನ ಆಸರೆ: ತರಕಾರಿ, ಹಣ್ಣು, ಹೂವಿನ ಬೆಳೆಗಾರರು, ಮೀನುಗಾರರು, ಕಟ್ಟಡ ಕಾರ್ಮಿಕರು ಚಲನಚಿತ್ರೋದ್ಯಮದ ಕಾರ್ಮಿಕರು, ಕ್ಷೌರಿಕರು, ಅಗಸರು, ಟೈಲರ್‌ಗಳು, ಹಮಾಲಿಗಳು, ಚಿಂದಿ ಆಯುವವರು,ಕುಂಬಾರರು, ಭಟ್ಟಿ ಕಾರ್ಮಿಕರು, ಅಕ್ಕಸಾಲಿಗರು, ಮೆಕ್ಯಾನಿಕ್‌ಗಳು, ಕಮ್ಮಾರರು, ಗೃಹ ಕಾರ್ಮಿಕರು, ಚಮ್ಮಾರರು ಮತ್ತು ರಸ್ತೆ ಬದಿ ವ್ಯಾಪಾರಿಗಳು, ವಿದ್ಯುತ್ ಮಗ್ಗಗಳ ಕಾರ್ಮಿಕರು ಸೇರಿದಂತೆ ಕಡಿಮೆ ಆದಾಯ ಪಡೆಯುವ ದುಡಿಯುವ ವರ್ಗದ ಜನರನ್ನು ಗುರುತಿಸಿ ನೆರವು ಒದಗಿಸುವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆ.

ಧಾರ್ಮಿಕ ಕೇಂದ್ರಗಳಲ್ಲಿ ಸಾರ್ವಜನಿಕರ ಪ್ರವೇಶ ನಿಷೇಧಿಸಿರುವುದರಿಂದ ಆದಾಯವಿಲ್ಲದೇ ಸಂಕಷ್ಟಕ್ಕೆ ಸಿಲುಕಿದ್ದವರಿಗೂ ಸರ್ಕಾರ ನೆರವಿನ ಹಸ್ತ ಚಾಚಿದೆ. ಮುಜರಾಯಿ ವ್ಯಾಪ್ತಿಗೆ ಬರುವ ‘ಸಿ’ ವರ್ಗದ ದೇವಸ್ಥಾನಗಳಲ್ಲಿ ಕೆಲಸ ಮಾಡುವ ಅರ್ಚಕರು, ಅಡುಗೆ ಕೆಲಸಗಾರರು ಮತ್ತು ಸಿಬ್ಬಂದಿಗೆ ತಲಾ ₹3,000 ಸಹಾಯಧನ ನೀಡಲಾಗುತ್ತಿದೆ. 36,047 ಜನರು ಈ ಸೌಲಭ್ಯ ಪಡೆಯಲಿದ್ದಾರೆ. ಮಸೀದಿಗಳಲ್ಲಿ ಕಾರ್ಯನಿರ್ವಹಿಸುವ ಪೇಶ್ ಇಮಾಮ್ ಮತ್ತು ಫೌಜೀಮ್‌ಗಳಿಗೂ ತಲಾ ₹ 3,000 ನೆರವು ಘೋಷಿಸಲಾಗಿದೆ.

ಪರಿಹಾರದ ವಿವರ; ಕಾಯ್ದಿರಿಸಿದ ಒಟ್ಟು ಮೊತ್ತ

- 4.25 ಲಕ್ಷ ರೈತರ ಸಾಲದ ಮೇಲಿನ ಬಡ್ಡಿ ಪಾವತಿ ₹ 1,34 ಕೋಟಿ
- 4.34 ಕೋಟಿ ಫಲಾನುಭವಿಗಳಿಗೆ ಉಚಿತ ಪಡಿತರ ವಿತರಣೆ– ₹ 180 ಕೋಟಿ
- ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿದವರಿಗೆ ಪಡಿತರ ವಿತರಣೆ ₹ 24 ಕೋಟಿ
- ಇಂದಿರಾ ಕ್ಯಾಂಟೀನ್ ಮೂಲಕ ಆಹಾರ ವಿತರಣೆ ₹ 25 ಕೋಟಿ
- ಅನುದಾನರಹಿತ ಶಾಲೆಗಳ ಶಿಕ್ಷಕರಿಗೆ ತಲಾ ₹ 5,000– ₹ 100 ಕೋಟಿ
- ಹೂವು ಬೆಳೆದ 20,000 ರೈತರಿಗೆ ಪ್ರತಿ ಹೆಕ್ಟೇರ್‌ಗೆ ₹ 10,000ದಂತೆ– ₹ 12.73 ಕೋಟಿ
- ಹಣ್ಣು, ತರಕಾರಿ ಬೆಳೆದ 69,000 ರೈತರಿಗೆ ಪ್ರತಿ ಹೆಕ್ಟೇರ್‌ಗೆ ₹ 10,000ದಂತೆ– ₹ 69 ಕೋಟಿ
- 2.10 ಲಕ್ಷ ಚಾಲಕರಿಗೆ ತಲಾ ₹ 3,000– ₹ 63 ಕೋಟಿ
- ಕಟ್ಟಡ ಕಾರ್ಮಿಕರಿಗೆ ತಲಾ ₹ 3,000– ₹ 494 ಕೋಟಿ
- ಅಸಂಘಟಿತ ವಲಯದ 3.04 ಲಕ್ಷ ಕಾರ್ಮಿಕರಿಗೆ ತಲಾ ₹ 2,000– ₹ 60.89 ಕೋಟಿ
- 2.20 ಲಕ್ಷ ಬೀದಿಬದಿ ವ್ಯಾಪಾರಿಗಳಿಗೆ ತಲಾ ₹ 2,000– ₹ 44 ಕೋಟಿ
- 16,095 ಕಲಾವಿದರಿಗೆ ತಲಾ ₹ 3,000– ₹ 4.82 ಕೋಟಿ
- 59,000 ವಿದ್ಯುತ್ ಮಗ್ಗಗಳ ತಲಾ ಇಬ್ಬರಿಗೆ ₹ 2,000– ₹ 35 ಕೋಟಿ
- 42,574 ಆಶಾ ಕಾರ್ಯಕರ್ತೆಯರಿಗೆ ತಲಾ ₹ 3,000– ₹ 12.75 ಕೋಟಿ
- 64,423 ಅಂಗನವಾಡಿ ಕಾರ್ಯಕರ್ತೆಯರು ಮತ್ತು 59,169 ಅಂಗನವಾಡಿ ಸಹಾಯಕಿಯರಿಗೆ ತಲಾ ₹ 2,000– ₹ 24.5 ಕೋಟಿ
- ಕೋವಿಡ್ ನಿರ್ವಹಣೆಗಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ತಲಾ ₹50 ಸಾವಿರ

ಕೋವಿಡ್ ಮರಣ: ಬಡವರಿಗೆ ₹1 ಲಕ್ಷ ಸಹಾಯ

ಕೋವಿಡ್ ಎರಡನೇ ಅಲೆ ಸುನಾಮಿಯಂತೆ ರಾಜ್ಯಕ್ಕೆ ಅಪ್ಪಳಿಸಿದ್ದೂ ಅಲ್ಲದೇ ಸಾವಿರಾರು ಜನರ ಜೀವ ಮತ್ತು ಜೀವನವನ್ನೂ ಕಸಿದುಕೊಂಡಿತು. ಸೋಂಕಿಗೆ ಒಳಗಾಗಿ ನೊಂದು– ಬೆಂದ ಬಡವರಿಗೆ ದಿಕ್ಕಾಗಿದ್ದು ಮಾತ್ರ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ. ಸೋಂಕಿತ ಬಡವರಿಗೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಯ ಜತೆಗೆ ಬದುಕು ಕಳಕೊಂಡವರಿಗೆ ಮತ್ತೆ ಬದುಕು ಕಟ್ಟಿಕೊಡುವ ಕೆಲಸ ಯಡಿಯೂರಪ್ಪ ಮಾಡಿದರು.

ಇದೀಗ ಅವರು ಪ್ರಕಟಿಸಿದ ಯೋಜನೆ ಅದ್ವಿತೀಯ ಎನಿಸಿದೆ. ಬಿಪಿಎಲ್ ಕುಟುಂಬಗಳಲ್ಲಿ ದುಡಿದು ತಂದು ಮನೆ–ಮಂದಿಯನ್ನು ಸಾಕಿ ಸಲಹುತ್ತಿದ್ದ ವ್ಯಕ್ತಿಗಳು ಮೃತಪಟ್ಟಿದ್ದರೆ, ಅಂತಹ ಕುಟುಂಬಗಳ ಅವಲಂಬಿತರಿಗೆ ತಲಾ ₹1 ಲಕ್ಷ ಪರಿಹಾರ ನೀಡುವ ಯೋಜನೆ ಘೋಷಿಸಿದ್ದಾರೆ. ಇಡೀ ದೇಶದಲ್ಲಿ ಯಾವುದೇ ರಾಜ್ಯವೂ ಮಾಡದ ಕೆಲಸವನ್ನು ಮೊದಲ ಬಾರಿಗೆ ಯಡಿಯೂರಪ್ಪ ಅವರು ಮಾಡುವ ಮೂಲಕ ಜನರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ.

ರಾಜ್ಯದಲ್ಲಿ ಎಷ್ಟೋ ಬಿಪಿಎಲ್ ಕುಟುಂಬಗಳಲ್ಲಿ ಮನೆಗೆ ಆಸರೆಯಾಗಿದ್ದವರೇ ಮೃತಪಟ್ಟಿದ್ದರಿಂದ ಅಂತಹ ಕಡು ಬಡ ಕುಟುಂಬಗಳಿಗೆ ದಿಕ್ಕೇ ತೋಚದ ಹಾಗೆ ಆಗಿದೆ. ಇನ್ನು ಕೆಲವು ಮನೆಗಳಲ್ಲಿ ತಂದೆ–ತಾಯಿ ಇಬ್ಬರೂ ಸಾವಿಗೀಡಾಗಿ ಮಕ್ಕಳು ಅನಾಥರಾಗಿದ್ದಾರೆ. ಇಂತಹವರ ಸಂಕಷ್ಟಗಳು ಅವರ ಗಮನಕ್ಕೆ ಬರುತ್ತಿದ್ದಂತೆ, ಅವರ ಕುಟುಂಬಕ್ಕೆ ಏನಾದರೂ ಮಾಡಬೇಕು ಎಂಬ ತುಡಿತ ಮುಖ್ಯಮಂತ್ರಿಯವರಲ್ಲಿ ಕಾಡುತ್ತಲೇ ಇತ್ತು. ಕೋವಿಡ್ ಮತ್ತು ಲಾಕ್‌ಡೌನ್‌ನಿಂದ ಆದಾಯವೇ ಇಲ್ಲದೇ ಸರ್ಕಾರ ತತ್ತರಿಸಿದಾಗಲೂ, ಲಭ್ಯವಿರುವ ಹಣದಲ್ಲಿ ಕಣ್ಣೀರಿನಲ್ಲಿ ಕೈತೊಳೆಯುತ್ತಿರುವ ಕುಟುಂಬಗಳಿಗೆ ಆಸರೆಯಾಗಲು, ಒಂದಷ್ಟು ಮೊತ್ತ ವಿನಿಯೋಗಿಸಿದ್ದಾರೆ. ಈ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಕಷ್ಟ ಕಾಲದಲ್ಲಿ ಜನರ ಜತೆ



ಕೋವಿಡ್‌ನಿಂದಾಗಿ ಸಾಕಷ್ಟು ಕುಟುಂಬಗಳಲ್ಲಿ ದುಡಿಯುವ ವ್ಯಕ್ತಿಗಳೇ ಮೃತಪಟ್ಟಿದ್ದಾರೆ. ಇದರಿಂದ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ತುತ್ತಾಗಿವೆ. ಆ ಕುಟುಂಬಗಳಲ್ಲಿ ದುಡಿಯುವವರೇ ಇಲ್ಲ. ಅವರ ನೆರವಿಗಾಗಿ ಈ ಪರಿಹಾರ ನೀಡಲಾಗುತ್ತಿದೆ. ಅವರ ಕಷ್ಟದ ಕಾಲದಲ್ಲಿ ಅವರ ಜತೆ ನಿಲ್ಲುವುದು ನಮ್ಮ ಉದ್ದೇಶ

-ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

ಬಿಪಿಎಲ್ ಕುಟುಂಬದವರಿಗೆ ಹೀಗೆ ಪರಿಹಾರ ನೀಡುವ ಯೋಜನೆ ಘೋಷಿಸಿರುವ ಮೊದಲ ರಾಜ್ಯ ಕರ್ನಾಟಕ. ಬೇರೆ ಯಾವುದೇ ರಾಜ್ಯ ಈ ದಿಸೆಯಲ್ಲಿ ಯೋಚನೆಯೂ ಮಾಡಿಲ್ಲ. ರಾಜ್ಯದಲ್ಲಿ ಸುಮಾರು 30 ಸಾವಿರ ಕುಟುಂಬಗಳಿಗೆ ಇದರ ಪ್ರಯೋಜನ ಸಿಗಲಿದ್ದು, ಇದಕ್ಕಾಗಿ ₹300 ಕೋಟಿ ಮೀಸಲಿಡಲು ನಿರ್ಧರಿಸಿದೆ.

ಕೇವಲ ಬಡ ಕುಟುಂಬಗಳ ಬಗ್ಗೆ ‘ಮೊಸಳೆ ಕಣ್ಣೀರು’ ಸುರಿಸುವ ವ್ಯಕ್ತಿ ತಾನಲ್ಲ. ಆಡದೇ ಮಾಡುವ ಜಾಯಮಾನ ತಮ್ಮದು. ಮಾಡಿದ್ದು, ಆ ಕುಟುಂಬಗಳಿಗೆ ಪ್ರಾಮಾಣಿಕವಾಗಿ ತಲುಪಬೇಕು ಎಂಬ ಕಳಕಳಿಯೂ ಅವರಲ್ಲಿದೆ ಎಂಬುದಕ್ಕೆ ಈ ಯೋಜನೆಯೇ ಸಾಕ್ಷಿ.

ಒಂದು ಬಾರಿಗೆ ಮಾತ್ರ ಪ್ರಕಟಿಸಿದ ಯೋಜನೆಯೂ ಇದಲ್ಲ. ಎಲ್ಲಿಯವರೆಗೂ ಕೋವಿಡ್ ಸಮಸ್ಯೆ ಇರುತ್ತದೆಯೋ ಅಲ್ಲಿಯವರೆಗೆ ಈ ಯೋಜನೆಯನ್ನು ಮುಂದುವರಿಸಲು ಉದ್ದೇಶಿಸಲಾಗಿದೆ. ಉಚಿತ ಕೋವಿಡ್ ಲಸಿಕೆ ವಿತರಣೆಗಾಗಿ ರಾಜ್ಯ ಸರ್ಕಾರ ಸುಮಾರು ₹1,000 ಕೋಟಿಯನ್ನು ಮೀಸಲಿಡಲು ಉದ್ದೇಶಿಸಿತ್ತು. ಈಗ ಕೇಂದ್ರ ಸರ್ಕಾರವೇ ಅದರ ಭಾರವನ್ನು ಹೊರಲು ತಯಾರಾಗಿರುವುದರಿಂದ, ರಾಜ್ಯಕ್ಕೆ ಕೇಂದ್ರದಿಂದ ಉಚಿತ ಲಸಿಕೆ ಸಿಗಲಿದೆ. ಹೀಗಾಗಿ ಲಸಿಕೆಗಾಗಿ ಮೀಸಲಿಟ್ಟ ಹಣವನ್ನು ಸದ್ಬಳಕೆ ಮಾಡಬೇಕು ಎಂಬ ಯೋಚನೆಯೂ ಯಡಿಯೂರಪ್ಪ ಅವರಲ್ಲಿ ಬಂದಿತ್ತು. ತಕ್ಷಣವೇ ಹಣಕಾಸು ಇಲಾಖೆ ಅಧಿಕಾರಿಗಳ ಜತೆ ತಮ್ಮ ಯೋಚನೆಯನ್ನು ಮುಂದಿಟ್ಟರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬದವರಿಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಸೀಮಿತವಾಗುವಂತೆ ಈ ಪರಿಹಾರ ಸಿಗಲಿದೆ. ಯಾವುದೇ ಬಿಪಿಎಲ್ ಕುಟುಂಬಗಳಲ್ಲಿ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಮೃತಪಟ್ಟಿದ್ದರೂ, ಆ ಕುಟುಂಬದ ದುಡಿಯುವ– ವಯಸ್ಕರ ಹೆಸರಿನಲ್ಲಿ ಮಾತ್ರ ಪರಿಹಾರದ ಮೊತ್ತ ನೀಡಲಾಗುತ್ತದೆ.

ಈ ಯೋಜನೆಯನ್ನು ಪ್ರಕಟಿಸುವ ಸಂದರ್ಭದಲ್ಲಿ ಅವರು ಹೇಳಿದ್ದು ಹೀಗೆ,

ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲೂ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ತುತ್ತಾಗಿದ್ದ ಜನರಿಗೆ ಆರ್ಥಿಕ ನೆರವು ನೀಡಿದ್ದರು. ಎರಡನೇ ಅಲೆಯ ಸಂದರ್ಭವೂ ಸಂಕಷ್ಟಕ್ಕೆ ಒಳಗಾದ ದುಡಿಯುವ ವರ್ಗಕ್ಕೆ ಯಡಿಯೂರಪ್ಪ ಅವರು ಕ್ರಮವಾಗಿ ಮೊದಲ ಪ್ಯಾಕೇಜ್‌ನಲ್ಲಿ ₹1,250 ಕೋಟಿ ಮತ್ತು ಎರಡನೇ ಪ್ಯಾಕೇಜ್‌ನಲ್ಲಿ ₹500 ಕೋಟಿಯನ್ನು ಪ್ರಕಟಿಸಿದ್ದಾರೆ. ಬಡವರ ಸಂಕಷ್ಟಕ್ಕೆ ಮಿಡಿಯುವ ಜೀವಿ ಎಂಬುದನ್ನು ಸಾಬೀತು ಮಾಡಿದ್ದಾರೆ.

ತಜ್ಞರ ಶಿಫಾರಸು ಅನುಸಾರ ಎಚ್ಚರಿಕೆ ನಡೆ

ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯ ಹಾದಿ ಹಿಡಿದರೂ ಸರ್ಕಾರವು ತಜ್ಞರ ಶಿಫಾರಸಿನ ಅನುಸಾರ ಎಚ್ಚರಿಕೆಯ ಹೆಜ್ಜೆಯನ್ನಿಟ್ಟಿದೆ. ಸೋಂಕು ದೃಢ ಪ್ರಮಾಣವು ಹೆಚ್ಚಿನ ಪ್ರಮಾಣದಲ್ಲಿ ಇರುವ ಜಿಲ್ಲೆಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿರುವ ಯಡಿಯೂರಪ್ಪ, ಪ್ರತಿನಿತ್ಯ ವರದಿ ಪಡೆದುಕೊಳ್ಳುತ್ತಿದ್ದಾರೆ. ಮೊದಲ ಹಂತದ ಲಾಕ್‌ಡೌನ್ ಸಡಿಲಿಕೆ ಜೂ.21ರ ಬೆಳಿಗ್ಗೆ 6ಗಂಟೆಯವರೆಗೆ ಅನ್ವಯವಾಗಲಿದೆ. ಆ ಬಳಿಕ ಪರಿಸ್ಥಿತಿಯನ್ನು ಅವಲೋಕಿಸಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆ. ಅಲ್ಲಿಯವರೆಗೆ ರಾತ್ರಿ ಕರ್ಫ್ಯೂ ಹಾಗೂ ವಾರಾಂತ್ಯ ಕರ್ಫ್ಯೂವನ್ನು ವಿಧಿಸಿದೆ. ತಜ್ಞರು ಹಂತ ಹಂತವಾಗಿ ಲಾಕ್‌ಡೌನ್ ಸಡಿಲಿಸಲು ಶಿಫಾರಸು ಮಾಡಿದ್ದರು. ಅದರಂತೆ ಸರ್ಕಾರವು ನಿರ್ಬಂಧಗಳನ್ನು ಸಡಿಲಿಸಲು ಮುಂದಾಗಿದೆ.

ತಜ್ಞರ ಸಲಹೆ ಅನುಸಾರ ಸರ್ಕಾರದಿಂದ ನಿರ್ಬಂಧ ಸಡಿಲಿಕೆ

ಎಚ್ಚರಿಕೆಯ ಲಾಕ್‌ಡೌನ್– ಕೋವಿಡ್ ಡೌನ್

ಬೆಂಗಳೂರು: ಕೋವಿಡ್ ಎರಡನೇ ಅಲೆಯಲ್ಲಿ ಸೋಂಕಿನ ಸರಪಳಿಯನ್ನು ತುಂಡರಿಸಲು ಲಾಕ್‌ಡೌನ್ ಅಸ್ತ್ರ ಪ್ರಯೋಗಿಸಿದ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ, ಈಗ ಸೋಂಕು ನಿಯಂತ್ರಣದ ಹಾದಿ ಹಿಡಿದ ಪರಿಣಾಮ ತಜ್ಞರ ಸಲಹೆಯ ಮೇರೆಗೆ ಹಂತ ಹಂತವಾಗಿ ನಿರ್ಬಂಧಗಳನ್ನು ಸಡಿಲಿಸಲಾರಂಭಿಸಿದೆ.

ಎರಡನೇ ಅಲೆಯ ತೀವ್ರತೆ ಅರಿತ ಸರ್ಕಾರ, ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸು ಮೇರೆಗೆ ಕಳೆದ ಮೇ 10ಕ್ಕೆ ಪೂರ್ಣ ಪ್ರಮಾಣದ ಲಾಕ್‌ಡೌನ್ ಘೋಷಿಸಿತ್ತು. ಕಟ್ಟುನಿಟ್ಟಾಗಿ ಲಾಕ್‌ಡೌನ್ ಜಾರಿ, ಸಭೆ–ಸಮಾರಂಭಗಳಿಗೆ ನಿರ್ಬಂಧ, ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪರೀಕ್ಷೆ, ಸಂಪರ್ಕಿತರ ಪತ್ತೆ, ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಚಿಕಿತ್ಸೆ, ವೈದ್ಯಕೀಯ ಆಮ್ಲಜನಕ ವ್ಯವಸ್ಥೆ, ಕೋವಿಡ್ ಆರೈಕೆ ಕೇಂದ್ರಗಳ ಸ್ಥಾಪನೆ ಸೇರಿದಂತೆ ವಿವಿಧ ಉಪಕ್ರಮಗಳನ್ನು ಕೈಗೊಂಡು, ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಿತು. ಇದರಿಂದಾಗಿ ರಾಜ್ಯದಲ್ಲಿ ಕೋವಿಡ್ ಕಾಯಿಲೆಯ ನಿಯಂತ್ರಣ ಸಾಕಾರವಾಯಿತು.



ಸಾರ್ವಜನಿಕ ಪ್ರದೇಶಗಳಲ್ಲಿ ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿರುವುದು

ಕಳೆದ ವರ್ಷ ಅಕ್ಟೋಬರ್ ಬಳಿಕ ನಿಯಂತ್ರಣಕ್ಕೆ ಬಂದಿದ್ದ ಕೋವಿಡ್, ಮಾರ್ಚ್ ನಂತರ ಏರುಗತಿ ಪಡೆದುಕೊಂಡಿತು. ಎರಡನೇ ಅಲೆಯಲ್ಲಿ ಸೋಂಕು ವೇಗವಾಗಿ ವ್ಯಾಪಿಸಿಕೊಳ್ಳಲಾರಂಭಿಸಿದ ಕಾರಣ ಸರ್ಕಾರವು ಏ.10 ರಿಂದ 7 ಜಿಲ್ಲೆಗಳಿಗೆ ಅನ್ವಯವಾಗುವಂತೆ ರಾತ್ರಿ ಹಾಗೂ ವಾರಾಂತ್ಯ ಕರ್ಫ್ಯೂ ವಿಧಿಸಿತ್ತು. ಬಳಿಕ ತಜ್ಞರ ಸಲಹೆ ಅನುಸಾರ ಅದನ್ನು ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಆ ವೇಳೆಗೆ ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣ ಶೇ 7.04ರಷ್ಟಿತ್ತು.

ಲಾಕ್‌ಡೌನ್ ಯಶಸ್ವಿ: ಸೋಂಕು ದೃಢ ಪ್ರಮಾಣ ಏರಿಕೆಯ ಹಾದಿ ಹಿಡಿದ ಕಾರಣ ಸರ್ಕಾರವು ಕಳೆದ ಏ.27ರಿಂದ ಮೇ 9ರವರೆಗೆ ಕೆಲವು ಚಟುವಟಿಕೆಗಳಿಗೆ ಮಾತ್ರ ಅವಕಾಶ ಕಲ್ಪಿಸಿ, ಇಡೀ ರಾಜ್ಯದಲ್ಲಿ ಜನತಾ ಕರ್ಫ್ಯೂವನ್ನು ಜಾರಿ ಮಾಡಿತು. ಇಷ್ಟಾಗಿಯೂ ಸೋಂಕು ದೃಢ ಪ್ರಮಾಣವು ಶೇ 30ರ ಗಡಿದಾಟಿದ ಪರಿಣಾಮ, ಮೇ 10ರಿಂದ ಪೂರ್ಣ ಪ್ರಮಾಣದ ಲಾಕ್‌ಡೌನ್ ಅನ್ನು ಸರ್ಕಾರ ಘೋಷಿಸಿತು. ಅನಗತ್ಯ ಜನರ ಓಡಾಟಕ್ಕೆ ಕಡಿವಾಣ ಹಾಕಿ, ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಯಿತು. ಐಸಿಯು ಹಾಸಿಗೆ ಹಾಗೂ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳ ಸಂಖ್ಯೆಯನ್ನು ಹಲವು ಪಟ್ಟುಗಳಲ್ಲಿ ಹೆಚ್ಚಿಸಿ, ಎಲ್ಲರಿಗೂ ಚಿಕಿತ್ಸೆ ಕಲ್ಪಿಸಲು ಶ್ರಮಿಸಿತು.

20 ಜಿಲ್ಲೆಗಳಲ್ಲಿ ಸಡಿಲಿಕೆ: ಶೇ 40ರ ಆಸುಪಾಸಿಗೆ ಏರಿಕೆ ಕಂಡಿದ್ದ ಸೋಂಕು ದೃಢ ಪ್ರಮಾಣವು ಈಗ ಶೇ 5ರ ಆಸುಪಾಸಿನಲ್ಲಿದೆ. ಅದೇ ರೀತಿ, ದಿನವೊಂದಕ್ಕೆ 50 ಸಾವಿರಕ್ಕೆ ಏರಿಕೆಯಾಗಿದ್ದ ಪ್ರಕರಣಗಳ ಸಂಖ್ಯೆ 10 ಸಾವಿರದ ಗಡಿಯೊಳಗಿದೆ. ಹೀಗಾಗಿ, ಕೋವಿಡ್ ತಾಂತ್ರಿಕ ಸಲಹಾ ಸಮಿತಿಯಿಂದ ವರದಿ ಪಡೆದ ಸರ್ಕಾರ, ಸೋಂಕು ನಿಯಂತ್ರಣಕ್ಕೆ ಬಂದಿರುವ ಬೆಂಗಳೂರು ಸೇರಿದಂತೆ 20 ಜಿಲ್ಲೆಗಳಲ್ಲಿ ಲಾಕ್‌ಡೌನ್ ಸಡಿಲಿಸಿದೆ. ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಮೈಸೂರು, ಚಾಮರಾಜನಗರ, ಹಾಸನ, ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಬೆಳಗಾವಿ ಹಾಗೂ ಕೊಡಗು ಜಿಲ್ಲೆಯಲ್ಲಿ ಲಾಕ್‌ಡೌನ್ ಮುಂದುವರೆಸಿದೆ.

ಕೋವಿಡ್ ಯೋಧರಿಗೆ ಬಿಎಸ್‌ವೈ ತಾಯ್ತನದ ಸಾಂತ್ವನ

ಬೆಂಗಳೂರು: ಕೋವಿಡ್ ಹೆಸರೆತ್ತಲು ಜನ ಭೀತಿ ಪಡುತ್ತಿದ್ದರೆ ಅಂತಹವರ ಸ್ವ್ಯಾಬ್ ತೆಗೆದು, ಇಂಜೆಕ್ಷನ್ ಕೊಟ್ಟು, ವೆಂಟಿಲೇಟರ್ ಹಾಕುವ ಕೆಲಸದಲ್ಲಿ ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಜೀವ ಕಾಪಾಡಿದವರು ಆರೋಗ್ಯ ಸಿಬ್ಬಂದಿಗಳಾದ ವೈದ್ಯರು, ನರ್ಸ್‌ಗಳು. ಅವರ ಜತೆ ಜತೆಗೆ ದುಡಿದವರು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು.

ಸದಾ ಸೋಂಕಿತರ ಆರೈಕೆಯಲ್ಲಿ ಇರುವ ಕಾರಣ ಈ ಸಿಬ್ಬಂದಿಯೊಂದಿಗೆ ಬೆರೆಯಲು ಜನ ಭಯಪಡುತ್ತಿದ್ದಾರೆ. ಅಂತವರ ಜತೆ ವಿಡಿಯೊ ಸಂವಾದ ನಡೆಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ನಿಮ್ಮೊಂದಿಗೆ ಸರ್ಕಾರ ಇದೆ ಎಂಬ ಧೈರ್ಯ ತುಂಬಿದ್ದಾರೆ.

ಕೋವಿಡ್ ಆರಂಭ ಆದಾಗಿನಿಂದ ನಿರಂತರವಾಗಿ ದಣಿದಿದ್ದ ವೈದ್ಯಕೀಯ ಸಿಬ್ಬಂದಿಯನ್ನು ತಾವೇ ಮಾತನಾಡಿಸಿ ಅವರ ಹೃದಯ ಮುಟ್ಟುವ ಕೆಲಸವನ್ನು ಮುಖ್ಯಮಂತ್ರಿ ಮಾಡಿದರು.

ಅಪಾಯವನ್ನೂ ಲೆಕ್ಕಿಸದೆ ಸೋಂಕಿತರ ಶುಶ್ರೂಷೆಯಲ್ಲಿ ನಿರತರಾದವರನ್ನು ನಗುಮುಖದೊಂದಿಗೆ ಮಾತನಾಡಿಸಿ ಅವರ ಕಷ್ಟ, ಕಾರ್ಪಣ್ಯಗಳನ್ನು ಮುಕ್ತ ಮನಸಿಸಿನಿಂದ ಆಲಿಸಿದರು. ಅಷ್ಟೇ ಅಲ್ಲದೇ, ‘ನಿಮ್ಮ ಸುರಕ್ಷತೆಗೆ ವಹಿಸಿರುವ ಎಚ್ಚರಿಕೆ ಏನು’ ಎಂದು ಕೇಳಿ ತಿಳಿದುಕೊಂಡರು. ‘ಲಸಿಕೆ ಪಡೆದಿದ್ದೀರಾ, ನಿಮ್ಮ ಪ್ರಾಣವೂ ನಮಗೆ ಮುಖ್ಯ’ ಎಂದು ಹೇಳುವ ಮೂಲಕ ಅವರಲ್ಲಿ ಚೈತನ್ಯ ತುಂಬಿದರು.



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಆಶಾ ಕಾರ್ಯಕರ್ತೆಯರು

‘ಸದಾ ಕೋವಿಡ್ ರೋಗಿಗಳ ಜೊತೆಯೇ ಇದ್ದು ಆರೈಕೆ ಮಾಡಿದ್ದೀರಿ. ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ರಾಜ್ಯದ ಅಮೂಲ್ಯ ಆಸ್ತಿ. ನಿಮ್ಮ ಕರ್ತವ್ಯ ಅನುಕರಣೀಯ’ ಎಂದು ಬಣ್ಣಿಸಿ ಅವರಲ್ಲಿ ಹೊಸ ಹುರುಪು ತುಂಬುವ ಕೆಲಸ ಮಾಡಿದರು.

ಸೇವೆಯಲ್ಲಿ ನಿರತರಾಗಿರುವ ಸಂದರ್ಭದಲ್ಲಿ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸಂವಾದ ವೇಳೆ ನೇರವಾಗಿ ಪ್ರಶ್ನಿಸಿದ ಮುಖ್ಯಮಂತ್ರಿ, ‘ಕೋವಿಡ್ ಸಂದರ್ಭ ತಂದೊಡ್ಡಿರುವ ಸವಾಲುಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಸಮರ್ಥವಾಗಿ ಎದುರಿಸಬೇಕಿದೆ. ಲಭ್ಯವಿರುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ, ಪಾರದರ್ಶಕತೆಯಿಂದ ಬಳಸುವ ಅಗತ್ಯವಿದೆ’ ಎಂದು ಅವರಲ್ಲಿ ಕರ್ತವ್ಯದ ಜವಾಬ್ದಾರಿಯನ್ನೂ ಹೆಚ್ಚಿಸಿದರು.

ಮನೆಗೆ ಬನ್ನಿ ಎಂದು ಆಮಂತ್ರಣ ಕೊಟ್ಟ ಯಡಿಯೂರಪ್ಪ

ಅಂಗನವಾಡಿ ಕಾರ್ಯಕರ್ತೆಯಾದ ಬೆಳಗಾವಿ ಜಿಲ್ಲೆ ಬೈಲಹೊಂಗಲದ ಮಂಜುಳಾ ಸಂಗಮೇಶ್ ಅವರನ್ನು ‘ಬೆಂಗಳೂರಿಗೆ ಬಂದಾಗ ಮನೆಗೆ ಬಂದು ಆತಿಥ್ಯ ಸ್ವೀಕರಿಸಿ’ ಎಂದು ಕರೆಯುವ ಮೂಲಕ ಯಡಿಯೂರಪ್ಪ ತಾಯಿ ಹೃದಯ ಮೆರೆದರು.

‘ಕುಟುಂಬದ ಎಲ್ಲಾ ನಾಲ್ವರಿಗೂ ಕೋವಿಡ್ ಸೋಂಕು ತಗುಲಿತ್ತು. ನಾಲ್ವರೂ ಚಿಕಿತ್ಸೆ ಪಡೆದೆವು. ಅತ್ತೆ ಸೇರಿ ಮೂವರೂ ಹುಷಾರಾಗಿ ಮನೆಗೆ ಬಂದೆವು. ಆದರೆ ಪತಿ ಸಾವಿಗೀಡಾದರು’ ಎಂದು ಬೆಂಗಳೂರಿನ ಗಿರಿಜಾ ಅವರು ಹೇಳಿದಾಗ ಮುಖ್ಯಮಂತ್ರಿ ಅವರ ಕಣ್ಣಾಲಿ ಒದ್ದೆಯಾದವು. ಬಳಿಕ, ಮುಖ್ಯಮಂತ್ರಿಗಳು ಗಿರಿಜಾ ಅವರಿಗೆ ಸಾಂತ್ವನ ಮತ್ತು ಧೈರ್ಯ ಹೇಳಿದರು.

ಅಸ್ಥಿ ವಿಸರ್ಜನೆ: ಅವರ್ಯಾರೂ ಅನಾಥರಲ್ಲ...

‘ಕುಟುಂಬಸ್ಥ’ರಾದ ಸರ್ಕಾರ!

ಕೋವಿಡ್ ಮಹಾಮಾರಿಯಿಂದ ಹಲವು ಕುಟುಂಬಗಳು ತಮ್ಮವರನ್ನು ಕಳೆದುಕೊಂಡಿವೆ. ಆ ನೋವು, ಸಂಕಷ್ಟ, ಆಘಾತ, ಆತಂಕದಲ್ಲಿ ಮೃತದೇಹದ ಅಂತ್ಯಕ್ರಿಯೆ ನಡೆಸಿದರೂ, ನೂರಾರು ಪ್ರಕರಣಗಳಲ್ಲಿ ಬಂಧುಗಳು ತಮ್ಮವರ ಚಿತಾಭಸ್ಮ ತೆಗೆದುಕೊಂಡು ಹೋಗಲು ಮುಂದಾಗಲಿಲ್ಲ. ಹಾಗೆಂದು, ಮೃತಪಟ್ಟವರು ಯಾರೂ ಅನಾಥರಲ್ಲ. ಆದರೆ, ಸಂಬಂಧಿಗಳು ಅಸ್ಥಿ ಸ್ವೀಕರಿಸಲು ಮುಂದೆ ಬರಲಿಲ್ಲ ಅಷ್ಟೇ. ಹೀಗಾಗಿ, ಸಾವನ್ನಪ್ಪಿದವರ ಅಸ್ಥಿಗಳು ಚಿತಾಗಾರಗಳಲ್ಲಿ ಹಾಗೇ ಉಳಿದುಕೊಂಡಿದ್ದವು. ಆಗ ‘ಕುಟುಂಬಸ್ಥ’ರ ಸ್ಥಾನದಲ್ಲಿ ನಿಂತು ಅಸ್ಥಿ ವಿಸರ್ಜನೆ ನಡೆಸಿದ ರಾಜ್ಯ ಸರ್ಕಾರ, ಮಾನವೀಯತೆ ಮೆರೆಯಿತು. ಮೃತಪಟ್ಟ ಬಳಿಕ ಅನಾಥವಾದ ಆತ್ಮಗಳಿಗೆ ಸಾಮೂಹಿಕ ಸದ್ಗತಿಯ ಮಹತ್ಕಾರ್ಯ ನೆರವೇರಿಸಿ ಇಡೀ ದೇಶಕ್ಕೇ ಮಾದರಿಯಾಯಿತು!

ಕೊರೊನಾ ಸೋಂಕಿನಿಂದ ಮೃತಪಟ್ಟವರ ಅಸ್ಥಿಗಳಿಗೆ ಗೌರವಪೂರ್ವಕವಾಗಿ ಹಾಗೂ ವಿಧಿವತ್ತಾಗಿ ಸರ್ಕಾರ ಮುಕ್ತಿ ನೀಡಿದೆ. ಕಂದಾಯ ಸಚಿವ ಆರ್. ಅಶೋಕ್ ಮುಂಚೂಣಿಯಲ್ಲಿ ನಿಂತು 500ಕ್ಕೂ ಹೆಚ್ಚು ಜನರ ಅಸ್ಥಿಯನ್ನು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬೆಳವಾಡಿಯ ಅನ್ನಪೂರ್ಣೇಶ್ವರಿ ಹಾಗೂ ಕಾಶಿ ವಿಶ್ವನಾಥ ದೇವಸ್ಥಾನದ ಬಳಿ ಕಾವೇರಿ ಮತ್ತು ಕಪಿಲ ನದಿಗಳ ಸಂಗಮದಲ್ಲಿ ತರ್ಪಣ ಮಾಡಲಾಯಿತು. ಪುರೋಹಿತ ವೇದಬ್ರಹ್ಮ ಭಾನುಪ್ರಕಾಶ್ ಶರ್ಮಾ ಅವರ ವೈದಿಕತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳು ನಡೆದವು.

ಸಾಮಾನ್ಯವಾಗಿ ಮೃತರ ಅಂತ್ಯಸಂಸ್ಕಾರದ ಬಳಿಕ ಅಸ್ಥಿಯನ್ನು ಹರಿಯುವ ನದಿಯಲ್ಲಿ ವಿಸರ್ಜಿಸಿದರೆ, ಮೃತರ ಆತ್ಮಕ್ಕೆ ಮುಕ್ತಿ ಸಿಗುತ್ತದೆ ಎನ್ನುವುದು ನಂಬಿಕೆಯಿದೆ. ಕೊರೊನಾ ಸೋಂಕಿನಿಂದ ಪ್ರಾಣ ಬಿಟ್ಟವರ ಅಂತ್ಯಕ್ರಿಯೆಗೆ ಚಿತಾಗಾರಗಳಲ್ಲಿ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಟ್ಟಿದ್ದ ರಾಜ್ಯ ಸರ್ಕಾರ, ಚಿತಾಭಸ್ಮವನ್ನು ತೆಗೆದುಕೊಂಡು ಹೋಗಲು ಸಂಬಂಧಿಕರಿಗೆ 15 ದಿನಗಳ ಕಾಲಾವಕಾಶ ನೀಡಿತ್ತು. ಸಾಮಾನ್ಯವಾಗಿ ಅಂತ್ಯಕ್ರಿಯೆ ನಡೆದ ದಿನ ಅಥವಾ ಮರುದಿನವೇ ಮೃತರ ಹತ್ತಿರದ ಸಂಬಂಧಿಕರು ಚಿತಾಭಸ್ಮವನ್ನು ತೆಗೆದುಕೊಂಡು ಹೋಗುತ್ತಾರೆ.

ಆದರೆ, ಕೋವಿಡ್‌ನಿಂದ ಮೃತಪಟ್ಟ ಪ್ರಕರಣಗಳಲ್ಲಿ ಅಸ್ಥಿಯನ್ನು ತೆಗೆದುಕೊಂಡು ಹೋಗುವುದಕ್ಕೂ ಸಂಬಂಧಿಕರು ಹಿಂದೇಟು ಹಾಕಿದ್ದಾರೆ. ವಾರಸುದಾರರು ಇಲ್ಲದ ಮತ್ತು ಅಂತ್ಯಕ್ರಿಯೆ ನಡೆಸಲು ಕುಟುಂಬ ಸದಸ್ಯರು ನಿರಾಕರಿಸಿದ ಮೃತದೇಹಗಳನ್ನು ಸರ್ಕಾರದ ವತಿಯಿಂದಲೇ ಶವಸಂಸ್ಕಾರ ನೆರವೇರಿಸಲಾಗಿದೆ. ಅನೇಕ ಮೃತರ ಸಂಬಂಧಿಕರು, ಅಂತ್ಯಕ್ರಿಯೆ ನಡೆಸಿದ ಬಳಿಕ ತಮ್ಮ ಮೊಬೈಲ್ ಸ್ವಿಚ್ ಆಫ್ ಮಾಡಿದ್ದರು. ಅಸ್ಥಿ ತೆಗೆದುಕೊಳ್ಳುವಂತೆ ಸರ್ಕಾರ ಹಲವು ಬಾರಿ ಮನವಿ ಮಾಡಿದರೂ ಸ್ಪಂದಿಸಲಿಲ್ಲ. ಹೀಗಾಗಿ, ಮೃತರ ಚಿತಾಭಸ್ಮವನ್ನು ಕೆಲವು ದಿನಗಳವರೆಗೆ ಹಾಗೇ ಶೇಖರಿಸಿ ಇಡಲಾಗಿತ್ತು. ಭಯ, ಆತಂಕ, ಅನಿವಾರ್ಯ ಸಂದರ್ಭಗಳಿಂದಾಗಿ ಅಸ್ಥಿ ಸ್ವೀಕರಿಸಲು ಕುಟುಂಬ ವರ್ಗದವರು ಮುಂದೆ ಬಾರದೇ ಇದ್ದಾಗ ಸರ್ಕಾರ, ತಾನೇ ಮುಂದೆ ನಿಂತು ಅಂಥ ಅಸ್ಥಿಗಳನ್ನು ವಿಸರ್ಜಿಸಲು ಮನಸ್ಸು ಮಾಡಿತು.

ಕೋವಿಡ್‌ನಿಂದ ಮೃತಪಟ್ಟ ಮುಸ್ಲಿಂ, ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರ ದೇಹಗಳನ್ನು ಅವರವರ ಧರ್ಮ, ಸಂಪ್ರದಾಯದಂತೆ ಹೂಳಲಾಗಿದೆ. ಸಂಸ್ಕಾರ ಮಾಡಲಾದ ಹಿಂದುಗಳ ಅಸ್ಥಿಯನ್ನು ನದಿಯಲ್ಲಿ ವಿಸರ್ಜನೆ ಮಾಡುವುದು ಪದ್ಧತಿ. ಅದನ್ನೂ ಸರ್ಕಾರವೇ ಮಾಡಿದೆ. ಕಾವೇರಿ, ಕಪಿಲಾ ನದಿ ಬಳಿ ಅಸ್ಥಿ ಇದ್ದ ಕುಡಿಕೆಗಳನ್ನು ಸಾಲಾಗಿ ಜೋಡಿಸಿಟ್ಟು, ವಿಸರ್ಜಿಸುವುದಕ್ಕೂ ಮೊದಲು 12 ಧಾರ್ಮಿಕ ವಿಧಿವಿಧಾನಗಳನ್ನು ಸಂಪ್ರದಾಯದಂತೆ ಸರ್ಕಾರವೇ ನೆರವೇರಿಸಿದೆ.

ಮಾನವೀಯ ಮುಖ

‘ಕೋವಿಡ್‌ನಿಂದ ಮಾನವೀಯತೆ ಮರೆಯಾಗಿದೆ. ತಮ್ಮವರ ಅಂತ್ಯಸಂಸ್ಕಾರಕ್ಕೆ ಕುಟುಂಬ ಸದಸ್ಯರೇ ನಿರಾಕರಿಸಿದನಿದರ್ಶನಗಳಿವೆ. ಹೊರರಾಜ್ಯಗಳಲ್ಲಿ ಶವಗಳನ್ನು ನದಿಗೆ ಎಸೆದ ಘಟನೆಗಳೂ ನಡೆದಿವೆ. ನಮ್ಮಲ್ಲಿ ಅಂಥ ಪರಿಸ್ಥಿತಿ ಬರಬಾರದು ಎಂಬ ಕಾರಣಕ್ಕೆ ಸರ್ಕಾರದ ವತಿಯಿಂದಲೇ ಅಂತ್ಯಸಂಸ್ಕಾರ ಮಾಡಿ ಅಸ್ಥಿಯನ್ನೂ ವಿಸರ್ಜನೆ ಮಾಡಲಾಗಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ್ ವಿವರಿಸಿದ್ದಾರೆ.



ಕೋವಿಡ್‌ನಿಂದ ಮೃತಪಟ್ಟವರ ಅಸ್ಥಿಗಳಿಗೆ ಕಾವೇರಿ– ಕಪಿಲೆ ಸಂಗಮದಲ್ಲಿ ಮುಕ್ತಿ ಕೈಂಕರ್ಯ

ಸಮಯ ವಿಸ್ತರಿಸಿದ್ದರೂ ಮೊದಲಿನಷ್ಟೇ ವ್ಯಾಪಾರ: ಸಣ್ಣ ವರ್ತಕರು ● ವ್ಯಾಪಾರಕ್ಕೆ ಸಂಜೆಯವರೆಗೆ ಅವಕಾಶಕ್ಕೆ ಒತ್ತಾಯ

ದಟ್ಟಣೆ ಕಡಿಮೆ, ವ್ಯಾಪಾರವೂ ನಿಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಗತ್ಯ ವಸ್ತುಗಳ ಮಾರಾಟ ಸಮಯವನ್ನು ವಿಸ್ತರಿಸಿರುವುದರಿಂದ ಮಾರುಕಟ್ಟೆಗಳಲ್ಲಿ ಬುಧವಾರ ಎಂದಿನ ದಟ್ಟಣೆ ಕಂಡು ಬರಲಿಲ್ಲ. ಮಧ್ಯಾಹ್ನದವರೆಗೆ ಸಮಯವಿದ್ದುದರಿಂದ ಜನರು ನಿರಾಳರಾಗಿ ಬಂದು ಹೂವು, ಹಣ್ಣು, ತರಕಾರಿ ಖರೀದಿಸಿದರು.

'ಮೊದಲು ಹತ್ತು ಗಂಟೆಯವರೆಗೆ ಮಾತ್ರ ಅವಕಾಶವಿದ್ದುದರಿಂದ ಪ್ರಮುಖ ಮಾರುಕಟ್ಟೆಗೆ ಹೋಗಲು ಸಮಯವಾಗುತ್ತಿರಲಿಲ್ಲ. ಮನೆಯ ಸಮೀಪವಿದ್ದ ಅಂಗಡಿಗಳಿಗೆ, ತರಕಾರಿ ಮಳಿಗೆಗಳಿಗೆ ಹೋಗಲೇಬೇಕಾಗಿತ್ತು. ಬೆಲೆಯೂ ಹೆಚ್ಚಾಗುತ್ತಿತ್ತು. ಈಗ ಯಶವಂತಪುರದಲ್ಲಿನ ದೊಡ್ಡ ಮಾರುಕಟ್ಟೆಗೇ ಹೋಗಿ ಬಂದೆ. ತರಕಾರಿ ಬೆಲೆ ಕಡಿಮೆ ಎನಿಸಿತು, ಹೆಚ್ಚು ದಟ್ಟಣೆಯೂ ಇರಲಿಲ್ಲ' ಎಂದು ಆರ್.ಟಿ. ನಗರದ ಗೋವಿಂದ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಾನು ಮೊದಲು 7 ಅಥವಾ 8 ಗಂಟೆಯಷ್ಟೊತ್ತಿಗೆ ಮಾರುಕಟ್ಟೆಗೆ ಹೋದರೆ ಕಾಲಿಡಲು ಜಾಗವಿಲ್ಲದಷ್ಟು ಜನರು ಇರುತ್ತಿದ್ದರು. ಲಾಕ್‌ಡೌನ್ ಉದ್ದೇಶವೇ ಆಗ ಈಡೇರುತ್ತಿರಲಿಲ್ಲ. ಈಗ ಸಮಯ ಇರುವುದರಿಂದ 11.30ರ ವೇಳೆಗೆ ಮಾರುಕಟ್ಟೆಗೆ ಹೋದೆ. ಬೆರಳೆಣಿಕೆಯಷ್ಟು ಜನರು ಇದ್ದರು' ಎಂದು ಕೆಂಗೇರಿಯ ನಿವಾಸಿ ಮಹಾಂತೇಶ್ ಹೇಳಿದರು.



ನಗರದ ಮೈಸೂರು ರಸ್ತೆಯ ನ್ಯೂ ತರಗುಪೇಟೆಯಲ್ಲಿ ಅಂಗಡಿಗಳು ತೆರೆದಿದ್ದರೂ ಬುಧವಾರ ಹೆಚ್ಚು ಜನ ಕಂಡು ಬರಲಿಲ್ಲ –ಪ್ರಜಾವಾಣಿ ಚಿತ್ರ



ನಗರದ ಎಸ್‌ಆರ್‌ ರಸ್ತೆಯಲ್ಲಿಯೂ ತರಕಾರಿ–ಹಣ್ಣು ಕೊಳ್ಳಲು ಹೆಚ್ಚು ಜನ ಇರಲಿಲ್ಲ

'ಪರಿಹಾರ ಮೊತ್ತ ಇನ್ನೂ ಸಿಕ್ಕಿಲ್ಲ'

'ಬೀದಿಬದಿ ವ್ಯಾಪಾರಿಗಳಿಗೆ ತಲಾ ₹2,000 ಪರಿಹಾರವನ್ನು ಸರ್ಕಾರ ಘೋಷಿಸಿದೆ. ಆದರೆ, ಪದ್ಮನಾಭನಗರ ಒಂದರಲ್ಲಿಯೇ 100ಕ್ಕೂ ಹೆಚ್ಚು ಜನ ಅರ್ಜಿ ಸಲ್ಲಿಸಿದ್ದೇವೆ. ಆದರೆ, ಈವರೆಗೆ ಐದು ಜನರಿಗೆ ಮಾತ್ರ ದುಡ್ಡು ಬಂದಿದೆ. ಸಂಬಂಧಪಟ್ಟವರಿಗೆ ಕೇಳಿದರೆ, ಬರುತ್ತೆ ಕಾಯಿರಿ ಎನ್ನುತ್ತಾರೆ' ಎಂದು ಹೂವಿನ ವ್ಯಾಪಾರಿ ಆರ್. ಮುನಿಲಕ್ಷ್ಮಿ ಹೇಳಿದರು.

'ಬೆಳಿಗ್ಗೆ ಮತ್ತು ಸಂಜೆ ಹೂವಿನ ವ್ಯಾಪಾರ ಆಗುತ್ತದೆ. ಸಂಜೆ ಅವಕಾಶ ಇಲ್ಲದೆ ಇರುವುದರಿಂದ ಹೂವು ಹಾಳಾಗುತ್ತಿದೆ. ವ್ಯಾಪಾರವಿಲ್ಲದೆ ಜೀವನ ನಡೆಸುವುದೇ ಕಷ್ಟವಾಗಿದೆ. ವಿದ್ಯುತ್, ನೀರಿನ ಶುಲ್ಕ, ಮನೆ ಬಾಡಿಗೆ, ಮಕ್ಕಳ ಶಾಲೆಯ ಫೀ ಕಟ್ಟುವುದಕ್ಕೂ ಆಗುತ್ತಿಲ್ಲ' ಎಂದು ಅವರು ಅಳಲು ತೋಡಿಕೊಂಡರು.

ರಸ್ತೆಗಳಲ್ಲಿ ದಟ್ಟಣೆ

ಮಾರುಕಟ್ಟೆಗಳ ಜನದಟ್ಟಣೆ ಕಡಿಮೆಯಿದ್ದರೆ, ರಸ್ತೆಗಳ ಮೇಲೆ ಬುಧವಾರ ವಾಹನ ದಟ್ಟಣೆ ಹೆಚ್ಚಾಗಿತ್ತು. ಸಣ್ಣ ಕೈಗಾರಿಕೆಗಳು ಹಾಗೂ ರಫ್ತು ಆಧಾರಿತ ಉದ್ಯಮಗಳ ಶೇ 50ರಷ್ಟು ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸಲು ಅವಕಾಶ ನೀಡಿರುವುದರಿಂದ, ಬೆಳಿಗ್ಗೆ ಮತ್ತು ಸಂಜೆಯ ವೇಳೆ ದಟ್ಟಣೆ ಉಂಟಾಯಿತು. ಪೀಣ್ಯ ಕೈಗಾರಿಕೆ ಪ್ರದೇಶ ಸುತ್ತ–ಮುತ್ತ ಹಾಗೂ ತುಮಕೂರು ರಸ್ತೆ ಸೇರಿದಂತೆ ಕೈಗಾರಿಕೆಗಳ ಅಕ್ಕ–ಪಕ್ಕದ ಬಡಾವಣೆಗಳ ಪ್ರಮುಖ ರಸ್ತೆಗಳಲ್ಲಿಯೂ ವಾಹನ ದಟ್ಟಣೆ ಕಂಡುಬಂತು.

'ಮಧ್ಯಾಹ್ನದವರೆಗೂ ಸಮಯ ಇದ್ದರೂ, 10 ಗಂಟೆಯವರೆಗೆ ಎಷ್ಟು ವ್ಯಾಪಾರವಾಗುತ್ತಿತ್ತೋ ಅಷ್ಟೇ ಆಗಿದೆ. ಹೆಬ್ಬಾಳ, ಲಾಲ್‌ಬಾಗ್ ಸುತ್ತ–ಮುತ್ತ, ಪುಲಿಕೇಶಿ ನಗರ, ಸಿ.ವಿ.ರಾಮನ್ ನಗರದಲ್ಲಿಯೂ ಅಷ್ಟೇ ವ್ಯಾಪಾರವಾಗಿದೆ. ಮೊದಲು, ಅವಸರದಲ್ಲಿ ಬರುತ್ತಿದ್ದ ಜನ, ಈಗ ತಮಗೆ ಸಮಯ ಸಿಕ್ಕಾಗ ಬಂದು ಹೋಗುತ್ತಿದ್ದಾರೆ' ಎಂದು ಪಟ್ಟಣ ವ್ಯಾಪಾರ ಸಮಿತಿ ಸದಸ್ಯ ಕೇಶವಮೂರ್ತಿ ಹೇಳಿದರು.

'ಹೋಟೆಲ್‌ಗಳ ಕಾರ್ಯನಿರ್ವಹಣೆಗೂ ಈಗ ಅವಕಾಶ ನೀಡಿರುವುದರಿಂದ ಸಗಟು ದರದಲ್ಲಿ ತರಕಾರಿ ಕೊಳ್ಳಲು ಬರುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಆದರೂ, 10 ಗಂಟೆಗಿಂತ ಮೊದಲು ಬರುತ್ತಿದ್ದವರಿಗಿಂತ ಕಡಿಮೆ ಇದೆ. ಹೀಗಾಗಿ, ಅಂತರ ನಿಯಮ ಪಾಲನೆ ಸುಲಭವಾಗಿದೆ' ಎಂದು ಕೆ.ಆರ್. ಮಾರುಕಟ್ಟೆಯ ವರ್ತಕ ಶ್ರೀಧರ್ ತಿಳಿಸಿದರು.

ಎಲ್ಲರಿಗೂ ಅವಕಾಶ ನೀಡಿ: 'ಈಗ ಹೂವು, ಹಣ್ಣು, ತರಕಾರಿ ಮಾರಾಟ ಮಾಡುವವರಿಗೆ ಮಾತ್ರ ಅವಕಾಶ ನೀಡಲಾಗಿದೆ. ಹೂವು–ಹಣ್ಣು, ತರಕಾರಿ ಮಾರುವವರೇ ಶೇ 75ರಷ್ಟು ಇದ್ದಾರೆ. ಆದರೆ, ಬೀದಿ ಬದಿ ಬಜ್ಜಿ, ಬೋಂಡ, ಗೋಬಿ ಮಂಚೂರಿ, ಪಾನಿಪೂರಿ ಮಾರುವವರಿಗೆ, ಬಟ್ಟೆ, ಪ್ಲಾಸ್ಟಿಕ್ ವಸ್ತು ಮಾರಾಟ ಮಾಡುವವರ ಸಂಖ್ಯೆ ಶೇ 25 ಮಾತ್ರ. ಇವರಿಗೂ ಅವಕಾಶ ನೀಡಿದರೆ ಅನುಕೂಲವಾಗುತ್ತದೆ' ಎಂದು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಇ. ರಂಗಸ್ವಾಮಿ ಹೇಳಿದರು.

'ಬಹಳಷ್ಟು ಜನ 10 ಗಂಟೆಗೆ ಕಚೇರಿ ಕೆಲಸಕ್ಕೆ ಹೊರಡುತ್ತಾರೆ. ಅವರು ಮರಳುವುದೇ ಸಂಜೆ. ರಾತ್ರಿ 8 ಗಂಟೆಯವರೆಗಾದರೂ ಅವಕಾಶ ನೀಡಬೇಕು. ಹೆಚ್ಚು ಸಮಯ ಇರುವುದರಿಂದ ಜನರೂ ಗುಂಪುಗೂಡುವುದಿಲ್ಲ. ಅಂತರ ಕಾಯ್ದುಕೊಂಡು ವ್ಯಾಪಾರ ಮಾಡುತ್ತೇವೆ' ಎಂದೂ ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಎನ್‌ಟಿಎಸ್‌ಇ: ಆಕಾಶ್ ವಿದ್ಯಾರ್ಥಿನಿಗೆ ಮೊದಲ ರ್‍ಯಾಂಕ್

ಬೆಂಗಳೂರು: ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆಯ (ಎನ್‌ಟಿಎಸ್‌ಇ) ಮೊದಲ ಹಂತದಲ್ಲಿ ಆಕಾಶ್ ತರಬೇತಿ ಸಂಸ್ಥೆಯ ವಿದ್ಯಾರ್ಥಿನಿ, ನಗರದ ರಿಧಿ ಅಗರ್‌ವಾಲ್ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ ಎಂದು ಸಂಸ್ಥೆ ಹೇಳಿದೆ.

ವಿಜ್ಞಾನ ಮತ್ತು ಸಮಾಜ ವಿಜ್ಞಾನ ಹಾಗೂ ವೈದ್ಯಕೀಯ ಮತ್ತು ಎಂಜಿನಿಯರಿಂಗ್‌ನಲ್ಲಿ ಅಭ್ಯಾಸ ಮುಂದುವರಿಸಲು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವುದಕ್ಕಾಗಿ ರೂಪಿಸಲಾಗಿರುವ ಈ ಪರೀಕ್ಷೆಯಲ್ಲಿ ಸಂಸ್ಥೆಯ ಇತರೆ ನಾಲ್ವರು ವಿದ್ಯಾರ್ಥಿಗಳೂ ಉತ್ತಮ ರ್‍ಯಾಂಕ್ ಪಡೆದಿದ್ದಾರೆ ಎಂದು ಸಂಸ್ಥೆ ಹೇಳಿದೆ.



ಸಾಮಾನ್ಯ ವರ್ಗದಲ್ಲಿ 200 ಅಂಕಗಳಿಗೆ 188 ಅಂಕಗಳನ್ನು ರಿಧಿ ಗಳಿಸಿದ್ದಾರೆ. ಬೆಂಗಳೂರಿನ ಹೇಮಾಂಗ್ ದವೆ 176, ದೀಪಕ್ ಚರಣ್ 173, ವೈಭವ್ ರಾಜ್ 171 ಹಾಗೂ ಅನನ್ಯಾ ಹಲಗತ್ತಿ 170 ಅಂಕಗಳನ್ನು ಪಡೆದಿದ್ದಾರೆ.

'ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಎನ್‌ಟಿಎಸ್‌ಇಯಲ್ಲಿ ರಾಜ್ಯದಲ್ಲಿಯೇ ಪ್ರಮುಖ ಸ್ಥಾನ ಗಳಿಸಿರುವುದು ಹೆಮ್ಮೆಯ ಸಂಗತಿ' ಎಂದು ಆಕಾಶ್ ಎಜುಕೇಷನಲ್ ಸರ್ವಿಸಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಆಕಾಶ್ ಚೌಧರಿ ಹೇಳಿದ್ದಾರೆ.

ಬೆಂಗಳೂರು ವಿ.ವಿ: ಬ್ಯಾಕ್‌ಲಾಗ್ ಹುದ್ದೆಗೆ ಕೊನೆಗೂ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಕೊನೆಗೂ ಅರ್ಜಿ ಆಹ್ವಾನಿಸಲಾಗಿದೆ.

ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಮತ್ತು ಯುವಿಸಿಇ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕ ಬೋಧಕ ಹುದ್ದೆ ಸೇರಿದಂತೆ 20 ಹುದ್ದೆಗಳು ಖಾಲಿ ಇವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಜುಲೈ 30 ಅರ್ಜಿ ಸಲ್ಲಿಸಲು ಕೊನೆಯ ದಿನ. ಹುದ್ದೆಗಳ ವಿವರ, ವಿದ್ಯಾರ್ಹತೆ, ಇನ್ನಿತರೆ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.ac.in ನಿಂದ ಪಡೆಯಬಹುದು ಎಂದು ಕುಲಸಚಿವರಾದ (ಆಡಳಿತ) ಕೆ. ಜ್ಯೋತಿ ಹೇಳಿದ್ದಾರೆ.

2018ರಲ್ಲಿಯೇ ಈ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿದ್ದರೂ, ವಿವಿಧ ಕಾರಣಗಳಿಂದ ಪ್ರಕ್ರಿಯೆ ನನೆಗುದಿಗೆ ಬಿದ್ದಿತ್ತು. ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಆದಷ್ಟು ಶೀಘ್ರವಾಗಿ ಮುಗಿಸಬೇಕು ಎಂದು ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿತ್ತು. ಅರ್ಹ ಅಭ್ಯರ್ಥಿಗಳು ಇದ್ದರೆ ನೇರವಾಗಿ ಸಂದರ್ಶನ ನಡೆಸಿ ಪ್ರಕ್ರಿಯೆ ಮುಗಿಸಲು ವಿಶ್ವವಿದ್ಯಾಲಯ ಚಿಂತನೆ ನಡೆಸಿದೆ. ಸಂದರ್ಶನದ ವೇಳೆಯೂ ಸೂಕ್ತ ಅಭ್ಯರ್ಥಿಗಳು ದೊರೆಯದೇ ಹೋದರೆ ಮರು ಅಧಿಸೂಚನೆ ಹೊರಡಿಸಲಾಗುತ್ತದೆ ಎಂದು ಕುಲಸಚಿವರು ಹೇಳಿದ್ದಾರೆ.

ಕಸ ನಿರ್ವಹಣೆ ಕಂಪನಿ: ಸಿಇಒ ನೇಮಕಾತಿಗೆ ಸಮಿತಿ ರಚನೆ

ಬೆಂಗಳೂರು:'ಬೆಂಗಳೂರು ಕಸ ನಿರ್ವಹಣೆ ನಿಯಮಿತ' ಕಂಪನಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ನೇಮಕಾತಿ ಪ್ರಕ್ರಿಯೆಯನ್ನು ನಿರ್ವಹಿಸಲು ಆರು ಮಂದಿ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ನಗರಾಭಿವೃದ್ಧಿ ಇಲಾಖೆ ಬುಧವಾರ ರಚಿಸಿದೆ.

ಸರ್ಕಾರದ ಹೆಚ್ಚುವರಿ ಮುಖ್ಯ ಆಯುಕ್ತ/ಅಭಿವೃದ್ಧಿ ಆಯುಕ್ತರು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಬಿಬಿಎಂಪಿಯ ಮುಖ್ಯ ಆಯುಕ್ತರು, ಕಸ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತರು, ನಗರದ ಬಡತನ ನಿರ್ಮೂಲನೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ.ರಮೇಶ್ ಎಂ.ಕೆ, ಬೆಂಗಳೂರಿನ ಕಸ ನಿರ್ವಹಣೆ ರೌಂಡ್ ಟೇಬಲ್ ಸಂಸ್ಥೆಯ ಸಂಸ್ಥಾಪಕಿ ಸಂಧ್ಯಾ ನಾರಾಯಣನ್ ಈ ಸಮಿತಿಯ ಸದಸ್ಯರಾಗಿದ್ದಾರೆ. ಬಿಬಿಎಂಪಿಯ ಕಸ ನಿರ್ವಹಣೆ ವಿಭಾಗದ ಜಂಟಿ ಆಯುಕ್ತರು ಈ ಸಮಿತಿಯ ಸದಸ್ಯ ಕಾರ್ಯದರ್ಶಿ ಆಗಿದ್ದಾರೆ.

ಬೆಂಗಳೂರು ಕಸ ನಿರ್ವಹಣೆ ನಿಯಮಿತ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆಗಲು ಬಯಸುವ ಉದ್ಯೋಗಾಕಾಂಕ್ಷಿಗಳ ಸಂದರ್ಶನವನ್ನು ಈ ಸಮಿತಿಯು ನಡೆಸಲಿದೆ. ಸೂಕ್ತ ಅಭ್ಯರ್ಥಿಗಳ ವಿವರಗಳನ್ನು ಕಂಪನಿಯ ಆಡಳಿತ ಮಂಡಳಿಯ ಮುಂದೆ ಮಂಡಿಸಲಿದೆ.

'ಬೆಂಗಳೂರು ಕಸ ನಿರ್ವಹಣೆ ನಿಯಮಿತ' ಕಂಪನಿಯನ್ನು ಕೇಂದ್ರ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಲ್ಲಿ ನೋಂದಾಯಿಸಲಾಗಿದೆ. 2021ರ ಮೇ 22ರಿಂದ ಈ ಕಂಪನಿ ಅಸ್ತಿತ್ವಕ್ಕೆ ಬಂದಿದೆ. ಹೊಸ ಕಾರ್ಯ ನಿರ್ವಾಹಕ ಅಧಿಕಾರಿಯ ನೇಮಕಾತಿ ಪ್ರಕ್ರಿಯೆ ಶೀಘ್ರವೇ ಪೂರ್ಣಗೊಳ್ಳಲಿದ್ದು, ಜುಲೈ 1ರಿಂದ ಕಂಪನಿ ಕಾರ್ಯಾರಂಭಗೊಳಿಸಲಿದೆ. ಬಳಿಕ ಬೆಂಗಳೂರಿನ ಕಸ ನಿರ್ವಹಣೆಯ ಹೊಣೆ ಈ ಕಂಪನಿಯದ್ದಾಗಲಿದೆ' ಎಂದು ನಗರಾಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.

ಹೊರಗುತ್ತಿಗೆ ನೌಕರರನ್ನು ಕೈಬಿಟ್ಟ ಬಿಡಿಎ?

ಕೋವಿಡ್ ಸಂದರ್ಭದಲ್ಲಿ ಹೊಸ ಕೆಲಸ ಸಿಗದು: ಕೆಲಸ ಕಳೆದುಕೊಂಡವರ ಅಳಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಂದರ್ಭದಲ್ಲಿ ಯಾವುದೇ ಸಿಬ್ಬಂದಿಯನ್ನು ಕೆಲಸದಿಂದ ಕಿತ್ತುಹಾಕಬಾರದು ಎಂದು ಕಾರ್ಮಿಕ ಇಲಾಖೆ ಅಧಿಸೂಚನೆ ಹೊರಡಿಸಿದೆ. ಆದರೆ, ಸರ್ಕಾರದ ಅಂಗವೇ ಆಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕೋವಿಡ್ ಸಂದರ್ಭದಲ್ಲೇ ಹೊರಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ಏಕಾಏಕಿ ಕೈಬಿಟ್ಟಿದೆ.

ಕೆಲಸ ಕಳೆದುಕೊಂಡ ಕೆಲವು ಸಿಬ್ಬಂದಿ ಈ ಬಗ್ಗೆ 'ಪ್ರಜಾವಾಣಿ' ಬಳಿ ಅಳಲು ತೋಡಿಕೊಂಡಿದ್ದಾರೆ. ದಿಢೀರ್ ಆಗಿ ಕೆಲಸ ಕಳೆದುಕೊಂಡವರಲ್ಲಿ 10 ವರ್ಷಕ್ಕೂ ಅಧಿಕ ಕಾಲ ಪ್ರಾಧಿಕಾರಕ್ಕಾಗಿ ದುಡಿದವರೂ ಇದ್ದಾರೆ.

'ಬಿಡಿಎ ಕೇಂದ್ರ ಕಚೇರಿಯಲ್ಲಿ 13 ವರ್ಷಗಳಿಂದ ದತ್ತಾಂಶ ನಮೂದಿಸುವ ಸಿಬ್ಬಂದಿಯಾಗಿ (ಡಿಇಒ) ಕಾರ್ಯ ನಿರ್ವಹಿಸುತ್ತಿದ್ದೆ. ಸ್ಟ್ರಾಟೆಜಿಕ್ ಸರ್ವಿಸಸ್ ಕಂಪನಿಯ ಮೂಲಕ ನಾನು ಈ ಕೆಲಸ ಪಡೆದಿದ್ದೆ. ಇದೇ 25ರಿಂದ ಕರ್ತವ್ಯಕ್ಕೆ ಹಾಜರಾಗಬೇಕಿಲ್ಲ ಎಂದು ಕಂಪನಿ ಮೇಲ್ ಮಾಡಿದೆ. ಮುಂದೇನು ಎಂದೇ ತೋಚದ ಸ್ಥಿತಿ ಎದುರಾಗಿದೆ' ಎಂದು ಡಿಇಒ ಒಬ್ಬರು 'ಪ್ರಜಾವಾಣಿ' ಬಳಿ ನೋವು ಹೇಳಿಕೊಂಡರು.

> **ಕೇಂದ್ರ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೆಲವು ಹೊರಗುತ್ತಿಗೆ ಸಿಬ್ಬಂದಿಯನ್ನು ಕೈಬಿಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ತಳ ಮಟ್ಟದ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡಿರಲಿಕ್ಕೂ ಸಾಕು**
> **ಎಂ.ಬಿ.ರಾಜೇಶ್ ಗೌಡ,** ಬಿಡಿಎ ಆಯುಕ್ತ

ಬಿಡಿಎ ಸುದ್ದಿ

'ನನಗೆ 13 ವರ್ಷದ ಮಗನಿದ್ದಾನೆ. ವಯಸ್ಸಾದ ತಂದೆ ತಾಯಿಯನ್ನೂ ನೋಡಿಕೊಳ್ಳಬೇಕು. ಬಿಡಿಎಯಲ್ಲಿ ತಿಂಗಳಿಗೆ ಕೇವಲ ₹ 16,500 ಸಂಬಳ ಸಿಗುತ್ತಿತ್ತು. ನಗರದಲ್ಲಿ ಮನೆ ಬಾಡಿಗೆ ಕಟ್ಟಲು ಹಣ ಸಾಲದು ಎಂಬ ಕಾರಣಕ್ಕೆ 40 ಕಿ.ಮೀ ದೂರದ ಊರಿನಿಂದ ರೈಲಿನಲ್ಲಿ ನಗರಕ್ಕೆ ಬಂದು ಕೆಲಸ ಮಾಡುತ್ತಿದ್ದೆ. ಕೋವಿಡ್ ಸಂದರ್ಭದಲ್ಲಿ ಎಲ್ಲೂ ಹೊಸ ಕೆಲಸ ಸಿಗುತ್ತಿಲ್ಲ' ಎಂದು ಅವರು ತಮ್ಮ ಪರಿಸ್ಥಿತಿ ವಿವರಿಸಿದರು.

'ನನ್ನ ಮಗುವಿಗೆ ಹುಷಾರಿಲ್ಲ ಎಂಬ ಕಾರಣಕ್ಕೆ ವಾರದಿಂದ ನಾನು ಕೆಲಸಕ್ಕೆ ರಜೆ ಹಾಕಿದ್ದೆ. ಕೆಲವರನ್ನು ಕೆಲಸದಿಂದ ತೆಗೆದಿದ್ದಾರೆ ಎಂದು ಗೊತ್ತಾಗಿದೆ. ನನಗೆ ಇನ್ನೂ ಈ ಬಗ್ಗೆ ಯಾವುದೇ ಸಂದೇಶ ಬಂದಿಲ್ಲ. ಕೆಲಸ ಕಳೆದುಕೊಂಡರೆ ಜೀವನ ನಿರ್ವಹಣೆ ತುಂಬಾ ಕಷ್ಟವಾಗಲಿದೆ' ಎಂದು ಮಹಿಳಾ ಸಿಬ್ಬಂದಿಯೊಬ್ಬರು ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಸ್ಟ್ರಾಟೆಜಿಕ್ ಸರ್ವಿಸಸ್ ಕಂಪನಿಯ ಅಧಿಕಾರಿಯೊಬ್ಬರು, 'ಕೆಲವು ಸಿಬ್ಬಂದಿಯನ್ನು ಬಿಡಿಎ ಕಚೇರಿಯ ಕೆಲಸದಿಂದ ಕೈಬಿಟ್ಟಿದ್ದು ನಿಜ. ಬಿಡಿಎ ಸೂಚನೆ ಮೇರೆಗೆ ಈ ಕ್ರಮ ಕೈಗೊಂಡಿದ್ದೇವೆ. ಕೆಲವರು ಕಚೇರಿ ಕಾರ್ಯಗಳಿಗೆ ಅವಶ್ಯಕವಾದ ಕೌಶಲ ಹೊಂದಿಲ್ಲ ಎಂದು ಬಿಡಿಎ ತಿಳಿಸಿದೆ. ಕೆಲಸ ಕಳೆದುಕೊಂಡವರು ಹೊಂದಿರುವ ಕೌಶಲಕ್ಕೆ ಸರಿಹೊಂದುವ ಬೇರೆ ಕೆಲಸಗಳು ಲಭ್ಯ ಇದ್ದರೆ, ಅಲ್ಲಿಗೆ ಅವರನ್ನು ನಿಯೋಜಿಸಲು ಪ್ರಯತ್ನಿಸುತ್ತೇವೆ' ಎಂದರು.

ಡಿ.ಜೆ.ಹಳ್ಳಿ ಹಿಂಸಾಚಾರ: 115 ಆರೋಪಿಗಳಿಗೆ ಜಾಮೀನು

ಬೆಂಗಳೂರು: ಡಿ.ಜೆ.ಹಳ್ಳಿ ಹಿಂಸಾಚಾರ ಪ್ರಕರಣದಲ್ಲಿ ಬಂಧಿಸಲ್ಪಟ್ಟಿದ್ದ 115 ಆರೋಪಿಗಳಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ತನಿಖೆ ಪೂರ್ಣಗೊಳಿಸಲು ರಾಷ್ಟ್ರೀಯ ತನಿಖಾ ತಂಡಕ್ಕೆ (ಎನ್‌ಐಎ) ಹೆಚ್ಚುವರಿ ಕಾಲಾವಕಾಶ ನೀಡಿದ್ದ ವಿಶೇಷ ನ್ಯಾಯಾಲಯದ ಆದೇಶವನ್ನು ಬದಿಗಿರಿಸಿದೆ.

ಅರ್ಜಿದಾರ ಮುಜಮಲ್ ಪಾಷಾ ಮತ್ತು ಇತರರನ್ನು 2020ರ ಆಗಸ್ಟ್ 12ರಂದು ಬಂಧಿಸಲಾಗಿತ್ತು. ಕಾನೂನಿನ ಪ್ರಕಾರ 90 ದಿನಗಳಲ್ಲಿ ಅಂದರೆ ನವೆಂಬರ್ 9ರೊಳಗೆ ತನಿಖೆ ಪೂರ್ಣಗೊಳ್ಳಬೇಕಿತ್ತು. ಅಷ್ಟರಲ್ಲಿ ನವೆಂಬರ್ 3ರಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಎನ್‌ಐಎ, ಹೆಚ್ಚುವರಿ ಸಮಯಾವಕಾಶ ಕೋರಿತು. ಮನವಿ ಅಂಗೀಕರಿಸಿದ ವಿಶೇಷ ನ್ಯಾಯಾಲಯ, ಅವಧಿ ವಿಸ್ತರಿಸಿ ಆದೇಶಿಸಿತ್ತು.

2021ರ ಜನವರಿಯಲ್ಲಿ ಆರೋಪಿಗಳು ಸಲ್ಲಿಸಿದ ಡಿಫಾಲ್ಟ್ ಜಾಮೀನು ಅರ್ಜಿಯನ್ನು ವಿಶೇಷ ನ್ಯಾಯಾಲಯ ತಿರಸ್ಕರಿಸಿತು. ಬಳಿಕ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

'ಸಮಯ ವಿಸ್ತರಿಸುವ ಬಗ್ಗೆ ಆರೋಪಿಗಳ ಮಾಹಿತಿ ನೀಡಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶವಿದೆ. ಈ ಪ್ರಕ್ರಿಯೆಯನ್ನು ಈ ಪ್ರಕರಣದಲ್ಲಿ ಅನುಸರಿಸಿಲ್ಲ' ಎಂದು ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

'ತಲಾ ₹2 ಲಕ್ಷದ ವೈಯಕ್ತಿಕ ಬಾಂಡ್ ಜತೆಗೆ ಇಬ್ಬರ ಶ್ಯೂರಿಟಿ ನೀಡಬೇಕು. ವಿಚಾರಣಾ ನ್ಯಾಯಾಲಯ ಮತ್ತು ತನಿಖಾಧಿಕಾರಿ ಕರೆದಾಗ ಹಾಜರಾಗಬೇಕು' ಎಂಬ ಷರತ್ತುಗಳನ್ನು ವಿಧಿಸಿ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿತು.



ವಿಧಾನಸೌಧದ ಬಳಿ ಬುಧವಾರ ಮಳೆ ಸುರಿಯಿತು –ಪ್ರಜಾವಾಣಿ ಚಿತ್ರ

ನಗರದ ವಿವಿಧೆಡೆ ಜೋರು ಮಳೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿರುವುದರಿಂದ ನಗರದ ವಿವಿಧೆಡೆ ಬುಧವಾರ ಗಾಳಿ ಸಹಿತ ಜೋರು ಮಳೆಯಾಯಿತು.

ನಗರದಲ್ಲಿ ಮಧ್ಯಾಹ್ನದವರೆಗೆ ಮೋಡ ಕವಿದ ವಾತಾವರಣ ಹಾಗೂ ತಂಪಾದ ಗಾಳಿ ಬೀಸುತ್ತಿತ್ತು. ಬಳಿಕ ಹಲವು ಭಾಗಗಳಲ್ಲಿ ಮಳೆ ಆರಂಭಗೊಂಡಿತು.

ಆರ್.ಟಿ.ನಗರ, ಹೆಬ್ಬಾಳ, ಮನೋರಾಯನಪಾಳ್ಯ, ಗಿರಿನಗರ, ಶ್ರೀನಗರ, ರಾಜಾಜಿನಗರ, ಗುಟ್ಟಹಳ್ಳಿ, ಹಾರೋಹಳ್ಳಿ, ಹೆಗ್ಗನಹಳ್ಳಿ, ಯಲಹಂಕ, ರಾಜರಾಜೇಶ್ವರಿನಗರ, ಮಲ್ಲೇಶ್ವರ, ಬ್ಯಾಟರಾಯನಪುರ, ವಿದ್ಯಾಪೀಠ, ಸಂಪಂಗಿರಾಮನಗರ, ಜಕ್ಕೂರು, ವಿಜಯನಗರ, ಜೆ.ಪಿ. ನಗರ ಸೇರಿದಂತೆ ವಿವಿಧೆಡೆ ಜಿಟಿಜಿಟಿ ಮಳೆ ಸುರಿಯಿತು. ಒಟ್ಟಾರೆ ನಗರದಲ್ಲಿ ಗರಿಷ್ಠ 2.5 ಸೆಂ.ಮೀ ಮಳೆ ದಾಖಲಾಗಿದೆ.

ಮುಂಗಾರಿನ ಪರಿಣಾಮ ನಗರದಲ್ಲಿ ಮುಂದಿನ ಎರಡು ದಿನಗಳಲ್ಲಿ ಮೋಡಕವಿದ ವಾತಾವರಣ ಇರಲಿದೆ. ಜೋರು ಗಾಳಿಯೊಂದಿಗೆ ಆಗಾಗ ಮಳೆಯಾಗುವ ಮುನ್ಸೂಚನೆ ಇರುವುದಾಗಿ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ನೆರವು ನೀಡಿದರೆ ಗಂಟು ಹೋಗುತ್ತದೆಯೇ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್‌ನಿಂದ ಜನ ತೀವ್ರ ಸಂಕಷ್ಟದಲ್ಲಿದ್ದಾರೆ. ನಮ್ಮ ಪಕ್ಷದ (ಕಾಂಗ್ರೆಸ್) ಸರ್ಕಾರ ಇದ್ದಿದ್ದರೆ ಬಡವರಿಗೆ 10 ಕಿಲೋ ಅಕ್ಕಿ ಮತ್ತು ₹ 10 ಸಾವಿರ ಪರಿಹಾರ ಕೊಡುತ್ತಿದ್ದೆವು. ಬಡವರಿಗೆ ನೆರವು ನೀಡಿದರೆ ಇವರ ಮನೆಯ ಗಂಟು ಹೋಗುತ್ತದೆಯೇ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ರಾಜ್ಯ ಬಿಜೆಪಿ ಸರ್ಕಾರವನ್ನು ಪ್ರಶ್ನಿಸಿದರು.

ಜಯನಗರ ವಿಧಾನಸಭೆ ಕ್ಷೇತ್ರದ ಶಾಲಿನಿ ಆಟದ ಮೈದಾನದಲ್ಲಿ ಕೊರೊನಾ ಯೋಧರು, ಪೌರ ಕಾರ್ಮಿಕರಿಗೆ ಸ್ಥಳೀಯ ಶಾಸಕಿ ಸೌಮ್ಯಾ ರೆಡ್ಡಿ ಆಯೋಜಿಸಿದ್ದ ಆಹಾರ ಪದಾರ್ಥಗಳ ಕಿಟ್ ವಿತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸರ್ಕಾರ ಪ್ಯಾಕೇಜ್‌ನಲ್ಲಿ ಕೆಲವರಿಗೆ ಪುಡಿಗಾಸು ಘೋಷಿಸಿದೆ. ಅದು ಯಾರಿಗೆ ಸಿಗುವುದೊ ಯಾರಿಗೆ ಸಿಗುವುದಿಲ್ಲವೊ ಗೊತ್ತಿಲ್ಲ. ಈ ಹಿಂದೆ ಘೋಷಿಸಿದ ಪ್ಯಾಕೇಜ್‌ನಿಂದಲೂ ಯಾರಿಗೂ ಅನುಕೂಲ ಆಗಲಿಲ್ಲ. ಕೋವಿಡ್‌ನಿಂದ ಬಿಪಿಎಲ್ ಕುಟುಂಬದ ವ್ಯಕ್ತಿ ಮೃತರಾದರೆ, ಆ ಕುಟುಂಬಕ್ಕೆ ₹ 1 ಲಕ್ಷ ಪರಿಹಾರ ನೀಡುವುದಾಗಿ ಹೇಳಿದ್ದಾರೆ. ಅದನ್ನು ₹ 5 ಲಕ್ಷಕ್ಕೆ ಹೆಚ್ಚಿಸಬೇಕು. ಆಸ್ಪತ್ರೆಯಲ್ಲಿ ಒಬ್ಬರಿಗೆ ಮಾತ್ರ ಹಣ ಪಡೆಯುತ್ತಾರೆಯೇ' ಎಂದು ಪ್ರಶ್ನಿಸಿದ ಅವರು, 'ಕೋವಿಡ್‌ನಿಂದ 32 ಸಾವಿರ ಜನ ಸತ್ತಿದ್ದಾರೆ. ಅದರಲ್ಲಿ ಬಿಪಿಎಲ್ ಕಾರ್ಡ್‌ನವರು 25 ಸಾವಿರ ಇರಬಹುದು. ಅಷ್ಟೂ ಮಂದಿಗೆ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಜನ ತಮ್ಮ ಹಣ ತೆಗೆದುಕೊಳ್ಳುವುದರಿಂದ ಹಿಡಿದು ಆಸ್ಪತ್ರೆಯಲ್ಲಿ ಚಿಕಿತ್ಸೆ, ಆಮ್ಲಜನಕ, ಔಷಧ ಪಡೆಯಲು ಮಾತ್ರವಲ್ಲದೆ, ಕೊನೆಗೆ ಶವಸಂಸ್ಕಾರಕ್ಕೂ ಸರದಿಯಲ್ಲಿ ನಿಲ್ಲುವಂಥ ದುಸ್ಥಿತಿ ನಿರ್ಮಾಣವಾಯಿತು. ಈ ಸಮಸ್ಯೆಗಳಿಂದ ಮುಕ್ತಿ ಸಿಗಬೇಕಾದರೆ ಈ ಸರ್ಕಾರವನ್ನು ಕಿತ್ತೊಗೆಯಬೇಕು' ಎಂದು ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಶಾಸಕ ಜಮೀರ್ ಅಹಮದ್ ಖಾನ್, ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಎಚ್.ಎಂ. ರೇವಣ್ಣ ಇದ್ದರು.



ಆಹಾರ ಪದಾರ್ಥಗಳ ಕಿಟ್ ಪಡೆಯಲು ಅಂತರ ಕಾಪಾಡಿಕೊಂಡು ಸಾಲಾಗಿ ಕುಳಿತಿರುವ ಕೊರೊನಾ ಸೇನಾನಿಗಳು, ಪೌರ ಕಾರ್ಮಿಕರು ಪ್ರಜಾವಾಣಿ ಚಿತ್ರ

ನಗರದ ಕೋವಿಡ್ ಅಂಕಿ–ಅಂಶ

12,00,754 ▲	ಒಟ್ಟು ಪ್ರಕರಣಗಳು
79,261 ▼	ಸಕ್ರಿಯ ಪ್ರಕರಣಗಳು
11,06,138 ▲	ಗುಣಮುಖರಾದವರು
15,354 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,611 ▲
ಗುಣಮುಖ	5,526 ▲
ಸಾವು	19 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಡೆಲ್ಟಾ ಪ್ಲಸ್' ತಳಿಯಿಂದ ಮಹಾರಾಷ್ಟ್ರದಲ್ಲಿ 3ನೇ ಅಲೆ ಸಾಧ್ಯತೆ'

ಮುಂಬೈ (ಪಿಟಿಐ): ಕೊರೊನಾ ವೈರಸ್‌ನ 'ಡೆಲ್ಟಾ ಪ್ಲಸ್' ತಳಿಯು ಬಹಳ ಮಾರಕವಾಗಿದ್ದು, ಈ ತಳಿಯಿಂದಾಗಿ ಮಹಾರಾಷ್ಟ್ರದಲ್ಲಿ ಕೋವಿಡ್–19ನ ಮೂರನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆಗಳಿವೆ ಎಂದು ರಾಜ್ಯ ಆರೋಗ್ಯ ಇಲಾಖೆ ಬುಧವಾರ ಎಚ್ಚರಿಸಿದೆ.

ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಇಲಾಖೆ ಅಧಿಕಾರಿಗಳು ಈ ಕುರಿತ ವರದಿಯನ್ನು ಪ್ರಸ್ತುತಪಡಿಸಿದರು.

'ಈ ತಳಿಯಿಂದಾಗಿ ಅಂದಾಜು 8 ಲಕ್ಷ ಜನರಲ್ಲಿ ಸೋಂಕು ಕಾಣಿಸಿಕೊಳ್ಳಬಹುದು. ಈ ಪೈಕಿ ಶೇ 10ರಷ್ಟು ಮಕ್ಕಳಿಗೆ ಸೋಂಕು ತಗುಲುವ ಅಪಾಯ ಇದೆ' ಎಂದು ಅಧಿಕಾರಿಗಳು ವಿವರಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.75 ಕೋಟಿ ▲	2.96 ಕೋಟಿ
ಸಕ್ರಿಯ ಪ್ರಕರಣ	1.17 ಕೋಟಿ	8.21ಲಕ್ಷ ▼
ಗುಣಮುಖ	16.20 ಕೋಟಿ ▲	2.84 ಕೋಟಿ ▲
ಸಾವು	38.40 ಲಕ್ಷ ▲	3.81 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.71 ಲಕ್ಷ ▲	67,256 ▼
ಗುಣಮುಖ	4.63 ಲಕ್ಷ ▲	1,03,752 ▼
ಸಾವು	9,248 ▲	2,329 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅರ್ಜೆಂಟಿನಾ	ಕೊಲಂಬಿಯಾ
88,992 ▲	27,260 ▲	24,452 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಅರ್ಜೆಂಟಿನಾ
51.57 ▼	11.08 ▼	3.14 ▲

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.15ಲಕ್ಷ ▲
ತಮಿಳುನಾಡು	30,338 ▲
ದೆಹಲಿ	24,876 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	59.34 ▲
ಕೇರಳ	27.61 ▲
ತಮಿಳುನಾಡು	23.88 ▲

(*ರಾತ್ರಿ 12.00 ಗಂಟೆವರೆಗಿನ ಮಾಹಿತಿ)
ಪ್ರಜಾವಾಣಿ ಗ್ರಾಫಿಕ್ಸ್

ಸೆಲ್ಕೋ ಫೌಂಡೇಷನ್ ಸೇರಿದಂತೆ ವಿವಿಧ ಸಂಸ್ಥೆಗಳ ನೆರವು

ಕೋವಿಡ್: 100 ಹಾಸಿಗೆಗಳ ಆರೈಕೆ ಆಸ್ಪತ್ರೆ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕೆ ಕ್ರಮವಾಗಿ ಸೆಲ್ಕೋ ಫೌಂಡೇಷನ್ ಸೇರಿದಂತೆ ವಿವಿಧ ಸಂಸ್ಥೆಗಳು ಯಲಹಂಕದಲ್ಲಿ 100 ಹಾಸಿಗೆಗಳ ಅತ್ಯಾಧುನಿಕ ಕೋವಿಡ್ ಆರೈಕೆ ಆಸ್ಪತ್ರೆಯನ್ನು ನಿರ್ಮಿಸಿದ್ದು, ಇದೇ ಶನಿವಾರ (ಜೂ.19) ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಉದ್ಘಾಟಿಸಿದ್ದಾರೆ.

ಈ ಆಸ್ಪತ್ರೆಯು 21 ದಿನಗಳಲ್ಲಿ ನಿರ್ಮಾಣವಾಗಿದ್ದು, ಸೌರ ವ್ಯವಸ್ಥೆಯನ್ನು ಒಳಗೊಂಡಿದೆ. ತಾಪಮಾನವನ್ನು ನಿಯಂತ್ರಿಸಬಲ್ಲ ಮಾದರಿ ವ್ಯವಸ್ಥೆ ಕೂಡ ಇದೆ. 10 ಐಸಿಯು ಹಾಸಿಗೆ, 30 ಎಚ್‌ಡಿಯು ಹಾಸಿಗೆಗಳನ್ನು ಒಳಗೊಂಡಿದೆ. ಉಳಿದ ಹಾಸಿಗೆಗಳು ವೈದ್ಯಕೀಯ ಆಮ್ಲಜನಕದ ಸಂಪರ್ಕ ಹೊಂದಿವೆ. ಒಟ್ಟು ₹ 5.5 ಕೋಟಿಯಲ್ಲಿ ಈ ಆಸ್ಪತ್ರೆ ನಿರ್ಮಿಸಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಬೋಯಿಂಗ್ ಡಿಫೆನ್ಸ್ ಇಂಡಿಯಾ ಪ್ರೈ.ಲಿ. ₹ 3 ಕೋಟಿ ಹಾಗೂ ಸೆಲ್ಕೋ ಫೌಂಡೇಷನ್ ₹ 2.5 ಕೋಟಿ ನೀಡಿವೆ.



ಬೋಯಿಂಗ್ ಹಾಗೂ ಸೆಲ್ಕೋ ಸಂಸ್ಥೆ ನಿರ್ಮಿಸಿರುವ ಕೋವಿಡ್ ಆರೈಕೆ ಆಸ್ಪತ್ರೆಯ ಹೊರನೋಟ

ಆಸ್ಪತ್ರೆ ನಿರ್ಮಾಣಕ್ಕೆ ಬೇಕಾದ ಜಾಗವನ್ನು ಕರ್ನಾಟಕ ವಿದ್ಯುತ್ ನಿಗಮವು (ಕೆಪಿಸಿಎಲ್) ಒದಗಿಸಿದೆ. ಆಸ್ಪತ್ರೆಯ ನಿರ್ವಹಣೆ ಮತ್ತು ಆರೋಗ್ಯ ಸೇವೆ ಒದಗಿಸುವ ಜವಾಬ್ದಾರಿಯನ್ನು ಸರ್ಕಾರೇತರ ಸಂಸ್ಥೆಯಾದ 'ಡಾಕ್ಟರ್ಸ್ ಫಾರ್ ಯು' ವಹಿಸಿಕೊಂಡಿದೆ.

'ಅತೀ ಕಡಿಮೆ ಅವಧಿಯಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ಕಟ್ಟಡ ನಿರ್ಮಾಣ ಮಾಡಲಾಗಿದೆ. ಗುಣಮಟ್ಟದ ವೈದ್ಯಕೀಯ ಸೌಲಭ್ಯ ಪಡೆಯಲು ಈ ಆಸ್ಪತ್ರೆ ಸಹಕಾರಿಯಾಗಲಿದೆ' ಎಂದು ಬೋಯಿಂಗ್ ಡಿಫೆನ್ಸ್ ಇಂಡಿಯಾ ಪ್ರೈ.ಲಿ. ಅಧ್ಯಕ್ಷ ಸಾಹಿಲ್ ಗುಪ್ತೆ ತಿಳಿಸಿದ್ದಾರೆ.

'ಈ ಆಸ್ಪತ್ರೆಯು ಸುಸ್ಥಿರತೆಯ ಎಲ್ಲ ಪರಿಕಲ್ಪನೆಗಳನ್ನು ಒಳಗೊಂಡಿದೆ. ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಸೌರಶಕ್ತಿಯಂತಹ ಸುಸ್ಥಿರ ಶಕ್ತಿಯು ನಿರ್ಣಾಯಕ ಪಾತ್ರವಹಿಸಲಿದೆ ಎಂಬುದನ್ನು ಈ ಕಟ್ಟಡ ಸಾಬೀತುಪಡಿಸಲಿದೆ' ಎಂದು ಸೆಲ್ಕೋ ಫೌಂಡೇಷನ್‌ನ ಸಂಸ್ಥಾಪಕ ಡಾ. ಹರೀಶ್ ಹಂದೆ ಹೇಳಿದ್ದಾರೆ.

ಆಸ್ಪತ್ರೆಯಲ್ಲಿ ವಿವಿಧ ಸೌಲಭ್ಯ

ಆಸ್ಪತ್ರೆಯಲ್ಲಿ ಔಷಧಾಲಯ, ಪ್ರಯೋಗಾಲಯ, ವಿಶ್ರಾಂತಿ ಪ್ರದೇಶ, ದಾದಿಯರ ಕೊಠಡಿ, ಸಭಾ ಕೊಠಡಿ ಸೇರಿದಂತೆ ವಿವಿಧ ಸೌಲಭ್ಯಗಳಿವೆ. ಕೋವಿಡ್ ಕಾಯಿಲೆಯು ನಿಯಂತ್ರಣಕ್ಕೆ ಬಂದ ಬಳಿಕ ಈ ಆಸ್ಪತ್ರೆಯಲ್ಲಿ ಅನ್ಯ ಕಾಯಿಲೆ ಎದುರಿಸುತ್ತಿರುವವರಿಗೆ ವೈದ್ಯಕೀಯ ಸೇವೆ ಒದಗಿಸಲಾಗುತ್ತದೆ. ವೈದ್ಯಕೀಯ ಆಮ್ಲಜನಕಕ್ಕೆ ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ ಕೆಪಿಸಿಎಲ್ ಆವರಣದಲ್ಲಿಯೇ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಆಸ್ಪತ್ರೆಯ ಹತ್ತಿರದಲ್ಲಿಯೇ ಆಮ್ಲಜನಕ ಉತ್ಪಾದನಾ ಘಟಕವಿದೆ.

> **ಬೋಯಿಂಗ್ ಹಾಗೂ ಸೆಲ್ಕೋ ಸಂಸ್ಥೆ ನಿರ್ಮಿಸಿರುವ ಆಸ್ಪತ್ರೆಯು ಜನಸಾಮಾನ್ಯರಿಗೆ ಉತ್ತಮ ವೈದ್ಯಕೀಯ ಸೌಲಭ್ಯ ಪಡೆಯಲು ಸಹಕಾರಿಯಾಗಲಿದೆ**
> **ಎಸ್.ಆರ್. ವಿಶ್ವನಾಥ್,** ಶಾಸಕ

ಕೋವಿಡ್‌ನಿಂದ ಸಾವು: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಕೋವಿಡ್‌ನಿಂದ ಸಾವಿಗೀಡಾದವರ ಸಂಖ್ಯೆಗಳ ಸುಳ್ಳು ಮಾಹಿತಿ ನೀಡುತ್ತಿದೆ. ಹೀಗಾಗಿ, ಈ ಸಾವಿನ ಸಂಖ್ಯೆಗಳ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ಅವರಿಂದ ತನಿಖೆ ನಡೆಸಬೇಕು' ಎಂದು ಕಾಂಗ್ರೆಸ್ ಶಾಸಕ ಎಚ್.ಕೆ. ಪಾಟೀಲ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಸಾವು ಮುಚ್ಚಿಹಾಕುವುದು, ಆ ಮೂಲಕ ಸಾವಿಗೀಡಾದವರಿಗೆ ಪರಿಹಾರ ಸಿಗದಂತೆ ಮಾಡುವುದು ಮಾನವೀಯತೆ ಅಲ್ಲ. ಪಾರದರ್ಶಕವಾಗಿ ಡೆತ್ ಆಡಿಟ್ ಆಗಬೇಕು. ವಾಸ್ತವಿಕ ಮಾಹಿತಿಯ ಶ್ವೇತಪತ್ರ ಹೊರಡಿಸಬೇಕು' ಎಂದು ಒತ್ತಾಯಿಸಿದರು.

'ಕೋವಿಡ್ ಎರಡನೇ ಅಲೆಯಲ್ಲಿ ಇದೇ 14ರವರೆಗೆ 33,033 ಮಂದಿ ಸಾವಿಗೀಡಾಗಿದ್ದಾರೆಂದು ಸರ್ಕಾರ ಹೇಳಿದೆ. ಮೊದಲ ಅಲೆಯಲ್ಲಿ 23 ಸಾವಿರ ಜನ ಮೃತಪಟ್ಟಿದ್ದಾರೆ ಎಂದು ಸರ್ಕಾರ ಲೆಕ್ಕ ನೀಡಿತ್ತು.

'ಜನನ–ಮರಣಗಳ ದಾಖಲೆಯ ಅನುಸಾರ ಸರ್ಕಾರದ ಅಧಿಕೃತ ವರದಿಯಂತೆ 2021 ಜ. 1ರಿಂದ ಜೂನ್ 13ರ ಆರು ತಿಂಗಳ ಅವಧಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರೂ ಸೇರಿ ಒಟ್ಟು 3,27,985 ಮಂದಿ ಸಾವಿಗೀಡಾಗಿದ್ದಾರೆ. ಎಲ್ಲ ರೀತಿಯ ಸಾವುಗಳೂ ಸೇರಿದಂತೆ ಬೆಂಗಳೂರು ನಗರದಲ್ಲಿ 87,082 ಜನ ಮೃತಪಟ್ಟಿರುವುದು ದಾಖಲಾಗಿದೆ. ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ 2018ರ ವಾರ್ಷಿಕ ವರದಿಯ ಪ್ರಕಾರ ಜನವರಿಯಿಂದ ಜೂನ್‌ವರೆಗೆ ರಾಜ್ಯದಲ್ಲಿ 88 ಸಾವಿರ ಮಂದಿ ಸಾವಿಗೀಡಾಗಿದ್ದರು. ಈ ಅಂಕಿ ಅಂಶವನ್ನು ಆಧರಿಸಿ ಆರು ತಿಂಗಳ ಸರಾಸರಿ ಸಾವಿನ ಸಂಖ್ಯೆ ಗಮನಿಸಿದರೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಾವಿನ ಲೆಕ್ಕದಲ್ಲಿ ಸರ್ಕಾರದ ಸುಳ್ಳು ಹೇಳುವಂತೆ ಕಾಣುತ್ತಿದೆ' ಎಂದರು.

'ರಾಜ್ಯದಲ್ಲಿ 2021ರ ಮಾರ್ಚ್ 2ರಿಂದ ಜೂನ್ 14ರವರೆಗೆ 81,289 ಮಕ್ಕಳಿಗೆ ಕೊರೊನಾ ಸೋಂಕು ತಗುಲಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರದಲ್ಲಿ 45 ಸಾವಿರ ಮಕ್ಕಳು ಸೋಂಕಿತರಾಗಿದ್ದಾರೆ. ಶೇ 2ರಷ್ಟು ಮಕ್ಕಳು ಸಾವನ್ನಪ್ಪಿದ್ದಾರೆ. ಮೂರನೇ ಅಲೆ ಮಕ್ಕಳ ಮೇಲೆ ಮತ್ತಷ್ಟು ಪರಿಣಾಮ ಬೀರಲಿದೆ ಎಂದು ವರದಿಗಳು ಹೇಳಿವೆ. ಹೀಗಾಗಿ, ಸರ್ಕಾರ ಕೂಡಲೇ ಮಕ್ಕಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಸಿಂಗನಾಯಕನಹಳ್ಳಿ ಕೆರೆ ತುಂಬಿಸುವ ಕಾಮಗಾರಿ • ಮರಗಳ ತೆರವು– ಜನಾಭಿಪ್ರಾಯ ಆಹ್ವಾನಿಸಿದ ಅರಣ್ಯ ಇಲಾಖೆ

ಕೆರೆ ಅಭಿವೃದ್ಧಿ: 6,316 ಮರಗಳಿಗೆ ಕುತ್ತು?

ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ



ಸಿಂಗನಾಯಕನಹಳ್ಳಿ ಕೆರೆಯಂಗಳದಲ್ಲಿ ಬೆಳೆದಿರುವ ಮರಗಳು

ಬೆಂಗಳೂರು: ಹೆಬ್ಬಾಳ– ನಾಗವಾರ ಕಣಿವೆ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ಯಲಹಂಕ ಹೋಬಳಿಯ ಸಿಂಗನಾಯಕನಹಳ್ಳಿ ಕೆರೆ ಅಭಿವೃದ್ಧಿಗೆ ಸಣ್ಣ ನೀರಾವರಿ ಇಲಾಖೆ ಮುಂದಾಗಿದೆ. ಈ ಕಾಮಗಾರಿಗಾಗಿ 6 ಸಾವಿರಕ್ಕೂ ಅಧಿಕ ಮರಗಳನ್ನು ತೆರವುಗೊಳಿಸಲು ತಯಾರಿ ನಡೆಸಿದೆ. ಕೆರೆಯಂಗಳದಲ್ಲಿ ನೈಸರ್ಗಿಕವಾಗಿ ಅಭಿವೃದ್ಧಿಗೊಂಡ ಪರಿಸರ ವ್ಯವಸ್ಥೆಗೆ ಈ ಕಾಮಗಾರಿಯಿಂದ ಧಕ್ಕೆಯಾಗಲಿದೆ ಎಂದು ಪರಿಸರ ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ್ದಾರೆ.

ಹೆಬ್ಬಾಳ–ನಾಗವಾರ ಕಣಿವೆಯ 65 ಕೆರೆಗಳಿಗೆ ಶುದ್ಧೀಕರಿಸಿದ ತ್ಯಾಜ್ಯ ನೀರು ತುಂಬಿಸುವ ಯೋಜನೆಗೆ ಸಿಂಗನಾಯಕನಹಳ್ಳಿ ಕೆರೆಯನ್ನು ಆಯ್ಕೆ ಮಾಡಲಾಗಿದೆ. ಈ ಕೆರೆಯು ಸಿಂಗನಾಯಕನಹಳ್ಳಿ ಅಮಾನಿ ಕೆರೆ ಗ್ರಾಮದ ಸರ್ವೆ ನಂಬರ್ 33, ನಾಗದಾಸನಹಳ್ಳಿ ಗ್ರಾಮದ ಸರ್ವೆ ನಂಬರ್ 39, ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್ 12, ಅದ್ದಿಗಾನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 7ರ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. 400 ಎಕರೆಗಳಷ್ಟು ವ್ಯಾಪಿಸಿರುವ ಕೆರೆಯಂಗಳದಲ್ಲಿ ಜಾಲಿ, ನೇರಳೆ, ಬೇವು, ನೀಲಗಿರಿ, ಸಿಹಿ ಹುಣಸೆ, ಅಕೇಶಿಯಾ, ಹೊಂಗೆ ಶಿವಾನಿ ಮೊದಲಾದ ಮರಗಳಿವೆ. ಇವುಗಳ ತೆರವಿಗೆ ಅನುಮತಿ ಕೋರಿ ಸಣ್ಣ ನೀರಾವರಿ ಇಲಾಖೆಯು ಅರಣ್ಯ ಇಲಾಖೆಗೆ ಪ್ರಸ್ತಾಪ ಸಲ್ಲಿಸಿದೆ. ಇಲ್ಲಿ ವಿವಿಧ ಜಾತಿಗಳ 6,316 ಜಾತಿಯ ಮರಗಳಿದ್ದು, ಅವುಗಳಿಂದ 403.211 ಘನ ಮೀ. ನಾಟಾ ಹಾಗೂ 3,46,915 ಕೆ.ಜಿ ಸೌದೆ ಲಭಿಸುತ್ತದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಅಂದಾಜು ಮಾಡಿದ್ದಾರೆ.

ಮರಗಳ ತೆರವು ಸಂಬಂಧ ನಗರ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯು ಸಾರ್ವಜನಿಕರಿಂದ ಸಲಹೆ ಸೂಚನೆ ಹಾಗೂ ಆಕ್ಷೇಪಣೆಗಳನ್ನು ಇದೇ 14ರಂದು ಆಹ್ವಾನಿಸಿದ್ದು, 10 ದಿನಗಳ ಕಾಲಾವಕಾಶ ನೀಡಿದೆ.

'ಮರಗಳ ತೆರವಿನ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಆಧರಿಸಿ ನಿರ್ಧಾರ ಕೈಗೊಳ್ಳುತ್ತೇವೆ. ಕೆರೆಯಲ್ಲಿ ನೀರು ಸಂಗ್ರಹ ಸಾಮರ್ಥ್ಯ ಹೆಚ್ಚಿಸಲು ಹೂಳು ತೆಗೆಯಬೇಕಾಗುತ್ತದೆ. ಈ ಸಂದರ್ಭದಲ್ಲಿ ಮರಗಳನ್ನು ತೆರವುಗೊಳಿಸಲೇಬೇಕು. ಅವುಗಳನ್ನು ಸ್ಥಳಾಂತರ ಮಾಡಿ ಬೇರೆ ಕಡೆ ನಾಟಿ ಮಾಡುವ ಸಾಧ್ಯತೆ ಬಗ್ಗೆ ಇನ್ನಷ್ಟೇ ಪರಿಶೀಲಿಸಬೇಕಿದೆ' ಎಂದು ಬೆಂಗಳೂರು ನಗರ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್.ರವಿಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸಾಮಾಜಿಕ ಅರಣ್ಯ ಕಾರ್ಯಕ್ರಮದಡಿ ಕೆರೆಯ ಅಂಗಳದಲ್ಲೇ ಸಸಿಗಳನ್ನು ಬೆಳೆಸಿದ್ದರು. ಹಾಗಾಗಿ, ಕೆರೆ ಅಭಿವೃದ್ಧಿ ಕಾಮಗಾರಿಗೆ ತೆರವುಗೊಳಿಸಬೇಕಾಗುವ ಮರಗಳ ಸಂಖ್ಯೆ ಹೆಚ್ಚು ಎಂಬಂತೆ ತೋರುತ್ತದೆ. ಕೆರೆಯಲ್ಲಿ ನೀರಿನ ಆಶ್ರಯ ಇರುವುದರಿಂದ ಮರಗಳು ಹುಲುಸಾಗಿ ಬೆಳೆದಿವೆ' ಎಂದು ಅವರು ಅಭಿಪ್ರಾಯಪಟ್ಟರು.

ಮರ ತೆರವು– ಪ್ರತಿಕ್ರಿಯೆ ನೀಡಲು ವಿಳಾಸ: ಬೆಂಗಳೂರು ನಗರ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ, ಅರಣ್ಯ ಭವನ ಸಂಕೀರ್ಣ, ಮಲ್ಲೇಶ್ವರ 18ನೇ ಅಡ್ಡರಸ್ತೆ. ಬೆಂಗಳೂರು.

ಯಾವೆಲ್ಲ ಮರಗಳಿಗೆ ಕುತ್ತು?

ಮರ	ಸಂಖ್ಯೆ
ಬೇವು	8
ನೇರಳೆ	168
ಸಿಸು	550
ಸಿಹಿಹುಣಸೆ	9
ಅಕೇಶಿಯಾ	940
ಜಾಲಿ	4,026
ಹೊಂಗೆ	560
ತೊರೆ ಮತ್ತಿ	24
ಶಿವಾನಿ	10
ಇತರೆ	21

ಸಂಪರ್ಕ: 080 23343464
ಇ–ಮೇಲ್: dcfurban82@yahoo.co.in

'ಮರಗಳ ತೆರವು–ಕೋವಿಡ್ ಸಂದರ್ಭದಲ್ಲಿ ಆತುರ ಬೇಡ'

'ಸಿಂಗನಾಯಕನಹಳ್ಳಿ ಕೆರೆಯಂಗಳದಲ್ಲಿ ಕಳೆದೆರಡು ದಶಕಗಳಿಂದ ಕಿರು ಕಾಡು ರೂಪುಗೊಂಡಿದೆ. ಇಲ್ಲಿ 40ಕ್ಕೂ ಅಧಿಕ ನವಿಲುಗಳಿವೆ. ನಾನಿಲ್ಲಿ ನರಿಯನ್ನೂ ನೋಡಿದ್ದೇನೆ. ಇಲ್ಲಿನ ಮರಗಳನ್ನು ತೆರವುಗೊಳಿಸುವ ಬಗ್ಗೆ ಕೋವಿಡ್ ಹರಡಿರುವ ಈಗಿನ ಸಂದರ್ಭದಲ್ಲಿ ಆತುರದ ನಿರ್ಧಾರ ಸಲ್ಲದು. ಸೋಂಕು ನಿಯಂತ್ರಣಕ್ಕೆ ಬಂದ ಬಳಿಕ ಸ್ಥಳೀಯರು, ಪರಿಸರ ಹೋರಾಟಗಾರರು ಹಾಗೂ ತಜ್ಞರೆಲ್ಲರ ಅಭಿಪ್ರಾಯ ಪಡೆದು ಅರಣ್ಯ ಇಲಾಖೆ ತೀರ್ಮಾನಿಸಬೇಕು' ಎಂದು ಪರಿಸರ ಹೋರಾಟಗಾರ ವಿಜಯ್ ನಿಶಾಂತ್ ಒತ್ತಾಯಿಸಿದರು.

'ನೀರು ನಿಲ್ಲುವಂತಾದರೆ ಒಳ್ಳೆಯದೇ'

'ಈ ಕೆರೆ 400 ಎಕರೆಗಳಿಗೂ ಹೆಚ್ಚು ವಿಸ್ತೀರ್ಣ ಹೊಂದಿದೆ. ಇದರಲ್ಲಿ ಗಿಡಗಂಟಿ ಬೆಳೆದುಕೊಂಡಿದೆ. ಕೆರೆಯ ಹೂಳೆತ್ತಿ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದು ಸ್ಥಳೀಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಾಮೋದರ್ ತಿಳಿಸಿದರು.

'ಸಿಂಗನಾಯಕನಹಳ್ಳಿ ಕೆರೆಯಲ್ಲಿ ಅಷ್ಟಾಗಿ ನೀರು ನಿಲ್ಲುತ್ತಿಲ್ಲ. ಕೆರೆಯ ಹೂಳೆತ್ತಿ ನೀರು ನಿಲ್ಲುವಂತೆ ಮಾಡಿದರೆ ಆಸುಪಾಸಿನ ಕೃಷಿ ಜಮೀನುಗಳಿಗೆ ಅನುಕೂಲವಾಗುತ್ತದೆ' ಎಂದು ಸ್ಥಳೀಯರಾದ ಸುಬ್ರಮಣಿ ಅಭಿಪ್ರಾಯಪಟ್ಟರು.

'ಪರಿಸರ ವ್ಯವಸ್ಥೆ ಉಳಿಸಿಕೊಂಡೇ ಅಭಿವೃದ್ಧಿಪಡಿಸಲಿ'

'ಸಿಂಗನಾಯಕನಹಳ್ಳಿ ಕೆರೆಯಂಗಳದಲ್ಲಿ ಬೆಳೆದ ಕಿರು ಕಾಡು ಮೊಲ, ನರಿ, ನವಿಲಿನಂತಹ ಅನೇಕ ಪ್ರಾಣಿ ಪಕ್ಷಿಗಳಿಗೆ ನೆಲೆ ಒದಗಿಸಿದೆ. ಪರಿಸರ ವ್ಯವಸ್ಥೆ ಮತ್ತು ಜೀವ ವೈವಿಧ್ಯವನ್ನು ಉಳಿಸಿಕೊಂಡೂ ಕೆರೆಯ ಅಭಿವೃದ್ಧಿ ಸಾಧ್ಯ. ಕೆರೆಯೆಂದರೆ ನೀರು ಸಂಗ್ರಹಿಸುವ ತೊಟ್ಟಿ, ಅದರ ಅಭಿವೃದ್ಧಿಯೆಂದರೆ ನಡಿಗೆ ಪಥ ನಿರ್ಮಾಣ ಎಂಬ ಮನೋಭಾವವನ್ನು ಮೊದಲು ತ್ಯಜಿಸಬೇಕು. ಎಲ್ಲವನ್ನೂ ಮನುಷ್ಯ ಕೇಂದ್ರಿತವಾಗಿ ಆಲೋಚಿಸಿ ಪರಿಸರ ವ್ಯವಸ್ಥೆಗೆ ಧಕ್ಕೆ ತರಬಾರದು' ಎನ್ನುತ್ತಾರೆ ಕೆರೆ ಪುನಃಶ್ಚೇತನ ತಜ್ಞ ವಿ.ರಾಮಪ್ರಸಾದ್.



ಮೂಲನಿವಾಸಿ ಮಹಾ ಒಕ್ಕೂಟವು ಹಮ್ಮಿಕೊಂಡಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಎ.ಆರ್. ಗೋವಿಂದಸ್ವಾಮಿ, ಜಿಗಣಿ ಶಂಕರ್, ಭೀಮಪುತ್ರಿ ಬ್ರಿಗೇಡ್‌ನ ಅಧ್ಯಕ್ಷೆ ರೇವತಿರಾಜ್, ದಲಿತ ಮುಖಂಡರಾದ ಹೆಬ್ಬಾಳ ವೆಂಕಟೇಶ್, ಮುನಿ ಆಂಜನಯ್ಯ ಅವರು ಸಿದ್ದಲಿಂಗಯ್ಯ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು.

'ವಿ.ವಿಗಳಲ್ಲಿ ಸಿದ್ದಲಿಂಗಯ್ಯ ಹೆಸರಿನ ಪೀಠ ಸ್ಥಾಪಿಸಿ'

ಬೆಂಗಳೂರು: 'ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಚ್ಚಳಿಯದ ಕೊಡುಗೆ ನೀಡಿದ ಕವಿ ಸಿದ್ದಲಿಂಗಯ್ಯ ಅವರ ಹೆಸರಿನಲ್ಲಿ ವಿಶ್ವವಿದ್ಯಾಲಯಗಳಲ್ಲಿ ಪೀಠ ಸ್ಥಾಪಿಸಬೇಕು' ಎಂದು ರಂಗತಜ್ಞ ಎ.ಆರ್. ಗೋವಿಂದ ಸ್ವಾಮಿ ಅವರು ಸರ್ಕಾರಕ್ಕೆ ಆಗ್ರಹಿಸಿದರು.

ಮೂಲನಿವಾಸಿ ಮಹಾ ಒಕ್ಕೂಟವು ನಗರದಲ್ಲಿ ಸಿದ್ದಲಿಂಗಯ್ಯ ಅವರಿಗೆ ಹಮ್ಮಿಕೊಂಡಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಸರ್ಕಾರವು 5 ಎಕರೆ ಜಾಗದಲ್ಲಿ ವಿದ್ಯಾರ್ಥಿಗಳಿಗೆ ಸಂಶೋಧನೆ ಹಾಗೂ ಉನ್ನತ ವ್ಯಾಸಂಗಕ್ಕೆ ಸಹಕಾರಿಯಾದ ಕೇಂದ್ರವನ್ನು ಅವರ ಹೆಸರಿನಲ್ಲಿ ನಿರ್ಮಿಸಬೇಕು' ಎಂದರು.

ಒಕ್ಕೂಟದ ಅಧ್ಯಕ್ಷ ಜಿಗಣಿ ಶಂಕರ್, 'ಕಾಲೇಜು ದಿನಗಳಲ್ಲಿ ಸಿದ್ದಲಿಂಗಯ್ಯ ಅವರ ಜತೆಗೆ ಸೇರಿ ದಲಿತಪರ ಹೋರಾಟ ಮಾಡುತ್ತಿದ್ದೆವು. ಜೀವನದುದ್ದಕ್ಕೂ ಹೋರಾಟ ನಡೆಸಿದ ಅವರು, ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು' ಎಂದರು.

ಯಶವಂತಪುರ–ಬೀದರ್ ರೈಲು ಬಸವ ಎಕ್ಸ್‌ಪ್ರೆಸ್ ಪುನರಾರಂಭ

ಕಲಬುರ್ಗಿ: ಕೋವಿಡ್ ಲಾಕ್‌ಡೌನ್ ನಿಮಿತ್ತ ಪ್ರಯಾಣಿಕರ ಕೊರತೆಯಿಂದಾಗಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಮೈಸೂರು–ಬಾಗಲಕೋಟೆ ಬಸವ ಎಕ್ಸ್‌ಪ್ರೆಸ್ (7307) ರೈಲನ್ನು ಇದೇ 20ರಿಂದ ಪುನರಾರಂಭಿಸಲಾಗುತ್ತಿದೆ. ಅಲ್ಲದೇ, ಯಶವಂತಪುರ–ಬೀದರ್ (6271) ರೈಲು ಇದೇ 21ರಿಂದ ಸಂಚಾರ ಆರಂಭಿಸಲಿದೆ ಎಂದು ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

ರೈಲು ನಿಲ್ದಾಣ ಹಾಗೂ ರೈಲಿನಲ್ಲಿ ಪ್ರಯಾಣಿಕರು ಕೋವಿಡ್ ಸೋಂಕಿನಿಂದ ರಕ್ಷಣೆ ಪಡೆಯಲು ಮಾಸ್ಕ್ ಧರಿಸಬೇಕು ಎಂದೂ ಮನವಿ ಮಾಡಿದೆ. ಸದ್ಯಕ್ಕೆ ರೈಲ್ವೆಯು ಮುಂಗಡ ಟಿಕೆಟ್ ಕಾಯ್ದಿರಿಸಿದವರಿಗೆ ಮಾತ್ರ ಪ್ರಯಾಣಿಸಲು ಅವಕಾಶ ನೀಡಿದೆ.

ಐಟಿಐ: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಎಡವಟ್ಟು

ಶೂನ್ಯ ಫಲಿತಾಂಶ: ಕಂಗಾಲಾದ ವಿದ್ಯಾರ್ಥಿಗಳು

• ಎ.ಎಂ. ಸುರೇಶ

ಬೆಂಗಳೂರು: ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್‌ನ (ಎನ್‌ಸಿವಿಟಿ) ಮಾನ್ಯತೆ ಪಡೆದಿರುವ ರಾಜ್ಯದಲ್ಲಿನ ಕೈಗಾರಿಕಾ ತರಬೇತಿ ಸಂಸ್ಥೆಗಳ (ಐಟಿಐ) ಎರಡು ಸಾವಿರ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ 'ಶೂನ್ಯ ಫಲಿತಾಂಶ' ನಮೂದಿಸಿರುವುದರಿಂದ ಅವರೆಲ್ಲ ಭವಿಷ್ಯದ ಬಗ್ಗೆ ಕಂಗಾಲಾಗಿದ್ದಾರೆ.

2018ರಲ್ಲಿ ಐಟಿಐಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 2020ರ ನವೆಂಬರ್‌ನಲ್ಲಿ ಎಂಜಿನಿಯರಿಂಗ್ ಡ್ರಾಯಿಂಗ್ ಆಫ್‌ಲೈನ್ ಪರೀಕ್ಷೆ ಹಾಗೂ ಉಳಿದ ಮೂರು ವಿಷಯಗಳಿಗೆ ಈ ವರ್ಷದ ಜನವರಿಯಿಂದ ಏಪ್ರಿಲ್‌ವರೆಗೆ ವಿವಿಧ ಹಂತಗಳಲ್ಲಿ ಆನ್‌ಲೈನ್ ಪರೀಕ್ಷೆಗಳು ನಡೆದಿದ್ದವು.

ರಾಜ್ಯದಲ್ಲಿ 40 ಸಾವಿರ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆದಿದ್ದು, ಮೇ 31ರಂದು ಫಲಿತಾಂಶ ಪ್ರಕಟವಾಗಿದೆ. ಆದರೆ, 2 ಸಾವಿರ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ ಎಂಜಿನಿಯರಿಂಗ್ ಡ್ರಾಯಿಂಗ್ ವಿಷಯದಲ್ಲಿ '0' ಎಂದು ನಮೂದಿಸಲಾಗಿದೆ. ಉತ್ತಮ ಅಂಕಗಳ ನಿರೀಕ್ಷೆಯಲ್ಲಿದ್ದ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ.

ಆನ್‌ಲೈನ್‌ನಿಂದಾಗಿ ಕುಸಿದ ಫಲಿತಾಂಶ

ತರಬೇತಿ ಮಹಾನಿರ್ದೇಶನಾಲಯದವರು ಮೊದಲ ಬಾರಿಗೆ ಮೂರು ವಿಷಯಗಳಿಗೆ ಏಕಕಾಲದಲ್ಲಿ ಆನ್‌ಲೈನ್ ಪರೀಕ್ಷೆ ನಡೆಸಿದ್ದಾರೆ. ಬೆಂಗಳೂರಿನ ಮೂರು ಕೇಂದ್ರಗಳಲ್ಲಿ ದಿನಕ್ಕೆ 150 ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯಿತು. ನೆಟ್‌ವರ್ಕ್ ಸಮಸ್ಯೆ, ಸರ್ವರ್ ದೋಷದಿಂದಾಗಿ ಸಕಾಲದಲ್ಲಿ ಲಾಗ್ ಇನ್ ಸಾಧ್ಯವಾಗುತ್ತಿರಲಿಲ್ಲ. ಆದರೆ, ನಿಗದಿಯಂತೆ 3 ಗಂಟೆಯಲ್ಲೇ ಲಾಗ್ ಔಟ್ ಆಗುತ್ತಿತ್ತು. ಹೀಗಾಗಿ ಸರಿಯಾಗಿ ಪರೀಕ್ಷೆ ಬರೆಯಲು ಆಗಲಿಲ್ಲ ಎನ್ನುತ್ತಾರೆ ವಿದ್ಯಾರ್ಥಿಗಳು.

ಉಚಿತ ಲ್ಯಾಪ್‌ಟ್ಯಾಪ್ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ನೀಡಲು ತಂದಿದ್ದ ಲ್ಯಾಪ್‌ಟ್ಯಾಪ್‌ಗಳನ್ನು ಪರೀಕ್ಷೆಗೆ ಬಳಸಲಾಯಿತು. ಅವುಗಳಿಗೆ ಮೌಸ್ ಸಹ ಇರಲಿಲ್ಲ. ಗ್ರಾಮಾಂತರ ಪ್ರದೇಶದ ಬಹುತೇಕ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್ ಬಳಸಿದ ಅನುಭವ ಇರುವುದಿಲ್ಲ. ಅಂತಹವರಿಗೆ ಏಕಾಏಕಿ ಆನ್‌ಲೈನ್ ಪರೀಕ್ಷೆ ನಡೆಸುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಠ್ಯಕ್ಕೆ ಹೊರತಾದ ಪ್ರಶ್ನೆಗಳೇ ಹೆಚ್ಚು

'ಐಟಿಐನಲ್ಲಿ ಬೇರೆ ಬೇರೆ ಟ್ರೇಡ್‌ಗಳನ್ನು ಸೇರಿಸಿ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಎಂದು ಎರಡು ಸಮೂಹ ಮಾಡಲಾಗಿದೆ. ಎಲೆಕ್ಟ್ರಿಕಲ್ ವಿಭಾಗದವರಿಗೆ 50ರಲ್ಲಿ 40 ಪ್ರಶ್ನೆಗಳನ್ನು ಎಲೆಕ್ಟ್ರಾನಿಕ್ಸ್‌ಗೆ ಸೀಮಿತವಾಗಿ ಕೇಳಲಾಗಿದೆ. ಈ ಸಮೂಹದಲ್ಲಿರುವ 17 ಟ್ರೇಡ್‌ಗಳಲ್ಲೂ ಪ್ರಶ್ನೆಗಳನ್ನು ಕೇಳಬೇಕಿತ್ತು. ಪಠ್ಯಕ್ರಮವನ್ನು ಸರಿಯಾಗಿ ರೂಪಿಸಿ, ಅದಕ್ಕನುಗುಣವಾಗಿ ಪ್ರಶ್ನೆಗಳನ್ನು ಕೇಳಬೇಕು. ಆ ರೀತಿ ಮಾಡದೆ ನಮ್ಮನ್ನು ಬಲಿಪಶುಗಳನ್ನಾಗಿಸುವುದು ನ್ಯಾಯವೇ' ಎಂಬುದು ವಿದ್ಯಾರ್ಥಿಗಳ ಪ್ರಶ್ನೆ

ಎಡವಟ್ಟು ಹೇಗೆ: ವಿದ್ಯಾರ್ಥಿಗಳು ಎಂಜಿನಿಯರಿಂಗ್ ಡ್ರಾಯಿಂಗ್‌ನಲ್ಲಿ ಪಡೆದಿರುವ ಅಂಕಗಳನ್ನು ರಾಜ್ಯ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯವರು ಎಂಐಎಸ್ ಪೋರ್ಟಲ್‌ನಲ್ಲಿ ಸರಿಯಾಗಿ ಮಾಡದ ಕಾರಣ 'ಶೂನ್ಯ ಫಲಿತಾಂಶ' ಬಂದಿದೆ ಎಂಬ ಆರೋಪ ಕೇಳಿಬಂದಿವೆ.

(ಎನ್‌ಸಿವಿಟಿ) ಮಾನ್ಯತೆ ಪಡೆದ ಐಟಿಐನ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಡ್ರಾಯಿಂಗ್ ವಿಷಯದ ಆಫ್‌ಲೈನ್ ಪರೀಕ್ಷೆಯನ್ನು ರಾಜ್ಯ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯವರು ನಡೆಸಿದರೆ, ಉಳಿದ ಮೂರು ವಿಷಯಗಳ ಆನ್‌ಲೈನ್ ಪರೀಕ್ಷೆಗಳನ್ನು ಕೇಂದ್ರದ ಕೌಶಲ ಅಭಿವೃದ್ಧಿ ಸಚಿವಾಲಯದ ಅಧೀನದ ತರಬೇತಿ ಮಹಾನಿರ್ದೇಶನಾಲಯದವರು (ಡಿಜಿಟಿ) ನಡೆಸುತ್ತಾರೆ.ಇವೆರಡು ಇಲಾಖೆಗಳ ಸಮನ್ವಯ ಕೊರತೆಯಿಂದ ಹೀಗಾಗುತ್ತಿದೆ. ಆಫ್‌ಲೈನ್ ಪರೀಕ್ಷೆಯ ಅಂಕಗಳು ಪೋರ್ಟಲ್‌ನಲ್ಲಿ ನಮೂದಾಗಿದ್ದನ್ನು ಖಚಿತಪಡಿಸಿಕೊಳ್ಳದೆಯೇ ಡಿಜಿಟಿಯವರು ಫಲಿತಾಂಶ ಪ್ರಕಟಿಸಿದ್ದರಿಂದ ಅವಾಂತರ ಆಗಿದೆ ಎನ್ನುತ್ತಾರೆ ರಾಜ್ಯದ ಖಾಸಗಿ ಐಟಿಐ ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷ ಮಂಜುನಾಥ್.

ಅಂಕಗಳನ್ನು ಅಪ್‌ಲೋಡ್ ಮಾಡುವ ಬಗ್ಗೆ ಡಿಜಿಟಿಯವರು ಸೂಕ್ತ ತರಬೇತಿ ನೀಡಿಲ್ಲ. ಆದ ಲೋಪ ಸರಿಪಡಿಸಲು ಜೂನ್ 18ರವರೆಗೆ ಅವಕಾಶ ನೀಡಿದ್ದಾರೆ. ಗುರುವಾರದಿಂದಲೇ ಅಪ್‌ಲೋಡ್ ಕಾರ್ಯ ಶುರುವಾಗಲಿದೆ.

ಡಾ.ಕೆ.ಹರೀಶ್ ಕುಮಾರ್, ಆಯುಕ್ತ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ

'ಕೋವಿಡ್‌ನಿಂದಾಗಿ ಆಫ್‌ಲೈನ್ ಪರೀಕ್ಷೆಯನ್ನು ಆರು ತಿಂಗಳು ತಡವಾಗಿ ನಡೆಸಲಾಯಿತು. ಆನ್‌ಲೈನ್ ಪರೀಕ್ಷೆ ಈ ವರ್ಷದ ಜನವರಿಯಲ್ಲಿ ಶುರುವಾಗಿ ಏಪ್ರಿಲ್‌ನಲ್ಲಿ ಮುಗಿದಿದೆ. ಹೀಗಾಗಿ ಒಂದು ವರ್ಷ ವ್ಯರ್ಥವಾಗಿದೆ. ಈಗ ಶೂನ್ಯ ಫಲಿತಾಂಶ ಬಂದಿರುವುದರಿಂದ ಡಿಪ್ಲೊಮಾ ಮತ್ತಿತರ ಕೋರ್ಸ್‌ಗಳಿಗೆ ಸೇರಲು, ಕಂಪನಿಗಳಲ್ಲಿ ಅಪ್ರೆಂಟಿಸ್‌ಗಳಾಗಲು, ಉದ್ಯೋಗ ಗಿಟ್ಟಿಸಲು ಅವಕಾಶವಿಲ್ಲದಂತಾಗಿದೆ' ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡರು.



ಮುಖ್ಯಮಂತ್ರಿ ಭೇಟಿ

ಭಾರತೀಯ ಸ್ಟೇಟ್ ಬ್ಯಾಂಕ್‌ನ ಕರ್ನಾಟಕ ವೃತ್ತದ ಚೀಫ್ ಜನರಲ್ ಮ್ಯಾನೇಜರ್ ನಂದ್ ಕಿಶೋರ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿದರು. ಕೋವಿಡ್‌ನಿಂದ ಸಂಕಷ್ಟಕ್ಕೆ ಒಳಗಾಗಿರುವ ಕೃಷಿ, ಎಂಎಸ್‌ಎಂ ಮತ್ತು ಇತರೆ ವಲಯಗಳ ನೆರವಿಗೆ ಬ್ಯಾಂಕ್ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿದರು. ಮುಖ್ಯಮಂತ್ರಿಗಳ ಸಲಹೆಗಾರ ಎಂ. ಲಕ್ಷ್ಮೀನಾರಾಯಣ, ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಇದ್ದರು

ಇಸ್ರೇಲ್ ಮಾದರಿ ಕೃಷಿ ಉತ್ತೇಜನಕ್ಕೆ ಉತ್ಕೃಷ್ಟತಾ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಇಸ್ರೇಲ್ ಮಾದರಿಯ ಕೃಷಿ ಅಭಿವೃದ್ಧಿಪಡಿಸುವ ಯೋಜನೆಯ ಭಾಗವಾಗಿ ರಾಜ್ಯದ ಬಾಗಲಕೋಟೆ, ಕೋಲಾರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಸ್ಥಾಪಿಸಿರುವ 'ಇಂಡೋ– ಇಸ್ರೇಲ್ ಉತ್ಕೃಷ್ಟತಾ ಕೇಂದ್ರ'ಗಳನ್ನು ಬುಧವಾರ ವರ್ಚ್ಯುಯಲ್ ಕಾರ್ಯಕ್ರಮದ ಮೂಲಕ ಉದ್ಘಾಟಿಸಲಾಯಿತು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಮತ್ತು ಭಾರತದಲ್ಲಿನ ಇಸ್ರೇಲ್ ರಾಯಭಾರಿ ಡಾ. ರಾನ್ ಮಲ್ಕಾ ವರ್ಚ್ಯುಯಲ್ ಆಗಿ ಈ ಕೇಂದ್ರಗಳನ್ನು ಉದ್ಘಾಟಿಸಿದರು. ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ತೋಟಗಾರಿಕಾ ಸಚಿವ ಎನ್. ಶಂಕರ್ ಮತ್ತು ತೋಟಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ದಕ್ಷಿಣ ಭಾರತಕ್ಕೆ ಇಸ್ರೇಲ್ ಕಾನ್ಸಲ್ ಜನರಲ್ ಜೋನಾಥನ್ ಜಡ್ಕಾ ಸಮಾರಂಭದಲ್ಲಿದ್ದರು.

ಉತ್ಕೃಷ್ಟ ಗ್ರಾಮಗಳ ನಿರ್ಮಾಣಕ್ಕೆ ಯೋಜನೆ

ಭಾರತ ಮತ್ತು ಇಸ್ರೇಲ್ ಸಹಯೋಗದಲ್ಲಿ ಮಾದರಿ ಕೃಷಿ ಪರಿಸರವನ್ನು ಒಳಗೊಂಡ 'ಉತ್ಕೃಷ್ಟ ಗ್ರಾಮ'ಗಳ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಕರ್ನಾಟಕವೂ ಸೇರಿದಂತೆ ದೇಶದ ಎಂಟು ರಾಜ್ಯಗಳಲ್ಲಿ ಯೋಜನೆ ಜಾರಿಗೆ ಬರಲಿದೆ. ಬಾಗಲಕೋಟೆ ಮತ್ತು ಕೋಲಾರ ಉತ್ಕೃಷ್ಟತಾ ಕೇಂದ್ರಗಳ ಜತೆ ಸಂಪರ್ಕ ಹೊಂದಿರುವ 10 ಹಳ್ಳಿಗಳಲ್ಲಿ ಈ ಯೋಜನೆ ಜಾರಿಗೆ ಬರಲಿದೆ ಎಂದು ತೋಟಗಾರಿಕಾ ಇಲಾಖೆ ತಿಳಿಸಿದೆ.

ಈ ಮೂರೂ ಉತ್ಕೃಷ್ಟತಾ ಕೇಂದ್ರಗಳು ತೋಟಗಾರಿಕಾ ಬೆಳೆಗಳಲ್ಲಿ ಸುಧಾರಣೆ ತರುವ ದಿಕ್ಕಿನಲ್ಲಿ ಕೆಲಸ ಮಾಡಲಿವೆ. ಹಳೆಯ ತೋಟಗಳ ಪುನರುಜ್ಜೀವನ, ಹೊಸ ತೋಟಗಳ ನಿರ್ಮಾಣ, ನೀರು ನಿರ್ವಹಣೆ ಸೇರಿದಂತೆ ಹಲವು ವಿಷಯಗಳ ಕುರಿತು ಈ ಕೇಂದ್ರಗಳ ಮೂಲಕ ರೈತರಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಇಲ್ಲಿಯೇ ರೈತರಿಗೆ ತರಬೇತಿ ನೀಡುವ ವ್ಯವಸ್ಥೆಯೂ ಇರಲಿದೆ.

ಇಸ್ರೇಲ್ ತಂತ್ರಜ್ಞಾನ ಆಧರಿಸಿ ಬೇರು ಕಾಂಡಗಳ ಬಳಕೆಯ ವಿಧಾನವನ್ನು ಒಳಗೊಂಡಿರುವ ಅತ್ಯಾಧುನಿಕ ನರ್ಸರಿಗಳನ್ನು ಸ್ಥಾಪಿಸಲಾಗುತ್ತದೆ. ಕೋಲಾರದ 'ಸೆಂಟರ್ ಆಫ್ ಎಕ್ಸಲೆನ್ಸ್'ನಲ್ಲಿ (ಸಿಒಇ) ಮಾವು ಬೆಳೆಯಲ್ಲಿನ ಅತ್ಯುತ್ತಮವಾದ ಕೃಷಿ ವಿಧಾನಗಳನ್ನು ಪರಿಚಯಿಸುವ ಗುರಿ ಹೊಂದಲಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿ, 'ಈ ಉತ್ಕೃಷ್ಟತಾ ಕೇಂದ್ರಗಳು ಕರ್ನಾಟಕದಲ್ಲಿ ತೋಟಗಾರಿಕಾ ಬೆಳೆಗಳ ಉತ್ಪಾದನೆ ವೃದ್ಧಿ, ಗುಣಮಟ್ಟ ಹೆಚ್ಚಳಕ್ಕೆ ಸಹಕಾರಿಯಾಗಲಿವೆ. ಹೊಸ ತಂತ್ರಜ್ಞಾನಗಳು ರೈತರಿಗೆ ಲಭ್ಯವಾಗಲಿದ್ದು, ಸುಸ್ಥಿರ ಕೃಷಿ ಮತ್ತು ಹೆಚ್ಚಿನ ಗಳಿಕೆಗೆ ನೆರವಾಗಲಿವೆ' ಎಂದರು.

ಸಿ.ಎಂ ಸ್ವಕ್ಷೇತ್ರದಲ್ಲೇ ಭೂ ಹಕ್ಕು ವಿಚಾರದಲ್ಲಿ ದಬ್ಬಾಳಿಕೆ ಆರೋಪ

ಪರಿಶಿಷ್ಟ ಸಮುದಾಯದವರಿಂದ ಸಾಮೂಹಿಕ ಆತ್ಮಹತ್ಯೆಯ ಬೆದರಿಕೆ

ಪ್ರಜಾವಾಣಿ ವಾರ್ತೆ



ಶಿಕಾರಿಪುರದ ಮಾಯತಮ್ಮನ ಮುಚುಡಿ ಗ್ರಾಮದ ಪರಿಶಿಷ್ಟ ಸಮುದಾಯದವರು ತಮ್ಮ ಜಮೀನಿನಲ್ಲಿ ವಿಷದ ಬಾಟಲಿ ಹಿಡಿದು ನಿಂತಿರುವುದು

ಶಿವಮೊಗ್ಗ: ಭೂಮಿ ಹಕ್ಕು ವಿಚಾರವಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಸ್ವಕ್ಷೇತ್ರ ಶಿಕಾರಿಪುರದ ಮಾಯತಮ್ಮನ ಮುಚುಡಿ ಗ್ರಾಮದ ಪರಿಶಿಷ್ಟ ಸಮುದಾಯದ ಕುಟುಂಬಗಳು ಹಾಗೂ ಮೇಲ್ಜಾತಿಯವರ ಮುಸುಕಿನ ಗುದ್ದಾಟ ಈಗ ತಾರಕಕ್ಕೇರಿದೆ. ತಾಲ್ಲೂಕು ಆಡಳಿತದ ಕ್ರಮ ವಿರೋಧಿಸಿ ಪರಿಶಿಷ್ಟ ಸಮುದಾಯದ ಕುಟುಂಬಗಳು ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಎಚ್ಚರಿಸಿವೆ.

ಬುಧವಾರ ಇಲ್ಲಿನ ತಹಶೀಲ್ದಾರ್ ಕವಿರಾಜ್ ಅವರು ಪೊಲೀಸರೊಂದಿಗೆ ಬಂದು ಪರಿಶಿಷ್ಟ ಸಮುದಾಯದವರು ಬಿತ್ತನೆ ಮಾಡಿದ್ದ ಜಮೀನಿನ ಬೆಳೆಯನ್ನು ಟ್ರ್ಯಾಕ್ಟರ್ ಮೂಲಕ ನಾಶಗೊಳಿಸಿದರು. ಈ ಸಂದರ್ಭದಲ್ಲಿ ಪರಿಶಿಷ್ಟ ಸಮುದಾಯದ ಕುಟುಂಬದವರು ಸಾಮೂಹಿಕ ಆತ್ಮಹತ್ಯೆ ಬೆದರಿಕೆ ಒಡ್ಡಿದರು. ಇದರಿಂದ ಆತಂಕಗೊಂಡ ತಹಶೀಲ್ದಾರ್ ಹಾಗೂ ಪೊಲೀಸರು ಭೂಮಿ ವಶಪಡಿಸಿಕೊಳ್ಳುವ ಪ್ರಯತ್ನ ನಿಲ್ಲಿಸಿ ಹಿಂತಿರುಗಿದರು.

ಮಾಯತಮ್ಮನ ಮುಚುಡಿ ಗ್ರಾಮದ ಪರಿಶಿಷ್ಟ ಸಮುದಾಯದ 19 ಕುಟುಂಬಗಳು 40 ವರ್ಷಗಳಿಂದ ಸರ್ವೆ ನಂಬರ್ 128ರಲ್ಲಿ ತಲಾ 2 ಹಾಗೂ 3 ಎಕರೆಯಂತೆ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬರುತ್ತಿದ್ದವು. ಮಂಜೂರಾತಿಗಾಗಿ 1991ರಲ್ಲಿ ಆ ಕುಟುಂಬಗಳವರು 53 ಅರ್ಜಿಗಳನ್ನು ಸಲ್ಲಿಸಿದ್ದಾರೆ. ಬಗರ್‌ಹುಕುಂ ಸಾಗುವಳಿ ಹಕ್ಕಿಗಾಗಿ ನಿರಂತರವಾಗಿ ಹೋರಾಡುತ್ತಾ ಬಂದಿದ್ದರೂ ಭೂ ಒಡೆತನದ ಭಾಗ್ಯ ಸಿಕ್ಕಿಲ್ಲ.

ಸಮುದಾಯದವರ ಆರೋಪವೇನು?: 'ಸರ್ವೆ ನಂಬರ್ 128ರಲ್ಲಿ ಹಲವರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಆದರೆ, ನಮ್ಮ ಸಮುದಾಯದವರನ್ನು ಹೊರತುಪಡಿಸಿ ಎಲ್ಲರಿಗೂ ಭೂಮಿಯನ್ನು ಮಂಜೂರು ಮಾಡಿಕೊಟ್ಟಿದ್ದಾರೆ.' ಎಂಬುದು ಇಲ್ಲಿನ ಪರಿಶಿಷ್ಟ ಸಮುದಾಯದವರ ದೂರು.

ಕೂಲಿಗೆ ಕರೆದರೆ ₹ 25 ಸಾವಿರ ದಂಡ: 'ಗ್ರಾಮದಲ್ಲಿ ನಮ್ಮನ್ನು ಯಾರೂ ಕೂಲಿಗೆ ಕರೆಯುವಂತಿಲ್ಲ. ಯಾರಾದರೂ ಕೂಲಿಗೆ ಕರೆದರೆ ಅವರಿಗೆ ₹ 25 ಸಾವಿರ ದಂಡ ಹಾಕುತ್ತಾರೆ. ಈ ಘಟನೆ ನಡೆದ ನಂತರ ನಾವು ಹೊರಗಡೆ ಓಡಾಡುವ ಹಾಗಿಲ್ಲ. ಇದೇ ಸರ್ವೆ ನಂಬರ್‌ನಲ್ಲಿ ಬಲಾಢ್ಯ ಜಾತಿಗಳವರಿಗೆ ಹತ್ತಾರು ಎಕರೆ ಭೂಮಿ ಮಂಜೂರು ಮಾಡಿರುವಾಗ ನಮಗೂ ಕನಿಷ್ಠ ಒಂದು ಎಕರೆ ಭೂಮಿಯನ್ನಾದರೂ ಮಂಜೂರು ಮಾಡಿ, ಬದುಕಲು ಬಿಡಿ' ಎಂದು ಗ್ರಾಮದ ಸಂತ್ರಸ್ತ ವೀರೇಶ್ ತಿಳಿಸಿದರು.

'ಭೂಮಿ ಹಕ್ಕು ಕೇಳುತ್ತಿರುವುದನ್ನು ಸಹಿಸದ ಗ್ರಾಮದ ಲಿಂಗಾಯತರು ನಮ್ಮ ಮೇಲೆ ನಿರಂತರ ಹಲ್ಲೆ ನಡೆಸುತ್ತಾ ಬಂದಿದ್ದಾರೆ. ಈ ಹಿಂದೆ ಸಂಸದ ಬಿ.ವೈ.ರಾಘವೇಂದ್ರ ಅವರ ಸೂಚನೆ ಮೇರೆಗೆ ನಮ್ಮ ಕುಟುಂಬಗಳಿಗೆ ತಲಾ ಒಂದು ಎಕರೆ ಜಮೀನು ಕೊಡುವ ಬಗ್ಗೆ ಪಂಚಾಯಿತಿ ನಡೆದಿತ್ತು. ಆದರೂ ಅಲ್ಲಿನ ತೀರ್ಮಾನವನ್ನು ಗ್ರಾಮಸ್ಥರು ಪಾಲಿಸುತ್ತಿಲ್ಲ. ಒಂದು ವಾರದಲ್ಲಿ ಸಂಸದರು ಬಂದ ಮೇಲೆ ಚರ್ಚೆ ಮಾಡುವ ಭರವಸೆಯನ್ನು ತಹಶೀಲ್ದಾರ್ ನೀಡಿದ್ದಾರೆ.' ಎಂದು ವೀರೇಶ್ ನೋವು ತೋಡಿಕೊಂಡರು.

ರೈತರ ಮನ ಒಲಿಕೆ

'ಮಾಯತಮ್ಮನ ಮುಚುಡಿ ಗ್ರಾಮದ ಗೋಮಾಳ ಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಸಲು ಮುಂದಾದ ರೈತರನ್ನು ತೆರವುಗೊಳಿಸಿದ್ದೆವು. ತೆರವುಗೊಳಿಸಿದ್ದ ರೈತ ಕುಟುಂಬದವರು ಬುಧವಾರ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿದರು. ಆತ್ಮಹತ್ಯೆಗೆ ಮುಂದಾಗಿದ್ದ ರೈತರ ಮನಒಲಿಸಿ, ಕೃಷಿ ಭೂಮಿ ಪಡೆಯಲು ಸರ್ಕಾರಕ್ಕೆ ಮನವಿ ಸಲ್ಲಿಸಲು ತಿಳಿಸಿದ್ದೇವೆ' ಎಂದು ತಹಶೀಲ್ದಾರ್ ಎಂ.ಪಿ.ಕವಿರಾಜ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಬೇಕರಿ ಉತ್ಪನ್ನಗಳ ಘಟಕ ಸ್ಥಾಪನೆಗೆ ಸಹಾಯಧನ

ಬೆಂಗಳೂರು: ಬೇಕರಿ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಘಟಕಗಳು, ಬ್ರ್ಯಾಂಡಿಂಗ್, ಲೇಬಲಿಂಗ್, ಮಾರುಕಟ್ಟೆ ಬೆಂಬಲ ಮತ್ತು ರಫ್ತಿಗೆ ಪ್ರೋತ್ಸಾಹ ನೀಡಲು ಆಸಕ್ತ ಸಂಸ್ಥೆಗಳಿಗೆ ಹಾಗೂ ಸಣ್ಣ ಉದ್ದಿಮೆದಾರರಿಗೆ ಸಹಾಯಧನ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಧಾನಮಂತ್ರಿಗಳ ಅತಿ ಸಣ್ಣ ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆ ಅಂಗವಾಗಿ 'ಒಂದು ಜಿಲ್ಲೆ–ಒಂದು ಉತ್ಪನ್ನ' ಆಧಾರದ ಮೇಲೆ ಬೆಂಗಳೂರು ನಗರ ಜಿಲ್ಲೆಗೆ 'ಬೇಕರಿ ಉತ್ಪನ್ನಗಳ ತಯಾರಿಕೆ ಯೋಜನೆ' ಜಾರಿಗೆ ತರಲಾಗಿದೆ. ಈ ಯೋಜನೆ ಅಡಿಯಲ್ಲಿ ಹೊಸದಾಗಿ ಉದ್ದಿಮೆ ಸ್ಥಾಪಿಸಲು ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕರಣಾ ಘಟಕಗಳನ್ನು ಉನ್ನತೀಕರಿಸಲು ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ಬೆಂಗಳೂರು ನಗರ ಮತ್ತು ನಗರ ಜಿಲ್ಲೆ ನಿವಾಸಿಗಳಾಗಿದ್ದು, ಉದ್ಯಮದ ಮಾಲೀಕತ್ವ ಹೊಂದಿರಬೇಕು.

ಅರ್ಜಿದಾರರು 8 ನೇ ತರಗತಿ ಶೈಕ್ಷಣಿಕ ಅರ್ಹತೆ ಹೊಂದಿದ್ದು, ಕನಿಷ್ಠ 18 ವರ್ಷ ಪೂರೈಸಿರಬೇಕು. ಸಂಸ್ಥೆ ಅಸಂಘಟಿತವಾಗಿದ್ದು, 10ಕ್ಕಿಂತ ಕಡಿಮೆ ಉದ್ಯೋಗಿಗಳನ್ನು ಹೊಂದಿರಬೇಕು. ಯೋಜನಾ ವೆಚ್ಚ ಹಾಲಿ ವೆಚ್ಚಕ್ಕಿಂತ ಕಡಿಮೆ ಇರಬಾರದು. ಉತ್ಪನ್ನ ನಿರ್ವಹಣೆಯಲ್ಲಿ ಕನಿಷ್ಠ 3 ವರ್ಷಗಳ ಜ್ಞಾನ ಮತ್ತು ಅನುಭವ ಹೊಂದಿರಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ, 9448752379, 8277929923.

ಮೊದಲ ಬಾರಿಗೆ ಸ್ವಂತ ಹೆಸರಿನಲ್ಲಿ ಕಾರು ಖರೀದಿ

ದಾವಣಗೆರೆ: ಶಾಸಕ ಶಾಮನೂರು ಶಿವಶಂಕರಪ್ಪ ಅವರು ತಮಗೆ 90 ವರ್ಷ ತುಂಬಿದ ದಿನ ಇದೇ ಮೊದಲ ಬಾರಿಗೆ ತಮ್ಮ ಹೆಸರಿನಲ್ಲಿ 'ಇನ್ನೋವಾ ಕ್ರಿಸ್ಟ' ಕಾರನ್ನು ಖರೀದಿಸಿದ್ದಾರೆ. ಕೋಟ್ಯಧೀಶರಾದರೂ ಇದುವರೆಗೆ ಅವರ ಹೆಸರಿನಲ್ಲಿ ಯಾವ ಕಾರನ್ನೂ ಖರೀದಿಸಿರಲಿಲ್ಲ.

ಶಾಮನೂರು ಅವರಿಗೆ ಪ್ರತಿ 5 ವರ್ಷಗಳಿಗೊಮ್ಮೆ ಕಾರು ಖರೀದಿಸುವ ಹವ್ಯಾಸವಿದೆ. ಆದರೆ, ಖರೀದಿಸಿದ ಯಾವ ಕಾರಿನ ಮಾಲೀಕತ್ವವೂ ಇದುವರೆಗೆ ಅವರ ಹೆಸರಿನಲ್ಲಿ ಇರಲಿಲ್ಲ. ಈ ಹಿಂದೆ ಅಂಬಾಸಿಡರ್, ಬೆಂಜ್ ಕಾರಿನಲ್ಲಿ ಓಡಾಡಿದ್ದರು. ಹೊಸ ಕಾರಿಗೆ 'ಕೆಎ–51 ಎಂ.ಆರ್ 0555' ನಂಬರ್ ಇದೆ. ₹30 ಲಕ್ಷ ವೆಚ್ಚದಲ್ಲಿ ಇದನ್ನು ಖರೀದಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿ.ಡಿ ಪ್ರಕರಣ:ಆರೋಪಿ ನರೇಶ್ ಗೌಡ ವಿಚಾರಣೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಷಡ್ಯಂತ್ರ ರೂಪಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದ ಪ್ರಕರಣದ ಆರೋಪಿ ನರೇಶ್ ಗೌಡನನ್ನು ಎಸ್‌ಐಟಿ ಅಧಿಕಾರಿಗಳು ಬುಧವಾರ ಮತ್ತೆ ವಿಚಾರಣೆ ನಡೆಸಿದ್ದಾರೆ.

ತಮ್ಮ ವಕೀಲರ ಜೊತೆ ಆಡುಗೋಡಿಯ ಕಚೇರಿಗೆ ಬಂದಿದ್ದ ನರೇಶ್‌ನನ್ನು ಸುಮಾರು ಐದು ಗಂಟೆಗಳ ಕಾಲ ಅಧಿಕಾರಿಗಳು ವಿಚಾರಣೆ ನಡೆಸಿದರು. ಸೋಮವಾರವಷ್ಟೇ ನರೇಶ್‌ನನ್ನು ಎಸ್‌ಐಟಿ ವಿಚಾರಣೆ ನಡೆಸಿತ್ತು.

ಡಿಆರ್‌ಡಿಒ ಆವರಣದಲ್ಲಿ ಸಿಲುಕಿದ್ದ ನವಿಲು ಸಂರಕ್ಷಣೆ

ಪ್ರಜಾವಾಣಿ ವಾರ್ತೆ



ಡಿಆರ್‌ಡಿಒ ಪ್ರಾಂಗಣದಲ್ಲಿ ಸಿಲುಕಿದ್ದ ಹೆಣ್ಣು ನವಿಲನ್ನು ವನ್ಯಜೀವಿ ಕಾರ್ಯಕರ್ತರು ಬುಧವಾರ ರಕ್ಷಣೆ ಮಾಡಿದರು

ಬೆಂಗಳೂರು: ಸಿ.ವಿ.ರಾಮನ್‌ನಗರದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಆವರಣದಲ್ಲಿ ಸಿಲುಕಿದ್ದ ಹೆಣ್ಣು ನವಿಲನ್ನು ವನ್ಯಜೀವಿ ಕಾರ್ಯಕರ್ತರು ಬುಧವಾರ ಸಂರಕ್ಷಿಸಿ ಪುನರ್ವಸತಿ ಕೇಂದ್ರಕ್ಕೆ ಒಪ್ಪಿಸಿದ್ದಾರೆ.

'ದಿಕ್ಕು ತಪ್ಪಿ ಬಂದ ಹೆಣ್ಣು ನವಿಲೊಂದು ಡಿಆರ್‌ಡಿಒ ಆವರಣವನ್ನು ಸೇರಿಕೊಂಡಿತ್ತು. ಜನರನ್ನು ಕಂಡು ಕಂಗಾಲಾಗಿದ್ದ ಅದು ಅಲ್ಲಿನ ಶೀಟ್ ಚಾವಣಿಯ ಮೇಲೇರಿತ್ತು. ಎರಡು ದಿನಗಳ ಹಿಂದೆ ನಾವು ಚಾವಣಿಯ ಶೀಟ್‌ಗಳನ್ನು ಸರಿಸಿ ಕೆಳಗಿಳಿಯಲು ಅನುವು ಮಾಡಿಕೊಟ್ಟೆವು. ನವಿಲು ಚಾವಣಿಯಿಂದ ಕೆಳಗೆ ಇಳಿದಿರುವುದಾಗಿ ಅಲ್ಲಿನ ಸಿಬ್ಬಂದಿ ಇಂದು ಬೆಳಿಗ್ಗೆ ಮಾಹಿತಿ ನೀಡಿದರು. ನಾಲ್ಕೈದು ದಿನಗಳಿಂದ ಅದಕ್ಕೆ ಆಹಾರವೂ ಸಿಕ್ಕಿರಲಿಲ್ಲ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಅದು ಬಳಲಿದಂತೆ ಕಂಡು ಬಂತು.

ಅದನ್ನು ಕೆಂಗೇರಿಯ ವನ್ಯಜೀವಿ ಪುನರ್ವಸತಿ ಕೇಂದ್ರಕ್ಕೆ ಒಪ್ಪಿಸಿದ್ದೇವೆ' ಎಂದು ವನ್ಯಜೀವಿ ಕಾರ್ಯಕರ್ತ ಕೆ. ಮೋಹನ್ ತಿಳಿಸಿದರು.

ದೆಹಲಿ: ಎಐಐಎಂಎಸ್ ಆಸ್ಪತ್ರೆಯಲ್ಲಿ ಬೆಂಕಿ ಅವಘಡ

ನವದೆಹಲಿ: ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಎಐಐಎಂಎಸ್-ಏಮ್ಸ್) 9ನೇ ಮಹಡಿಯಲ್ಲಿ ಬುಧವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿತು.

22 ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದವು. ಈ ಮಹಡಿಯಲ್ಲಿದ್ದವರನ್ನು ಕೂಡಲೇ ಸ್ಥಳಾಂತರಿಸಲಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ದೆಹಲಿ ಅಗ್ನಿಶಾಮಕ ಸೇವೆಗಳ ಅಧಿಕಾರಿಗಳು ಹೇಳಿದ್ದಾರೆ.

ಈ ಮಹಡಿಯಲ್ಲಿ ಪ್ರಯೋಗಾಲಯಗಳು ಹಾಗೂ ವಿವಿಧ ಪರೀಕ್ಷಾ ವಿಭಾಗಗಳಿವೆ. ಇಲ್ಲಿ ರೋಗಿಗಳನ್ನು ದಾಖಲಿಸಿರಲಿಲ್ಲ. ಬೆಂಕಿ ಹೊತ್ತಿಕೊಳ್ಳಲು ಕಾರಣ ತಿಳಿದು ಬಂದಿಲ್ಲ. ತನಿಖೆ ನಡೆದಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿಗೆ ಸೈಕಲ್ ರವಾನೆ

ಆಳಂದ (ಕಲಬುರ್ಗಿ ಜಿಲ್ಲೆ): ಇಂಧನ ದರ ಏರಿಕೆ ನಿಯಂತ್ರಿಸಲು ಕೇಂದ್ರ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ ಮಾಜಿ ಶಾಸಕ ಬಿ.ಆರ್. ಪಾಟೀಲ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರಧಾನಿಗೆ ಬುಧವಾರ ಸೈಕಲ್ ಕಳಿಸಿಕೊಟ್ಟರು.

ಪಟ್ಟಣದ ಬಸ್ ನಿಲ್ದಾಣದ ಮುಖ್ಯರಸ್ತೆಯಲ್ಲಿ ಪ್ರತಿಭಟನೆ ನಡೆಸಿದ ಅವರು, 'ಜನರ ಸಂಕಷ್ಟ ಮೋದಿಯವರಿಗೆ ಅರ್ಥವಾಗಲಿ ಎಂಬ ಉದ್ದೇಶದಿಂದ ಸೈಕಲ್‌ನ್ನು ಕೊರಿಯರ್ ಮೂಲಕ ರವಾನಿಸಿದ್ದೇವೆ' ಎಂದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮಿಸಳ್ ಹಾಪ್ಚಾ
ಮಂತ್ ಆಫ್ ಪ್ರೈಡ್
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಜಾಗ್ವಾರ್ ದತ್ತು ಪಡೆದ ನಟಿ ಅಮೂಲ್ಯ

ಪ್ರಜಾವಾಣಿ ವಾರ್ತೆ


ಅಮೂಲ್ಯ

ಬೆಂಗಳೂರು: ಮೃಗಾಲಯದಲ್ಲಿರುವ ಪ್ರಾಣಿ, ಪಕ್ಷಿಗಳನ್ನು ದತ್ತು ಪಡೆಯಲು ನಟ ದರ್ಶನ್ ಅವರು ಕರೆಗೆ ಕೈಜೋಡಿಸಿರುವ ನಟಿ ಅಮೂಲ್ಯ ಜಗದೀಶ್, ಮೈಸೂರಿನ ಮೃಗಾಲಯದಲ್ಲಿನ ಜಾಗ್ವಾರ್ ಒಂದನ್ನು ದತ್ತು ಪಡೆದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅಮೂಲ್ಯ, 'ನಮ್ಮ ಕಡೆಯಿಂದ ಅಳಿಲು ಸೇವೆ ಸಲ್ಲಿಸಿರುವ ಖುಷಿ ನೀಡಿದೆ. ಇಂತಹ ಒಂದು ಉತ್ತಮ ಕಾರ್ಯಕ್ಕೆ ಬೆಂಬಲ ನೀಡಿ, ಪ್ರೋತ್ಸಾಹ ನೀಡುತ್ತಿರುವ ದರ್ಶನ್ ಅವರಿಗೆ ಧನ್ಯವಾದಗಳು' ಎಂದು ತಿಳಿಸಿದ್ದಾರೆ. ಟ್ವೀಟ್ ಜೊತೆಗೆ ಕರ್ನಾಟಕದ ಮೃಗಾಲಯ ಪ್ರಾಧಿಕಾರ ನೀಡಿರುವ ಪ್ರಮಾಣ ಪತ್ರವನ್ನು ಅಮೂಲ್ಯ ಪೋಸ್ಟ್ ಮಾಡಿದ್ದಾರೆ. ಮುಂದಿನ ಒಂದು ವರ್ಷದವರೆಗೆ ಆ ಪ್ರಾಣಿಯ ನಿರ್ವಹಣಾ ವೆಚ್ಚವನ್ನು ನಟಿ ಅಮೂಲ್ಯ ಭರಿಸಿದ್ದಾರೆ.

ಪ್ರಾಣಿ, ಪಕ್ಷಿಗಳನ್ನು ದತ್ತು ಪಡೆಯಲು ದರ್ಶನ್ ಅವರು ಕರೆ ನೀಡಿದ ಬೆನ್ನಲ್ಲೇ ಇತ್ತೀಚೆಗಷ್ಟೇ ನಟ ಉಪೇಂದ್ರ ಇದೇ ಮೃಗಾಲಯದಿಂದ ಆಫ್ರಿಕನ್ ಆನೆಯೊಂದನ್ನು ಹಾಗೂ ಚಾಮುಂಡಿ ಹೆಸರಿನ ಆನೆ ಮರಿಯನ್ನು ನಿರ್ಮಾಪಕರಾದ ಉಮಾಪತಿ ಶ್ರೀನಿವಾಸ ಗೌಡ ಅವರು ದತ್ತು ಪಡೆದಿದ್ದರು.

'ಕೆರೆ ನಿರ್ವಹಣೆಗೆ ಜಿಲ್ಲಾ ಸಮಿತಿ ರಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಉದ್ದೇಶಕ್ಕಾಗಿ ಜಿಲ್ಲಾ ಮಟ್ಟದ ಸಮಿತಿ ರಚಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್ ಸಲ್ಲಿಸಿದ್ದ ಮಧ್ಯಂತರ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಮಹಾನಗರ ಪಾಲಿಕೆ ಮತ್ತು ಪುರಸಭೆ ವ್ಯಾಪ್ತಿ ಹೊರತುಪಡಿಸಿ ಉಳಿದ ಕೆರೆಗಳ ಸಂರಕ್ಷಣೆಗೂ ಈ ಸಮಿತಿಗಳು ಅಗತ್ಯ' ಎಂದು ತಿಳಿಸಿದೆ.

'ಜಿಲ್ಲಾ ಮಟ್ಟದ ಸಮಿತಿಗಳಿಗೆ ಆಯಾ ಜಿಲ್ಲಾಧಿಕಾರಿಗಳು ಮುಖ್ಯಸ್ಥರಾಗಿರಬೇಕು. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಅರಣ್ಯ ಇಲಾಖೆ ಅಧಿಕಾರಿ, ಸಣ್ಣ ನೀರಾವರಿ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ(ಕೆಎಸ್‌ಪಿಸಿಬಿ) ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಸದಸ್ಯ ಕಾರ್ಯದರ್ಶಿ ಆಗಿ ಕಾರ್ಯನಿರ್ವಹಿಸಬೇಕು' ಎಂದು ಪೀಠ ತಿಳಿಸಿದೆ.

ಶೀಘ್ರ ಬಿಗ್‌ಬಾಸ್ ಸೆಕೆಂಡ್ ಇನಿಂಗ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ತೀವ್ರತೆಗೆ ಅರ್ಧಕ್ಕೇ ಸ್ಥಗಿತವಾಗಿದ್ದ ಬಿಗ್‌ಬಾಸ್ ರಿಯಾಲಿಟಿ ಶೋನ ಎಂಟನೇ ಆವೃತ್ತಿ ಶೀಘ್ರದಲ್ಲೇ ಪುನರಾರಂಭವಾಗಲಿದೆ. ಈಗಾಗಲೇ ಈ ಕುರಿತ ಪ್ರೊಮೊಗಳನ್ನು ಕಲರ್ಸ್ ಕನ್ನಡ ಚಾನೆಲ್ ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದು, ಕಲರ್ಸ್ ಕನ್ನಡ ಕ್ಲಸ್ಟರ್ ಹೆಡ್ ಹಾಗೂ ಬಿಗ್ ಬಾಸ್ ಶೋನ ನಿರ್ದೇಶಕ ಪರಮೇಶ್ವರ ಗುಂಡ್ಕಲ್ ಅವರೂ 'ಸೆಕೆಂಡ್ ಇನಿಂಗ್ಸ್'ನ ಮಾಹಿತಿ ನೀಡಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಂತೆ ಬಿಗ್‌ಬಾಸ್ 8ನೇ ಆವೃತ್ತಿಯ ಎರಡನೇ ಇನಿಂಗ್ಸ್ ಜೂನ್‌ನಲ್ಲೇ ಆರಂಭದ ಮಾಹಿತಿಯನ್ನು ಅವರು ನೀಡಿದ್ದಾರೆ. ಸ್ಪರ್ಧಿಗಳೆಲ್ಲರೂ ಮತ್ತೆ ಏಳು ದಿನ ಕ್ವಾರಂಟೈನ್‌ಗೆ ಒಳಗಾಗಿರುವ ಕಾರಣ ಬಹುತೇಕ ಮುಂದಿನ ವಾರದಿಂದ ಸಂಚಿಕೆಗಳು ಆರಂಭವಾಗುವ ಸಾಧ್ಯತೆ ಇದೆ. ಈ ಕುರಿತು ತಮ್ಮ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿರುವ ಗುಂಡ್ಕಲ್, 'ಊರು ಸೇರಿದಾಗಲೇ ದಾರಿ ಮುಗಿಯುವುದು. ಮನೆ ಸೇರಿದಾಗಲೇ ಹಾದಿಯಲ್ಲಿ ಕಷ್ಟಪಟ್ಟಿದ್ದು ಸಾರ್ಥಕ ಅನಿಸೋದು. ಅರ್ಧದಲ್ಲಿಯೇ ನಿಲ್ಲಿಸಿದ್ದ ಪ್ರಯಾಣವನ್ನು ಈಗ ಪುನಃ ಅದೇ ಹನ್ನೆರಡು ಜನರೊಂದಿಗೆ ಶುರುಮಾಡುವ ಸಮಯ' ಎಂದು ಉಲ್ಲೇಖಿಸಿದ್ದಾರೆ.



ಪರಮೇಶ್ವರ್ ಗುಂಡ್ಕಲ್ ಹಾಗೂ ಸುದೀಪ್

ಮೂರು ಬಾರಿ ಆರ್‌ಟಿಪಿಸಿಆರ್ ಪರೀಕ್ಷೆ: 'ಈಗಾಗಲೇ ಸ್ಪರ್ಧಿಗಳೆಲ್ಲರೂ ಕ್ವಾರಂಟೈನ್‌ನಲ್ಲಿದ್ದು, ಮನೆ ಪ್ರವೇಶಿಸುವ ಮೊದಲು ಸ್ಪರ್ಧಿಗಳೆಲ್ಲರೂ ಆರು ದಿನಗಳಲ್ಲಿ ಮೂರು ಬಾರಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಗಾಗಲಿದ್ದಾರೆ. ಬಿಗ್‌ಬಾಸ್ ತಂಡವು ಈಗಾಗಲೇ ಸಜ್ಜಾಗಿದ್ದು, ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಬಿಗ್‌ಬಾಸ್ ಸೆಕೆಂಡ್ ಇನಿಂಗ್ಸ್ ಆರಂಭಿಸುತ್ತಿದ್ದೇವೆ' ಎಂದು ಪರಮೇಶ್ವರ್ ಗುಂಡ್ಕಲ್ 'ಪ್ರಜಾವಾಣಿ'ಗೆ ತಿಳಿಸಿದರು.

ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ರಾಜ್ಯದಲ್ಲಿ, ಅದರಲ್ಲೂ ರಾಜಧಾನಿ ಬೆಂಗಳೂರಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದ ವೇಳೆ ಮುಂಜಾಗ್ರತಾ ಕ್ರಮವಾಗಿ ಮೇ 8ರಂದು ಬಿಗ್‌ಬಾಸ್ 8ನೇ ಆವೃತ್ತಿ ಸ್ಥಗಿತಗೊಳಿಸುವ ನಿರ್ಧಾರವನ್ನು ಕಲರ್ಸ್ ಕನ್ನಡ ಚಾನೆಲ್ ತೆಗೆದುಕೊಂಡಿತ್ತು. ಬಿಗ್‌ಬಾಸ್ 8ನೇ ಆವೃತ್ತಿ ಮುಗಿಯಲು ಇನ್ನೇನು ಮೂರು ವಾರಗಳಷ್ಟೇ ಇರಬೇಕಾದರೆ ಶೋ ನಿಂತಿದ್ದ ಕಾರಣ, ಈ ಬಾರಿ ಐದಾರು ವಾರ ಇದನ್ನು ಮುಂದುವರಿಸಿ, ಕೆಲ ಸ್ಪರ್ಧಿಗಳನ್ನು ವೈಲ್ಡ್‌ಕಾರ್ಡ್ ಮೂಲಕ ಮನೆಯೊಳಗೆ ಕಳುಹಿಸುವ ಸಾಧ್ಯತೆ ಇದೆ.

'4 ವರ್ಷದ ಪದವಿ: ಕನ್ನಡಕ್ಕೆ ಕೊಡಲಿಯೇಟು'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಹೊಸ ಶಿಕ್ಷಣ ನೀತಿ ಅನುಷ್ಠಾನದ ಭಾಗವಾಗಿ ನಾಲ್ಕು ವರ್ಷಗಳ ಪದವಿ ಪಠ್ಯಕ್ರಮದ ಚೌಕಟ್ಟಿನಲ್ಲಿ ಕನ್ನಡವೂ ಸೇರಿದಂತೆ ಎಲ್ಲ ಭಾಷೆಗಳ ಕಲಿಕೆಯನ್ನು ಕನಿಷ್ಠ ಎರಡು ವರ್ಷಗಳಿಗೆ ವಿಸ್ತರಿಸಬೇಕು. ಅಲ್ಲದೆ, ಹಿಂದೆ ಇದ್ದಂತೆ ಎಂಟು ಗುಣಾಂಕಗಳಿಗೆ ನಿಗದಿಪಡಿಸಬೇಕು' ಎಂದು ಒತ್ತಾಯಿಸಿ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಕರ್ನಾಟಕ ರಾಜ್ಯ ಕನ್ನಡ ಪಠ್ಯರಚನಾ ಸಮಿತಿ ಪತ್ರ ಬರೆದಿದೆ.

'ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಪದವಿಗಳಲ್ಲಿ ಕನ್ನಡವೂ ಸೇರಿದಂತೆ ಎಲ್ಲ ಭಾಷೆಗಳ ಕಲಿಕೆಗೆ ಎರಡು ವರ್ಷಗಳ ನಾಲ್ಕು ಸೆಮಿಸ್ಟರ್‌ಗಳಲ್ಲೂ ಅವಕಾಶವಿದೆ. ಕನ್ನಡವನ್ನೂ ಒಳಗೊಂಡಂತೆ ಎಲ್ಲ ಭಾಷೆಗಳ ಕಲಿಕೆಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಿರುವುದು ಅಸಮರ್ಪಕ ನಿರ್ಧಾರ. ಬೇರೆ ಭಾಷೆಗಳಿಗಿಂತ ಇದು ಕನ್ನಡಕ್ಕೆ ಕೊಡಲಿ ಹಾಕುವ ಕೆಲಸ' ಎಂದೂ ಸಮಿತಿ ಅಭಿಪ್ರಾಯಪಟ್ಟಿದೆ.

'ನಾಲ್ಕು ವರ್ಷಗಳ ಪದವಿಯಲ್ಲಿ ಪ್ರಥಮ ಇಲ್ಲವೆ ದ್ವಿತೀಯ ಭಾಷೆಯಾಗಿ ಕನ್ನಡ ಕಲಿಕೆ ಕಡ್ಡಾಯಗೊಳಿಸಬೇಕು. ಇಂಗ್ಲಿಷ್ ಅನ್ನು ಕಡ್ಡಾಯ ಮಾಡಿರುವಾಗ, ಕನ್ನಡವನ್ನು ಕರ್ನಾಟಕದಲ್ಲಿ ಕಡ್ಡಾಯ ಮಾಡಲು ಆಗುವುದಿಲ್ಲವೆ' ಎಂದು ಪ್ರಶ್ನಿಸಿರುವ ಸಮಿತಿ, 'ಸಾಮರ್ಥ್ಯ ವಿಸ್ತರಣೆ ಮತ್ತು ಕೌಶಲ್ಯಾಭಿವೃದ್ಧಿಯಲ್ಲಿ ಕನ್ನಡ ಭಾಷಾ ಕೌಶಲ ಮತ್ತು ಸಾಮರ್ಥ್ಯಗಳನ್ನು ಅಳವಡಿಸಲು ಕ್ರಮ ವಹಿಸಬೇಕು. ನಾಲ್ಕು ವರ್ಷಗಳ ಪದವಿಯಲ್ಲಿ ಮತ್ತು ಐದು ವರ್ಷಗಳ ಇಂಟಿಗ್ರೇಟೆಡ್ ಸ್ನಾತಕೋತ್ತರ ಪದವಿಯಲ್ಲಿ ಕನ್ನಡ ಕಲಿಕೆಯನ್ನು ಒಂದು ಭಾಷೆಯಾಗಿ ಹೊರರಾಜ್ಯ, ವಿದೇಶದ ವಿದ್ಯಾರ್ಥಿಗಳೂ ಕಲಿಯುವಂತೆ ಮಾಡಬೇಕು. ಎಲ್ಲ ಸೆಮಿಸ್ಟರುಗಳಿಗೂ ಭಾಷಾ ಕಲಿಕೆಯನ್ನು ವಿಸ್ತರಿಸಬೇಕು' ಎಂದೂ ಸಲಹೆ ನೀಡಿದೆ.

'ಈ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಜ್ಯದಾದ್ಯಂತ ಇದೊಂದು ಆಂದೋಲನವಾಗಿ ಬೆಳೆಯಲಿದೆ. ಅವಸರದ ನಿರ್ಧಾರ ತೆಗೆದುಕೊಂಡರೆ ಅನುಷ್ಠಾನದಲ್ಲಿ ಎಡವಿ, ಸ್ಥಳೀಯರು, ಬಡವರು ಅವಕಾಶ ವಂಚಿತರಾಗಬೇಕಾದೀತು. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಅಧ್ಯಾಪಕರ ಒಕ್ಕೂಟಗಳು, ಕನ್ನಡ ರಕ್ಷಣೆಯ ವಿವಿಧ ಪಡೆಗಳು ಈ ವಿಷಯದಲ್ಲಿ ತಕ್ಷಣ ಕಾರ್ಯಶೀಲರಾಗಬೇಕಿದೆ. ಇಲ್ಲದಿದ್ದರೆ ಮುಂದೆ ಎಲ್ಲರೂ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದೀತು' ಎಂದು ಸಮಿತಿ ಎಚ್ಚರಿಕೆ ನೀಡಿದೆ.

ಪತ್ರಕ್ಕೆ ರಾಮಲಿಂಗಪ್ಪ ಟಿ. ಬೇಗೂರು, ನಟರಾಜ ಬೂದಾಳು, ಮೀನಾಕ್ಷಿ ಬಾಳಿ, ಡಿ.ಎಸ್.ಚೌಗಲೆ, ಜಯಪ್ರಕಾಶ್ ಶೆಟ್ಟಿ, ವಿನಯಾ ಒಕ್ಕುಂದ, ಅಮೃತಾ ಕಟಕೆ, ಚಂದ್ರಶೇಖರ ನಂಗಲಿ, ಬೈರಮಂಗಲ ರಾಮೇಗೌಡ, ತಿಮ್ಮೇಗೌಡ, ದಾದಾಪೀರ್ ನವಿಲೆಹಾಳ್ ಮುಂತಾದವರು ಸಹಿ ಹಾಕಿದ್ದಾರೆ.

ನೀಟ್ ಮುಂದೂಡಿಕೆ ಪ್ರಶ್ನಿಸಿದ್ದ ಅರ್ಜಿ ವಜಾ

ಬೆಂಗಳೂರು: ನೀಟ್ ಪರೀಕ್ಷೆಯನ್ನು ಆಗಸ್ಟ್ 31ರ ನಂತರ ನಡೆಸಲು ಮುಂದೂಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ನೇತೃತ್ವದ ವಿಭಾಗೀಯ ಪೀಠ, 'ತಜ್ಞರ ವರದಿ ಆಧರಿಸಿ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಕೋವಿಡ್ ಕಾರಣದಿಂದ ನೀಟ್ ಪರೀಕ್ಷೆ ಮುಂದೂಡಬೇಕಾದ ಸಂದರ್ಭ ಎದುರಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ವಿವೇಚನೆಯನ್ನು ತಪ್ಪು ಎಂದು ಹೇಳಲಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟಿತು.

ಜಿ.ಬಿ. ಕುಲಕರ್ಣಿ ಮೆಮೋರಿಯಲ್ ಲೀಗಲ್ ಟ್ರಸ್ಟ್ ಅಧ್ಯಕ್ಷ ಡಾ. ವಿನೋದ್ ಜಿ. ಕುಲಕರ್ಣಿ ಅವರ ಪ್ರತಿನಿಧಿಯಾಗಿ ಜಿ.ಬಿ. ಕುಲಕರ್ಣಿ ಅವರು ಅರ್ಜಿ ಸಲ್ಲಿಸಿ, ನೀಟ್ ಪರೀಕ್ಷೆಯನ್ನು ಮುಂದೂಡಬಾರದು ಎಂದು ನಿರ್ದೇಶನ ನೀಡಲು ಕೋರಿದ್ದರು. 'ಏಪ್ರಿಲ್ 18ಕ್ಕೆ ಪರೀಕ್ಷೆ ನಡೆಯಬೇಕಿತ್ತು. ಒಂದು ದಿನ ಮುಂಚಿತವಾಗಿ ಮುಂದೂಡಿಕೆ ನಿರ್ಧಾರ ಪ್ರಕಟಿಸಲಾಯಿತು. ಆ ಸಂದರ್ಭದಲ್ಲಿ ಪರೀಕ್ಷೆ ಮುಂದೂಡಲು ಸಕಾರಣಗಳು ಇರಲಿಲ್ಲ' ಎಂದು ಅರ್ಜಿದಾರರು ದೂರಿದ್ದರು.

ಪಿಯುಸಿ ಉಪನ್ಯಾಸಕರ ವರ್ಗ: ಸುಗ್ರೀವಾಜ್ಞೆಗೆ ಆಗ್ರಹ

ಬೆಂಗಳೂರು: 'ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದ ವರ್ಗಾವಣೆಗೆ ಸುಗ್ರೀವಾಜ್ಞೆ ಹೊರಡಿಸಬೇಕು' ಎಂದು ಆಗ್ರಹಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರಿಗೆ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಮನವಿ ಸಲ್ಲಿಸಿದೆ.

'2-3 ವರ್ಷಗಳಿಂದ ನಿರಂತರವಾಗಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದ ವರ್ಗಾವಣೆಗೆ ಕಾಯ್ದೆ ರೂಪಿಸುವಂತೆ ಒತ್ತಾಯಿಸುತ್ತಾ ಬಂದಿದ್ದೇವೆ. ಈ ಸಂಬಂಧ ಈಗಾಗಲೇ ಕರಡು ತಯಾರಿಸಿ, ಶಾಸಕರು ಮತ್ತು ಸಂಘದ ಪದಾಧಿಕಾರಿಗಳ ಜೊತೆ ಚರ್ಚಿಸಿದ್ದರೂ ಈವರೆಗೂ ಕಾಯ್ದೆಯ ಸುಗ್ರೀವಾಜ್ಞೆಗೆ ರಾಜ್ಯಪಾಲರ ಅನುಮೋದನೆ ಪಡೆದಿಲ್ಲ' ಎಂದು ಮನವಿಯಲ್ಲಿ ಸಂಘದ ಪದಾಧಿಕಾರಿಗಳು ವಿಷಾದ ವ್ಯಕ್ತಪಡಿಸಿದ್ದಾರೆ.

'ಹಲವು ವರ್ಷಗಳಿಂದ ಸಾವಿರಾರು ಉಪನ್ಯಾಸಕರು, ಉಪನ್ಯಾಸಕಿಯರು ಕೌಟುಂಬಿಕ ಕಾರಣಗಳಿಗಾಗಿ ವರ್ಗಾವಣೆಯನ್ನು ಎದುರುನೋಡುತ್ತಿದ್ದಾರೆ. ಸಮಸ್ಯೆಯ ಗಂಭೀರತೆ ಅರಿತುಕೊಂಡು ಆದಷ್ಟು ಬೇಗ ಸಚಿವ ಸಂಪುಟ ಸಭೆಯ ಒಪ್ಪಿಗೆ ಪಡೆದು ಸುಗ್ರೀವಾಜ್ಞೆ ಹೊರಡಿಸಿ, ವರ್ಗಾವಣೆ ಪ್ರಕ್ರಿಯೆ ಆರಂಭಿಸಬೇಕು' ಎಂದು ಮನವಿಯಲ್ಲಿ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್. ಒತ್ತಾಯಿಸಿದ್ದಾರೆ.

ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (ನೋ. ಸಂಖ್ಯೆ .DRB-2/SOR/54/2017-18)
ಓಲ್ಡ್ ಸ್ಕೂಲ್ ಆಫ್ ನರ್ಸಿಂಗ್ ಬಿಲ್ಡಿಂಗ್, ವಿಕ್ಟೋರಿಯಾ ಆಸ್ಪತ್ರೆ ಕ್ಯಾಂಪಸ್, ಬೆಂಗಳೂರು-02.
ದೂ: 080-26707727 ಇ-ಮೇಲ್: igotinstitute@gmail.com
ಸಂಖ್ಯೆ: ಐಜಿಒಟಿ/ಟಿಎನ್‌ಡಿ/10/2021-22 ದಿನಾಂಕ: 16.06.2021

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಯ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಕೆಳಕಂಡ ವಿಷಯಗಳಿಗೆ ಎರಡು ಲಕೋಟೆ ಪದ್ಧತಿ ಅನುಸರಿಸಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಟೆಂಡರ್ ಸಂಖ್ಯೆ ಹಾಗೂ ದಿನಾಂಕ ಮತ್ತು ವಿವರ : (1)** IGOT/TND/10/2021-22(Re-tender), Dtd: 15.06.2021: Endoscopy Accessories. **(2)** IGOT/TND/11/2021-22(Re-tender), Dtd: 15.06.2021: Sutures, Surgicals and Staplers. ಟೆಂಡರ್‌ದಾರರು ದಿನಾಂಕ: **15.06.2021** ರಿಂದ **30.06.2021** ರ ಸಾಯಂಕಾಲ**4.00** ಗಂಟೆಯವರೆಗೆ **www.eproc.karnataka.gov.in** ವೀಕ್ಷಿಸಿ ಟೆಂಡರ್ ದಸ್ತಾವೇಜುಗಳನ್ನು ಇ-ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಟೆಂಡರ್‌ದಾರರ ತಾಂತ್ರಿಕ ಬಿಡ್ಡನ್ನು ದಿನಾಂಕ: **02.07.2021, ಬೆಳಿಗ್ಗೆ 11.30** ಗಂಟೆಗೆ ತೆರೆಯಲಾಗುವುದು.

ಸಹಿ/- ನಿರ್ದೇಶಕರು

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಬೆಂಗಳೂರು-560001
ದೂರವಾಣಿ: 080-23414446, ಇ-ಮೇಲ್: jdaahvs@gmail.com
ಸಂಖ್ಯೆ: ಆಪಸ/ಇಎಸ್‌ಟಿ-ಸಿ(2)/ಸಿಆರ್-69/2020-21 ದಿನಾಂಕ:15.06.2021

ಅಧಿಸೂಚನೆ

ಈ ಕಛೇರಿಯ ಅಧಿಸೂಚನೆ ಸಂಖ್ಯೆ : ಆಪಸ/ಸಿಬ್ಬಂದಿ-3(2)/ವಿವ-69/2020-21, ದಿನಾಂಕ : 26.06.2020ರಂತೆ ನಮೂದಿಸಿರುವ ಅರ್ಜಿ ನಮೂನೆಯನ್ನು ಆನ್‌ಲೈನ್ ಮೂಲಕ ಅನುಚ್ಛೇದ 371(ಜೆ) ರಂತೆ **ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 32 ಪಶುವೈದ್ಯಕೀಯ ಪರೀಕ್ಷಕರ ಹಾಗೂ 83 ಪಶುವೈದ್ಯಕೀಯ ಸಹಾಯಕರ ಗ್ರೂಪ್-ಸಿ ಹುದ್ದೆಗಳಿಗೆ ದಿನಾಂಕ 16.06.2021 ರಿಂದ 16.08.2021ರ ಸಂಜೆ 5.30 ರೊಳಗಾಗಿ** ಅರ್ಜಿಯನ್ನು ಆನ್‌ಲೈನ್ ಮುಖಾಂತರ ಭರ್ತಿಮಾಡಿ ಅರ್ಜಿ ಶುಲ್ಕವನ್ನು ಕರ್ನಾಟಕ ರಾಜ್ಯದ ಯಾವುದೇ ಅಂಚೆ ಕಛೇರಿಗಳಲ್ಲಿ ಆನ್‌ಲೈನ್ ಗೇಟ್‌ವೇ ಮುಖಾಂತರ ಪಾವತಿಸಲು ತಿಳಿಸಿದೆ. ಈ ನೇಮಕಾತಿ ಕುರಿತು ಅಧಿಸೂಚನೆ, ಅರ್ಜಿ ನಮೂನೆ ಮತ್ತು ಅಡಕಗಳ ವಿವರಗಳಿಗಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಹಾಗೂ ಇಲಾಖಾ ವೆಬ್‌ಸೈಟ್ **www.ahvs.kar.nic.in** ನಲ್ಲಿ ಪೂರ್ಣ ವಿವರವನ್ನು ಪಡೆದುಕೊಳ್ಳಬಹುದು.

ಸಹಿ/- ಆಯುಕ್ತರು,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹಾಗೂ ಪದನಿಮಿತ್ತ ಅಧ್ಯಕ್ಷರು,ಇಲಾಖಾ ಆಯ್ಕೆ ಸಮಿತಿ
ವಾಸಾಸಂಇ/ಬೆಂನ/551/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಿಶ್ವವಿದ್ಯಾಲಯದ
ಪಬ್ಲಿಕ್ ಸ್ಕೂಲ್, ಧಾರವಾಡ. ದೂರವಾಣಿ ಸಂಖ್ಯೆ: 0836-2442373
ಕೆ.ಯು./ಯುಪಿಎಸ್/2021-22/ ದಿನಾಂಕ: 08-06-2021

ಪ್ರವೇಶ ಪ್ರಕಟಣೆ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಯುನಿವರ್ಸಿಟಿ ಪಬ್ಲಿಕ್ ಶಾಲೆಯ 2021-22 ನೇ ಶೈಕ್ಷಣಿಕ ಸಾಲಿಗೆ 5ನೇ ತರಗತಿಯಿಂದ 10ನೇ ತರಗತಿಯವರೆಗೆ ಶಾಲೆ ಮತ್ತು ವರದಾ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿಯನ್ನು ಅಹ್ವಾನಿಸಲಾಗಿರುತ್ತದೆ. 8ನೇ ತರಗತಿಯಿಂದ ಕನ್ನಡ ಹಾಗೂ ಆಂಗ್ಲ (ಇಂಗ್ಲೀಷ) ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅವಕಾಶವಿರುತ್ತದೆ. ಮತ್ತು

ಪ್ರವೇಶದ ವಿವರ
1). ಪ್ರವೇಶ ಅರ್ಜಿ ಫಾರ್ಮಗಳನ್ನು **ದಿನಾಂಕ: 15-6-2021** ರಿಂದ ವಿತರಿಸಲಾಗುವದು.
2). ಶಾಲಾ ಪ್ರವೇಶಕ್ಕೆ ಅರ್ಜಿ **ಶುಲ್ಕ ರೂ. 50/-** ಹಾಗೂ ವಸತಿ ನಿಲಯದ ಪ್ರವೇಶಕ್ಕೆ **ರೂ.100/-** ಗಳನ್ನು ಚಲನ ಮುಖಾಂತರ ತುಂಬಿ ಅರ್ಜಿಯನ್ನು ಶಾಲಾ ಕಚೇರಿಯಿಂದ ಪಡೆಯಬಹುದು.
3). ಭರ್ತಿ ಮಾಡಿದ ಅರ್ಜಿ ಫಾರ್ಮನ್ನು **ದಿನಾಂಕ: 31-8-2021 ಮಧ್ಯಾಹ್ನ 4-00 ಘಂಟೆ** ಒಳಗೆ ಶಾಲಾ ಕಚೇರಿಗೆ ಸಲ್ಲಿಸುವದು.

ಪ್ರವೇಶಕ್ಕೆ ಅರ್ಜಿ ಫಾರ್ಮನೊಂದಿಗೆ ಅವಶ್ಯಕವಾಗಿ ಲಗತ್ತಿಸಬೇಕಾದ ದಾಖಲೆಗಳು:
1) ಹಿಂದಿನ ತರಗತಿಯ ಅಂಕಪಟ್ಟಿ (ಮಾರ್ಕ್ಸಕಾರ್ಡ)
2) ಜಾತಿ ಹಾಗೂ ಆದಾಯ ಪ್ರಮಾಣಪತ್ರ
3) ವರ್ಗಾವಣೆ ಪ್ರಮಾಣಪತ್ರ, (T.C) ಮೂಲ ಪ್ರತಿ
4) 3 ಇತ್ತೀಚಿನ ಸ್ಟ್ಯಾಂಪ್ ಸೈಜಿನ ಭಾವಚಿತ್ರ
5) ವಾಸಸ್ಥಳದ ದಾಖಲಾತಿ ಪ್ರತಿ (ವಿದ್ಯಾರ್ಥಿ ಆಧಾರ ಕಾರ್ಡ)
6) ವಿದ್ಯಾರ್ಥಿಗಳ ಅಕೌಂಟನ ಪಾಸ್ ಬುಕ್‌ನ ಝೆರಾಕ್ಸ ಪ್ರತಿ
7) ವಿದ್ಯಾರ್ಥಿ ತಂದೆ ತಾಯಿ ಆಧಾರಕಾರ್ಡ ಝೆರಾಕ್ಸ ಪ್ರತಿ

ವಿಶೇಷ ಸೂಚನೆ:
1) **5 & 8 ನೇ** ತರಗತಿಗಳಿಗೆ ವಸತಿ ನಿಲಯಕ್ಕೆ ಹೊಸದಾಗಿ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಲಿಖಿತ ಪರೀಕ್ಷೆಯ ದಿನಾಂಕ, ಫಲಿತಾಂಶವನ್ನು ಪ್ರಕಟಿಸುವ ದಿನಾಂಕ ಮತ್ತು ವಸತಿ ನಿಲಯದ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳು ಪ್ರವೇಶ ಪಡೆಯುವ ದಿನಾಂಕವನ್ನು ನಂತರ ತಿಳಿಸಲಾಗುವದು.
2) ಪ್ರವೇಶ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಶಾಲೆಯ ಕಾರ್ಯಾಲಯದಲ್ಲಿ ವಿಚಾರಿಸಬಹುದು. ಮುಂದುವರೆದು ಮೇಲ್ಕಾಣಿಸಿದ ವಿಷಯದಲ್ಲಿ ಯಾವುದೇ ಬದಲಾವಣೆಯನ್ನು ಜಾರಿಗೆ ತರುವ ಹಕ್ಕನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ.

ಕಛೇರಿಯ ದೂರವಾಣಿ ಸಂಖ್ಯೆ: 0836-2442373

ಸಹಿ/- ಪ್ರಾಚಾರ್ಯರು, ಕ.ವಿ.ವಿ. ಪಬ್ಲಿಕ್ ಸ್ಕೂಲ್, ಧಾರವಾಡ
ಸಹಿ/- ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ.ಮಂ.ವಿ.ಟಿ.ಎನ್.ಡಿ(14ಇ)2021-22:ಜೆಇ-1 ದಿನಾಂಕ: 14.06.2021

ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಲೆಕ್ಕಶೀರ್ಷಿಕೆ 3054-03-337-0-05-200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆಯಡಿ ಒಟ್ಟು 33 ಕಾಮಗಾರಿಗಳು (ಕಾಮಗಾರಿಗಳ ಗರಿಷ್ಠ ಅಂದಾಜು ಮೊತ್ತ ರೂ. 35.50 ಲಕ್ಷ ಮತ್ತು ಕನಿಷ್ಠ ರೂ. 7.00 ಲಕ್ಷ ಮೊತ್ತದ ಕಾಮಗಾರಿ ಆಗಿರುತ್ತದೆ) ಮತ್ತು ಲೆಕ್ಕಶೀರ್ಷಿಕೆ 3054-04-337-1-10-200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆಯಡಿ ಒಟ್ಟು 27 ಕಾಮಗಾರಿಗಳು (ಕಾಮಗಾರಿಗಳ ಗರಿಷ್ಠ ಅಂದಾಜು ಮೊತ್ತ ರೂ. 21.32 ಲಕ್ಷ ಮತ್ತು ಕನಿಷ್ಠ ರೂ. 5.60 ಲಕ್ಷ ಮೊತ್ತದ ಕಾಮಗಾರಿ ಆಗಿರುತ್ತದೆ.) ಈ ಎಲ್ಲಾ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿವಾರು ಮೀಸಲಾತಿ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿದುಕೊಳ್ಳಬಹುದು.
ಟೆಂಡರನ್ನು ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್ ಮುಖಾಂತರ ದಿನಾಂಕ: 25.06.2021ರ ಅಪರಾಹ್ನ 4.00 ಗಂಟೆ (16:00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ / ಕರೆ / ತಿದ್ದುಪಡಿ / ಟೆಂಡರು ಮುಂದೂಡಿಕೆ / ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೀಡಲಾಗುವುದು.
ಕರ್ನಾಟಕ ಸರ್ಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಟೆಂಡರು ಡಾಕ್ಯುಮೆಂಟ್‌ಗಳನ್ನು Download ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಮತ್ತು ಅಂತರ್‌ಜಾಲದ ಮೂಲಕ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
Ph/Fax: 08194-230102 E-Mail: eeubp.d5cta@gmail.com
ಸಂ.: ಕಾಇಂ/ವಿಜನಿನಿ/ಭಮೇಯೋ/ವಿ-5/ಚಿ/ಪ್ರಕೃತಿ ವಿಕೋಪ/ಟೆಂಡರ್/2021-22/193 ದಿನಾಂಕ: 09.06.2021

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ 1ನೇ ತಿದ್ದುಪಡಿ ಪ್ರಕಟಣೆ

ಈ ಕಛೇರಿ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಕ್ರಸಂ.: ಕಾಇಂ/ವಿಜನಿನಿ/ಭಮೇಯೋ/ವಿ-5/ಚಿ/ಪ್ರಕೃತಿ ವಿಕೋಪ/ಟೆಂಡರ್/2021-22/01ರಿಂದ 03 ದಿನಾಂಕ: 01.04.2021ರಲ್ಲಿ 03 ಕಾಮಗಾರಿಗಳ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. (ಇಂಡೆಂಟ್ ನಂ.: VJNL/2021-22/FP/WORK_INDENT1659, VJNL/2021-22/FP/WORK_INDENT1661 ಮತ್ತು VJNL/2021-22/FP/WORK_INDENT1665) ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್ ಪ್ರಕಟಣೆಯಲ್ಲಿನ ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಮಾರ್ಪಾಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯ ಮಾರ್ಪಾಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತಿವೆ. (1) ಆಕ್ಷೇಪಣೆ, ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 23.06.2021ರ ಸಂಜೆ 05:00 ಗಂಟೆಯವರೆಗೆ (2) ಪ್ರೀ-ಬಿಡ್ ಸಭೆಯ ದಿನಾಂಕ: 24.06.2021ರಂದು ಬೆಳಿಗ್ಗೆ 11:00 ಗಂಟೆಗೆ ಮುಖ್ಯ ಇಂಜಿನಿಯರ್, ವಿಜನಿನಿ, ಭಮೇಯೋ, ವಲಯ ಚಿತ್ರದುರ್ಗ ಕಛೇರಿಯಲ್ಲಿ ನಿಗದಿಪಡಿಸಲಾಗಿದೆ. (3) ಟೆಂಡರ್‌ನ್ನು ದಿನಾಂಕ: 28.06.2021ರಂದು ಸಂಜೆ 04:00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 29.06.2021ರಂದು ಸಂಜೆ 04:30 ಗಂಟೆ ನಂತರ ತೆರೆಯಲಾಗುವುದು. (5) ಆರ್ಥಿಕ ಬಿಡ್‌ನ್ನು "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" ತೆರೆಯಲಾಗುವುದು. ಉಳಿದ ಉಪ ವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು http://eproc.karnataka.gov.in ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.

RO No. 178: DIPR/CTA/MCA/2021-22 ಸಹಿ/- ಕಾರ್ಯಪಾಲಕ ಅಭಿಯಂತರರು

Karnataka Soaps & Detergents Limited
(A Government of Karnataka Undertaking)
Formerly Government Soap Factory and Sandalwood Oil Factories,
Sandal City Corporate Off & Factory : # 27, Industrial Suburb, Bangalore-Pune Highway, Rajajinagara, Bengaluru - 560 055. Ph.: 080-22164810, Fax: 23375102,
E-mail: **hrdksdl@gmail.com** Website: **https://mysoresandal.org**
Ref: KSDL/GM(ADMN)2021-22 Date: 16.06.2021

NOTIFICATION

Applications are invited from eligible candidates for appointment as Visiting Medical Officer at KS&DL Bangalore Complex on retainership basis for a period of one year, which may be extended depending upon theperformance of the candidate. The qualification, experience and the age limit for appointment is as indicated below.

Post	Visiting Medical Officer
No. of Posts	One
Maximum Age	40 Years
Qualification	MBBS Degree from a Medical College recognized by Medical Council of India and Candidate must be a Medical Practitioner registered at KMC, Bangalore.
Experience	5 years as General Duty Doctor in Government Hospitals or Private Nursing Homes.
Working Hours	The candidate must be ready to work between **1.00 pm and 4.30 pm** on all working days

Interested candidates may send their resume, with expected remuneration, along with 3 passport size photos with necessary qualification certificates / experience certificates, duly attested, to the undersigned, **within 7 days.**

Sd/- General Manager (ADMIN)

ಕರ್ನಾಟಕ ಸರ್ಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ಕ್ರಸಂ : ಕಾನಿಇಂಧಾ/ಪಿಬಿ-4/ಗುತ್ತಿಗೆ/2021-22/872 ದಿನಾಂಕ : 15-06-2021

ಅಲ್ಪಾವಧಿ ಟೆಂಡರ ಪ್ರಕಟಣೆ – I.F.T – KW- 4
ಇ-ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ e-Proc- ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಭರ್ತಿ ಮಾಡಿದ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ (e-Proc)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ (e-Proc)	ಆರ್ಥಿಕ ಬಿಡ್ ತೆರೆಯುವ ದಿನಾಂಕ (e-Proc)
	ಲೆಕ್ಕ ಶಿರ್ಷಿಕೆ 3054 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ ಅಡಿಯ ಕಾಮಗಾರಿ				
1	Restoration / Protection to RE Wall for ROB near Shirur on Mangasuli-Lakshmeshwar SH-73 in Kundagol Taluk of Dharwad District. **KPWD/2021-22/BG/WORK_INDENT137500**	**499.00**	**30-06-2021**	**01-07-2021**	**02-07-2021**

ಸಹಿ/- (ಶ್ರೀ.ಎಸ್.ಬಿ.ಚೌಡಣ್ಣವರ) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ವಾಸಾಸಂಇ/ಧಾರವಾಡ/ಎಂಸಿಎ/184/2021-22

ಕರ್ನಾಟಕ ಸರಕಾರ
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್-585401
(ದೂರವಾಣಿ ಸಂಖ್ಯೆ: 08482-228366, ಫ್ಯಾಕ್ಸ್: 08482-240322)
Website :www.brims-bidar.in & E-mail-directorbrimsbidar2007@gmail.com
Ref No: Brims/Tender/PSA/44/2020-21 ದಿನಾಂಕ: 14.06.2021

ಇ-ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಗೆ 660 LPM PSA oxygen generation Plant ಸ್ಥಾಪಿಸಲು ಇ-ಟೆಂಡರ್ ಅಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ದಿನಾಂಕ: 22.06.2021 ಸಾಯಂಕಾಲ 5.00 ಗಂಟೆಯವರೆಗೆ ಟೆಂಡರ್ ಭರಿಸಲು ಅವಕಾಶವಿರುತ್ತದೆ. ಇ.ಎಂ.ಡಿ ಮೊತ್ತ Rs.1,50,000/-. ದಿನಾಂಕ: 23.06.2021 ಮು: 5.30 ಗಂಟೆಗೆ ತಾಂತ್ರಿಕ ಬಿಡ್ ತೆರೆಯಲಾಗುತ್ತಿದೆ. ಟೆಂಡರಿನ ಸಂಪೂರ್ಣ ಮಾಹಿತಿಗಾಗಿ ಇ-ಪ್ರೋಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ www.http//eproc.karnataka.gov.in ನಲ್ಲಿ ದಿನಾಂಕ: 14.06.2021 ರಿಂದ ಪಡೆಯಬಹುದು.
1) ಟೆಂಡರ್ ಸಂಖ್ಯೆ: Brims/Tender/PSA/44/2020-21. ಟೆಂಡರ್ ವಿವರ: SHORT TERM E-TENDER FOR SUPPLY INSTALLATION & COMMISSIONING OF 660 PSA OXYGEN GENERATION PLANT ON TURN KEY BASIS AT BRIMS HOSPITAL . ಇ.ಎಂ.ಡಿ ಮೊತ್ತ-1,50,000/-.
ಗಮನಿಸಿ: ಇನ್ನು ಮುಂದೆ ಟೆಂಡರ್ ಪ್ರಕ್ರೀಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ (E-Procurment) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ನಿರ್ದೇಶಕರು,
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್
ವಾ.ಸಾ.ಸಂ.ಇ/ಬೀದರ/53/ಎಂಸಿ&ಎ/2021-22

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು - 560001.
ದೂರವಾಣಿ ಸಂಖ್ಯೆ: +91-80-29619801 ಇ-ಮೇಲ್: latha.mdksmscl@gmail.com
No: HFW/KSMSCL/TND/IFA/02/2021-22 Date: 16-06-2021

ಟೆಂಡರ್ ಪ್ರಕಟಣೆ

ಉಲ್ಲೇಖ: (1) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/IFA/02/2021-22 Dated: 16-06-2021 (IND-804)
(2) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/Re-TND/05/2021-22 Dated: 16-06-2021 (IND-805)
(3) ಈ ಕಛೇರಿಯ ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/COVID/IFQ/38/2021-22 Dated: 16-06-2021
(4) ಈ ಕಛೇರಿಯ ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/EQPT/COVID-19/RAT KITS/39/2021-22 Dated: 16-06-2021
(5) ಈ ಕಛೇರಿಯ ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/EQPT/COVID-19/Re-TND RTPCR/40/2021-22 Dated: 16-06-2021

ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ. ನಿಯಮಾನುಸಾರ ಈ ಕೆಳಕಂಡ ರಾಷ್ಟ್ರವ್ಯಾಪ್ತಿ ಇ-ಟೆಂಡರ್ ಮತ್ತು ದರಪಟ್ಟಿಯನ್ನು ಕರೆಯಲಾಗಿದೆ.
1) ಔಷಧ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು (RKSK-WIFS) ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. KDL/TND/IFA/02/ 2021-22 Dated: 16-06-2021 (IND-804)
2) ಔಷಧ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. KDL/Re-TND/05/2021-22 Dated: 16-06-2021 (IND-805)
3) ಕೋವಿಡ್-19 ಚಿಕಿತ್ಸೆಗಾಗಿ Intravenous immunoglobulin 10gm (IV IG) ನ್ನು ಖರೀದಿಸಲು ದರಪಟ್ಟಿಯನ್ನು ಕರೆಯುವ ಬಗ್ಗೆ.
4) ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಅವಶ್ಯಕತೆ ಇರುವ RAT KITS ಗಳನ್ನು ಖರೀದಿಸಿ ಪೂರೈಸುವ ಬಗ್ಗೆ.
5) ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಅವಶ್ಯಕತೆ ಇರುವ RTPCR KITS ಗಳನ್ನು ಖರೀದಿಸಿ ಪೂರೈಸುವ ಬಗ್ಗೆ.

ಇ.ಎಂ.ಡಿ., ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://eproc.karnataka.gov.in** ನಲ್ಲಿ ದಿನಾಂಕ: **16-06-2021 ರಿಂದ** ಔಷದಿ ಟೆಂಡರ್‌ಗಳ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ
ಕೆ.ಎಸ್.ಎಂ.ಎಸ್.ಸಿ.ಎಲ್ ವೆಬ್‌ಸೈಟ್ ಮುಖಾಂತರ: **http://www.kdlws.kar.nic.in** ನಲ್ಲಿ ತಾಂತ್ರಿಕ ವಿವರಣೆ, ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಕ್ರಮ ಸಂಖ್ಯೆ (3) ನ್ನು ದಿನಾಂಕ: **16-06-2021 ರಿಂದ 21-06-2021ರ** ಒಳಗಾಗಿ ಪಡೆಯಬಹುದು. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ದರಪಟ್ಟಿಯನ್ನು Password Protected PDF ನಲ್ಲಿ ಇ-ಮೇಲ್ ಐಡಿ **ksdlwscovid19.procurement@gmail.com** ಗೆ ದಿನಾಂಕ: **21-06-2021ರ ಸಂಜೆ 5.00 ಗಂಟೆಯೊಳಗೆ** ದರಪಟ್ಟಿಯನ್ನು ಸಲ್ಲಿಸಬಹುದು. ಹಾಗೂ ಕ್ರಮ ಸಂಖ್ಯೆ (4) ಮತ್ತು (5) ನ್ನು ದಿನಾಂಕ: **16-06-2021 ರಿಂದ 19-06-2021ರ** ಒಳಗಾಗಿ ಪಡೆಯಬಹುದು. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ದರಪಟ್ಟಿಯನ್ನು Password Protected PDF ನಲ್ಲಿ ಇ-ಮೇಲ್ ಐಡಿ **ksdlwscovid19.procurement@gmail.com** ಗೆ ದಿನಾಂಕ: **19-06-2021ರ ಸಂಜೆ 5.00 ಗಂಟೆಯೊಳಗೆ** ದರಪಟ್ಟಿಯನ್ನು ಸಲ್ಲಿಸಬಹುದು. ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಂ.ಎಸ್.ಸಿ.ಎಲ್
ವಾಸಾಸಂಇ/ಬೆಂ.ನ/ಅಡ್ವರ್ಟೋರ್/562/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ – 571107
E mail : itstaff_ulb_periyapatna@yahoo.com ಫೋನ್: 08223-273036
ಸಂ:ಪುಸಪಿಪ:/ಆ.ಶಾ/ಸಿ.ಆರ್/09/2021-22 ದಿನಾಂಕ: 11.06.2021

ಟೆಂಡರ್ ಪ್ರಕಟಣೆ

ಈ ಮೂಲಕ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ ಪಿರಿಯಾಪಟ್ಟಣ ಕೋವಿಡ್-19 ಗೆ ಸಂಬಂಧಿಸಿದಂತೆ, ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ ಅಸಂಘಟಿತ ಕಾರ್ಮಿಕರಿಗೆ ಕಿಟ್‌ನ್ನು ವಿತರಣೆ ಮಾಡಲು ಅವಶ್ಯವಿರುವ ಆಹಾರ ಸಾಮಾಗ್ರಿಗಳ ಪೂರೈಕೆಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿ: 25.06.2021ರ ಸಂಜೆ 4.00 ಗಂಟೆ ಒಳಗೆ 500+ ತೆರಿಗೆ ಪಾವತಿಸಿ ಟೆಂಡರ್ ಫಾರಂ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆ ದಿ: 28.06.2021ರ ಸಂಜೆ 4.00 ಗಂಟೆಯೊಳಗೆ, ಟೆಂಡರ್ ತೆರೆಯುವ ದಿ: 28.06.2021 ಸಂಜೆ 4.30 ಗಂಟೆಗೆ.
ಷರತ್ತುಗಳು: 1) ಟೆಂಡರ ಅಂಗೀಕರಿಸುವ /ತಿರಸ್ಕರಿಸುವ ಹಕ್ಕು ಪುರಸಭೆಗೆ ಕಾಯ್ದಿರಿಸಿದೆ. **2)** ಬಿಲ್ಲನ್ನು ಪುರಸಭೆಯ ಆರ್ಥಿಕ ಪರಿಸ್ಥಿತಿ ಅನುಸಾರ ಪಾವತಿಸಲಾಗುವುದು. **3)** ಟೆಂಡರ್ ಪುಸ್ತಕದಲ್ಲಿ ನಮೂದಿಸಿರುವಂತೆ ಉತ್ತಮ ಗುಣಮಟ್ಟದ ಆಹಾರ ಸಾಮಾಗಿಗಳನ್ನು ಸರಬರಾಜು ಮಾಡುವುದು. **4)** ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/-(ಶ್ರೀ ಮಂಜುನಾಥಸಿಂಗ್) ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/-(ಶ್ರೀಮತಿ ನಾಗರತ್ನ ಉಮೇಶ್) ಉಪಾಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/- (ಶ್ರೀ ವಿನೋದ್ ಪಿ.ಎನ್.) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/-(ಶ್ರೀ ಪ್ರಸನ್ನ ಎ.ಟಿ) ಮುಖ್ಯಾಧಿಕಾರಿ, ಪುರಸಭೆ, ಪಿರಿಯಾಪಟ್ಟಣ
DIPR/DDMYS/MCA/212/2021-22

ಮೈದುಂಬಿದ ಹಳ್ಳ–ಕೊಳ್ಳಗಳು: ನದಿಗಳಲ್ಲಿ ನೀರಿನ ಹರಿವು ಹೆಚ್ಚಳ • ಸೇತುವೆ ಕುಸಿತ – ಸಂಪರ್ಕ ಕಡಿತ

ರಾಜ್ಯದಲ್ಲಿ ಮುಂದುವರಿದ ಮಳೆಯ ಆರ್ಭಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರಿನ ಆರ್ಭಟ ಬುಧವಾರವೂ ಮುಂದುವರಿದಿದ್ದು, ವಿವಿಧೆಡೆ ಹಳ್ಳ-ಕೊಳ್ಳಗಳು ಮೈದುಂಬಿ ಹರಿಯುತ್ತಿವೆ. ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದ್ದು, ಜಲಾಶಯಗಳಿಗೆ ಒಳಹರಿವು ಹೆಚ್ಚತೊಡಗಿದೆ.

ಉಡುಪಿ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ವತ್ತಿನೆಣೆ ಹೆದ್ದಾರಿಯ ಇಳಿಜಾರಿನಲ್ಲಿ ಗುಡ್ಡ ಕುಸಿದಿದ್ದರೆ, ಹಾಸನದ ಸಕಲೇಶಪುರ ತಾಲ್ಲೂಕಿನ ಹಾನುಬಾಳು –ದೋಣಹಳ್ಳಿ ಮಾರ್ಗದ ಬೆಣಗಿನಹಳ್ಳ ಸೇತುವೆ ಕುಸಿದಿದ್ದು, ಸಂಪರ್ಕ ಕಡಿತಗೊಂಡಿದೆ.

ಹುಬ್ಬಳ್ಳಿಯ ತುಮಕೂರು ಗಲ್ಲಿಯಲ್ಲಿ ಮನೆ ಗೋಡೆ ಕುಸಿದಿದ್ದು, ಮನೆಯಲ್ಲಿ ಯಾರೂ ಇಲ್ಲದ ಕಾರಣ ಪ್ರಾಣಾಪಾಯ ಸಂಭವಿಸಿಲ್ಲ.

ಮಳೆಯ ಕಾರಣ, ಕೊಡಗು ಜಿಲ್ಲೆಯಾದ್ಯಂತ ಜೂನ್ 23ರಿಂದ ಆಗಸ್ಟ್ 16ರ ತನಕ ಮರಳುಗಾರಿಕೆ, ಮರದ ದಿಮ್ಮಿಗಳ ಸಾಗಣೆ ಮತ್ತು ಇತರೆ ಸರಕು ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ.

ಅಧಿಕ ಭಾರ ತುಂಬಿದ ಭಾರಿ ಸರಕು ಸಾಗಣೆ ವಾಹನಗಳು ನಿತ್ಯ ಸಂಚಾರ ಮಾಡುವುದರಿಂದ ರಸ್ತೆಯ ಬದಿಗಳ ಮಣ್ಣು ಭೂಕುಸಿತದಿಂದ ರಸ್ತೆಯ ಮೇಲೆ ಬಿದ್ದು, ಸಾಕಷ್ಟು ಅಪಘಾತಗಳಿಗೆ ಕಾರಣವಾಗುತ್ತದೆ. ಹೀಗಾಗಿ ಹಲವು ಎಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಗುಡ್ಡಕುಸಿತ (ಮಂಗಳೂರು ವರದಿ): ಉಡುಪಿ ಜಿಲ್ಲೆಯ ಶಿರೂರು- ಬೈಂದೂರು ನಡುವಿನ ವತ್ತಿನೆಣೆ ಹೆದ್ದಾರಿಯ ಇಳಿಜಾರಿನಲ್ಲಿ ಮಂಗಳವಾರ ರಾತ್ರಿ ಗುಡ್ಡ ಕುಸಿದ ಪರಿಣಾಮ ಹೆದ್ದಾರಿ ಮೇಲೆ ಮಣ್ಣು ಬಿದ್ದಿತ್ತು. ಬುಧವಾರ ಬೆಳಿಗ್ಗೆ ಹೆದ್ದಾರಿ ಗುತ್ತಿಗೆದಾರ ಐಆರ್‌ಬಿ ಕಂಪನಿಯು ಜೆಸಿಬಿ ಮೂಲಕ ಹೆದ್ದಾರಿ ಮೇಲೆ ಬಿದ್ದಿದ್ದ ಮಣ್ಣನ್ನು ತೆರವುಗೊಳಿಸಿತು. ಕೆಲಕಾಲ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಸುಳ್ಯ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ. ಬಂಟ್ವಾಳ ತಾಲ್ಲೂಕಿನಲ್ಲಿ ಹಲವೆಡೆ ಮನೆ ಮತ್ತು ಅಡಿಕೆ ತೋಟಗಳಿಗೆ ಹಾನಿಯಾಗಿದೆ. ಕಡೇಶಿವಾಲಯ ಗ್ರಾಮದ ಬಳಿ ದೊಡ್ಡ ಗೋಳಿಮರ ಉರುಳಿದ್ದು, 5 ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆಗಾಳಿಗೆ ವಿವಿಧೆಡೆ ಮರಗಳು ಬಿದ್ದಿವೆ. ಕೊಟ್ಟಿಗೆಹಾರ ಸಮೀಪದ ನಿಡುವಾಳೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದ ಕಮಾನಿನ ಮೇಲೆ ಮರ ಬಿದ್ದು ಹಾನಿಯಾಗಿದೆ. ಬಿನ್ನಡಿ ಭಾಗದಲ್ಲಿ ಧರೆ ಕುಸಿದು ರಸ್ತೆಗೆ ಬಿದ್ದಿದೆ. ಕೊಪ್ಪ ತಾಲ್ಲೂಕಿನ ಶೆಟ್ಟಿಹಡ್ಲು ಗ್ರಾಮದಲ್ಲಿ ಮನೆ ಮೇಲೆ ಮರ ಬಿದ್ದು, ಚಾವಣಿ ಹಾನಿಯಾಗಿದೆ. ಭದ್ರಾ, ಹೇಮಾವತಿ, ತುಂಗಾ ನದಿಗಳು ಮೈದುಂಬಿಕೊಂಡಿವೆ.

ಸೇತುವೆ ಕುಸಿತ (ಮೈಸೂರು ವರದಿ): ಹಾಸನದ ಸಕಲೇಶಪುರ ತಾಲ್ಲೂಕು ಹಾನುಬಾಳು- ದೋಣಹಳ್ಳಿ ಮಾರ್ಗದ ಬೆಣಗಿನಹಳ್ಳದ ಮಣ್ಣಿನ ಸೇತುವೆ ಕುಸಿದಿದ್ದು, ಸಂಪರ್ಕ ಕಡಿತಗೊಂಡಿದೆ.

ಕಳೆದ ವರ್ಷವೂ ಮಳೆಯಿಂದ ಸೇತುವೆ ಕೊಚ್ಚಿ ಹೋಗಿತ್ತು. ದೋಣಹಳ್ಳಿ ಗ್ರಾಮಸ್ಥರೇ ತಾತ್ಕಾಲಿಕವಾಗಿ ಸೇತುವೆ ನಿರ್ಮಿಸಿದ್ದರು. ಈಗ ಮತ್ತೆ ಸೇತುವೆ ಕುಸಿದಿದ್ದರಿಂದ, ಜಮೀನು ಹಾಗೂ ಇತರೆ ಕೆಲಸಗಳಿಗೆ ಜನರು, 10 ಕಿ.ಮೀ ಸುತ್ತಿ ಹಾನುಬಾಳಕ್ಕೆ ಬರುವಂತಾಗಿದೆ. ಸಕಲೇಶಪುರ ತಾಲ್ಲೂಕಿನ ಕೆಲ ಮನೆಗಳು ಹಾನಿಗೊಳಗಾಗಿವೆ. ಆಲೂರು ತಾಲ್ಲೂಕಿನ ಹಲವೆಡೆ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಮಂಗಳವಾರ ರಾತ್ರಿ ಬಿದ್ದ ಮಳೆಯ ಪರಿಣಾಮ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ರಸ್ತೆ ಬದಿಯ ಮಣ್ಣಿನ ತಡೆಗೋಡೆ ಕುಸಿದಿದೆ. ಕೊಡ್ಲಿಪೇಟೆ ಹೋಬಳಿಯ ಚಿಕ್ಕಬಂಡಾರ ಗ್ರಾಮದ ಮನೆಯೊಂದರ ಮೇಲೆ ಮರ ಬಿದ್ದು, ಹಾನಿಯಾಗಿದೆ.

ಗೋಡೆ ಕುಸಿತ (ಹುಬ್ಬಳ್ಳಿ ವರದಿ): ಮಳೆಯಿಂದಾಗಿ ಹುಬ್ಬಳ್ಳಿಯ ತುಮಕೂರು ಗಲ್ಲಿಯಲ್ಲಿ ಮನೆ ಗೋಡೆ ಕುಸಿದಿದೆ. ಮನೆಯವರೆಲ್ಲರೂ ಸಂಬಂಧಿಕರ ಊರಿಗೆ ಹೋಗಿದ್ದರಿಂದ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಬೆಳಗಾವಿ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಸತತ ಮಳೆಯಿಂದಾಗಿ ಬೆಳಗಾವಿಯ ಬಾಗವಾನ್ ಗಲ್ಲಿಯ ಮನೆಯ ಗೋಡೆ ಕುಸಿದಿದೆ.

ಘಟಪ್ರಭಾ ನದಿಗೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಬಳಿ ನಿರ್ಮಿಸಿರುವ ಜಲಾಶಯಕ್ಕೆ ಒಳಹರಿವು ಆರಂಭವಾಗಿದೆ. ಬುಧವಾರ ಬೆಳಿಗ್ಗೆ 7,558 ಕ್ಯುಸೆಕ್ ಒಳಹರಿವು ಇತ್ತು. ಮಳೆಯಿಂದಾಗಿ, ಅಲ್ಲಲ್ಲಿ ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿವೆ. ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಗರಿಗೆದರಿವೆ.

ಉತ್ತರ ಕನ್ನಡ, ಬಳ್ಳಾರಿ, ಗದಗ, ವಿಜಯನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಮಳೆಯಾಗಿದೆ.



ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಘಟಪ್ರಭಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾದ್ದರಿಂದ ಬೆಳಗಾವಿ ಜಿಲ್ಲೆಯ ಗೋಕಾಕ ಜಲಪಾತ ಮೈದುಂಬಿದೆ ಚಿತ್ರ: ಮಧು ಸೋನಗೋಜೆ

ಗರಿಷ್ಠ ಮಳೆ (ಸೆಂ.ಮೀಗಳಲ್ಲಿ)

ಶಿವಮೊಗ್ಗ ಜಿಲ್ಲೆ	
ಆಗುಂಬೆ	20
ಹೊಸನಗರ	17
ಚಿಕ್ಕಮಗಳೂರು	
ಕೆರೆಕಟ್ಟೆ	14.2
ಕೊಟ್ಟಿಗೆಹಾರ	14
ಬೆಟ್ಟಗೆರೆ	10.7
ದಕ್ಷಿಣ ಕನ್ನಡ	
ಮುಂಡಾಜೆ	10.8
ಉಡುಪಿ	
ಕೆರ್ವಾಸಿ	10.7
ಉತ್ತರ ಕನ್ನಡ	
ಗೇರುಸೊಪ್ಪ	16.5
ಕದ್ರಾ	12.9
ಸೂಪಾ	11.5
ಸಿದ್ದಾಪುರ	10.8
ಕಾರವಾರ	10.7
ಹೊನ್ನಾವರ	10.6
ಶಿರಸಿ	10.5
ಹಾಸನ ಜಿಲ್ಲೆ	
ಹೆತ್ತೂರು ಹೋಬಳಿ	11
ಕೊಡಗು ಜಿಲ್ಲೆ	
ಭಾಗಮಂಡಲ	12.5
ಶ್ರೀಮಂಗಲ	9.3

ಜಲಾಶಯಗಳ ಒಳಹರಿವು ಹೆಚ್ಚಳ

ಶಿವಮೊಗ್ಗ: ಜಿಲ್ಲೆಯಲ್ಲಿ ಮಂಗಾರು ಬಿರುಸುಗೊಂಡಿದ್ದು, ಹಿನ್ನೀರು ಭಾಗದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಭದ್ರಾ ಜಲಾಶಯದ ಒಳಹರಿವು ಹೆಚ್ಚಳವಾಗುತ್ತಿದೆ. ಬುಧವಾರ ಭದ್ರಾ ಜಲಾಶಯಕ್ಕೆ 10,958 ಕ್ಯುಸೆಕ್ ನೀರು ಹರಿದುಬಂದಿದೆ.

ಮತ್ತೊಂದೆಡೆ ತುಂಗಾ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಳವಾಗಿದೆ. ಜಲಾಶಯದಿಂದ 15 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.

ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಭಾಗದಲ್ಲಿ ಅತಿ ಹೆಚ್ಚು ಮಳೆಯಾಗಿದೆ. ಹಲವು ಮನೆಗಳು ಕುಸಿದಿವೆ. ಪುರಾತನ ಬಾವಿಯೊಂದು ಜರಿದಿರುವ ವರದಿಯಾಗಿದೆ.

ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ 1777.60 ಅಡಿ ತಲುಪಿದೆ. ಜಲಾಶಯಕ್ಕೆ 20,857 ಕ್ಯುಸೆಕ್, ಮಾಣಿ ಜಲಾಶಯಕ್ಕೆ 841 ಕ್ಯುಸೆಕ್, ಚಕ್ರಾ ಡ್ಯಾಂಗೆ 1576 ಕ್ಯುಸೆಕ್, ಸಾವೇಹಕ್ಲು ಡ್ಯಾಂಗೆ 1362 ಕ್ಯುಸೆಕ್ ಒಳಹರಿವು ದಾಖಲಾಗಿದೆ.

ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಶಿಕ್ಷಣ ಶುಲ್ಕ: ಸರ್ಕಾರ- ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘರ್ಷ
ಸಂವಾದದಲ್ಲಿ ಭಾಗವಹಿಸುವವರು

ಡಿ.ಶಶಿಕುಮಾರ್
ಪ್ರಧಾನ ಕಾರ್ಯದರ್ಶಿ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ

ಆರ್. ರಘು
ಬಿಜೆಪಿ ಮುಖಂಡ ಅಧ್ಯಕ್ಷ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಯೋಗಾನಂದ
ಸದಸ್ಯ, ಖಾಸಗಿ ಶಾಲೆಗಳ ಪೋಷಕರ ಸಂಘದ ಸಮನ್ವಯ ಸಮಿತಿ
ಇಂದು ಮಧ್ಯಾಹ್ನ 12 ರಿಂದ 1

ಎಸ್ಸೆಸ್ಸೆಲ್ಸಿ: ಮಾದರಿ ಪ್ರಶ್ನೆ ಪತ್ರಿಕೆ ಬಿಡುಗಡೆ

ಬೆಂಗಳೂರು: ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಎರಡು ಪರೀಕ್ಷೆಗಳು ಜುಲೈ ಮೂರನೇ ವಾರದಲ್ಲಿ ನಡೆಯಲಿದ್ದು, ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಒಎಂಆರ್ ಶೀಟ್ ಮಾಹಿತಿಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬಿಡುಗಡೆ ಮಾಡಿದೆ.

ಮೂರು ಪುಟಗಳ ಒಎಂಆರ್ ಶೀಟ್‌ನಲ್ಲಿ ಮೊದಲ ಪುಟದಲ್ಲಿ ಗಣಿತ, ಎರಡನೇ ಪುಟದಲ್ಲಿ ವಿಜ್ಞಾನ ಹಾಗೂ ಮೂರನೇ ಪುಟದಲ್ಲಿ ಸಮಾಜ ವಿಜ್ಞಾನ ವಿಷಯದ ಪ್ರಶ್ನೆಗಳಿಗೆ ಉತ್ತರಗಳನ್ನು ವಿದ್ಯಾರ್ಥಿಗಳು ಗುರುತು ಹಾಕಬೇಕು. ಪ್ರತಿ ಪುಟದಲ್ಲೂ ಆಯಾ ವಿಷಯಕ್ಕೆ ಸಂಬಂಧಿಸಿದ ಪ್ರತ್ಯೇಕ ಮಾಹಿತಿಯಿದೆ. ಮೂರು ಪುಟಗಳಲ್ಲೂ ವಿದ್ಯಾರ್ಥಿಯ ಫೋಟೊ ಮತ್ತು ಸಹಿ ಹಾಕಬೇಕಾಗುತ್ತದೆ. ಮೂರು ಪುಟಕ್ಕೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರತ್ಯೇಕ ಬಣ್ಣ ನೀಡಲಾಗಿದೆ.

ಮಾದರಿ ಪ್ರಶ್ನೆ ಪತ್ರಿಕೆಯನ್ನೂ ಮಂಡಳಿ ಬಿಡುಗಡೆ ಮಾಡಿದೆ. ಮೂರು ವಿಷಯದ ಪ್ರಶ್ನೆಗಳು ಒಂದೇ ಪ್ರಶ್ನೆ ಪತ್ರಿಕೆಯಲ್ಲಿ ಇರಲಿದೆ. ತಲಾ 40 ಪ್ರಶ್ನೆಗಳು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿ ಇರಲಿವೆ. ಎಲ್ಲ 40 ಪ್ರಶ್ನೆಗಳಿಗೂ ವಿದ್ಯಾರ್ಥಿಗಳು ಉತ್ತರಿಸಬೇಕು. ಒಎಂಆರ್ ಶೀಟ್ ಮಾದರಿಯಲ್ಲೇ ಮೊದಲು ಗಣಿತ, ಬಳಿಕ ವಿಜ್ಞಾನ ಮತ್ತು ಕೊನೆಯಲ್ಲಿ ಸಮಾಜ ವಿಜ್ಞಾನ ವಿಷಯದ ಪ್ರಶ್ನೆಪತ್ರಿಕೆ ಇರಲಿದೆ. ಮೂರು ವಿಷಯದ ಒಂದು ಪ್ರಶ್ನೆಪತ್ರಿಕೆ ಸುಮಾರು 42 ಪುಟ ಇರಲಿದೆ.

ಎಲ್ಲ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರು ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಒಎಂಆರ್ ಶೀಟ್‌ಗಳನ್ನು ಡೌನ್‌ಲೋಡ್ ಮಾಡಿ, ಪರೀಕ್ಷೆಗೆ ವಿದ್ಯಾರ್ಥಿಗಳು ಸಿದ್ಧತೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಮಾಹಿತಿ ನೀಡಲು ಸೂಚಿಸಲಾಗಿದೆ. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವೆಬ್‌ಸೈಟ್‌ನಲ್ಲಿ (https://sslc.karnataka.gov.in/) ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಒಎಂಆರ್ ಶೀಟ್ ಲಭ್ಯವಿದೆ.

ಕೋವಿಡ್: ಸಕ್ರಿಯ ಪ್ರಕರಣ 1.51 ಲಕ್ಷಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 7,345 ಮಂದಿ ಕೋವಿಡ್ ಪೀಡಿತರಾಗಿರುವುದು ಬುಧವಾರ ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.51 ಲಕ್ಷಕ್ಕೆ ಇಳಿಕೆಯಾಗಿದೆ.

ಕಳೆದ ತಿಂಗಳು ಈ ವೇಳೆ ಸಕ್ರಿಯ ಪ್ರಕರಣಗಳ ಸಂಖ್ಯೆ 6 ಲಕ್ಷದ ಗಡಿ ದಾಟಿತ್ತು. ಕೆಲ ದಿನಗಳಿಂದ ಚೇತರಿಸಿಕೊಳ್ಳುವವರ ಸಂಖ್ಯೆ ಹೆಚ್ಚಳ ಹಾಗೂ ಹೊಸ ಪ್ರಕರಣಗಳ ಸಂಖ್ಯೆ 10 ಸಾವಿರದ ಗಡಿಯೊಳಗೆ ವರದಿಯಾಗುತ್ತಿರುವ ಪರಿಣಾಮ ಸಕ್ರಿಯ ಪ್ರಕರಣಗಳು ಇಳಿಕೆ ಕಂಡಿವೆ. ಒಂದು ದಿನದ ಅವಧಿಯಲ್ಲಿ 1.68 ಲಕ್ಷ ಮಾದರಿಗಳನ್ನು ಪರೀಕ್ಷೆ ನಡೆಸಲಾಗಿದ್ದು, ಸೋಂಕು ದೃಢ ಪ್ರಮಾಣ ಶೇ 4.35ರಷ್ಟು ವರದಿಯಾಗಿದೆ.

ಈ ತಿಂಗಳು 16 ದಿನಗಳಲ್ಲಿ 1.79 ಲಕ್ಷ ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 27.84 ಲಕ್ಷ ದಾಟಿದೆ. ಕೊರೊನಾ ಸೋಂಕಿತರಲ್ಲಿ 148 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 2.01ರಷ್ಟು ವರದಿಯಾಗಿದೆ.

ರಾಜ್ಯದ 24 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 28 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 19 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 33,296ಕ್ಕೆ ತಲುಪಿದೆ.

ಸೋಂಕಿತರಲ್ಲಿ 17,913 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 25.99 ಲಕ್ಷ ದಾಟಿದೆ.

ಬೆಂಗಳೂರಿನಲ್ಲಿ 1,611 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಮೈಸೂರಿನಲ್ಲಿ 841, ದಕ್ಷಿಣ ಕನ್ನಡದಲ್ಲಿ 790, ಹಾಸನದಲ್ಲಿ 531 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ 500ಕ್ಕಿಂತ ಕಡಿಮೆ ಪ್ರಕರಣಗಳು ವರದಿಯಾಗಿದ್ದು, 12 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿಯಲ್ಲಿದೆ.

ಕೋವಿಡ್ ಲಸಿಕೆ ಪೂರೈಕೆಯ ಅಂಕಿ – ಅಂಶ ಸಿಗದ ಕಾರಣ ಮಧ್ಯಪ್ರವೇಶ

ಖಾಸಗಿ ಆಸ್ಪತ್ರೆಗಳಿಗೂ ಸರ್ಕಾರದ ಮೂಲಕವೇ ಲಸಿಕೆ

• ಸುರಕ್ಷಾ ಪಿ.

ಬೆಂಗಳೂರು: ಖಾಸಗಿ ಆಸ್ಪತ್ರೆಗಳಿಗೆ ಕೋವಿಡ್ ಲಸಿಕೆ ಪೂರೈಸುವ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮರೆಯಾಗಿರುವುದರಿಂದ ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡಲು ಸರ್ಕಾರ ನಿರ್ಧರಿಸಿದೆ. ಇನ್ನು ರಾಜ್ಯದ ಎಲ್ಲ ಖಾಸಗಿ ಆಸ್ಪತ್ರೆಗಳಿಗೂ ಸರ್ಕಾರದ ಮೂಲಕವೇ ಕೋವಿಡ್ ಲಸಿಕೆ ಪೂರೈಕೆಯಾಗಲಿದೆ.

ಐದು ವಾರಗಳಿಂದ ಖಾಸಗಿ ಆಸ್ಪತ್ರೆಗಳು ಉತ್ಪಾದಕರಿಂದ ನೇರವಾಗಿ ಲಸಿಕೆ ಖರೀದಿಸುತ್ತಿದ್ದವು. ಖಾಸಗಿ ಆಸ್ಪತ್ರೆಗಳು ಒಟ್ಟು ಉತ್ಪಾದನೆಯಾದ ಲಸಿಕೆಗಳಲ್ಲಿ ಶೇಕಡ 25ಕ್ಕಿಂತಲೂ ಹೆಚ್ಚು ಪ್ರಮಾಣದ ಲಸಿಕೆಗಳನ್ನು ಖಾಸಗಿ ಆಸ್ಪತ್ರೆಗಳು ಖರೀದಿಸಿರುವುದಕ್ಕೆ ಮೇ 27ರಂದು ಕಳವಳ ವ್ಯಕ್ತಪಡಿಸಿದ್ದ ಹೈಕೋರ್ಟ್, ಈ ಕುರಿತು ನಿಲುವು ಸ್ಪಷ್ಟಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು.

ರಾಜ್ಯದಲ್ಲಿ ಈವರೆಗೆ ಶೇ 20.33ರಷ್ಟು ಜನರು ಮೊದಲ ಡೋಸ್ ಲಸಿಕೆ ಪಡೆದಿದ್ದು, ಶೇ 4.33ರಷ್ಟು ಮಂದಿ ಮಾತ್ರ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ. ಲಾಕ್‌ಡೌನ್ ಸಡಿಲಿಕೆ ಆರಂಭವಾದ ಬೆನ್ನಲ್ಲೇ ಕೋವಿಡ್ ಲಸಿಕೆಗೆ ಬೇಡಿಕೆಯೂ ಹೆಚ್ಚಿದೆ. ಆದರೆ, ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಪೂರೈಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯ ಕೊರತೆ ಇರುವುದು ಕಂಡುಬಂದಿದೆ.

ರಾಜ್ಯ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂ ಸಂಘದ (ಫನಾ) ಪ್ರಕಾರ, ರಾಜ್ಯದಲ್ಲಿ ಕರ್ನಾಟಕ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯಡಿ 6,000 ಸಂಸ್ಥೆಗಳು ನೋಂದಣಿಯಾಗಿವೆ. ಸುಮಾರು 200ಕ್ಕೂ ಹೆಚ್ಚು ಸಂಸ್ಥೆಗಳು ಖಾಸಗಿಯಾಗಿ ಕೋವಿಡ್ ಲಸಿಕೆ ನೀಡುತ್ತಿವೆ. ಖಾಸಗಿ ಆಸ್ಪತ್ರೆಗಳ ಮೂಲಕ 26.67 ಲಕ್ಷ ಡೋಸ್ ಲಸಿಕೆ ನೀಡಿದ್ದು, 15.63 ಲಕ್ಷ ಡೋಸ್ ಲಸಿಕೆಗೆ ಸಂಬಂಧಿಸಿದ ಅಂಕಿಅಂಶ ಮಾತ್ರ ಆರೋಗ್ಯ ಇಲಾಖೆಗೆ ಸಿಕ್ಕಿದೆ.

ಶೇ 25ರ ಮಿತಿ: ಇನ್ನು ಖಾಸಗಿ ಆಸ್ಪತ್ರೆಗಳಿಗೆ ಒಟ್ಟು ಉತ್ಪಾದನೆಯಾದ ಲಸಿಕೆಯಲ್ಲಿ ಶೇ 25ರಷ್ಟನ್ನು ಮಾತ್ರ ಖರೀದಿಸಲು ಅವಕಾಶ ನೀಡಲು ನಿರ್ಧರಿಸಲಾಗಿದೆ. ಜೂನ್ 21ರಿಂದ ಸರ್ಕಾರದ ಮೂಲಕವೇ ಖಾಸಗಿ ಆಸ್ಪತ್ರೆಗಳಿಗೆ ಕೋವಿಡ್ ಲಸಿಕೆ ಪೂರೈಸುವ ತೀರ್ಮಾನವನ್ನೂ ಕೈಗೊಳ್ಳಲಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, 'ಈ ಹಿಂದೆ ಕೇಂದ್ರ ಸರ್ಕಾರವೇ ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಪೂರೈಸುತ್ತಿತ್ತು. ಈ ಕಾರಣದಿಂದ ನಮ್ಮ ಬಳಿ ಅಂಕಿ–ಅಂಶ ಇಲ್ಲ. ಜೂನ್ 9ರವರೆಗೂ ಸಲ್ಲಿಸಿರುವ ಬೇಡಿಕೆಯನ್ನು ಆಧರಿಸಿ ಲಸಿಕೆ ಪೂರೈಕೆ ಮುಗಿದಿದೆ. ಸೋಮವಾರದಿಂದ ಸರ್ಕಾರದ ಮೂಲಕವೇ ಖಾಸಗಿ ಆಸ್ಪತ್ರೆಗಳಿಗೂ ಲಸಿಕೆ ಪೂರೈಕೆಯಾಗುತ್ತಿದೆ' ಎಂದರು.

'ಖಾಸಗಿ ಆಸ್ಪತ್ರೆಗಳಿಂದ ಆರೋಗ್ಯ ಇಲಾಖೆ ಬೇಡಿಕೆ ಪಟ್ಟಿಯನ್ನು ಸಂಗ್ರಹಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿದೆ. ಕೇಂದ್ರವು ಮಂಜೂರಾತಿ ನೀಡಿದ ಬಳಿಕ ಆರೋಗ್ಯ ಇಲಾಖೆ ಲಸಿಕೆ ಖರೀದಿಗೆ ನೋಡಲ್ ಏಜೆನ್ಸಿಯಂತೆ ಕೆಲಸ ಮಾಡುತ್ತದೆ' ಎಂದು ವಿವರಿಸಿದರು.

ಮಾಹಿತಿ ಬಚ್ಚಿಡುತ್ತಿರುವ ಶಂಕೆ

ರಾಜ್ಯದಲ್ಲಿ ಕಾರ್ಪೋರೇಟ್ ವಲಯದ ಬೃಹತ್ ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ಲಸಿಕೆ ಪೂರೈಕೆಯಾಗಿದೆ. ಕೆಲವು ಆಸ್ಪತ್ರೆಗಳು ತಮ್ಮ ಬಳಿ ಉಳಿದಿರುವ ಡೋಸ್‌ಗಳ ಮಾಹಿತಿ ಬಹಿರಂಗಪಡಿಸುತ್ತಿಲ್ಲ. ಇದು ಅನುಮಾನಕ್ಕೆ ಕಾರಣವಾಗಿದೆ.

ಬೃಹತ್ ಆಸ್ಪತ್ರೆಗಳಿಗೆ ಹೆಚ್ಚು ಲಸಿಕೆ ಪೂರೈಸಿ, ಸಣ್ಣ ಆಸ್ಪತ್ರೆಗಳಿಗೆ ನೀಡದೆ ಇರುವುದನ್ನು ಆಕ್ಷೇಪಿಸಿದ್ದ ಫನಾ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಇತ್ತೀಚೆಗೆ ಪತ್ರ ಬರೆದಿತ್ತು.

ಕೋವಿಡ್: ಸೋಂಕಿನ ತೀವ್ರತೆ ತಡೆಗೆ ಔಷಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಆಯುರ್ವೇದಿಕ್ ಸೈನ್ಸ್ ಸಂಸ್ಥೆಯು ಗಿಡಮೂಲಿಕೆಗಳನ್ನು ಬಳಸಿ, ರೋಗನಿರೋಧಕ ಶಕ್ತಿ ಹೆಚ್ಚಿಸುವ 'ಆಯುಷ್ 64' ಔಷಧವನ್ನು ಸಂಶೋಧಿಸಿದೆ. ಈ ಔಷಧವು ಕೋವಿಡ್ ಕಾಯಿಲೆಯ ತೀವ್ರತೆ ತಡೆಯಲು ಸಹಕಾರಿ ಎನ್ನುವುದು ವೈದ್ಯಕೀಯ ಸಂಶೋಧನೆಗಳಿಂದ ದೃಢಪಟ್ಟಿದೆ.

ಇದನ್ನು ಶ್ರೀ ಶ್ರೀ ತತ್ವ ಸಂಸ್ಥೆಯು ಹೊರತಂದಿದ್ದು, ಕೇಂದ್ರ ಆಯುಷ್ ಸಚಿವಾಲಯದಿಂದ ಮಾನ್ಯತೆ ದೊರೆತಿದೆ. ದೇಶದಲ್ಲಿ 6 ಹಂತದ ವೈದ್ಯಕೀಯ ಪ್ರಯೋಗ ನಡೆಸಲಾಗಿದೆ. ಬುಧವಾರ ನಡೆದ ವರ್ಚುವಲ್ ಕಾರ್ಯಕ್ರಮದಲ್ಲಿ ಈ ಔಷಧವನ್ನು ಲೋಕಾರ್ಪಣೆ ಮಾಡಲಾಯಿತು.

'ಕೋವಿಡ್‌ನಿಂದಾಗಿ ಒಂದೂವರೆ ವರ್ಷದಿಂದ ಸಂಕಷ್ಟದ ದಿನಗಳನ್ನು ಎದುರಿಸುತ್ತಿದ್ದೇವೆ. ಈ ಕಾಯಿಲೆಗೆ ಆಯುರ್ವೇದ ಪದ್ಧತಿಯಲ್ಲಿ ಸಂಶೋಧಿಸಲಾದ 'ಆಯುಷ್–64' ಉತ್ತಮ ಫಲಿತಾಂಶ ನೀಡಿದೆ. ಮಾತ್ರೆಗಳ ರೂಪದಲ್ಲಿ ಇರುವ ಈ ಔಷಧವನ್ನು ಕೊರೊನಾ ಸೋಂಕಿನ ಸೌಮ್ಯ ಮತ್ತು ಮಧ್ಯಮ ಲಕ್ಷಣಗಳನ್ನು ಹೊಂದಿರುವವರಿಗೆ ಒದಗಿಸಲಾಗಿತ್ತು. ಈ ಮಾತ್ರೆಗಳನ್ನು ಸೇವಿಸಿದ ಸೋಂಕಿತರು ವೇಗವಾಗಿ ಚೇತರಿಸಿಕೊಂಡರು. ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಗುಣವನ್ನು ಇದು ಹೊಂದಿದೆ' ಎಂದು ಶ್ರೀ ಶ್ರೀ ತತ್ವ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅರವಿಂದ್ ವರ್ಚಸ್ವಿ ತಿಳಿಸಿದರು.

'ಕೆಮ್ಮು, ಶೀತ ಸೇರಿದಂತೆ ವಿವಿಧ ವೈರಾಣು ಸಂಬಂಧಿ ಅನಾರೋಗ್ಯ ಸಮಸ್ಯೆ ವಿರುದ್ಧ ಇದು ಕಾರ್ಯನಿರ್ವಹಿಸಲಿದೆ. ಲಕ್ಷಣ ರಹಿತ ಕೋವಿಡ್ ಪೀಡಿತರು ದಿನಕ್ಕೆ ಎರಡು ಬಾರಿಯಂತೆ 20 ದಿನಗಳು ಮಾತ್ರೆಗಳನ್ನು ಸೇವಿಸಬೇಕಾಗುತ್ತದೆ' ಎಂದು ವಿವರಿಸಿದರು.

ಆಯುಷ್ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಕೊಟೆಚಾ ಮಾತನಾಡಿ, 'ಆಯುರ್ವೇದ ವೈದ್ಯಕೀಯ ಪದ್ಧತಿಯಡಿ ಕೂಡ ರೋಗನಿರೋಧಕ ಶಕ್ತಿ ವೃದ್ಧಿಗೆ ಸಹಕಾರಿಯಾದ ಔಷಧಗಳನ್ನು ಹಲವರಿಗೆ ವಿತರಿಸಲಾಗಿದೆ. 'ಆಯುಷ್–64' ಔಷಧವು ಕೋವಿಡ್ ಪೀಡಿತರ ಮೇಲೆ ಕಾರ್ಯನಿರ್ವಹಿಸಿರುವ ಬಗ್ಗೆ ವೈಜ್ಞಾನಿಕ ಪುರಾವೆಗಳು ಲಭ್ಯವಿದೆ' ಎಂದು ಹೇಳಿದರು.

ಪಾಕಿಸ್ತಾನಿ ಮಹಿಳೆಯ ತನಿಖೆ ಪೂರ್ಣಗೊಳಿಸಿದ ತನಿಖಾ ತಂಡ

ಭಟ್ಕಳ: ಅನಧಿಕೃತವಾಗಿ ಆರು ವರ್ಷಗಳಿಂದ ಭಟ್ಕಳದಲ್ಲಿ ವಾಸವಿದ್ದ ಪಾಕಿಸ್ತಾನಿ ಮಹಿಳೆಯನ್ನು ಬಂಧಿಸಿದ್ದ ಕೇಂದ್ರ ತನಿಖಾ ತಂಡ ಮತ್ತು ಬೆಂಗಳೂರಿನ ಎ.ಟಿ.ಎಸ್ ಬುಧವಾರ ತನಿಖೆ ಪೂರ್ಣಗೊಳಿಸಿವೆ.

ಖತೀಜಾ ಮೆಹರಿನ್ ಎನ್ನುವ ಪಾಕಿಸ್ತಾನದ ರಾಷ್ಟ್ರೀಯತೆ ಹೊಂದಿರುವ ಮಹಿಳೆಯು ಭಟ್ಕಳ ತಾಲ್ಲೂಕಿನ ನವಾಯತ ಕಾಲೊನಿಯ ಮನೆಯೊಂದರಲ್ಲಿ ಅಕ್ರಮವಾಗಿ ವಾಸವಿದ್ದರು. ಈ ಬಗ್ಗೆ ಗುಪ್ತಚರ ಮಾಹಿತಿಯನ್ನು ಆಧರಿಸಿ ಭಟ್ಕಳ ನಗರ ಠಾಣಾ ಪೊಲೀಸರು ಜೂನ್ 9ರಂದು ಬಂಧಿಸಿದ್ದರು.

ಕೇಂದ್ರದ ತನಿಖಾ ತಂಡ ಮತ್ತು ಬೆಂಗಳೂರಿನ ಎ.ಟಿ.ಎಸ್ ತಂಡದವರು ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಭಟ್ಕಳ ಮತ್ತು ಕಾರವಾರದಲ್ಲೂ ತನಿಖೆ ನಡೆಸಲಾಗಿದ್ದು, ಪ್ರಮುಖ ಮಾಹಿತಿ ಕಲೆ ಹಾಕಿದ್ದಾರೆ ಎನ್ನಲಾಗಿದೆ.

ಈ ಮಹಿಳೆಯು, ಎಂಟು ವರ್ಷಗಳ ಹಿಂದೆ ಭಟ್ಕಳದ ಜಾವೀದ್ ಮೊಹಿದ್ದೀನ್ ರುಕ್ನುದ್ದೀನ್ ಎಂಬುವವರನ್ನು ದುಬೈನಲ್ಲಿ ವಿವಾಹವಾಗಿದ್ದರು. 2014ರಲ್ಲಿ ಮೂರು ತಿಂಗಳ ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದಿದ್ದರು. ಬಳಿಕ ವಾಪಸಾಗಿ 2015ರ ಆರಂಭದಲ್ಲಿ ಕಳ್ಳ ಮಾರ್ಗದಲ್ಲಿ ದೇಶಕ್ಕೆ ನುಸುಳಿ ಭಟ್ಕಳದಲ್ಲಿರುವ ಗಂಡನ ಮನೆಯಲ್ಲಿ ವಾಸವಿದ್ದರು. ಅವರಿಗೆ ಮೂವರು ಮಕ್ಕಳಿದ್ದಾರೆ.

ಒಂದು ಸಾವಿರ ಮಠಾಧೀಶರೊಂದಿಗೆ ದೆಹಲಿ ಚಲೋ ಎಚ್ಚರಿಕೆ

'ಬಿಎಸ್‌ವೈ ಪದಚ್ಯುತಗೊಳಿಸಿದರೆ ಪರಿಣಾಮ ನೆಟ್ಟಗಿರಲ್ಲ'

ಪ್ರಜಾವಾಣಿ ವಾರ್ತೆ



ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ


ಕಲಬುರ್ಗಿ: 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದು, ಅವರನ್ನು ಯಾವುದೇ ಕಾರಣಕ್ಕೂ ಪದಚ್ಯುತಗೊಳಿಸಬಾರದು. ಒಂದೊಮ್ಮೆ ಮುಖ್ಯಮಂತ್ರಿ ಪದವಿಗೆ ಸಂಚಕಾರ ಬಂದರೆ ರಾಜ್ಯದ ಸಾವಿರ ಮಠಾಧೀಶರು ದೆಹಲಿಯ ಸಂಸತ್ತಿನ ಎದುರು ಮೆರವಣಿಗೆ ನಡೆಸಬೇಕಾಗುತ್ತದೆ' ಎಂದು ಇಲ್ಲಿಯ ಸುಲಫಲ ಮಠದ ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಎಚ್ಚರಿಸಿದರು.

ಈ ಕುರಿತು ಬುಧವಾರ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ಎಂಬುದು ಬಿಜೆಪಿ ಪಕ್ಷದ ಆಂತರಿಕ ವಿಚಾರ ಎಂದುಕೊಂಡು ಸುಮ್ಮನಿರಲು ಆಗುವುದಿಲ್ಲ. ಎಲ್ಲ ಸಮುದಾಯಗಳ ಏಳಿಗೆಗಾಗಿ ಕೆಲಸ ಮಾಡುತ್ತಿರುವ ಯಡಿಯೂರಪ್ಪ ಅವರು ರಾಜ್ಯದಲ್ಲಿ ಬೇರುಮಟ್ಟದಿಂದ ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ. ಹಾಗಾಗಿ, ಅವರಿಗೆ ಅವಧಿ ಪೂರ್ಣಗೊಳಿಸಲು ಬಿಡಬೇಕು. ಇಲ್ಲದಿದ್ದರೆ ಪರಿಣಾಮ ನೆಟ್ಟಗಿರುವುದಿಲ್ಲ' ಎಂದರು.

'ರಾಜ್ಯದಲ್ಲಿ 4 ಸಾವಿರ ಮಠಾಧೀಶರಿದ್ದಾರೆ. ಅವರ ಪೈಕಿ ಸಾವಿರ ಮಠಾಧೀಶರು ದೆಹಲಿಗೆ ತೆರಳಲೂ ಹಿಂಜರಿಯುವುದಿಲ್ಲ. ಸಂಸತ್ತಿನ ಎದುರು ಮೆರವಣಿಗೆ ನಡೆಸುವುದರ ಜೊತೆಗೆ ಪ್ರಧಾನಿ ನರೇಂದ್ರ ಮೋದಿ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನೂ ಭೇಟಿ ಮಾಡಿ ಯಡಿಯೂರಪ್ಪ ಅವರನ್ನು ಮುಂದುವರಿಸುವಂತೆ ಕೋರುತ್ತೇವೆ' ಎಂದರು.

'ಬಿಎಸ್‌ವೈ ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರಿಸುವಂತೆ ವೀರಶೈವ ಲಿಂಗಾಯತ ಯುವ ಘಟಕ, ಮಹಾಸಭಾ ಸೇರಿದಂತೆ ವಿವಿಧ ಸಂಘಟನೆಗಳೂ ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರಬೇಕು' ಎಂದು ಸಲಹೆ ನೀಡಿದರು.

'ಯಡಿಯೂರಪ್ಪರನ್ನು ಸಿ.ಎಂ ಮಾಡಿದ್ದೇ ನಾನು'



ಚಂದ್ರಕಾಂತ ಬೆಲ್ಲದ

ಧಾರವಾಡ: 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬೆಳೆಸಿ ಮುಖ್ಯಮಂತ್ರಿಯನ್ನಾಗಿ ಮಾಡಿದ್ದೇ ನಾನು' ಎಂದು ಬಿಜೆಪಿಯ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಹೈಕಮಾಂಡ್ ಸೂಚಿಸಿದರೆ ಯಡಿಯೂರಪ್ಪ ಅವರು ರಾಜೀನಾಮೆ ಕೊಡುವುದು ಸೂಕ್ತ' ಎಂದರು.

'ನಾನು ಮಾಧ್ಯಮಗಳ ಮೂಲಕ ರಾಜಕಾರಣದಲ್ಲಿ ಆಗುತ್ತಿರುವ ಬದಲಾವಣೆ ವಿಚಾರಗಳನ್ನು ಗಮನಿಸುತ್ತಿದ್ದೇನೆ. ರಾಜ್ಯದಲ್ಲಿ ಮುಖ್ಯಮಂತ್ರಿಯಾಗಲು ಯಾರು ಸಮರ್ಥರಿದ್ದಾರೆ? ಯಾರಿಗೆ ಅವಕಾಶ ನೀಡಬೇಕು? ಎಂಬುದು ಹೈಕಮಾಂಡ್‌ಗೆ ಬಿಟ್ಟದ್ದು. ನನ್ನ ಮಗ ಅರವಿಂದ ಅವರನ್ನು ಮುಖ್ಯಮಂತ್ರಿ ಮಾಡುವುದು ಪಕ್ಷದ ನಾಯಕರಿಗೆ ಬಿಟ್ಟ ವಿಚಾರ' ಎಂದು ಹೇಳಿದರು.

ಬಿಜೆಪಿ: ಅಹವಾಲೇ ಸವಾಲು

ಒಂದನೇ ಪುಟದಿಂದ...

ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ ಮುಖ್ಯಮಂತ್ರಿ ಪರ ಮತ್ತು ವಿರೋಧಿ ಬಣಗಳು ಗೋಪ್ಯವಾಗಿ ಸಭೆಗಳನ್ನು ನಡೆಸಿದ್ದು, ಅರುಣ್ ಸಿಂಗ್ ಅವರನ್ನು ಭೇಟಿ ಮಾಡಿದಾಗ ಏನೆಲ್ಲ ವಿಷಯಗಳನ್ನು ಪ್ರಸ್ತಾಪಿಸಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಿದ್ದಾರೆ.

ಅನ್ಯ ಪಕ್ಷದಿಂದ ಬಿಜೆಪಿಗೆ ವಲಸೆ ಬಂದು ಸಚಿವರಾದವರು ಕೃಷಿ ಸಚಿವ ಬಿ.ಸಿ.ಪಾಟೀಲ ಮನೆಯಲ್ಲಿ ಬುಧವಾರ ಸಭೆ ಸೇರಿ ತಮ್ಮ ಹಿತ ಕಾಯಲು ಏನು ಯಾವೆಲ್ಲ ವಿಷಯವನ್ನು ಮುಂದಿಡಬೇಕು ಎಂಬ ಚರ್ಚೆಯನ್ನೂ ಮತ್ತೊಂದೆಡೆ ನಡೆಸಿದರು. ಈ ಸಭೆಯಲ್ಲಿ ಡಾ.ಕೆ.ಸುಧಾಕರ್, ಆನಂದಸಿಂಗ್, ಕೆ.ಗೋಪಾಲಯ್ಯ, ಬೈರತಿ ಬಸವರಾಜು, ಶಿವರಾಮ್ ಹೆಬ್ಬಾರ್ ಮುಂತಾದವರು ಇದ್ದರು.

ಶಾಸಕರ ಜತೆ ಚರ್ಚಿಸುವೆ: ಸಚಿವರ ಸಭೆಯ ಬಳಿಕ ಮಾತನಾಡಿದ ಅರುಣ್‌ಸಿಂಗ್ ಅವರು, 'ನನ್ನನ್ನು ಭೇಟಿ ಮಾಡಲು ಬಯಸುವ ಎಲ್ಲ ಶಾಸಕರನ್ನೂ ಭೇಟಿ ಮಾಡುತ್ತೇನೆ. ಅವರ ದೂರು-ದುಮ್ಮಾನಗಳನ್ನು ಕೇಳುತ್ತೇನೆ. ಅವರ ಕ್ಷೇತ್ರಗಳಲ್ಲಿ ಜನಪರವಾದ ಏನೆಲ್ಲಾ ಕೆಲಸಗಳನ್ನು ಮಾಡಿದ್ದೀರಿ, ಮಾಹಿತಿ ನೀಡಿ ಎಂದು ಕೇಳುತ್ತೇನೆ' ಎಂದರು.

'ಶಾಸಕರು ಹೇಳಬೇಕಾಗಿರುವುದನ್ನೆಲ್ಲ ನನ್ನ ಬಳಿ ಹೇಳಿಕೊಳ್ಳಬಹುದು. ಆದರೆ, ಮಾಧ್ಯಮಗಳ ಮುಂದೆ ಮಾತನಾಡಿದರೆ, ಅದರಿಂದ ಪಕ್ಷಕ್ಕೆ ನಷ್ಟ ಆಗುತ್ತದೆ ಎಂಬುದನ್ನು ಶಾಸಕರು ಗಮನದಲ್ಲಿ ಇಟ್ಟುಕೊಳ್ಳಬೇಕು. ನಮ್ಮ ಮಾತಿನಿಂದ ಪಕ್ಷಕ್ಕೆ ಲಾಭ ಆಗುತ್ತದೆಯೋ ನಷ್ಟ ಆಗುತ್ತದೆಯೋ ಎಂಬುದನ್ನು ಯೋಚಿಸಬೇಕು' ಎಂದು ಅವರು ಸೂಚ್ಯವಾಗಿ ಹೇಳಿದರು.

ಸಚಿವರಿಗೆ ಸಿಂಗ್ ಸೂಚನೆ:

- ಪ್ರತಿ ಗುರುವಾರ ಶಾಸಕರು ಮತ್ತು ಕಾರ್ಯಕರ್ತರಿಗೆ ಮುಕ್ತ ಭೇಟಿಗೆ ಸಚಿವರು ಅವಕಾಶ ನೀಡಬೇಕು.
- ಸಚಿವರು ಎಲ್ಲ ಜಿಲ್ಲೆಗಳಲ್ಲಿರುವ ಪಕ್ಷದ ನಾಯಕರ ಜತೆ ಸಂಪರ್ಕ ಇಟ್ಟುಕೊಂಡು ಮಾತುಕತೆ ನಡೆಸಬೇಕು.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಸಾಕಷ್ಟು ಅಭಿವೃದ್ಧಿ ಕಾರ್ಯಗಳ ಮಾಹಿತಿಯನ್ನು ಜನರಿಗೆ ತಲುಪಿಸುವ ಕೆಲಸ ಮಾಡಬೇಕು. ಈಗ ಪ್ರಚಾರದ ಕೆಲಸ ಸಮರ್ಪಕವಾಗಿ ಆಗುತ್ತಿಲ್ಲ.
- ಯಾವುದೇ ಸಚಿವರಾಗಲಿ, ನಾಯಕರಾಗಲಿ ಪಕ್ಷದ ವಿರುದ್ಧ ಮಾತನಾಡಬಾರದು. ಇದರಿಂದ ಪಕ್ಷದ ಹಿತಕ್ಕೆ ಧಕ್ಕೆಯಾಗುತ್ತದೆ.

ಭಿನ್ನಮತ ಇಲ್ಲ: ಅರುಣ್ ಸಿಂಗ್

'ಯಡಿಯೂರಪ್ಪ ನೇತೃತ್ವದ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ. ಪಕ್ಷದಲ್ಲಿ ಯಾವುದೇ ಭಿನ್ನಮತ ಇಲ್ಲ' ಎಂದು ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೋವಿಡ್ ಸಂದರ್ಭದಲ್ಲಿ ಮುಖ್ಯಮಂತ್ರಿಯಿಂದ ಹಿಡಿದು ಎಲ್ಲ ಸಚಿವರು ಹಗಲು ರಾತ್ರಿ ಎನ್ನದೇ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಕೋವಿಡ್‌ನಿಂದ ಮೃತಪಟ್ಟ ಬಡ ಕುಟುಂಬಗಳಿಗೆ ತಲಾ ₹1 ಲಕ್ಷ ನೀಡುವ ಯೋಜನೆ ದೇಶದಲ್ಲೇ ಪ್ರಥಮ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಘನತ್ಯಾಜ್ಯ ನಿರ್ವಹಣೆಗೆ ಹರೀಶ್ ಕುಮಾರ್ ಕೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಘನತ್ಯಾಜ್ಯ ನಿರ್ವಹಣಾ ವಿಭಾಗದ ವಿಶೇಷ ಆಯುಕ್ತರ ಹುದ್ದೆಗೆ ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯುಕ್ತರಾಗಿದ್ದ ಐಎಎಸ್ ಅಧಿಕಾರಿ ಡಾ. ಹರೀಶ್ ಕುಮಾರ್ ಕೆ. ಅವರನ್ನು ನೇಮಿಸಲಾಗಿದೆ.

ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ವಿಭಾಗದ ವಿಶೇಷ ಆಯುಕ್ತರಾಗಿದ್ದ ಡಿ. ರಂದೀಪ್ ಅವರನ್ನು ಆರೋಗ್ಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ವಿಶೇಷ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಐಎಎಸ್ ಅಧಿಕಾರಿ ಪಿ. ರಾಜೇಂದ್ರ ಚೋಳನ್ ಅವರನ್ನು ಈ ಹುದ್ದೆಯ ಹೆಚ್ಚುವರಿ ಪ್ರಭಾರದಿಂದ ಬಿಡುಗಡೆ ಮಾಡಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆರ್‌ಟಿಇ ಸೀಟು: ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು : ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅಡಿ 2021-22ನೇ ಶೈಕ್ಷಣಿಕ ಸಾಲಿಗೆ ಖಾಸಗಿ ಶಾಲೆಗಳಲ್ಲಿ ಪ್ರವೇಶಕ್ಕೆ ಈಗಾಗಲೇ ಅರ್ಜಿ ಸ್ವೀಕರಿಸಿದ್ದ ಶಿಕ್ಷಣ ಇಲಾಖೆ ಸೀಟು ಹಂಚಿಕೆ, ಲಾಟರಿ ಪ್ರಕ್ರಿಯೆ, ದಾಖಲಾತಿ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಿದೆ.

ಈ ಹಿಂದೆ ಆರ್‌ಟಿಇ ಸೀಟು ಪ್ರವೇಶಕ್ಕೆ ಸ್ವೀಕರಿಸಿದ್ದ ಅರ್ಜಿಗಳನ್ನು ಪರಿಶೀಲಿಸಿ, ಲಾಟರಿ ಪ್ರಕ್ರಿಯೆಗೆ ಅರ್ಹ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಿದೆ. ನಂತರ ಆನ್‌ಲೈನ್ ಮೂಲಕ ಇದೇ 22ರಂದು ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕಟಿಸಲಾಗುತ್ತದೆ. ಸೀಟು ದೊರೆತ ಮಕ್ಕಳನ್ನು ಪೋಷಕರು 25ರಿಂದ ಜುಲೈ 9ರ ಒಳಗೆ ಆಯಾ ಶಾಲೆಗಳಲ್ಲಿ ದಾಖಲಾತಿ ಮಾಡಬೇಕು ಎಂದು ಇಲಾಖೆ ತಿಳಿಸಿದೆ.

ಜುಲೈ 14ರಂದು ಆನ್‌ಲೈನ್ ಮೂಲಕ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕಟಿಸಲಾಗುವುದು. ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳಿಗೆ 16ರಿಂದ 26ರೊಳಗೆ ದಾಖಲಾತಿ ಮಾಡಬೇಕು. ಶಾಲೆಗಳಲ್ಲಿ ದಾಖಲಾದ ಎರಡನೇ ಸುತ್ತಿನ ಮಕ್ಕಳ ವಿವರಗಳನ್ನು ತಂತ್ರಾಂಶದಲ್ಲಿ ಅಳವಡಿಸಲು ಜುಲೈ 26 ಕೊನೆಯ ದಿನ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ತಿಳಿಸಿದೆ.

'ಅನುದಾನಿತ ಶಾಲೆಗಳ ಸಿಬ್ಬಂದಿಗೆ ಪರಿಹಾರ ಕೊಡಿ'

ಪ್ರಜಾವಾಣಿ ವಾರ್ತೆ




ಸಿದ್ದರಾಮಯ್ಯ

ಬೆಂಗಳೂರು: 'ಖಾಸಗಿ ಅನುದಾನಿತ ಶಾಲೆ- ಕಾಲೇಜುಗಳಲ್ಲಿ ಸರ್ಕಾರದಿಂದ ವೇತನ ಪಡೆಯದೆ ದುಡಿಯುತ್ತಿರುವ ಸಿಬ್ಬಂದಿಗೂ ಪರಿಹಾರ ಘೋಷಿಸಬೇಕು' ಎಂದು ರಾಜ್ಯ ಸರ್ಕಾರವನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಕೊರೊನಾ ಸಂಕಷ್ಟಕ್ಕೆ ಸಿಲುಕಿ ಒದ್ದಾಡುತ್ತಿರುವ ರಾಜ್ಯದ ಜನರಿಗೆ ಸರ್ಕಾರ ಬಿಡಿಗಾಸಿನ ಪರಿಹಾರ ಪ್ಯಾಕೇಜ್ ಘೋಷಿಸಿದೆ. ಅದರಲ್ಲಿ ಅನುದಾನರಹಿತ ಶಾಲೆಗಳ ಶಿಕ್ಷಕರನ್ನೂ ಸೇರಿಸಲಾಗಿದೆ. ಈ ಪ್ಯಾಕೇಜ್‌ನ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು ಜೂನ್ 14 ಕೊನೆಯ ದಿನ ಎಂದು ತಿಳಿಸಲಾಗಿದೆ. ಆದರೆ, ಈ ಪ್ಯಾಕೇಜ್ ಘೋಷಿಸುವಾಗ ಖಾಸಗಿ ಅನುದಾನಿತ ಶಾಲೆಗಳ ಕಾಯಂ ಅಲ್ಲದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಕೈ ಬಿಡಲಾಗಿದೆ' ಎಂದಿದ್ದಾರೆ.

'ಅನುದಾನಿತ ಶಾಲೆ-ಕಾಲೇಜುಗಳಲ್ಲೂ ₹ 3 ಸಾವಿರದಿಂದ ₹ 5 ಸಾವಿರ ಮಾತ್ರ ಪಡೆದು ಕೆಲಸ ಮಾಡುವ ಅತಿಥಿ ಶಿಕ್ಷಕರು, ಉಪನ್ಯಾಸಕರು, ಸಿಬ್ಬಂದಿ ಸಾಕಷ್ಟು ಇದ್ದಾರೆ. ದೊಡ್ಡ ಸಂಖ್ಯೆಯಲ್ಲಿರುವ ಇವರನ್ನು ಪ್ಯಾಕೇಜ್‌ನಲ್ಲಿ ಸೇರಿಸದಿರುವುದು ನ್ಯಾಯಸಮ್ಮತವಲ್ಲ. ಮೊದಲ ಅಲೆಯಲ್ಲೂ ಅನುದಾನಿತ ಶಾಲೆ ಕಾಲೇಜುಗಳ ಸಿಬ್ಬಂದಿ ಹೈರಾಣಾಗಿದ್ದರು. ಒಂದೂವರೆ ವರ್ಷದಿಂದ ಸಂಬಳಗಳಿಲ್ಲದೆ ಈ ಕುಟುಂಬಗಳು ತೀವ್ರ ಸಂಕಷ್ಟದಲ್ಲಿವೆ' ಎಂದೂ ಹೇಳಿದ್ದಾರೆ.

'ಪ್ಯಾಕೇಜ್‌ನಲ್ಲಿ ಖಾಸಗಿ ಕಾಲೇಜುಗಳ ಬೋಧಕ, ಬೋಧಕೇತರ ಸಿಬ್ಬಂದಿಗೆ ಪರಿಹಾರ ಘೋಷಿಸಿಲ್ಲ. ಅವರಿಗೂ ಪರಿಹಾರ ಘೋಷಿಸಬೇಕು. ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಬೇಕು ಅಥವಾ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಈ ಸಿಬ್ಬಂದಿಯ ವಿವರಗಳನ್ನು ಪಡೆದು ನೇರವಾಗಿ ಖಾತೆಗಳಿಗೆ ಹಣ ವರ್ಗಾಯಿಸಬೇಕು' ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.



ಗ್ರಾಮೀಣ ಬ್ಯಾಂಕ್ ಪರೀಕ್ಷೆ ಏನನ್ನು ಓದಬೇಕು?

[ಸದ್ಯ ಗ್ರಾಮೀಣ ಬ್ಯಾಂಕ್‌ನಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಸ್ಪರ್ಧಾರ್ಥಿಗಳು ಯಾವ ರೀತಿ ಸಿದ್ಧತೆ ನಡೆಸಬೇಕು ಎಂಬುದರ ವಿವರ ಇಲ್ಲಿದೆ.]

ಕೆ.ಎಚ್. ಮಂಜುನಾಥ್

ವಿವಿಧ ಗ್ರಾಮೀಣ ಬ್ಯಾಂಕ್‌ಗಳು ತಮ್ಮಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಿವೆ. ನಮ್ಮ ರಾಜ್ಯದ ಕರ್ನಾಟಕ ಗ್ರಾಮೀಣ ಬ್ಯಾಂಕ್, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಸಹಿತ ದೇಶದಾದ್ಯಂತ ಇರುವ ವಿವಿಧ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಖಾಲಿ ಇರುವ 10,710 ಹುದ್ದೆಗಳನ್ನು ನೇಮಿಸಿಕೊಳ್ಳಲು ಐಬಿಪಿಎಸ್ ಅರ್ಜಿ ಅಹ್ವಾನಿಸಿದೆ. ಪದವೀಧರ ಅಭ್ಯರ್ಥಿಗಳು ಇದಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಈ ತಿಂಗಳ 28 ಅರ್ಜಿ ಸಲ್ಲಿಸಲು (ಜೂನ್ 28, 2021) ಕೊನೆಯ ದಿನ.



ಯಾವೆಲ್ಲ ವಿಷಯದ ಜ್ಞಾನ ಪಡೆದಿರಬೇಕು?

ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಹೊರಟ ಎಲ್ಲಾ ವಿದ್ಯಾರ್ಥಿಗಳ ಎದುರಿರುವ ಬಹು ಮುಖ್ಯ ಪ್ರಶ್ನೆಯಿದು. (1) ಅಂಕಗಣಿತ, (2) ರೀಸನಿಂಗ್, (3) ಸಾಮಾನ್ಯ ಜ್ಞಾನ (ಜಿಕೆ), (4) ಕಂಪ್ಯೂಟರ್ ನಾಲೆಜ್, (5) ಜನರಲ್ ಇಂಗ್ಲಿಷನ್ನೊಳಗೊಂಡ ಬಹು ಆಯ್ಕೆ ಪ್ರಶ್ನೆಗಳ ಒಂದು ಪ್ರಶ್ನೆ ಪತ್ರಿಕೆ ಇರುತ್ತದೆ. ಇದನ್ನು ಎದುರಿಸಲು ಸೂಕ್ತ ಜ್ಞಾನ ಹೊಂದಿರಬೇಕು.

ಏನನ್ನು ಓದಬೇಕು?

ಹೌದು! ಏನನ್ನು ಓದಬೇಕು? ಈ ಪ್ರಶ್ನೆ ಬಿಡಿಸಲು ನಾವು ಒಮ್ಮೆ ಹಿಂದಿನ ವಿವಿಧ ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ತಿರುವಿ ಹಾಕಿದರೆ ಅದರ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬಹುದು. ಹಾಗೆ ಮಾಡಿದಾಗ ನಮಗೆ ಗೊತ್ತಾಗುವ ಅಂಶವೆಂದರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಶ್ನೆಗಳು ನೇರವಾಗಿರದೇ ಸ್ವಲ್ಪ ಸಂಕೀರ್ಣವಾಗಿರುವುದು ಕಂಡುಬರುತ್ತದೆ. ಆದ್ದರಿಂದ 'ಪ್ರತಿಯೋಗಿತಾ ದರ್ಪಣ'ವನ್ನು ಉಪಯೋಗಿಸಬಹುದು.

ಅಂಕಗಣಿತಕ್ಕೆ ಆರ್.ಎಸ್. ಅಗರ್‌ವಾಲರ ಸಬ್ಜೆಕ್ಟಿವ್ & ಒಬ್ಜೆಕ್ಟಿವ್ ಅಂಕಗಣಿತವನ್ನು ಹಾಗೂ ಹಳೆಯ ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳನ್ನು ಒಳಗೊಂಡ ಕ್ರಾನಿಕಲ್ ಪ್ರಕಾಶನದ ಜನರಲ್ ಅರ್ಥ್‌ಮೆಟಿಕ್ಸ್ ಅನ್ನು ಉಪಯೋಗಿಸಬಹುದು. ಅರ್ಥಮೆಟಿಕ್ಸ್‌ನಲ್ಲಿ ಮೂಲ ಜ್ಞಾನದಿಂದ ಹಿಡಿದು ಉದ್ದುದ್ದ ಸಮಸ್ಯೆಯ ತನಕ ತರಾವರಿ ಲೆಕ್ಕಗಳನ್ನು ಕೇಳುತ್ತಾರೆ. ಬಹುತೇಕ ಅಭ್ಯರ್ಥಿಗಳು ಕಷ್ಟವೆಂದು ಭಾವಿಸುತ್ತಾರೆ. ಆದರೆ ವಾಸ್ತವ ಅದಲ್ಲ, ಆಸಕ್ತಿಯಿದ್ದರೆ ಎಲ್ಲರೂ ಬಿಡಿಸಬಹುದು, ಪರೀಕ್ಷೆಯಲ್ಲಿ ನೀಡುವ ಪ್ರಶ್ನೆಗಳು ಕಷ್ಟ ಎನ್ನುವುದಕ್ಕಿಂತಲೂ ಅವು ಉದ್ದುದ್ದವಾಗಿರುತ್ತವೆ. ಅನೇಕ ಸಲ ಪ್ರಶ್ನೆಗಳನ್ನು ಓದುವಷ್ಟರಲ್ಲಿಯೇ ಸಮಯ ಮುಗಿದು ಹೋಗುವ ಸಂಭವ ಹೆಚ್ಚು, ಆದರಿಂದ ಮನೆಯಲ್ಲಿಯೇ ನಾವು ಹೆಚ್ಚು ಹೆಚ್ಚು ಆ ಮಾದರಿಯ ಪ್ರಶ್ನೆಗಳನ್ನು ಬಿಡಿಸಿ ಅಭ್ಯಾಸ ಮಾಡಿಕೊಂಡಿದ್ದರೆ ಪರೀಕ್ಷಾ ಕೊಠಡಿಯಲ್ಲಿ ಪರದಾಡುವುದು ತಪ್ಪುತ್ತದೆ. ಒಂದಿಷ್ಟು ಶಾರ್ಟ್‌ಕಟ್‌ಗಳನ್ನು ಹಾಗೂ ವೇದಿಕ್ ಗಣಿತದ ಅಭ್ಯಾಸ ಕೂಡಾ ಇದಕ್ಕೆ ಪೂರಕವಾದೀತು. ಎಂ ಟೈರಾ ಅವರು ಬರೆದಿರುವ 'ಕ್ವಿಕರ್ ಮ್ಯಾಥ್ಸ್' ಪುಸ್ತಕವು ಶಾರ್ಟ್‌ಕಟ್‌ಗಳ ಅಧ್ಯಯನಕ್ಕೆ ಪೂರಕವಾದ ಪುಸ್ತಕಗಳಲ್ಲಿ ಒಂದು.

ರೀಸನಿಂಗ್

ರೀಸನಿಂಗ್‌ನಲ್ಲಿ ಎರಡು ಬಗೆ - ವರ್ಬಲ್ ರೀಸನಿಂಗ್ ಮತ್ತು ನಾನ್ ವರ್ಬಲ್ ರೀಸನಿಂಗ್. ಈ ವಿಭಾಗಗಳಿಂದ ಪ್ರಶ್ನೆಗಳು ಬರುತ್ತವೆ. ಇದಕ್ಕೂ ಸಹಾ ಅಗರ್‌ವಾಲರ ವರ್ಬಲ್ & ನಾನ್ ವರ್ಬಲ್ ರೀಸನಿಂಗ್ ಪುಸ್ತಕ ಬಳಸಬಹುದು.

ರೀಸನಿಂಗ್‌ನಲ್ಲಿ ಸಹ ಉದ್ದುದ್ದ ಸಮಸ್ಯೆಗಳನ್ನು ನೀಡಿರುತ್ತಾರೆ, ಹೆಚ್ಚು ತಾರ್ಕಿಕವಾದ ಮತ್ತು ಅನಾಲೆಟಿಕ್ ಸ್ವರೂಪದ ಪ್ರಶ್ನೆಗಳಿರುತ್ತವೆ. ಚಿತ್ರಗಳ ಸಹಾಯದಿಂದ ನಾವು ಯೋಗ್ಯ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದ ಸಮಸ್ಯೆಗಳಿರುವ ಪ್ರಶ್ನೆಗಳನ್ನು ನೀಡಲಾಗುತ್ತದೆ. ಇಂತಹ ತಾರ್ಕಿಕವಾದ ಸಮಸ್ಯೆಗಳನ್ನು ಬಿಡಿಸಲು ಭಯಪಡಬೇಕಾಗಿಲ್ಲ. ಬದಲಾಗಿ ಪ್ರತಿದಿನ ನಿಗದಿತ ಸಮಯದಲ್ಲಿ ನಿರ್ದಿಷ್ಟ ಅಭ್ಯಾಸ ಮಾಡಿದರೆ ಸಾಕು.

ಸಾಮಾನ್ಯ ಜ್ಞಾನ (ಜನರಲ್ ನಾಲೆಜ್) ಪ್ರಶ್ನೆಪತ್ರಿಕೆಯು ಸಾಗರವಿದ್ದಂತೆ, ಪ್ರಚಲಿತ ಘಟನೆಗಳಿಂದ ಹೆಚ್ಚು ಪ್ರಶ್ನೆಗಳು ಬರುತ್ತವೆ. ಅದರಲ್ಲೂ ಆರ್ಥಿಕರಂಗಕ್ಕೆ ಸಂಬಂಧಿಸಿದ ಪ್ರಶ್ನೆಗಳೇ ಬಹುಪಾಲು ಇರುತ್ತವೆ. ಆದ್ದರಿಂದ ಅದರತ್ತ ಗಮನ ಹರಿಸಿ. ಹಾಗೆಂದು ಅದೇ ಪ್ರಧಾನವಾಗಿರುತ್ತದೆ ಎಂದಲ್ಲ, ಸುದ್ದಿಯಲ್ಲಿರುವ ಪ್ರಮುಖ ವ್ಯಕ್ತಿಗಳು, ಸುದ್ದಿಯಲ್ಲಿರುವ ಪ್ರಮುಖ ಸ್ಥಳಗಳ ಮಾಹಿತಿಯನ್ನು ತಿಳಿದಿಟ್ಟುಕೊಳ್ಳಬೇಕು, ಪ್ರಚಲಿತ ವಿಷಯ (ಉದಾ: ಬ್ಯಾಂಕುಗಳ ವಿಲೀನದಿಂದ ದೊಡ್ಡ ಬ್ಯಾಂಕ್ ನಿರ್ಮಾಣ, ಕೊರೊನಾ ಸಂಕಷ್ಟ ಮತ್ತು ಅದರಿಂದಾದ ಆರ್ಥಿಕ ಹಾನಿ, ಆರ್ಥಿಕ ಬೆಳವಣಿಗೆಯ ಮೇಲೆ ಕೊರೊನಾ ಸಂಕಷ್ಟದಿಂದ ಆದ ದುಷ್ಪರಿಣಾಮ, ಇಸ್ರೊ ಸಾಧನೆ. ನೆರೆ ಪರಿಹಾರ, ಚಂಡಮಾರುತದಿಂದಾದ ಆರ್ಥಿಕ ಹಾನಿ, ಆರ್ಥಿಕ ಮಹಾ ಕುಸಿತ ಇತ್ಯಾದಿ)ಗಳ ಬಗ್ಗೆ ಒಂದಿಷ್ಟು ನಿಮಗೆ ತಿಳಿದಿರಲಿ. ದಿನವೂ ವಾರ್ತೆಗಳನ್ನು ನೋಡಲು ಮರೆಯದಿರಿ. ದಿನ ಪತ್ರಿಕೆಯನ್ನು ಓದುವುದು ನಿತ್ಯದ ಅಭ್ಯಾಸವಾಗಿಟ್ಟುಕೊಂಡರೆ ಉತ್ತಮ. ಜೊತೆಗೆ ಯಾವುದಾದರೂ ಉತ್ತಮ ವಾರ್ಷಿಕ ಕೋಶ (ಮನೋರಮ ಈಯರ್ ಬುಕ್‌ನಂತಹ) ಓದಬಹುದು.

ಪ್ರಬಂಧ ರೂಪದಲ್ಲಿ ಬರೆಯುವ ಉತ್ತರಗಳಿಗೆ ನಿಯಮವಿಲ್ಲದಿದ್ದರೂ, ಪ್ರಬಂಧದಲ್ಲಿ ಪೀಠಿಕೆ, ವಿಷಯ ವಸ್ತು ಮತ್ತು ಸಮಾರೋಪಗಳನ್ನು ಬಳಸುವುದು ವಾಡಿಕೆ. ಆದರೆ ಇಂತಹ ಪರೀಕ್ಷೆಗಳಲ್ಲಿ ಅದರ ಅಗತ್ಯ ಅನೇಕ ಸಲ ಕಂಡುಬರುವುದಿಲ್ಲ. ಪ್ರಶ್ನೆಗಳನ್ನು ಗಮನಿಸಿ ಉತ್ತರಿಸಲು ಅಗತ್ಯವಾದ ಜಾಗವನ್ನು ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ನೋಡಿಕೊಂಡು ನೇರವಾಗಿ ವಿಷಯವಸ್ತುವನ್ನು ಪ್ರವೇಶಿಸಬಹುದು.

(ಲೇಖಕ: ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು)

ಪರೀಕ್ಷೆಯಲ್ಲಿ ಯಶಸ್ಸಿಗೆ 'ಸಿತಾರ್' ತಂತ್ರ

ಆರ್.ಬಿ. ಗುರುಬಸವರಾಜ

ಪರೀಕ್ಷೆ ಒಂದು ರೀತಿಯ ತಪಸ್ಸು. ಅದಕ್ಕೆ ಸತತ ಅಭ್ಯಾಸ ಬಹಳ ಮುಖ್ಯವಾದುದು. ಅಭ್ಯಾಸಕ್ಕೆ ಅನೇಕ ತಂತ್ರಗಳಿವೆ. ಸತತ ಅಭ್ಯಾಸದ ಫಲವು ಫಲಿತಾಂಶದಲ್ಲಿ ಪ್ರತಿಫಲಿತವಾಗುತ್ತದೆ. ಹೀಗಾಗಿ ಪರೀಕ್ಷಾ ಸಿದ್ಧತೆಯು ವಿಶೇಷ ತಂತ್ರಗಾರಿಕೆಯಿಂದ ಕೂಡಿರಬೇಕು. ಇಲ್ಲಿ ಅಂತಹ ಒಂದು ತಂತ್ರಗಾರಿಕೆಯನ್ನು ಪರಿಚಯಿಸಲಾಗಿದೆ. ಅದೇ ಸಿತಾರ್ (SITAR) ತಂತ್ರ.

ಸಿತಾರ್ ಒಂದು ತಂತಿ ವಾದ್ಯ. ತಂತಿಯನ್ನು ನಿರ್ದಿಷ್ಟ ಸ್ಥಾನಗಳಲ್ಲಿ ನುಡಿಸುವ ಮೂಲಕ ಸಂಗೀತದ ಸಪ್ತ ಸ್ವರಗಳನ್ನು ಹೊರಡಿಸಲಾಗುತ್ತದೆ. ಈ ವಾದ್ಯ ಕಲಿಯಲು ಸತತ ಅಭ್ಯಾಸ ಅಗತ್ಯವಿರುವಂತೆ ಪರೀಕ್ಷಾ ಸಿದ್ಧತೆಗೆ ಈ ವಾದ್ಯದ ಆಂಗ್ಲ ಅಕ್ಷರಗಳನ್ನೇ ಸಂಕೇತಾಕ್ಷರಗಳಾಗಿ ಬಳಸಿಕೊಂಡು ಅಭ್ಯಾಸ ಮಾಡಿದರೆ ಯಶಸ್ಸು ಖಂಡಿತ ದೊರೆಯುತ್ತದೆ.

ಮೊದಲು ಸಿತಾರ್‌ನಲ್ಲಿನ ಸಂಕೇತಾಕ್ಷರಗಳ ವಿವರಣೆ ಬಗ್ಗೆ ತಿಳಿಯೋಣ. ಇಲ್ಲಿ 5 ಅಕ್ಷರಗಳಿದ್ದು, ಪ್ರತಿ ಅಕ್ಷರವು ಒಂದೊಂದು ಅಭ್ಯಾಸದ ಹಂತವನ್ನು ತಿಳಿಸುತ್ತದೆ. ಎಸ್- ಸಿಲೆಕ್ಷನ್- ಆಯ್ಕೆ, ಐ- ಇಂಟರ್‌ಬ್ಲೆಂಡ್ - ಸಮ್ಮಿಶ್ರಮಾಡು, ಟಿ- ಟೆಸ್ಟ್ - ಪರೀಕ್ಷೆ, ಎ- ಆನ್ಸರ್ - ಉತ್ತರಿಸುವುದು, ಆರ್- ರಿವ್ಯೂ- ಪರಿಶೀಲನೆ. ಹೀಗೆ ಐದು ಅಕ್ಷರಗಳು ಐದು ಹಂತಗಳನ್ನು ಪ್ರತಿನಿಧಿಸುತ್ತವೆ.

ಆಯ್ಕೆ: ಪರೀಕ್ಷಾ ಸಿದ್ಧತೆಗೆ ತೊಡಗುವ ಮೊದಲು ಆಯ್ಕೆ ಬಹಳ ಮುಖ್ಯ. ಏಕೆ ಓದಬೇಕು? ಹೇಗೆ ಓದಬೇಕು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕುವ ಮೊದಲು ಯಾವುದನ್ನು ಓದಬೇಕು? ಎಂಬುದು ಮುಖ್ಯ. ಪ್ರತಿ ಪರೀಕ್ಷೆಗೂ ನಿರ್ದಿಷ್ಟವಾದ ಪಠ್ಯ ಇರುತ್ತದೆ. ಆ ಪಠ್ಯದಲ್ಲಿನ ಅಂಶಗಳನ್ನು ಈಗಾಗಲೇ ನಿರ್ದಿಷ್ಟ ಪರಿಕಲ್ಪನೆ ಅಥವಾ ಘಟಕಗಳಾಗಿ ವಿಂಗಡಿಸಲಾಗಿರುತ್ತದೆ. ವಿಂಗಡಿಸದೇ ಇದ್ದರೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಅದನ್ನು ಘಟಕ/ಪರಿಕಲ್ಪನೆಗಳಾಗಿ ವಿಂಗಡಿಸಿಕೊಂಡು ಅದರಲ್ಲಿ ನಿರ್ದಿಷ್ಟ ಘಟಕ/ಪರಿಕಲ್ಪನೆಯನ್ನು ಓದಲು ಆಯ್ಕೆ ಮಾಡಿಕೊಳ್ಳಬೇಕು.

ಸಮ್ಮಿಶ್ರ: ಆಯ್ಕೆ ಮಾಡಿಕೊಂಡ ಪರಿಕಲ್ಪನೆ /ಘಟಕದಲ್ಲಿ ಮಾಹಿತಿಯನ್ನು ನಮ್ಮ ಪೂರ್ವಜ್ಞಾನದೊಂದಿಗೆ ಸಮ್ಮಿಶ್ರ ಮಾಡಬೇಕು. ಅಂದರೆ ಈ ಹಿಂದೆ ಪಡೆದ ಜ್ಞಾನವನ್ನು ಹೊಸ ಜ್ಞಾನ/ಮಾಹಿತಿಯೊಂದಿಗೆ ಬೆರೆಸಿ, ಹೊಸ ಉತ್ಪನ್ನವನ್ನು ಪಡೆಯಬೇಕು. ಪರಿಕಲ್ಪನೆಯನ್ನು ವಿಮರ್ಶಾತ್ಮಕವಾಗಿ ವಿವಿಧ ಆಯಾಮಗಳಿಂದ ಅಧ್ಯಯನ ಮಾಡಬೇಕು. ಆಗ ಮಾತ್ರ ವಿವಿಧ ಮಾಹಿತಿ ಮತ್ತು ಜ್ಞಾನವನ್ನು ಸಮ್ಮಿಶ್ರ ಮಾಡಲು ಸಾಧ್ಯವಾಗುತ್ತದೆ. ಪರಿಕಲ್ಪನೆಗೆ ಪೂರಕ ಮಾಹಿತಿಯನ್ನು ವಿವಿಧ ಆಕರಗಳಿಂದ ಸಂಗ್ರಹಿಸಿಕೊಳ್ಳಬೇಕು. ವಿವಿಧ ಪರಿಕರಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆಸಿ ಮಿಕ್ಸಿಗೆ ಹಾಕಿ ರುಬ್ಬಿ ಹೊಸ ಉತ್ಪನ್ನ ಪಡೆದಂತೆ, ಪೂರ್ವ ಜ್ಞಾನದೊಂದಿಗೆ ಹೊಸ ಮಾಹಿತಿಯನ್ನು ಸೇರಿಸಿ ನಮ್ಮದೇ ಆದ ಹೊಸ ಉತ್ಪನ್ನವನ್ನು ಸಿದ್ಧಪಡಿಸಿಟ್ಟುಕೊಳ್ಳಬೇಕು. ಅದು ಬರಹರೂಪದಲ್ಲಿದ್ದರೆ ಇನ್ನೂ ಉತ್ತಮ.

ಪರೀಕ್ಷೆ: ಈ ಉತ್ಪನ್ನವನ್ನು ಪರೀಕ್ಷೆಗೆ ಒಳಪಡಿಸಬೇಕು. ಅದಕ್ಕಾಗಿ ಪ್ರಶ್ನೆಗಳು ಅಥವಾ ಪ್ರಶ್ನೆ ಪತ್ರಿಕೆ ಅಗತ್ಯ. ಪ್ರಶ್ನೆ ಪತ್ರಿಕೆಗಾಗಿ ಕಳೆದ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಳಸಬಹುದು. ಇಲ್ಲವೆ ನಾವೇ ಹೊಸ ಪ್ರಶ್ನೆಗಳನ್ನೂ ತಯಾರಿಸಿಕೊಳ್ಳಬಹುದು. ವಿವಿಧ ದೃಷ್ಟಿಕೋನದಿಂದ ಪ್ರಶ್ನೆಗಳನ್ನು ಸಿದ್ಧಪಡಿಸಬೇಕು. ಶೀರ್ಷಿಕೆ ಹಾಗೂ ಉಪಶೀರ್ಷಿಕೆಯ ಆಧಾರದ ಮೇಲೆ ಕಲಿಕಾಂಶದಲ್ಲಿನ ಸಂಭಾವ್ಯ ಪ್ರಶ್ನೆಗಳನ್ನು ಸೃಷ್ಟಿಸಿಕೊಳ್ಳುವುದು ಮತ್ತು ಪ್ರಶ್ನೆಗಳ ಸ್ವರೂಪ ಆಧರಿಸಿ (ವಸ್ತುನಿಷ್ಠ, ಕಿರು ಉತ್ತರ, ದೀರ್ಘ ಉತ್ತರ) ಪ್ರಶ್ನೆಗಳನ್ನು ಪ್ರತ್ಯೇಕಿಸುವುದು. ಸ್ಪರ್ಧಾತ್ಮಕ ಪರೀಕ್ಷೆಗಾದರೆ ಪರೀಕ್ಷೆಯ ಸ್ವರೂಪವನ್ನಾಧರಿಸಿ ಪ್ರಶ್ನೆಗಳನ್ನು ಸಿದ್ಧಪಡಿಸಬೇಕು. ತರಗತಿ ಪರೀಕ್ಷೆಗಾದರೆ ಅಂಕಗಳ ಆಧಾರದ ಮೇಲೆ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಪ್ರಶ್ನೆ ಪತ್ರಿಕೆ ತಯಾರಿಸುವಲ್ಲಿ ಆತ್ಮವಂಚನೆ ಕಾಡಬಾರದು.

ಉತ್ತರಿಸುವುದು: ಇದು ಪ್ರಮುಖ ಹಂತ. ಸಿದ್ಧಪಡಿಸಿಕೊಂಡ ಪ್ರಶ್ನೆಗಳನ್ನಾಧರಿಸಿ ಸ್ವಯಂ ಪರೀಕ್ಷೆ ನಡೆಸಿಕೊಳ್ಳುವುದು ಈ ಹಂತದ ಉದ್ದೇಶ. ನಿಗದಿತ ಸಮಯಕ್ಕೆ ಅನುಗುಣವಾಗಿ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸುವ ಪ್ರಕ್ರಿಯೆ ನಡೆಯಬೇಕು. ಗುಣಮಟ್ಟದ ಪ್ರಮಾಣೀಕೃತ ಉತ್ತರಗಳನ್ನು ಬರೆಯುವ ಕೌಶಲ ಬೆಳೆಸಿಕೊಳ್ಳಬೇಕು. ಉತ್ತರಗಳಲ್ಲಿ ಪ್ರಮುಖ ಅಂಶಗಳನ್ನು ಹೈಲೈಟ್ ಮಾಡುವ ಪ್ರಕ್ರಿಯೆ ಬೆಳೆಸಿಕೊಳ್ಳಬೇಕು.

ಪರಿಶೀಲನೆ: ಉತ್ತರಿಸುವ ಪ್ರಕ್ರಿಯೆ ಮುಗಿದ ನಂತರ ಉತ್ತರಗಳನ್ನು ಪರಿಶೀಲನೆ ಮಾಡುವುದು ಬಹಳ ಪ್ರಮುಖ ಹಂತ. ಇದು ನೀವು ಯಾವ ಹಂತದಲ್ಲಿದ್ದೀರಿ ಎಂಬುದನ್ನು ನಿಖರವಾಗಿ ಪತ್ತೆ ಹಚ್ಚುವ ಹಂತ. ಯಾವುದೇ ಪೂರ್ವಾಗ್ರಹಗಳಿಲ್ಲದೆ ಪ್ರಾಮಾಣಿಕ ಮನಸ್ಸಿನಿಂದ ಸ್ವಮೌಲ್ಯಮಾಪನ ಮಾಡಿಕೊಂಡು ನಿಮ್ಮ ಉತ್ತರಗಳನ್ನು ಪರಿಶೀಲನೆ ಮಾಡಬೇಕು. ಪರಿಶೀಲನೆ ನಂತರ ಅಗತ್ಯ ಎನಿಸಿದರೆ ಉತ್ತರಗಳನ್ನು ಪರಿಷ್ಕರಣೆ ಮಾಡಿಕೊಳ್ಳಬೇಕು. ಆಗ ಮಾತ್ರ ಓದು ಅಥವಾ ಅಭ್ಯಾಸ ಯಶಸ್ವಿ ಆಗುತ್ತದೆ. ಗುರಿ ತಲುಪುವ ಮಾರ್ಗ ಸುಲಭವಾಗುತ್ತದೆ.

ಪ್ರಜಾವಾಣಿ ಉದ್ಯೋಗ ವಾರ್ತೆ

ಭಾರತೀಯ ರೈಲ್ವೆ ಇಲಾಖೆಯಲ್ಲಿ 3591 ಹುದ್ದೆಗಳು

ಭಾರತೀಯ ರೈಲ್ವೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷೆ ಇಲ್ಲದೇ ನೇರ ನೇಮಕಾತಿ ನಡೆಸಲಾಗುತ್ತಿದ್ದು 10ನೇ ತರಗತಿ ಹಾಗೂ ಐಟಿಐ ಅಂಕದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಯು 10ನೇ ತರಗತಿ ಹಾಗೂ ಐಟಿಐ ಪರೀಕ್ಷೆ ಉತ್ತೀರ್ಣರಾಗಿರಬೇಕು.

ವಯೋಮಿತಿ: ಗರಿಷ್ಠ 24 ವರ್ಷ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆ ಇದೆ. ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ 3 ವರ್ಷಗಳ ಸಡಿಲಿಕೆ ನೀಡಲಾಗಿದೆ.

ಅರ್ಜಿ ಶುಲ್ಕ: ಅರ್ಜಿ ಶುಲ್ಕ ₹ 100, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 24, 2021 **ಹೆಚ್ಚಿನ ಮಾಹಿತಿಗೆ:** www.rrc-wr.com

ಸಿಇಟಿ ದಿಕ್ಸೂಚಿ

Maths- Principle of Mathematical Induction

1. The sum of the first *n* terms of is

$$\frac{1^2}{1}+\frac{1^2+2^2}{1+2}+\frac{1^2+2^2+3^2}{1+2+3}+.... \text{ is}$$

1) $\frac{n^2-2n}{3}$ 2) $\frac{2n^2+n}{3}$

3) $\frac{n(n+2)}{3}$ 4) $\frac{2n^2-n}{3}$

2. The sum of 1st n terms of the series

$$\frac{1^2}{1}+\frac{1^2+2^2}{1+2}+\frac{1^2+2^2+3^2}{1+2+3}+.....$$

(1) $\frac{n+2}{3}$ (2) n(n + 2)/3

(3) n(n – 2)/3 (4) n(n – 2)/6

3. If P(n) : "2^2n – 1 is divisible by k for all $n \in N$" is true, then the value of 'k' is

(A) 6 (B) 3

(C) 7 (D) 2

4. If the value of a third order determinant is 16 , then the value of the determinant formed by replacing each of its elements by its cofactor is

(A) 48 (B) 16

(C) 96 (D) 256

5. If If $P(n): 2^n < n!$

Then the smallest positive integer for which P(n) is true if

(A) 4 (B) 5

(C) 2 (D) 3

Answers

1.Key : 3

Sol.: Given series,

$$\frac{1^2}{1}+\frac{1^1+2^2}{1+2}+\frac{1^1+2^2+3^2}{1+2+3}+........$$

The nth terms of the series is

$$T_n=\frac{\Sigma n^2}{\Sigma n}=\frac{n(n+1)(2n+1)}{\frac{6n(n+1)}{2}}=\frac{(2n+1)}{3}$$

Now, $S_n=\frac{1}{3}(2\Sigma n+\Sigma 1)$

$$=\frac{1}{3}\left\{2.\frac{n(n+1)}{2}+n\right\}=\frac{n}{3}(n+1+1)$$

$$=\frac{n(n+2)}{3}$$

2.Answer (2)

Sol. CONCEPTUAL

3.Answer (2)

Solution:

x^n-a^n is divisible by $x-a\ \forall n\in N$

4.Answer (4)

Hint: Hint: $|A|=16,\ O(A)=3$

$|\text{adj } A|=|A|^2=16^2=256$

5. Answer: (1)

Topic code: Principle of Mathematical Induction -M2

Sol: $2^n < n!$

By hit & trial

$n=4$ & 5 are to be true

So we require small $\Rightarrow n=4$

Mathematics - Complex Numbers-1

1. The value of $\left|\frac{1+i\sqrt{3}}{\left(1+\frac{1}{i+1}\right)^2}\right|$ is

1) 20 2) 9 3) $\frac{5}{4}$ 4) $\frac{4}{5}$

2. If ω **is an imaginary cube root of unity, then the**

value of $(1-\omega+\omega^2).(1-\omega^2+\omega^4).(1-\omega^4+\omega^8)$.... (2n factors) is

1) 2^{2n} 2) 2^n

3) 1 4) 0

3. If $P(x,y)$ denotes $z=x+iy$ in Argand's plane and $\left|\frac{z-1}{z+2i}\right|=1$, then the locus of P is a/an

1) Hyperbola 2) Ellipse

3) Circle 4) Straight line

4. In Argand's plane, the point corresponding to $\frac{(1-i\sqrt{3})(1+i)}{(\sqrt{3}+i)}$ lies in

1) Quadrant I 2) Quadrant II

3) Quadrant III 4) Quadrant IV

5. If α **is a complex number such that**

$\alpha^2-\alpha+1=0$, then $\alpha^{2011}=$

(1) $-\alpha$ (2) α^2

(3) α (4) 1

Answers

1. Key : 4

Sol.:

$$\text{Sol.: }\left|\frac{1+i\sqrt{3}}{\left(1+\frac{1}{i+1}\right)^2}\right|=\left|\frac{(1+i\sqrt{3})(i+1)^2}{(i+2)^2}\right|(\because i^2=-1)$$

$$=\frac{\sqrt{1^2+(\sqrt{3})^2}.\left(\sqrt{1^2+1^2}\right)^2}{\left(\sqrt{2^2+1^2}\right)^2}=\frac{4}{5}$$

2. Key : 1

Sol.: Given, $\omega^3=1, 1+\omega+\omega^2=0...........(i)$

$$(1-\omega+\omega^2).(1-\omega^2+\omega^4).(1-\omega^4+\omega^8).$$

Now, $(1-\omega^8+\omega^{16})..........2n\ factors$

$$=2^{2n}.(\omega^3)^n=2^{2n}(1)^n=2^{2n}$$

3.Key : 4

Sol.: Given,

Sol.: Given, $z=x+iy$ & $\left|\frac{z-1}{z+2i}\right|=1$

$$\Rightarrow |(x-1)+iy|=|x+(y+2)i|$$

Squaring on both sides,

We get $2x+4y+3=0$

which represents a straight line

4. Key : 4

Sol.: Given,

$$\frac{(1-i\sqrt{3})(1+i)}{(\sqrt{3}+i)}=\frac{(1-i\sqrt{3}+i+\sqrt{3})(\sqrt{3}-i)}{(3+1)}$$

$(\because i^2=-1)$

$$=\frac{1}{4}.\{4-4i\}=1-i$$

The point $(1-i)$ in Arg and plane is

(1-1)which lies in IVth quadrant

5.Answer: (3)

Sol:- $\alpha^2-\alpha+1=0$ has roots –w, -w^2

If $\alpha=-w$

then $\alpha^{2011}=(-w)^{2011}=-w=\alpha$

similarly if $\alpha=-w^2$, we get $\alpha^{2011}=\alpha$ only

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 8

96. ಬೌದ್ಧಧರ್ಮ ಪ್ರಚಾರಕ್ಕಾಗಿ ಅಫ್ಘಾನಿಸ್ತಾನ, ಬರ್ಮಾ, ಶ್ರೀಲಂಕಾ ಮತ್ತು ಯುರೋಪಿಗೆ ನಿಯೋಗಗಳನ್ನು ಕಳುಹಿಸಿದ ದೊರೆ ಯಾರು?
ಎ) ಚಂದ್ರಗುಪ್ತ ಮೌರ್ಯ
ಬಿ) ಬಿಂದುಸಾರ
ಸಿ) ಹರ್ಷವರ್ಧನ
ಡಿ) ಅಶೋಕ

97. ಪ್ರಾಚೀನ ಭಾರತದ ಶ್ರೇಷ್ಠ ಗಣಿತಶಾಸ್ತ್ರಜ್ಞ ಮತ್ತು ಖಗೋಳ ವಿಜ್ಞಾನಿ ಯಾರು?
ಎ) ಅಮರಸಿಂಹ
ಬಿ) ಆರ್ಯಭಟ
ಸಿ) ವಿಷ್ಣುಶರ್ಮ
ಡಿ) ಮೇಲ್ಕಂಡ ಯಾರೂ ಅಲ್ಲ

98. ಈ ಕೆಳಗಿನವರಲ್ಲಿ ಯಾರು ವೃತ್ತಿ ರಂಗಭೂಮಿ ಕ್ಷೇತ್ರದಲ್ಲಿ ಖ್ಯಾತನಾಮರಾಗಿದ್ದಾರೆ?
ಎ) ಮಾಸ್ಟರ್ ಹಿರಣ್ಣಯ್ಯ
ಬಿ) ಜಟ್ಟಿ ತಾಯಮ್ಮ
ಸಿ) ಕೋಲಾರ ಕಿಟ್ಟಪ್ಪ
ಡಿ) ಶಾಂತರಾವ್

99. ಈ ಕೆಳಕಂಡವರಲ್ಲಿ ಯಾರು ಕನ್ನಡದ ಖ್ಯಾತ ಸಿನಿಮಾ ನಿರ್ದೇಶಕರಾಗಿದ್ದಾರೆ?
ಎ) ಸುಬ್ಬರಾವ್
ಬಿ) ನಾಗಾಭರಣ
ಸಿ) ರಾಜಣ್ಣ
ಡಿ) ವೆಂಕಟಪ್ಪ

100. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ವ್ಯಕ್ತಿ ಕ್ರಾಂತಿಕಾರಿ ಆಗಿರಲಿಲ್ಲ?
ಎ) ಭಗತ್‌ಸಿಂಗ್
ಬಿ) ರಾಜಗುರು
ಸಿ) ಸುಖದೇವ್
ಡಿ) ದಾದಾಭಾಯ್ ನವರೋಜಿ

101. ಗಾಂಧೀಜಿಯವರ ಪ್ರಸಿದ್ಧ 'ಉಪ್ಪಿನ ಸತ್ಯಾಗ್ರಹ' ಯಾವ ವರ್ಷ ಆರಂಭವಾಯಿತು?
ಎ) 12 ಮಾರ್ಚ್, 1930
ಎ) 6 ಮಾರ್ಚ್, 1930
ಎ) 16 ಮಾರ್ಚ್, 1930
ಎ) 26 ಮಾರ್ಚ್, 1930

102. ಸುಭಾಷ್ ಚಂದ್ರ ಬೋಸ್ ಏನೆಂದು ಪ್ರಖ್ಯಾತರಾಗಿದ್ದರು?
ಎ) ಭಾರತದ ಉಕ್ಕಿನ ಮನುಷ್ಯ
ಬಿ) ನೇತಾಜಿ
ಸಿ) ಬಾಬಾಜಿ
ಡಿ) ಗುರೂಜಿ

103. ಬಾಂಬೆ ಶಾಸನಸಭೆಗೆ ರಾಜೀನಾಮೆ ನೀಡಿ, ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣಕ್ಕೆ ಒತ್ತಾಯಿಸಿ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದವರು ಯಾರು?
ಎ) ಎಸ್.ನಿಜಲಿಂಗಪ್ಪ
ಬಿ) ಆಲೂರು ವೆಂಕಟರಾಯರು
ಸಿ) ಅಂದಾನಪ್ಪ ದೊಡ್ಡಮೇಟಿ
ಡಿ) ಡಿ.ದೇವರಾಜ ಅರಸು

104. ಈ ಕೆಳಗಿನವುಗಳಲ್ಲಿ ಯಾವುದು ವಾಣಿಜ್ಯ ಬೆಳೆ?
ಎ) ರಾಗಿ ಬಿ) ಗೋಧಿ
ಸಿ) ರಬ್ಬರ್ ಡಿ) ಅಕ್ಕಿ

105. ಈ ಕೆಳಗಿನವುಗಳಲ್ಲಿ ಯಾವುದು ಅಣು ಖನಿಜ?
ಎ) ಅಭ್ರಕ ಬಿ) ಹೆಮಟೈಟ್
ಸಿ) ಮ್ಯಾಗ್ನಟೈಟ್ ಡಿ) ಯುರೇನಿಯಂ

106. ಮರ್ಮಗೋವಾ ಬಂದರು ಯಾವ ರಾಜ್ಯದಲ್ಲಿದೆ?
ಎ) ಗೋವಾ
ಬಿ) ಗುಜರಾತ್
ಸಿ) ಮಹಾರಾಷ್ಟ್ರ
ಡಿ) ಕರ್ನಾಟಕ

107. ಪ್ರಪಂಚದಲ್ಲಿ ಅತಿ ಹೆಚ್ಚು ಸಕ್ಕರೆ ಉತ್ಪಾದಿಸುವ ದೇಶ ಯಾವುದು?
ಎ) ಚೀನಾ
ಬಿ) ಬ್ರೆಜಿಲ್
ಸಿ) ಭಾರತ
ಡಿ) ಶ್ರೀಲಂಕಾ

108. ನೈರುತ್ಯ ಮಾನ್ಸೂನ್ ಮಳೆಗಾಲ ಯಾವ ಅವಧಿಯಲ್ಲಿ ಬರುತ್ತದೆ?
ಎ) ಮಾರ್ಚ್- ಮೇ
ಬಿ) ಡಿಸೆಂಬರ್- ಫೆಬ್ರುವರಿ
ಸಿ) ಅಕ್ಟೋಬರ್- ನವೆಂಬರ್
ಡಿ) ಜೂನ್- ಸೆಪ್ಟೆಂಬರ್

109. ಯಾವ ಮಣ್ಣು ಹತ್ತಿ ಬೆಳೆಗೆ ಬಹು ಸೂಕ್ತವಾಗಿರುತ್ತದೆ?
ಎ) ಮೆಕ್ಕಲು ಮಣ್ಣು ಬಿ) ಕಪ್ಪುಮಣ್ಣು
ಸಿ) ಕೆಂಪುಮಣ್ಣು ಡಿ) ಜಂಬಿಟ್ಟಿಗೆ ಮಣ್ಣು

110. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ

ಎ) ಕಾಜಿರಂಗ ನ್ಯಾಷನಲ್ ಪಾರ್ಕ್	1) ಪಶ್ಚಿಮ ಬಂಗಾಳ
ಬಿ) ಸುಂದರಬನ್	2) ಗುಜರಾತ್
ಸಿ) ಹಜಾರಿಬಾಗ್ ನ್ಯಾಷನಲ್ ಪಾರ್ಕ್	3) ಅಸ್ಸಾಂ
ಡಿ) ಗಿರ್ ನ್ಯಾಷನಲ್ ಪಾರ್ಕ್	4) ಬಿಹಾರ

ಎ) ಎ-1, ಬಿ-2, ಸಿ-3, ಡಿ-4
ಬಿ) ಎ-2, ಬಿ-4, ಸಿ-1, ಡಿ-3
ಸಿ) ಎ-4, ಬಿ-3, ಸಿ-2, ಡಿ-1
ಡಿ) ಎ-3, ಬಿ-1, ಸಿ-4, ಡಿ-2

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ - 7ರ ಉತ್ತರ

81. ಬಿ, 82. ಸಿ, 83. ಸಿ, 84. ಸಿ, 85. ಎ, 86. ಬಿ, 87. ಡಿ, 88. ಬಿ, 89. ಸಿ, 90. ಬಿ, 91. ಎ, 92. ಸಿ, 93. ಡಿ, 94. ಬಿ, 95. ಬಿ

ತಜ್ಞರ ಶಿಫಾರಸನ್ನು ಮೀರಿ ಅಂತರ ವಿಸ್ತರಿಸಿದ ಆರೋಪಕ್ಕೆ ಕೇಂದ್ರ ಸರ್ಕಾರ ಸ್ಪಷ್ಟನೆ

‘ಡೋಸ್ ಅಂತರ ಹೆಚ್ಚಳಕ್ಕೆ ವೈಜ್ಞಾನಿಕ ಆಧಾರ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಣ ಅಂತರವನ್ನು 6-8 ವಾರಗಳಿಂದ 12-16 ವಾರಕ್ಕೆ ಏರಿಸಲು ವೈಜ್ಞಾನಿಕ ಕಾರಣಗಳಿವೆ. ಅಂತರ ಹೆಚ್ಚಾದಷ್ಟು ಲಸಿಕೆಯ ಪರಿಣಾಮ ಏರಿಕೆಯಾಗುತ್ತದೆ ಎಂಬ ವೈಜ್ಞಾನಿಕ ವರದಿಯ ಆಧಾರದ ಮೇಲೆ ಈ ನಿರ್ಧಾರ ತೆಗೆದುಕೊಳ್ಳಲಾಗಿತ್ತು’ ಎಂದು ರಾಷ್ಟ್ರೀಯ ಲಸಿಕಾ ತಾಂತ್ರಿಕ ಸಲಹಾ ತಂಡದ (ಎನ್‌ಟಿಎಜಿಐ) ಮುಖ್ಯಸ್ಥ ಡಾ. ಎನ್.ಕೆ.ಅರೋರಾ ಹೇಳಿದ್ದಾರೆ.

‘ಲಸಿಕೆ ಡೋಸ್‌ಗಳ ನಡುವಣ ಅಂತರವನ್ನು, ವೈಜ್ಞಾನಿಕ ಸಲಹೆಯನ್ನು ಕಡೆಗಣಿಸಿ ವಿಸ್ತರಿಸಲಾಗಿದೆ’ ಎಂದು ಎನ್‌ಟಿಎಜಿಐ ಸದಸ್ಯರು ಮಾಧ್ಯಮ ಸಂಸ್ಥೆಗಳಿಗೆ ಮಂಗಳವಾರ ಹೇಳಿಕೆ ನೀಡಿದ್ದರು. ಈ ಹೇಳಿಕೆಗಳನ್ನು ಆಧರಿಸಿ ರಾಯಿಟರ್ಸ್ ಸುದ್ದಿ ಪ್ರಕಟಿಸಿತ್ತು. ಈ ಸುದ್ದಿ ಪ್ರಕಟವಾದ ನಂತರ ಸರ್ಕಾರದ ನಿರ್ಧಾರವನ್ನು ವಿರೋಧಪಕ್ಷಗಳು ಪ್ರಶ್ನಿಸಿದ್ದವು. ಅದರ ಬೆನ್ನಲ್ಲೇ ಎನ್‌ಟಿಎಜಿಐ ಈ ಸ್ಪಷ್ಟೀಕರಣ ನೀಡಿದೆ. ಆರೋಗ್ಯ ಸಚಿವಾಲಯವೂ ಈ ಸಂಬಂಧ ಪ್ರಕಟಣೆ ಬಿಡುಗಡೆ ಮಾಡಿದೆ.

‘ಕೋವಿಶೀಲ್ಡ್‌ನ ಎರಡು ಡೋಸ್‌ಗಳ ನಡುವಣ ಅಂತರವನ್ನು ಹೆಚ್ಚಿಸುವ ಸಂಬಂಧ ಎನ್‌ಟಿಎಜಿಐ ಹಲವು ಸುತ್ತಿನ ಸಭೆ ನಡೆಸಿತ್ತು. ಅವಧಿಯನ್ನು ವಿಸ್ತರಿಸುವುದರ ಸಂಬಂಧ ಎನ್‌ಟಿಎಜಿಐ ಸದಸ್ಯರಲ್ಲಿ ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಿರಲಿಲ್ಲ’ ಎಂದು ಅರೋರಾ ಅವರು ಮಾಹಿತಿ ನೀಡಿದ್ದಾರೆ.

ಸರ್ಕಾರದ ಈ ಸ್ಪಷ್ಟೀಕರಣವು ಭಾರಿ ಚರ್ಚೆಗೆ ಕಾರಣವಾಗಿದೆ. ಅಲ್ಫಾ ತಳಿಯ ವಿರುದ್ಧ ಕೋವಿಶೀಲ್ಡ್‌ನ ಪರಿಣಾಮವನ್ನು ಆಧರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ, ದೇಶದಲ್ಲಿ ಡೆಲ್ಟಾ ತಳಿಯ ಕಾರಣದಿಂದಲೇ ಎರಡನೇ ಅಲೆ ತೀವ್ರವಾಗಿದೆ. ಹೀಗಿದ್ದಾಗ ಅಲ್ಫಾ ತಳಿ ಮೇಲೆ ನಡೆದ ಸಂಶೋಧನೆಯ ಆಧಾರದಲ್ಲಿ ನಿರ್ಧಾರ ತೆಗೆದುಕೊಂಡಿದ್ದು ಹೇಗೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಪ್ರಶ್ನಿಸಿದ್ದಾರೆ.



ಲಸಿಕೆ ಕೊರತೆಯನ್ನು ಮರೆಮಾಚುವ ಉದ್ದೇಶದ ಮೋದಿ ಸರ್ಕಾರದ ಸುಳ್ಳು ಮತ್ತು ಪ್ರಾಸಬದ್ಧ ಘೋಷಣೆಗಳ ಅಗತ್ಯ ದೇಶಕ್ಕಿಲ್ಲ. ಎಲ್ಲರಿಗೂ ಲಸಿಕೆ ನೀಡಿ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ



ಸತ್ಯವನ್ನು ಪರಿಶೀಲಿಸದೆಯೇ ಅಸತ್ಯಗಳನ್ನು ಮುಂದು ಮಾಡುವ ರಾಹುಲ್ ಅವರು ಈಗ ಅಸತ್ಯದ ನಾಡಿನಲ್ಲಿ ಕಳೆದುಹೋಗಿದ್ದಾರೆ

ಹರ್ಷವರ್ಧನ್, ಕೇಂದ್ರ ಆರೋಗ್ಯ ಸಚಿವ

ಬ್ರಿಟನ್ ಅನ್ನು ಅನುಸರಿಸಿದ ಸರ್ಕಾರ

- ಅಲ್ಫಾ ತಳಿಯ ವಿರುದ್ಧ ಪರಿಣಾಮವು ಏರಿಕೆಯಾಗುತ್ತದೆ ಎಂಬ ಕಾರಣ ಬ್ರಿಟನ್ ಏಪ್ರಿಲ್‌ನಲ್ಲಿ ಕೋವಿಶೀಲ್ಡ್‌ನ ಎರಡು ಡೋಸ್‌ಗಳ ನಡುವಣ ಅಂತರವನ್ನು 12 ವಾರಕ್ಕೆ ಏರಿಕೆ ಮಾಡಿತ್ತು.
- ಭಾರತದಲ್ಲಿ ತೀವ್ರವಾಗಿದ್ದ ಡೆಲ್ಟಾ (B.1.617) ತಳಿಯ ಕೊರೊನಾ ವೈರಸ್ ಬ್ರಿಟನ್‌ನಲ್ಲೂ ತೀವ್ರವಾದ ಕಾರಣ ಕೋವಿಶೀಲ್ಡ್‌ನ ಎರಡು ಡೋಸ್‌ಗಳ ನಡುವಣ ಅಂತರವನ್ನು ಮೇ 15ರಂದು 12 ವಾರದಿಂದ 8 ವಾರಕ್ಕೆ ಇಳಿಸಿತ್ತು
- ಭಾರತದಲ್ಲಿ ಪಂಜಾಬ್, ದೆಹಲಿ ಮತ್ತು ಉತ್ತರ ಭಾರತದ ಕೆಲವೆಡೆ ಮಾತ್ರ ಅಲ್ಫಾ ತಳಿಯ ಕೊರೊನಾವೈರಸ್ ತೀವ್ರವಾಗಿದೆ. ಉಳಿದೆಡೆ ಡೆಲ್ಟಾ ತಳಿಯ ವೈರಸ್ ತೀವ್ರವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿತ್ತು

‘ಬ್ರಿಟನ್ ಮಾಡಿದ್ದಕ್ಕೆ ಮಾಡಿದೆವು’

‘ಕೋವಿಶೀಲ್ಡ್ ಕೋವಿಡ್ ಲಸಿಕೆಯ ಎರಡು ಡೋಸ್‌ಗಳ ನಡುವಣ ಅಂತರವನ್ನು 12 ವಾರಗಳಿಗೆ ಏರಿಕೆ ಮಾಡಿದ ಕಾರಣ, ಲಸಿಕೆಯ ಪರಿಣಾಮವು ಶೇ 65ರಿಂದ ಶೇ 88ಕ್ಕೆ ಏರಿಕೆಯಾಗಿತ್ತು ಎಂದು ಏಪ್ರಿಲ್ ಕೊನೆಯ ವಾರದಲ್ಲಿ ಬ್ರಿಟನ್‌ನ ಸಾರ್ವಜನಿಕ ಆರೋಗ್ಯ ಇಲಾಖೆ ವರದಿ ಪ್ರಕಟಿಸಿತ್ತು. ಆಗ ಬ್ರಿಟನ್‌ನಲ್ಲಿ ತೀವ್ರವಾಗಿದ್ದ ಆಲ್ಫಾ (ಬಿ.1.1.7) ತಳಿಯ ಕೊರೊನಾವೈರಸ್‌ನ ಮೇಲೆ ಕೋವಿಶೀಲ್ಡ್ ಲಸಿಕೆಯ ಪರಿಣಾಮದ ಮೇಲಿನ ಅಧ್ಯಯನದಲ್ಲಿ ಇದು ಪತ್ತೆಯಾಗಿತ್ತು. ಆನಂತರ ಎರಡು ಡೋಸ್‌ಗಳ ನಡುವಣ ಅಂತರವನ್ನು ಬ್ರಿಟನ್ 12 ವಾರಕ್ಕೆ ಏರಿಕೆ ಮಾಡಿತ್ತು. ಹೀಗೆ ಮಾಡಿದ್ದರಿಂದಲೇ ಆಲ್ಫಾ ತಳಿಯನ್ನು ನಿಯಂತ್ರಿಸಲು ಬ್ರಿಟನ್‌ಗೆ ಸಾಧ್ಯವಾಯಿತು. ಹೀಗಾಗಿ ನಾವೂ ಅದೇ ರೀತಿ ಯೋಚನೆ ಮಾಡಿದೆವು. ಡೋಸ್‌ಗಳ ನಡುವಣ ಅಂತರ ಹೆಚ್ಚಿಸಿದರೆ, ಹೆಚ್ಚು ಉಪಯೋಗವಾಗುತ್ತದೆ. ಆದ ಕಾರಣ ಕೋವಿಶೀಲ್ಡ್‌ನ ಎರಡು ಡೋಸ್‌ಗಳ ನಡುವಣ ಅಂತರವನ್ನು 12-16 ವಾರಕ್ಕೆ ಏರಿಕೆ ಮಾಡಿದೆವು’ ಎಂದು ಡಾ.ಎನ್.ಕೆ.ಅರೋರಾ ವಿವರಿಸಿದ್ದಾರೆ.

‘ಅಂತರ ಹೆಚ್ಚಿಸುವ ನಿರ್ಧಾರವನ್ನು ವೈಜ್ಞಾನಿಕ ಸಾಕ್ಷ್ಯಗಳ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ. ಈ ಸಂಬಂಧ ನಮ್ಮ ತಂಡವು ಪಾರದರ್ಶಕವಾಗಿ ಕೆಲಸ ಮಾಡಿದೆ. ಎನ್‌ಟಿಎಜಿಐ ಸಭೆಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಹೀಗಾಗಿ ಎರಡು ಡೋಸ್‌ಗಳ ನಡುವಣ ಅಂತರವನ್ನು 12-16 ವಾರಕ್ಕೆ ಏರಿಕೆ ಮಾಡಬೇಕು ಎಂದು ಶಿಫಾರಸು ಮಾಡಿದ್ದೆವು’ ಎಂದು ಅರೋರಾ ಹೇಳಿದ್ದಾರೆ.

‘16 ವಾರ ಪ್ರಸ್ತಾಪವೇ ಆಗಿರಲಿಲ್ಲ’

‘ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಣ ಅಂತರವನ್ನು 8-12 ವಾರದವರೆಗೆ ವಿಸ್ತರಿಸುವ ಬಗ್ಗೆ ಮಾತ್ರ ಎನ್‌ಟಿಎಜಿಐ ಸಭೆಯಲ್ಲಿ ಚರ್ಚಿಸಲಾಗಿತ್ತು. 8-12 ವಾರಕ್ಕೆ ವಿಸ್ತರಿಸಲು ಮಾತ್ರವೇ ನಾವು ಶಿಫಾರಸು ಮಾಡಿದ್ದೆವು. ಡೋಸ್‌ಗಳ ಅಂತರವನ್ನು 16 ವಾರಕ್ಕೆ ವಿಸ್ತರಿಸುವ ವಿಷಯವೇ ಸಭೆಯಲ್ಲಿ ಪ್ರಸ್ತಾಪವಾಗಿಲ್ಲ. ಆದರೆ, ಸರ್ಕಾರದ ಆದೇಶ ನಮ್ಮ ಶಿಫಾರಸಿಗೆ ವ್ಯತಿರಿಕ್ತವಾಗಿತ್ತು’ ಎಂದು ಎನ್‌ಟಿಎಜಿಐ ಸದಸ್ಯರಾಗಿರುವ ಎಂ.ಡಿ.ಗುಪ್ತೆ ಹೇಳಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

‘ಕೋವಿಶೀಲ್ಡ್‌ನ ಎರಡು ಡೋಸ್‌ಗಳ ನಡುವಣ ಅಂತರವನ್ನು 8-12 ವಾರದವರೆಗೆ ವಿಸ್ತರಿಸಲು ಮಾತ್ರ ಶಿಫಾರಸು ಮಾಡಿದ್ದೆವು’ ಎಂದು ಎನ್‌ಟಿಎಜಿಐನ ಮತ್ತೊಬ್ಬ ಸದಸ್ಯ ಮ್ಯಾಥ್ಯೂ ವರ್ಗೀಸ್ ಹೇಳಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಈ ಸಭೆಗೆ ಸಂಬಂಧಿಸಿದಂತೆ, ಈ ತಂಡದ 14 ಪ್ರಮುಖ ಸದಸ್ಯರನ್ನು ಮಾತನಾಡಿಸಿದ್ದೆವು. ‘ಲಸಿಕೆ ಡೋಸ್‌ಗಳ ಅಂತರವನ್ನು 16 ವಾರಗಳಿಗೆ ವಿಸ್ತರಿಸುವುದಕ್ಕೆ ಅಗತ್ಯವಾದಂತಹ ಯಾವುದೇ ಅಧ್ಯಯನ ವರದಿ ಅಥವಾ ವೈಜ್ಞಾನಿಕ ಕಾರಣ ಸಮಿತಿಯ ಮುಂದೆ ಇರಲಿಲ್ಲ’ ಎಂದು ಮೂವರು ಸದಸ್ಯರು ಖಚಿತಪಡಿಸಿದ್ದಾರೆ. ಆದರೆ ಈ ಬಗ್ಗೆ ಪ್ರತಿಕ್ರಿಯೆ ನೀಡಲು ಎನ್‌ಟಿಎಜಿಐ ಮುಖ್ಯಸ್ಥ ಡಾ.ಎನ್.ಕೆ.ಅರೋರಾ ನಿರಾಕರಿಸಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಲಸಿಕೆಯಲ್ಲಿ ಕರುಗಳ ಸೀರಂ ಇಲ್ಲ: ಕೇಂದ್ರ ಸ್ಪಷ್ಟನೆ

ನವದೆಹಲಿ (ಪಿಟಿಐ): ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಕೋವ್ಯಾಕ್ಸಿನ್ ಲಸಿಕೆಯಲ್ಲಿ ನವಜಾತ ಕರುವಿನ ರಕ್ತದಿಂದ ತೆಗೆಯಲಾದ ದ್ರವ (ಸೀರಂ) ಇರುತ್ತದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಲಾಗುತ್ತಿರುವ ಕೆಲವು ಪೋಸ್ಟ್‌ಗಳಲ್ಲಿ ಉಲ್ಲೇಖಿಸಲಾಗಿದೆ. ಇದು ತಿರುಚಿದ ಮತ್ತು ತಪ್ಪಾಗಿ ವ್ಯಾಖ್ಯಾನಿಸಲಾದ ಅಂಶ ಎಂದು ಕೇಂದ್ರದ ಆರೋಗ್ಯ ಸಚಿವಾಲಯ ಹೇಳಿದೆ.

ನವಜಾತ ಕರುಗಳ ಸೀರಂ ಅನ್ನು ವೆರೊ ಜೀವಕೋಶಗಳ ತಯಾರಿಕೆ ಹಾಗೂ ಅಭಿವೃದ್ಧಿಗೆ ಮಾತ್ರ ಬಳಸಲಾಗುತ್ತದೆ. ಲಸಿಕೆ ಅಭಿವೃದ್ಧಿಗೆ ಜೀವಕೋಶಗಳ ಸರಣಿ ತಯಾರಿಸಲು ಇದನ್ನು ಬಳಸಲಾಗುತ್ತದೆ. ಇದಕ್ಕಾಗಿ ಹಸು ಹಾಗೂ ಇತರ ಪ್ರಾಣಿಗಳ ಸೀರಂ ಅನ್ನು ಬಳಸುವ ಪದ್ಧತಿ ಜಾಗತಿಕ ಮಟ್ಟದಲ್ಲಿ ಹಿಂದಿನಿಂದಲೂ ಇದೆ. ಪೋಲಿಯೊ, ರೇಬೀಸ್, ಇನ್‌ಫ್ಲುಯೆನ್ಜಾ ಮುಂತಾದ ಸೋಂಕುಗಳಿಗೆ ಲಸಿಕೆ ತಯಾರಿಸಲು ಈ ತಂತ್ರವನ್ನು ಬಳಸಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ.

ಜೀವಕೋಶಗಳ ಸರಣಿ ಅಭಿವೃದ್ಧಿಪಡಿಸಿದ ನಂತರ, ವೆರೊ ಜೀವಕೋಶಗಳನ್ನು ನೀರು ಮತ್ತು ರಾಸಾಯನಿಕಗಳಿಂದ ಹಲವು ಬಾರಿ ತೊಳೆದು ಕರುವಿನ ಸೀರಂ ಸಂಪೂರ್ಣ ಸ್ವಚ್ಛವಾಗಿದೆ ಎಂದು ಖಚಿತಪಡಿಸಲಾಗುತ್ತದೆ. ಅದಾದ ನಂತರ ವೆರೊ ಜೀವಕೋಶಗಳಿಗೆ ಕೊರೊನಾ ವೈರಸ್ ಅನ್ನು ಅಂಟಿಸಲಾಗುತ್ತದೆ. ವೈರಸ್‌ನ ಬೆಳವಣಿಗೆಯ ಹಂತದಲ್ಲಿ ವೆರೊ ಜೀವಕೋಶಗಳನ್ನು ಸಂಪೂರ್ಣವಾಗಿ ನಾಶಪಡಿಸಲಾಗುತ್ತದೆ. ಬಳಿಕ ವೈರಸ್ ಅನ್ನೂ ಕೊಂದು (ದುರ್ಬಲಗೊಳಿಸಿ) ಶುದ್ಧೀಕರಿಸಲಾಗುತ್ತದೆ. ಹೀಗೆ ಕೊಲ್ಲಲಾದ ಅಥವಾ ದುರ್ಬಲಗೊಳಿಸಲಾದ ವೈರಸ್ ಅನ್ನು ಲಸಿಕೆ ತಯಾರಿಸಲು ಬಳಸಲಾಗುತ್ತದೆ. ಲಸಿಕೆಯ ಅಂತಿಮ ಹಂತದಲ್ಲಿ ಕರುಗಳ ಜೀವಕೋಶವನ್ನು ಬಳಸಲಾಗುವುದಿಲ್ಲ ಎಂದು ಸಚಿವಾಲಯದ ಪ್ರಕಟಣೆ ಹೇಳಿದೆ.

ಎಲ್ಲಾ ಪದವಿ ಕಾಲೇಜುಗಳಲ್ಲಿ ಇಂಗ್ಲಿಷ್ ಮಾಧ್ಯಮ: ಆಂಧ್ರ ಸಿ.ಎಂ ನಿರ್ಧಾರ

ಹೈದರಾಬಾದ್: ಪ್ರಸಕ್ತ ಶೈಕ್ಷಣಿಕ ವರ್ಷದಿಂದ ರಾಜ್ಯದ ಎಲ್ಲಾ ಪದವಿ ಕಾಲೇಜುಗಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಪರಿವರ್ತಿಸಲು ಆಂಧ್ರಪ್ರದೇಶದ ಜಗನ್‌ಮೋಹನ್ ರೆಡ್ಡಿ ಸರ್ಕಾರ ನಿರ್ಧರಿಸಿದೆ.

ಪದವಿ ಕೋರ್ಸ್‌ಗಳನ್ನು ಬೋಧಿಸುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಕಾಲೇಜುಗಳಲ್ಲಿ ಇಂಗ್ಲಿಷ್ ಅನ್ನು ಶೈಕ್ಷಣಿಕ ಮಾಧ್ಯಮವನ್ನಾಗಿ ಕಡ್ಡಾಯಗೊಳಿಸುವುದಾಗಿ ಸರ್ಕಾರ ಘೋಷಿಸಿದೆ.

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ತೆಲುಗು ಮಾಧ್ಯಮ ತರಗತಿಗಳನ್ನು ಇಂಗ್ಲಿಷ್ ಮಾಧ್ಯಮವಾಗಿ ಪರಿವರ್ತಿಸುವ ಕುರಿತ ಪ್ರಸ್ತಾವಗಳನ್ನು ಸಲ್ಲಿಸುವಂತೆ ಆಂಧ್ರಪ್ರದೇಶದ ಉನ್ನತ ಶಿಕ್ಷಣ ಮಂಡಳಿ ಸೋಮವಾರ ಎಲ್ಲಾ ಖಾಸಗಿ ಕಾಲೇಜುಗಳಿಗೆ ಸೂಚಿಸಿದೆ.

ಕಾಂಗ್ರೆಸ್‌ನಲ್ಲಿ ಮಧ್ಯಂತರ ಚುನಾವಣೆ ಲೆಕ್ಕಾಚಾರ

• ಸಿದ್ದಯ್ಯ ಹಿರೇಮಠ

ನವದೆಹಲಿ: ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ ಮುನ್ನೆಲೆಗೆ ಬಂದಿರುವ ನಡುವೆಯೇ, ‘ಮಧ್ಯಂತರ ಚುನಾವಣೆ’ ಸಾಧ್ಯತೆಯ ಲೆಕ್ಕಾಚಾರದಲ್ಲಿರುವ ಕಾಂಗ್ರೆಸ್ ಹೈಕಮಾಂಡ್, ಪಕ್ಷದ ಕಾರ್ಯಕರ್ತರನ್ನು ಸನ್ನದ್ಧಗೊಳಿಸುವಂತೆ ರಾಜ್ಯ ಮುಖಂಡರಿಗೆ ಸೂಚಿಸಿದೆ.

‘ಬಿಜೆಪಿಯಲ್ಲಿನ ಆಂತರಿಕ ಕಚ್ಚಾಟ ಯಾವ ಹಂತ ತಲುಪಲಿದೆಯೋ’ ಎಂಬ ಜಿಜ್ಞಾಸೆ ಮುಂದುವರಿದಿದ್ದು, ಚುನಾವಣೆಯ ಸ್ಪರ್ಧಾಕಾಂಕ್ಷಿಗಳು, ಮುಖಂಡರು, ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಕ್ರಿಯವಾಗುವಂತೆ ಸೂಚಿಸಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಕೊರೊನಾ ಹಾಗೂ ಲಾಕ್‌ಡೌನ್‌ನಿಂದಾಗಿ ಎದುರಾಗಿರುವ ಸಂಕಷ್ಟದಲ್ಲಿರುವ ಜನರ ನೆರವಿಗೆ ಧಾವಿಸುವ ಮೂಲಕ ಭರವಸೆ ಮೂಡಿಸುವಂತೆಯೂ ಸೂಚಿಸಲಾಗಿದೆ ಎಂದು ಪಕ್ಷದಲ್ಲಿ ಪ್ರಮುಖರಾಗಿರುವ ರಾಜ್ಯ ಮುಖಂಡರೊಬ್ಬರು ಹೇಳಿದರು.

ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಒಳಗಾಗಿರುವ ಬಡ ಜನತೆಗೆ, ಕೊರೊನಾದಿಂದ ಮೃತಪಟ್ಟವರ ಕುಟುಂಬಗಳಿಗೆ ನೆರವಿನ ಹಸ್ತ ಚಾಚಬೇಕು. ದಿನಸಿ, ಬಟ್ಟೆ, ಪುಸ್ತಕ ಮತ್ತಿತರ ಅಗತ್ಯ ವಸ್ತುಗಳ ಉಚಿತ ವಿತರಣಾ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ವರಿಷ್ಠರು ಮೌಖಿಕವಾಗಿ ಆದೇಶಿಸಿದ್ದಾರೆ ಎಂದು ಅವರು ವಿವರಿಸಿದರು.

ಬಿಜೆಪಿ ಆಡಳಿತದ ಅವಧಿಯಲ್ಲಿ ದೇಶದಾದ್ಯಂತ ನಿರುದ್ಯೋಗ ಸಮಸ್ಯೆ ತಲೆದೋರಿದೆ. ಪೆಟ್ರೋಲ್- ಡೀಸೆಲ್ ಬೆಲೆ ಏರಿಕೆಯಿಂದ ಜನಸಾಮಾನ್ಯರು ತತ್ತರಿಸಿದ್ದಾರೆ. ಇಂಥ ಹತ್ತು- ಹಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವುದಲ್ಲದೆ, ಯುವ ಜನರನ್ನು ಪಕ್ಷದತ್ತ ಸೆಳೆದು, ಜಾಗೃತಿ ಮೂಡಿಸಬೇಕು ಎಂಬ ಸಂದೇಶವನ್ನೂ ರವಾನಿಸಲಾಗಿದೆ ಎಂದು ಅವರು ಹೇಳಿದರು.

ಕಳೆದ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಅತ್ಯಂತ ಕಡಿಮೆ ಅಂತರದಲ್ಲಿ ಸೋಲು ಎದುರಾಗಿರುವ ಕ್ಷೇತ್ರಗಳಲ್ಲಿ ಬಿಜೆಪಿ ವಿರೋಧಿ ಅಭಿಯಾನವನ್ನೇ ಹಮ್ಮಿಕೊಳ್ಳುವಂತೆಯೂ ತಿಳಿಸಿದ್ದಾರೆ ಎಂದು ಅವರು ವಿವರಿಸಿದರು.

ಈ ಹಿಂದೆ ಕಾಂಗ್ರೆಸ್ ಪಕ್ಷ ನೀಡಿರುವ ಜನಪರ ಆಡಳಿತ ಹಾಗೂ ಕಾರ್ಯ ವೈಖರಿಯನ್ನು ಜನ ನೆನಪಿಸಿಕೊಳ್ಳುತ್ತಿದ್ದಾರೆ. ಪಕ್ಷವು ಮತ್ತೆ ಕರ್ನಾಟಕದಲ್ಲಿ ಅಧಿಕಾರ ಹಿಡಿಯುವ ಸಂಬಂಧ ಕೆಲವೇ ದಿನಗಳಲ್ಲಿ ಎಐಸಿಸಿಯ ನಿಯೋಗವನ್ನು ರಾಜ್ಯಕ್ಕೆ ಕಳುಹಿಸುವ ಚಿಂತನೆ ನಡೆದಿದೆ ಎಂದು ಅವರು ಹೇಳಿದರು.

ವಿಮುಖರಾಗುತ್ತಿರುವ ಜನ: ನಿರಂತರ ಕಚ್ಚಾಟ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಭಿವೃದ್ಧಿ ಕಾರ್ಯದಲ್ಲಿ ಹಿನ್ನಡೆ, ಕೊರೊನಾದಿಂದ ರಾಜ್ಯವೇ ತತ್ತರಿಸಿದರೂ ಗಮನಹರಿಸದ ಬಿಜೆಪಿಯಿಂದಾಗಿ ಜನತೆ ರೋಸಿ ಹೋಗಿದ್ದು, ಆ ಪಕ್ಷದಿಂದ ವಿಮುಖರಾಗುತ್ತಿದ್ದಾರೆ. ಉತ್ತಮ ಆಡಳಿತ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂಬುದು ಜನರ ಅಭಿಪ್ರಾಯವಾಗಿದೆ. ಅವರ ಆಶೋತ್ತರಗಳಿಗೆ ಸ್ಪಂದಿಸಲು ಪಕ್ಷ ಕಾರ್ಯಕರ್ತರನ್ನು ಹುರಿದುಂಬಿಸುತ್ತಿದೆ ಎಂದೂ ಅವರು ಒತ್ತಿ ಹೇಳಿದರು.

ದೆಹಲಿ ಗಲಭೆ: ಹೈಕೋರ್ಟ್ ಆದೇಶ ಪ್ರಶ್ನಿಸಿ ‘ಸುಪ್ರೀಂ’ಗೆ ಅರ್ಜಿ

ನವದೆಹಲಿ (ಪಿಟಿಐ): ಈಶಾನ್ಯ ದೆಹಲಿಯಲ್ಲಿ ಕಳೆದ ವರ್ಷ ನಡೆದಿದ್ದ ಗಲಭೆ ಪ್ರಕರಣಗಳಲ್ಲಿ ಮೂವರು ವಿದ್ಯಾರ್ಥಿಗಳಿಗೆ ಜಾಮೀನು ನೀಡಿದ ದೆಹಲಿ ಹೈಕೋರ್ಟ್‌ನ ಮೂರು ಪ್ರತ್ಯೇಕ ತೀರ್ಪುಗಳನ್ನು ಪ್ರಶ್ನಿಸಿ ದೆಹಲಿ ಪೊಲೀಸರು ಬುಧವಾರ ಸುಪ್ರೀಂ‌ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಜೆಎನ್‌ಯು ವಿದ್ಯಾರ್ಥಿಗಳಾದ ನತಾಶಾ ನರ್ವಾಲ್, ದೇವಾಂಗನಾ ಕಾಲಿತಾ, ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿದ್ಯಾರ್ಥಿ ಆಸಿಫ್ ಇಕ್ಬಾಲ್ ತನ್ಹಾ ಅವರಿಗೆ ಹೈಕೋರ್ಟ್ ಮಂಗಳವಾರವಷ್ಟೇ ಜಾಮೀನು ಮಂಜೂರು ಮಾಡಿತ್ತು.

ಅಸ್ಸಾಮಿ ಭಾಷೆಯಲ್ಲಿ ಕೂ ಆ್ಯಪ್

ಗುವಾಹಟಿ (ಪಿಟಿಐ): ಸ್ವದೇಶಿ ಮೈಕ್ರೋ ಬ್ಲಾಗಿಂಗ್ ಮತ್ತು ಸಾಮಾಜಿಕ ಜಾಲತಾಣ ಕೂ ಅಸ್ಸಾಮಿ ಭಾಷೆಯಲ್ಲಿ ಆ್ಯಪ್ ಆರಂಭಿಸಿದ್ದು, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಬುಧವಾರ ಕೂ ಆ್ಯಪ್ ಬಿಡುಗಡೆ ಮಾಡಿದರು.

ಅಸ್ಸಾಮೀಸ್ ಭಾಷೆಯಲ್ಲಿ ತಮ್ಮ ಸಂದೇಶವನ್ನು ಕೂ ಆ್ಯಪ್‌ನಲ್ಲಿ ರವಾನಿಸಿದ ಮುಖ್ಯಮಂತ್ರಿ ‘ನಾ ಕೂ ಆ್ಯಪ್ ಜಾಲತಾಣವನ್ನು ಸೇರುವ ಜತೆಗೆ ಈ ಆ್ಯಪ್ ಅನ್ನು ಅಸ್ಸಾಮೀಸ್ ಭಾಷೆಯಲ್ಲಿ ಬಿಡುಗಡೆ ಮಾಡಿರುವುದಯ ತುಂಬಾ ಸಂತೋಷ ನೀಡಿದೆ. ಅಸ್ಸಾಂನ ಜನರಿಗೆ ತಮ್ಮ ಆಲೋಚನೆಗಳು ಮತ್ತು ಅಭಿಪ್ರಾಯಗಳನ್ನು ಮಾತೃಭಾಷೆಯಲ್ಲಿ ಹಂಚಿಕೊಳ್ಳಲು ಈ ಅಪ್ಲಿಕೇಷನ್ ಅನುವು ಮಾಡಿಕೊಡಲಿದೆ’ ಎಂದು ಹೇಳಿದರು.

‘ಕೂ ಅಪ್ಲಿಕೇಷನ್‌ನಲ್ಲಿ ಜನರೊಂದಿಗೆ ಬೆರೆಯಲು ನಾನು ಎದುರು ನೋಡುತ್ತಿದ್ದೇನೆ.ಇಲ್ಲಿ ನನ್ನ ಅಭಿಪ್ರಾಯಗಳು, ಪ್ರಕಟಣೆಗಳು ಮತ್ತು ಇನ್ನೂ ಅನೇಕ ಹೊಸ ವಿಷಯಗಳನ್ನು ಕೂಯಿಂಗ್ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ಕೂನಿಂದ ಅತ್ಯುತ್ತಮ ಸೌಲಭ್ಯ ಮತ್ತು ಸೇವೆ ಸಿಗಲಿದೆ’ ಎಂದು ಶರ್ಮಾ ವಿಶ್ವಾಸ ವ್ಯಕ್ತಪಡಿಸಿದರು.

ಕೂ ಸಹ ಸಂಸ್ಥಾಪಕ ಮತ್ತು ಸಿಇಒ ಅಪ್ರಮೇಯ ರಾಧಾಕೃಷ್ಣ ಮಾತನಾಡಿ, ಕೂ ಜಾಲಾತಣಕ್ಕೆ ಮುಖ್ಯಮಂತ್ರಿ ಅಡಿ ಇಟ್ಟಿದ್ದು ನಮಗೆ ತುಂಬಾ ಸಂತೋಷವಾಗಿದೆ. ಅಸ್ಸಾಮಿ ಭಾಷೆಯ ಮೊದಲ ಕೂ ಅನ್ನು ಮುಖ್ಯಮಂತ್ರಿ ಪ್ರಾರಂಭಿಸಿರುವುದರಿಂದ ನಮಗೆ ಇನ್ನಷ್ಟು ಉತ್ಸಾಹ ಬಂದಿದೆ’ ಎಂದರು.

‘ನೆಗಡಿಯಿಂದ ಕೋವಿಡ್‌ಗೆ ತಡೆ’

ಇನ್ನೂ ಬೇಕು ಅಧ್ಯಯನ

ಇಂಟರ್‌ಫೆರಾನ್ ಅನ್ನು ಕೋವಿಡ್ ಚಿಕಿತ್ಸೆಯಲ್ಲಿ ಬಳಸುವ ಬಗ್ಗೆ ಮತ್ತಷ್ಟು ಆಳವಾದ ಅಧ್ಯಯನಗಳು ನಡೆಯಬೇಕಿದೆ. ಸಾಮಾನ್ಯ ನೆಗಡಿ ಉಂಟಾಗುವ ಋತುವಿನಲ್ಲಿ ಇನ್‌ಫ್ಲುಯೆಂಜಾದಂಥ ಸಾಂಕ್ರಾಮಿಕದ ಹರಡುವಿಕೆ ಪ್ರಮಾಣ ಕಡಿಮೆ ಇತ್ತು ಎನ್ನುವುದರ ಕುರಿತು ಮತ್ತಷ್ಟು ವಿಸ್ತೃತವಾದ ಅಧ್ಯಯನಗಳು ನಡೆಯಬೇಕಿವೆ ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ವಾಷಿಂಗ್ಟನ್ (ಪಿಟಿಐ): ಸಾಮಾನ್ಯ ನೆಗಡಿಗೆ ಒಡ್ಡಿಕೊಳ್ಳುವುದರಿಂದ ಕೋವಿಡ್-19 ಉಂಟುಮಾಡುವ ಸಾರ್ಸ್-ಕೋವ್-2 ವೈರಸ್‌ನಿಂದ (ಕೊರೊನಾವೈರಸ್) ರಕ್ಷಣೆ ಪಡೆಯಬಹುದು ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ.

ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ನಡೆಸಿರುವ ಈ ಅಧ್ಯಯನದ ವರದಿಯು ಜರ್ನಲ್ ಆಫ್ ಎಕ್ಸ್‌ಪರಿಮೆಂಟಲ್‌ನಲ್ಲಿ ಮಂಗಳವಾರ ಪ್ರಕಟವಾಗಿದೆ.

‘ರೈನೊವೈರಸ್‌ಗಳು ಸಾಮಾನ್ಯ ನೆಗಡಿಯನ್ನು ಉಂಟು ಮಾಡುತ್ತವೆ. ರೈನೊವೈರಸ್‌ನಿಂದ ನೆಗಡಿ ಉಂಟಾದಾಗ ದೇಹದಲ್ಲಿರುವ ಇಂಟರ್‌ಫೆರಾನ್ ಅನ್ನು ಉದ್ದೀಪಿಸುವ ವಂಶವಾಹಿಗಳು ಚಟುವಟಿಕೆ ಆರಂಭಿಸುತ್ತವೆ. ದೇಹದಲ್ಲಿ ವೈರಾಣುಗಳ ಇರುವಿಕೆ ಪತ್ತೆಮಾಡಿ, ಪ್ರತಿಕಾಯಗಳನ್ನು ಉತ್ಪಾದನೆಯನ್ನು ಪ್ರಚೋದಿಸುವ ಪ್ರೊಟೀನ್‌ಗಳನ್ನು ಇಂಟರ್‌ಫೆರಾನ್ ಎನ್ನಲಾಗುತ್ತದೆ. ಇಂಟರ್‌ಫೆರಾನ್‌ನಿಂದ ರೋಗ ಪ್ರತಿರೋಧ ಶಕ್ತಿ ಸಕ್ರಿಯವಾಗುತ್ತದೆ. ಈ ಪ್ರತಿರೋಧಕಗಳು ನೆಗಡಿಗೆ ಒಳಗಾಗಿರುವ ವಾಯುನಾಳ ಅಂಗಾಂಶದಲ್ಲೇ ಕೊರೊನಾ ವೈರಾಣುವನ್ನು ತಡೆಯುತ್ತದೆ’ ಎಂದು ಅಧ್ಯಯನ ನಡೆಸಿರುವ ತಂಡದ ಹಿರಿಯ ವೈದ್ಯರಾದ ಎಲ್ಲೆನ್ ಫಾಕ್ಸ್‌ಮ್ಯಾನ್ ತಿಳಿಸಿದ್ದಾರೆ.

‘ದೇಹದಲ್ಲಿ ಯಾವುದಾದರೂ ಪ್ರತಿರೋಧಕ ಶಕ್ತಿ ಸಕ್ರಿಯವಾಗಿದ್ದರೆ, ಅದು ಕೊರೊನಾವೈರಾಣುವನ್ನು ತಡೆಯುತ್ತದೆಯೇ ಎಂಬುದನ್ನು ಪತ್ತೆ ಮಾಡುವುದು ಈ ಅಧ್ಯಯನದ ಪ್ರಧಾನ ಉದ್ದೇಶವಾಗಿತ್ತು. ಹೀಗಾಗಿ ಇಂತಹ ಪ್ರತಿರೋಧಕ ವ್ಯವಸ್ಥೆಯನ್ನು ಉದ್ದೀಪಿಸುವ ರೈನೊವೈರಸ್ ಅನ್ನು ಆಧರಿಸಿ ಅಧ್ಯಯನ ನಡೆಸಲು ನಿರ್ಧರಿಸಲಾಯಿತು’ ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

‘ಮಾನವನ ದೇಹದ ವಾಯುನಾಳದಲ್ಲಿನ ಅಂಗಾಂಶಗಳನ್ನು ಪ್ರಯೋಗಾಲಯದಲ್ಲಿ ಕೃತಕವಾಗಿ ಸೃಷ್ಟಿಸಲಾಯಿತು. ಈ ಅಂಗಾಂಶಗಳಿಗೆ ಕೊರೊನಾವೈರಾಣುವನ್ನು ಸೋಂಕಿಸಲಾಯಿತು. ಆರಂಭದ ದಿನಗಳಲ್ಲಿ ಪ್ರತಿ 6 ಗಂಟೆಗೊಮ್ಮೆ ಕೊರೊನಾವೈರಾಣುವಿನ ಸಂಖ್ಯೆ ದುಪ್ಪಟ್ಟಾಗುತ್ತಿತ್ತು. ಆದರೆ ರೈನೊವೈರಸ್ ಸೋಂಕಿಗೆ ಒಳಗಾಗಿದ್ದ ಅಂಗಾಂಶದಲ್ಲಿ ಕೊರೊನಾವೈರಾಣು ಪುನರುತ್ಪಾದನೆ ಸಂಪೂರ್ಣವಾಗಿ ಸ್ಥಗಿತವಾಯಿತು’ ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

‘ಸಾಮಾನ್ಯ ನೆಗಡಿಯು ದೇಹದಲ್ಲಿ ಪ್ರಚೋದಿಸುವ ಇಂಟರ್‌ಫೆರಾನ್ ಅನ್ನು ಕೃತಕವಾಗಿ ತೆಗೆದುಕೊಳ್ಳುವ ಮೂಲಕವೂ ಕೋವಿಡ್ ತಗುಲುವುದನ್ನು ತಡೆಯಬಹುದು. ಕೋವಿಡ್ ಸೋಂಕು ತಗುಲಿದ ಆರಂಭದ ದಿನದಲ್ಲೇ, ಸೋಂಕಿತರಲ್ಲಿ ಯಾವುದೇ ಲಕ್ಷಣಗಳು ಗೋಚರಿಸದೇ ಇರುವಾಗ ಇಂಟರ್‌ಫೆರಾನ್ ನೀಡಿದರೆ ಅದು ಪ್ರತಿಕಾಯವನ್ನು ಪ್ರಚೋದಿಸುತ್ತದೆ. ಆದರೆ ಸೋಂಕು ಉಲ್ಬಣಗೊಂಡ ನಂತರ ಇಂಟರ್‌ಫೆರಾನ್ ನೀಡಿದರೆ, ದೇಹದಲ್ಲಿ ಪ್ರತಿಕಾಯಗಳು ಅತಿಸಕ್ರಿಯವಾಗಿ ಹಲವು ಅಡ್ಡಪರಿಣಾಮಗಳನ್ನು ಉಂಟುಮಾಡುತ್ತವೆ. ಆದರೆ, ಕೋವಿಡ್‌ಗೆ ಒಳಗಾಗುವ ಸಾಧ್ಯತೆಗಳು ಹೆಚ್ಚು ಇರುವವರಿಗೆ ಈ ಚಿಕಿತ್ಸೆಯನ್ನು ಮುಂಜಾಗ್ರತಾ ಕ್ರಮವಾಗಿ ನೀಡಬಹುದು’ ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

ಕರ್ನಾಟಕ ಸರ್ಕಾರ

ಧಾರ್ಮಿಕದತ್ತಿ ಇಲಾಖೆ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,

ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ನಂಜನಗೂಡು–571301

ಸಂಖ್ಯೆ: ಎಸ್‌ಎಸ್‌ಟಿ/ಪಿಆರ್/ಮುಡಿ/01/04–05 ದಿನಾಂಕ: 16–06–2021

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ, ನಂಜನಗೂಡು ಶ್ರೀಶ್ರೀಕಂಠೇಶ್ವರ ಸ್ವಾಮಿ ದೇವಾಲಯ ಹರಕೆ ಮುಡಿ ತೆಗೆಯುವ ಸಂಬಂಧವಾಗಿ ಪ್ರಧಾನ ಹಿರಿಯ ನ್ಯಾಯಾಲಯ ಟಿ. ನರಸೀಪುರರವರು ಆರ್‌ಎ 24/2013 ಮತ್ತು ಆರ್‌ಎ26/2013 ರಲ್ಲಿ ದಿನಾಂಕ 03–06–2021 ರ ನ್ಯಾಯಾಲಯದ ಆದೇಶದ ಅನ್ವಯ ಹರಕೆ ಮುಡಿಯ ಹಕ್ಕು ದೇವಾಲಯದ ಪರವಾಗಿದ್ದು, ಮುಡಿ ತೆಗೆಯುವ ಸಲುವಾಗಿ ನಂಜನಗೂಡಿನ ಸ್ಥಳವಂದಿಗರಾದ (ಟೌನ್) ಎಲ್ಲಾ ನಯನಜ ಕ್ಷತ್ರಿಯ ಜನಾಂಗದವರು ಭಾಗವಹಿಸಬಹುದಾಗಿರುತ್ತದೆ. ಆದ್ದರಿಂದ ನಂಜನಗೂಡು ನಯನಜ ಕ್ಷತ್ರಿಯ ಸಂಘ ಮತ್ತು ಜನಾಂಗದವರು ಮಾತ್ರ ತಮ್ಮ ಹೆಸರನ್ನು ಕಾರ್ಯನಿರ್ವಾಹಕ ಅಧಿಕಾರಿ ಶ್ರೀಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ನಂಜನಗೂಡು ರವರ ಕಛೇರಿಯಲ್ಲಿ ದಿನಾಂಕ 25–06–2021 ರೊಳಗೆ ನುರಿತ ಅರ್ಹ ನಯನಜ ಕ್ಷತ್ರಿಯ ಜನಾಂಗದವರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕೆಂದು, ಇಲ್ಲವಾದಲ್ಲಿ ನ್ಯಾಯಾಲಯ ಆದೇಶದ ಅನ್ವಯ ಮುಂದಿನ ಕ್ರಮವನ್ನು ಶ್ರೀಯವರ ದೇವಾಲಯದವರು ಜರುಗಿಸುವರೆಂತಲೂ ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಪ್ರಕಟಿಸಲಾಗಿದೆ. ಅರ್ಹ ನಯನಜ ಕ್ಷತ್ರಿಯರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಅಗತ್ಯವಾದ ಮಾಹಿತಿಗಳನ್ನು ಮತ್ತು ವಿವರವನ್ನು ಕಛೇರಿ ಸಮಯದಲ್ಲಿ ಪಡೆದುಕೊಂಡು ನೊಂದಾಯಿಸಲು ಕೋರಿದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ

ಶ್ರೀಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ನಂಜನಗೂಡು

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಹಿರೇಮಗಳೂರು ವಸತಿ ಬಡಾವಣೆ, ಒಂದನೇ ಹಂತ, ಹಿರೇಮಗಳೂರು–ಕಡೂರು ಬೈಪಾಸ್ ರಸ್ತೆ, ಕಲ್ಯಾಣ ನಗರ, ಚಿಕ್ಕಮಗಳೂರು – 577102. ದೂ. ಕಛೇರಿ : 08262 –295712,

ವೆಬ್‌ಸೈಟ್: www.chikmagalur.uda.gov.in ಇ ಮೇಲ್: cmr_cudackm@yahoo.in

ಕ್ರ.ಸಂ. ನಅಪ್ರಾಚಿ: ಹಿ.ಹೆ.ವ.ಬ: ಮೂಲೆ/ಮಧ್ಯಂತರ ನಿವೇಶನ: ಇ–ಹರಾಜು/ ಪ್ರಕಟಣೆ: 01: 2021–22 ದಿನಾಂಕ: 16.06.2021

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಹಿರೇಮಗಳೂರು (Hiremagalur Additional Residential Layout) ಹೆಚ್ಚುವರಿ ವಸತಿ ಬಡಾವಣೆಯಲ್ಲಿ ಮೂಲೆ/ಮಧ್ಯಂತರ ನಿವೇಶನಗಳ ಇ–ಹರಾಜು ಪ್ರಕಟಣೆ

ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ : 18.06.2021 ಭಾರತೀಯ ಕಾಲಮಾನ 10:00 ಗಂಟೆಯ ನಂತರ ಇ–ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 02.07.2021 ಭಾರತೀಯ ಕಾಲಮಾನ 17:30 ಗಂಟೆವರೆಗೆ.	ಕ್ರಮ ಸಂಖ್ಯೆ : 01 ರಿಂದ 13 ರ ವರೆಗಿನ ನಿವೇಶನಗಳ ಇ–ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ: 03.07.2021 ಭಾರತೀಯ ಕಾಲಮಾನ 17:30 ಗಂಟೆಗೆ (ಸಂಜೆ 5:30 ಗಂಟೆಗೆ) (ಡೆಲ್ಟಾ ಟೈಮ್ 5 ನಿಮಿಷ ಇರುತ್ತದೆ).

ಇ–ಹರಾಜಿನಲ್ಲಿ ಭಾಗವಹಿಸಲು ಪಾವತಿ ಮಾಡಬೇಕಾದ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ. 25,000/– ಹಾಗೂ ಕನಿಷ್ಠ ಬಿಡ್ ಬದಲಾವಣೆ ಮೊತ್ತ ನಿವೇಶನಗಳಿಗೆ ರೂ. 10,000/– ಗಳು.

ಇ–ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ ವಿವರಕ್ಕೆ ಸಂಪರ್ಕಿಸಬೇಕಾದ ಅಂತರ್ಜಾಲ https://www.eproc.karnataka.gov.in

ಸಹಾಯಕ ದೂರವಾಣಿ ಸಂಖ್ಯೆ 08262–295712, 9742918536, 9448228974, 6361642818

ಶ್ರೀ ಬಿ.ಸಿ. ಬಸವರಾಜು KMAS, ಆಯುಕ್ತರು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು

ಶ್ರೀ ಸಿ. ಆನಂದ್, ಅಧ್ಯಕ್ಷರು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು

ಸಹಾಯಕ ಕಾರ್ಯಪಾಲಕ ಇಂಜಿನೀಯರರು

ಲೋಕೋಪಯೋಗಿ ಇಲಾಖೆ

ನಂ. 1 ದಕ್ಷಿಣ ಉಪ ವಿಭಾಗ, ಬೆಂಗಳೂರು 5ನೇ ಮಹಡಿ, ಅನೆಕ್ಸ್ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560 001. ದೂರವಾಣಿ: 080–22113879

ಸಂಖ್ಯೆ: 01/2021–22 ದಿನಾಂಕ: 14.06.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಇಲಾಖೆಯು ಬೆಂಗಳೂರು ಪೂರ್ವ ತಾಲ್ಲೂಕು, ಪ್ಯಾಕೇಜ್‌ನಲ್ಲಿ ಸೂಚಿಸಿರುವ ಸ್ಥಳಗಳಲ್ಲಿ ರಸ್ತೆ ವಾರ್ಷಿಕ ನಿರ್ವಹಣೆ ಕಾಮಗಾರಿ ಸೇರಿದಂತೆ ಒಟ್ಟು 5 ಕಾಮಗಾರಿಗಳಿಗೆ ಅರ್ಹ 4ನೇ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್‌ಗಿಟ್ಟ ಅಂದಾಜು ಮೊತ್ತ **ಕನಿಷ್ಠ ರೂ.: 3.25 ಲಕ್ಷ, ಗರಿಷ್ಠ ರೂ.: 4.75 ಲಕ್ಷ,** ಟೆಂಡರ್ ಫಾರಂ **ಬೆಲೆ ರೂ.: 600/–** ಎಲ್ಲಾ ತೆರಿಗೆ ಒಳಗೊಂಡಂತೆ, ಕಾಮಗಾರಿ ನಿರ್ವಹಣೆಯ ಕಾಲಾವಧಿ (ಮಳೆಗಾಲ ಸೇರಿ) : **26.02.2022 ರವರೆಗೆ.** ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ: 22.06.2021ರ 5:00 ಗಂಟೆಯವರೆಗೆ.** ಖಾಲಿ ಟೆಂಡರ್ ಫಾರಂಗಳನ್ನು ನೀಡಲು ಕೊನೆಯ **ದಿನಾಂಕ: 25.06.2021ರ 5:30 ಗಂಟೆಯವರೆಗೆ.** ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ: 28.06.2021ರ 4:00 ಗಂಟೆಯವರೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 28.06.2021 ರಂದು ಸಂಜೆ: 4:30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ವಾಸಾಸಂಇ/ಬೆಂ.ನ/ಜಿಎ/556/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ

(ಸ್ವಾಯತ್ತ ಸಂಸ್ಥೆ)

ಡಾ॥ ಬಿ.ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ–590 001, (ಆಸ್ಪತ್ರೆ) ದೂರವಾಣಿ ಸಂಖ್ಯೆ: 0831–2420320, ಫ್ಯಾಕ್ಸ್ ಸಂ: 0831–2420173 (ಕಾಲೇಜ) ದೂರವಾಣಿ ಸಂಖ್ಯೆ: 0831–2421464 ಫ್ಯಾಕ್ಸ್ ಸಂ: 0831–2403126

ವೆಬ್‌ಸೈಟ್: www.bimsbelgaum.org ಇ–ಮೇಲ್ : belgaum.bims@gmail.com

ಸಂ: ಬಿಮ್ಸ್/ಟೆಂಡರ್/ಅಸಿಸ್ಟೆಂಟ್ ಸರ್ವೀಸ್/ಸಿಆರ್/–05/2021–22 ದಿನಾಂಕ: 16–06–2021

SHORT TERM TENDER NOTIFICATION

(ಅಲ್ಪಾವಧಿ ಟೆಂಡರ್) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ಮುಖ್ಯ ಆಡಳಿತಾಧಿಕಾರಿಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿ ಇಲ್ಲಿಗೆ ನೋಂದಾಯಿತ ಮಾನವ ಸಂಪನ್ಮೂಲ ಗುತ್ತಗೆದಾರರಿಂದ ಹೊರಗುತ್ತಿಗೆ ಒಪ್ಪಂದದ ಮೇರೆಗೆ ಈ ಕೆಳಗೆ ನಮೂದಿಸಿದ ಸಿಬ್ಬಂದಿಯವರನ್ನು ಒದಗಿಸಲು 11 ತಿಂಗಳ ಅವಧಿಗೆ ಪೂರೈಸಲು ಈ ಕೆಳ ಕಾಣಿಸಿದಂತೆ ಕೆ.ಟಿ.ಪಿ.ಪಿ. ನಿಯಮಾವಳಿ 1999 & 2000 ಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಮೂಲಕ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

Sl. No.	TENDER NOTIFICATION	Description of Tender	Tender Value (Approximate) (Rs. In Lakhs)	Downloading of Tender Document
1	No: BIMS/Tender/ Assistant Service/CR-05/2021-22	Assistant Services (48 Posts)	Rs: 82.00 Lakhs	17-06-2021

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://www.e-proc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–

ಮುಖ್ಯ ಆಡಳಿತಾಧಿಕಾರಿಗಳು

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ

DIPO/RO No. 203/2021-22

ಮಹಾನಗರ ಪಾಲಿಕೆ, ಕಲಬುರಗಿ

ದೂರವಣಿ : 08472/ 278675, ಫ್ಯಾಕ್ಸ : 08472/ 260776

ಇ ಮೇಲ್ : itstaff_ulb_gulbarga@yahoo.com

No: KMP/EE/ELE/CCMS/139/2020-21 DATE: 14.06.2021

3ನೇ ತಿದ್ದುಪಡಿ ಅಧಿಸೂಚನೆ (ಕೋರಿಜೆಂಡಮ್)

ಈ ಕಛೇರಿ ಪತ್ರ ಸಂಖ್ಯೆ: KMP/EE/ELE/CCMS/139/2020-21/16 Dated: 01.04.2021 ಮತ್ತು ಕೋರಿಜೆಂಡಮ್ ಪತ್ರ ಸಂಖ್ಯೆ: KMP/EE/ELE/CCMS/139/2020-21 Dated:11.05.2021 ರನ್ವಯ ಕಲಬುರಗಿ ಮಹಾನಗರ ಪಾಲಿಕೆಯ SFC Special Fund ಯೋಜನೆಯಲ್ಲಿ ಮಂಜೂರಾದ ಕಾಮಗಾರಿಯಾದ Selection of concessionaire for implementation and maintenance of LED street lights/ lighting system and Centralized Control & Monitoring System through Public Private Partnership (PPP) in Kalaburagi City Corporation, Kalaburagi ಇಂಡೆಂಟ್ ನಂ: KMP/EE/ELE/CCMS/139/2020-21 ಟೆಂಡರ್ ಪ್ರಕಟಣೆ ಕೋರಿಜೆಂಡಮ್ ಪ್ರಕಟಿಸಲು ದಿನಾಂಕ: 11.05.2021 ರಂದು ನೀಡಲಾಗಿತ್ತು. ಆದರೆ ಕೋವಿಡ್–19 ಲಾಕಡೌನ್ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್‌ನ ದಿನಾಂಕಗಳನ್ನು ಮತ್ತೆ ಮೂಂದುಡಿಸಿ ಹೊಸ ದಿನಾಂಕಗಳನ್ನು ಪ್ರಕಟಿಸಲು ಸೂಚಿಸಲಾಗಿದೆ. ಅದರಂತೆ ಹೊಸ ದಿನಾಂಕಗಳು ಕೆಳಗಿನಂತಿವೆ.

ಕ್ರ. ಸಂ.	ಮೊದಲು ಪ್ರಕಟಿಸಲಾದ ದಿನಾಂಕ	ತಿದ್ದುಪಡಿ (ಬದಲಾದ) ದಿನಾಂಕ
1	ಟೆಂಡರಗಾಗಿ ಸಲ್ಲಿಸಲು ಅಂತಿಮ ದಿನಾಂಕ: 15.06.2021 ಸಾಯಂಕಾಲ 5:00 ಗಂಟೆಯವರೆಗೆ	ಟೆಂಡರಗಾಗಿ ಸಲ್ಲಿಸಲು ಅಂತಿಮ ದಿನಾಂಕ: 22.06.2021 ಸಾಯಂಕಾಲ 5:00 ಗಂಟೆಯವರೆಗೆ
2	ತಾಂತ್ರಿಕ ಟೆಂಡರ ತೆರೆಯುವ ದಿನಾಂಕ: 17.06.2021 ಸಾಯಂಕಾಲ 4:30 ಗಂಟೆಗೆ	ತಾಂತ್ರಿಕ ಟೆಂಡರ ತೆರೆಯುವ ದಿನಾಂಕ: 24.06.2021 ಸಾಯಂಕಾಲ 4:30 ಗಂಟೆಗೆ
3	ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 23.06.2021 ಬೆಳಗ್ಗೆ 11:00 ಗಂಟೆಗೆ	ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 02.07.2021 ಬೆಳಗ್ಗೆ 11:00 ಗಂಟೆಗೆ

ಸಹಿ/– ಆಯುಕ್ತರು

ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/295/ಎಂ.ಸಿ.&ಎ/2021–22

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ2:ಇ.ಟೆಂಡರ್:07:2021–22 ದಿ.11.06.2021

ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2020–21 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ) – 02 ಕಾಮಗಾರಿ, 2020–21 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ– 19 ಕಾಮಗಾರಿ, 2021–22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ –01 ಕಾಮಗಾರಿ, 2020–21 ನೇ ಸಾಲಿನ 15 ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ (2ನೇ ಕರೆ) – 03 ಕಾಮಗಾರಿ, 2017–18 ನೇ ಸಾಲಿನ 14 ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ (ಉಳಿಕೆ) –01 ಕಾಮಗಾರಿ, 2019–20 ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ – 01 ಕಾಮಗಾರಿ, 2019–20 ನೇ ಸಾಲಿನ 14 ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್–01 ಕಾಮಗಾರಿ ಒಟ್ಟು 28 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಇ–ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8022631200 +91–8068948777 ರಿಂದ ಮಾಹಿತಿ ಪಡೆಯಬಹುದು.

(1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ: 30–06–2021 ಸಮಯ : 16.30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ & ವೇಳೆ: 30–06–2021 ಸಮಯ : 17.00 (3)ಟೆಂಡರ್ ತೆರೆಯುವ ದಿನಾಂಕ & ವೇಳೆ : 02–07–2021 ಸಮಯ : 11.00

ಸಹಿ/– ಆಯುಕ್ತರು,

ಮಹಾನಗರ ಪಾಲಿಕೆ, ದಾವಣಗೆರೆ

ವಾಸಾಇ/ದಾವಣಗೆರೆ/146/ ಎಂಸಿಎ/2021–22



ಸುಭಾಷಿತ

ಇತರರಲ್ಲಿ ಇರುವ ಸದ್ಗುಣಗಳ ಬಗ್ಗೆ ಅಸೂಯೆ ಪಡಬೇಡಿ. ಅವುಗಳನ್ನು ಮೆಚ್ಚಿಕೊಂಡು ನೀವೂ ಅಳವಡಿಸಿಕೊಳ್ಳಿ.

–ಗೌತಮ ಬುದ್ಧ

ಸಹಾಯಧನ: ಸಾಲದ ಕಂತಿಗೆ ಹೊಂದಾಣಿಕೆ ಮಾನವೀಯತೆ ಮರೆತ ನಡೆ ಅಕ್ಷಮ್ಯ

ಕೋವಿಡ್ ಎರಡನೆಯ ಅಲೆ ಅಮಾನವೀಯ ಮುಖಗಳನ್ನು ಸಾಲು ಸಾಲಾಗಿ ದರ್ಶನ ಮಾಡಿಸುತ್ತಿದೆ. ಬೀದಿ ಬದಿ ವ್ಯಾಪಾರಿಗಳ ವಿಷಯದಲ್ಲಿ ಕೆಲವು ಬ್ಯಾಂಕ್‌ಗಳು ನಡೆದುಕೊಂಡ ರೀತಿಯೂ ಅಂಥವು- ಗಳಲ್ಲೊಂದು. ತೀವ್ರ ಸಂಕಷ್ಟದಲ್ಲಿರುವ ಈ ಸಮುದಾಯಕ್ಕೆ ರಾಜ್ಯ ಸರ್ಕಾರವು ತಲಾ ಎರಡು ಸಾವಿರ ರೂಪಾಯಿ ಧನಸಹಾಯ ನೀಡಿದೆ. ಆದರೆ, ಆ ಹಣವನ್ನು ಕೆಲವು ಬ್ಯಾಂಕ್‌ಗಳು ಫಲಾನುಭವಿಗಳಿಗೆ ನೀಡದೆ, ಅವರು ಈ ಹಿಂದೆ ಪ್ರಧಾನಮಂತ್ರಿ ಬೀದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ (ಪಿಎಂ ಸ್ವನಿಧಿ) ಯೋಜನೆ ಅಡಿಯಲ್ಲಿ ಪಡೆದಿದ್ದ ಸಾಲದ ಕಂತುಗಳಿಗೆ ಹೊಂದಾಣಿಕೆ ಮಾಡಿಕೊಂಡಿವೆ. ಲಾಕ್‌ಡೌನ್ ಅವಧಿಯಲ್ಲಿ ಜೀವನೋಪಾಯದ ಎಲ್ಲ ಮಾರ್ಗಗಳೂ ಬಂದ್ ಆಗಿ, ಯಾವುದೇ ಆದಾಯವಿಲ್ಲದೆ ನಲುಗಿರುವ ಕುಟುಂಬಗಳಿಗೆ ತುರ್ತು ನೆರವಿನ ರೂಪದಲ್ಲಿ ಸರ್ಕಾರ ನೀಡಿದ ಹಣ ಅದು. ಒಂದಿನಿತೂ ವಿಳಂಬವಿಲ್ಲದೆ ಫಲಾನುಭವಿಗಳಿಗೆ ಆ ನೆರವು ದೊರೆತು, ಅವರ ಸಂಕಷ್ಟ ಸ್ವಲ್ಪಮಟ್ಟಿಗಾದರೂ ಕಡಿಮೆ ಆಗಬೇಕು ಎನ್ನುವುದು ಈ ಆರ್ಥಿಕ ಪ್ಯಾಕೇಜ್ ಘೋಷಣೆಯ ಹಿಂದಿರುವ ಉದ್ದೇಶ. ಆದರೆ, ಅಂತಹ ನೆರವಿನ ಮೊತ್ತವನ್ನೇ ಸಾಲದ ಕಂತುಗಳಿಗಾಗಿ ಬ್ಯಾಂಕ್‌ಗಳು ಕಡಿತ ಮಾಡಿಕೊಂಡಿರುವುದು ಕ್ರೌರ್ಯವಲ್ಲದೆ ಮತ್ತೇನೂ ಅಲ್ಲ. ಸಾಂಕ್ರಾಮಿಕದಿಂದ ಬದುಕೇ ಮುರಿದು ಬಿದ್ದಿರುವಾಗ 'ನಿಮ್ಮ ಪಡಿಪಾಟಲು ನಿಮಗೆ, ನಮ್ಮ ಸಾಲ ಮೊದಲು ತೀರಿಸಿ' ಎನ್ನುವಂತಹ ಮನೋಭಾವ ತೋರಿರುವುದು ಅಕ್ಷಮ್ಯ. ಮೊದಲು ಈ ಬಡ ವ್ಯಾಪಾರಿಗಳ ಬದುಕು ಹಳಿಯ ಮೇಲೆ ಬಂದು ನಿಲ್ಲಲಿ, ನಂತರ ಸಾಲದ ಬಾಬತ್ತನ್ನು ತುಂಬುವಂತೆ ಬ್ಯಾಂಕ್‌ಗಳು ಕೇಳಲಿ. ಆಗ ಯಾರೂ ಅದನ್ನು ಆಕ್ಷೇಪಿಸುವುದಿಲ್ಲ. 'ಕೋಟ್ಯಂತರ ರೂಪಾಯಿ ಸಾಲ ಪಡೆದು ಸಕಾಲಕ್ಕೆ ಮರುಪಾವತಿ ಮಾಡದ ಕೆಲವರ ವಿಚಾರದಲ್ಲಿ ಔದಾರ್ಯ ತೋರುವ ಬ್ಯಾಂಕ್‌ಗಳು ಬಡಪಾಯಿಗಳ ಮೇಲೆ ಮುಗಿಬೀಳುತ್ತವೆ' ಎನ್ನುವ ಮಾತು ಜನಜನಿತ. ಬೀದಿ ಬದಿ ವ್ಯಾಪಾರಿಗಳ ವಿಚಾರದಲ್ಲಿ ಈಗ ಅವುಗಳು ನಡೆದುಕೊಂಡ ರೀತಿಯನ್ನು ನೋಡಿದರೆ ಆ ಮಾತಿನಲ್ಲಿ ಸತ್ಯಾಂಶವಿದೆ ಎಂದೇ ಹೇಳಬೇಕಾಗುತ್ತದೆ.



ಸರ್ಕಾರದ ಸ್ಪಷ್ಟ ಸೂಚನೆ ಹೊರತಾಗಿಯೂ ಕೆಲವು ಬ್ಯಾಂಕ್‌ಗಳು ಸಹಾಯ ಧನದಲ್ಲಿ ಸಾಲದ ಕಂತು ಮುರಿದುಕೊಂಡಿರುವುದು ಖಂಡನೀಯ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಆರ್ಥಿಕ ಪ್ಯಾಕೇಜ್ ಘೋಷಣೆ ಮಾಡುವಾಗ, 'ಸಹಾಯಧನವನ್ನು ಯಾವುದೇ ಸಾಲಕ್ಕೆ ಹೊಂದಾಣಿಕೆ ಮಾಡದಂತೆ ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗಿದೆ' ಎಂದು ಹೇಳಿದ್ದರು. ಬ್ಯಾಂಕ್‌ಗಳ ವ್ಯವಹಾರದ ಬುದ್ಧಿಯನ್ನು ಮುಂಚಿತವಾಗಿಯೇ ಗ್ರಹಿಸಿದ್ದ ಬೀದಿ ಬದಿ ವ್ಯಾಪಾರಿಗಳ ಸಂಘ ಸಹ 'ಸಹಾಯಧನದ ಹಣವನ್ನು ಸಾಲದ ಕಂತಿಗೆ ಹೊಂದಾಣಿಕೆ ಮಾಡದಂತೆ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿತ್ತು. ಸರ್ಕಾರದ ಸ್ಪಷ್ಟ ಸೂಚನೆ ಹೊರತಾಗಿಯೂ ಕೆಲವು ಬ್ಯಾಂಕ್‌ಗಳು ಸಹಾಯಧನದಲ್ಲಿ ಸಾಲದ ಕಂತು ಮುರಿದುಕೊಂಡಿರುವುದು ಖಂಡನೀಯ. ಈ ರೀತಿ ಕ್ರೌರ್ಯ ಮೆರೆದ ಬ್ಯಾಂಕ್‌ಗಳ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು. ಸಾಲದ ಕಂತುಗಳಿಗೆ ಹೊಂದಾಣಿಕೆ ಮಾಡಿಕೊಂಡ ಕ್ರಮವನ್ನು ರದ್ದುಪಡಿಸಿ, ಆ ಹಣ ತಕ್ಷಣ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ಬ್ಯಾಂಕ್‌ಗಳಿಗೆ ಸೂಚನೆಯನ್ನು ನೀಡಬೇಕು. ಅವುಗಳು ಹಾಗೆ ನಡೆದುಕೊಂಡಿವೆ ಎಂಬುದನ್ನೂ ಖಾತರಿ ಮಾಡಿಕೊಳ್ಳಬೇಕು. ನಗರ ಪ್ರದೇಶದ ಬಡ ಕುಟುಂಬಗಳ ಕ್ಷೇಮಾಭಿವೃದ್ಧಿ ನೋಡಿಕೊಳ್ಳಬೇಕಿರುವ 'ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ'ದ ಅಧಿಕಾರಿಗಳು, ಯಾವೊಬ್ಬ ಫಲಾನುಭವಿಯೂ ನೆರವಿನಿಂದ ವಂಚಿತನಾಗದಂತೆ ನಿಗಾ ವಹಿಸಬೇಕು. ಕೋವಿಡ್‌ನಿಂದ ಬದುಕೇ ಮೂರಾಬಟ್ಟೆ ಆಗಿರುವಾಗ ಸಾಲ ಮರುಪಾವತಿಸುವಂತೆ ಬಡ ವ್ಯಾಪಾರಿಗಳ ಮೇಲೆ ಒತ್ತಡ ಹಾಕುವ ಸಮಯ ಇದಲ್ಲ. 'ಸಾಧ್ಯವಾದರೆ ನೀವೂ ನೆರವು ನೀಡಿ, ಇಲ್ಲದಿದ್ದರೆ ನಮ್ಮ ನೆರವನ್ನು ತೆಪ್ಪಗೆ ಫಲಾನುಭವಿಗಳಿಗೆ ಮುಟ್ಟಿಸಿ' ಎಂಬ ಕಠಿಣ ಸಂದೇಶವು ಬ್ಯಾಂಕ್‌ಗಳ ಮುಖ್ಯಸ್ಥರ ಕಿವಿಗೆ ಅಪ್ಪಳಿಸುವಂತೆ ರಾಜ್ಯ ಸರ್ಕಾರದ ಕ್ರಮಗಳು ಇರಬೇಕು.

ದಿನದ ಟ್ವೀಟ್

ಇದೆಂತಹ ನಡವಳಿಕೆ?



ಕಳೆದ 24 ಗಂಟೆಗಳಲ್ಲಿ ದೆಹಲಿಯಲ್ಲಿ ದಾಖಲಾದ ಕೋವಿಡ್ ಪ್ರಕರಣಗಳ ಸಂಖ್ಯೆ- 131. ಕಳೆದ ವಾರಾಂತ್ಯದಲ್ಲಿ ದೆಹಲಿಯ ಪ್ರಮುಖ ಮಾಲ್ ಒಂದು ಪುನರಾರಂಭಗೊಂಡ ಕೂಡಲೇ ದಾಖಲೆ ಪ್ರಮಾಣದ 19,000 ಜನ ಅಲ್ಲಿಗೆ ಭೇಟಿ ನೀಡಿದ್ದರು. ನಮಗೆ ತಲೆ ಕೆಟ್ಟಿದೆಯೇ? ಕೋವಿಡ್– 19 ಪುನಃ ಭುಗಿಲೇಳಲು ಅವಕಾಶ ಮಾಡಿಕೊಟ್ಟು, ಆನಂತರ ಸರ್ಕಾರ, ಆಸ್ಪತ್ರೆಗಳು ಮತ್ತು ದೇಶವನ್ನು ದೂಷಿಸುವುದು.
ಅದು ಎಂದಿಗೂ ನಮ್ಮ ತಪ್ಪಾಗಲು ಸಾಧ್ಯವಿಲ್ಲ.
#coronavirus

ಡಾ. ಅಂಬರೀಷ್ ಮಿತ್ತಲ್, ವೈದ್ಯ

25 ವರ್ಷಗಳ ಹಿಂದೆ

ಸೋಮವಾರ, 17-6-1996

• ಬಂಗಾರಪ್ಪ, ಹೆಗಡೆಗೆ ಕಾಂಗ್ರೆಸ್ ಆಹ್ವಾನ

ನವದೆಹಲಿ, ಜೂನ್ 16– ಜನತಾ ದಳದಿಂದ ಉಚ್ಚಾಟಿತರಾಗಿರುವ ರಾಜ್ಯಸಭೆ ಸದಸ್ಯ ಮತ್ತು ಕರ್ನಾಟಕದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮತ್ತು ಕರ್ನಾಟಕ ಕಾಂಗ್ರೆಸ್ ಪಕ್ಷದ ನಾಯಕ ಎಸ್. ಬಂಗಾರಪ್ಪ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಮತ್ತೆ ಸೆಳೆದುಕೊಳ್ಳುವ ಒಲವನ್ನು ಅನೇಕ ಹಿರಿಯ ಕಾಂಗ್ರೆಸ್ ನಾಯಕರು ವ್ಯಕ್ತಪಡಿಸಿದ್ದಾರೆ.

ನಿನ್ನೆ ಮುಕ್ತಾಯಗೊಂಡ ಮೂರು ದಿನಗಳ ಕಾಂಗ್ರೆಸ್ ಕಾರ್ಯಕಾರಿ ಸಭೆಯಲ್ಲಿ, ಈಗ ದಳದಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಲಾಭ ಪಡೆಯುವ ಬಗೆಗೆ ಶರದ್ ಪವಾರ್, ಕೆ. ಕರುಣಾಕರನ್, ರಾಜೇಶ್ ಪೈಲಟ್ ಮುಂತಾದವರು ಈ ಅಭಿಪ್ರಾಯ ವ್ಯಕ್ತಪಡಿಸಿದರೆಂದು ಪಕ್ಷದ ವಿಶ್ವಸನೀಯ ಮೂಲಗಳು ಹೇಳಿವೆ.

• ಕವಿತೆಗಿಂತ ಸುಂದರ ದೊಡ್ಡವರ ಬದುಕು– ಕೆಎಸ್‌ನ

ಬೆಂಗಳೂರು, ಜೂನ್ 16– 'ಮಾಸ್ತಿ ನನಗೆ ಕೆಲಸ ಕೊಡಿಸಿದ್ರು, ಬದುಕು ನಿಲ್ಲಿಸಿದ್ರು, ಅಂತಿಮವಾಗಿ ಪ್ರಶಸ್ತಿನೂ ಕೊಡಿಸಿದ್ರು...'

ಎಂಬತ್ತೊಂದರ ವಯಸ್ಸಿನಲ್ಲಿ ಅನಾರೋಗ್ಯದ ಕಾರಣದಿಂದ ನರಳುತ್ತಾ, ಉಸಿರಾಡಲು ಕಷ್ಟಪಡುತ್ತ, ಏದುಬ್ಬಸ ಪಡುತ್ತಾ, ಇಂದಿನ ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಕೆ.ಎಸ್. ನರಸಿಂಹಸ್ವಾಮಿ ಅವರು ಮಾಸ್ತಿಯವರನ್ನು ಕೃತಜ್ಞತೆಯಿಂದ ನೆನಪಿಸಿಕೊಂಡ ರೀತಿ ಇದು.

ಡಾ. ಮಾಸ್ತಿ ಪ್ರಶಸ್ತಿ ಸ್ವೀಕರಿಸಿ, ತಮ್ಮದೇ ಆದ 'ಪದ್ಯ'ದ ಶೈಲಿಯಲ್ಲಿ ಮಾತನಾಡಿದ ಕೆಎಸ್‌ನ, '1936ರಲ್ಲಿ ನಾನು ಮದುವೆಯಾದೆ. ಆ ಸಂದರ್ಭದಲ್ಲಿ ಮಾಸ್ತಿ ಅವರು ಮೈಸೂರು ಪ್ರೆಸಿಡೆನ್ಸಿಯ ಅಧಿಕಾರಿಯಾಗಿದ್ದಾಗ ನಗರಸಭೆಯಲ್ಲಿ ಗುಮಾಸ್ತನ ಕೆಲಸ ಕೇಳಲು ಹೋದೆ. ಅವರು ನನ್ನ ಪದ್ಯ ಓದಿರುವುದಾಗಿ ಹೇಳಿದರು. ನನ್ನ ಇತ್ತೀಚಿನ ಪದ್ಯ ಓದಿದ್ದೀರಾ ಎಂದು ನಾನು ಕೇಳಿದೆ. 'ಇದು ಕಚೇರಿ ನೆನಪಿರಲಿ' ಎಂದು ಅವರು ಗದರಿದರು.

'ಆದರೆ, ನನಗೆ ಕೆಲಸ ಸಿಕ್ಕಿತು. ಮತ್ತೆ ನಗರಸಭೆಯಿಂದ ನನ್ನನ್ನು ಕಂದಾಯ ಇಲಾಖೆಗೆ ವರ್ಗಾಯಿಸುವ ಸಂದರ್ಭದಲ್ಲಿ ತೊಂದರೆಗೆ ಸಿಲುಕಿದ್ದ ನನ್ನನ್ನು ಆಗ ಅಬ್ಕಾರಿ ಆಯುಕ್ತರಾಗಿದ್ದ ಮಾಸ್ತಿ ಅವರು ಕಂದಾಯ ಆಯುಕ್ತರಿಗೆ ಫೋನು ಮಾಡಿ ಉಳಿಸಿದರು' ಎಂದು ಕೆಎಸ್‌ನ ನೆನಪಿನಂಗಳಕ್ಕೆ ಇಳಿದರು.

50 ವರ್ಷಗಳ ಹಿಂದೆ

ಗುರುವಾರ, 17-6-1971

• ಐಎಎಸ್‌ಗೆ ಅಡ್ಡಿಯಾದ ವಿವಾಹ ಬಂಧ

ನವದೆಹಲಿ, ಜೂನ್ 16– ಆಡಳಿತ ಕಾಂಗ್ರೆಸ್ ಸದಸ್ಯೆ ಶ್ರೀಮತಿ ಲಕ್ಷ್ಮೀಕಾಂತಮ್ಮ ಅವರ ಐಎಎಸ್ ಅಧಿಕಾರಿ ಆಗುವ ಆಸೆ, ಆಕಾಂಕ್ಷೆ ಈಡೇರದೇ ಹೋಯಿತು. ಕಾರಣ ಅವರು ವಿವಾಹಿತರು.

ಐಎಎಸ್ ಮತ್ತು ಐಎಫ್‌ಎಸ್ ಪರೀಕ್ಷೆಗಳಿಗೆ ಮಹಿಳೆಯರು ಕೂಡುವುದರ ವಿರುದ್ಧ ಇಂತಹ ನಿಷೇಧಗಳನ್ನು ಹೇರಿರುವುದಕ್ಕಾಗಿ ಅವರು ಇಂದು ಲೋಕಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ತಾವು ವಿವಾಹ ಬಂಧನಕ್ಕೊಳಗಾದ ಕಾರಣ, ಪದವಿ ಪಡೆದ ಕೂಡಲೇ ಐಎಎಸ್ ಪರೀಕ್ಷೆಗೆ ಕೂಡಲಾಗಲಿಲ್ಲ ಎಂದವರು ತಿಳಿಸಿದರು.

'ಐಎಎಸ್‌ಗೆ ಆದ ನಷ್ಟ ಲೋಕಸಭೆಗೆ ವರವಾಗಿ ಪರಿಣಮಿಸಿದೆ' ಎಂದು ಗೃಹಖಾತೆ ರಾಜ್ಯ ಸಚಿವ ರಾಂನಿವಾಸ ಮಿರ್ಧಾ ನುಡಿದರು.

ಸ್ಪೀಕರ್ ಧಿಲ್ಲೋನ್ 'ನೀವು ಇನ್ನೂ ಕೆಲವು ಕಾಲ ಕಾಯಬೇಕಾಗಿತ್ತು' ಎಂದು ನಗೆಯಾಡಿದರು.

ವ್ಯಕ್ತಿ ಘನತೆ, ವೃತ್ತಿ ಘನತೆ, ಸಾಮಾಜಿಕ ಘನತೆ ಅರಿತವರಿಂದಷ್ಟೇ ಸಾರ್ವಜನಿಕ ಜೀವನ ಹಸನಾಗಬಹುದು

ಅಡುಗೆ, ಅಧಿಕಾರ, ಅಹಂಕಾರ



ವಿಶ್ಲೇಷಣೆ

ಡಾ. ಗೀತಾ ವಸಂತ

ಉಂಡು ತೃಪ್ತರಾದವರ ಮುಖಗಳ ಹೊಳಪಲ್ಲಿ ಅಮ್ಮಂದಿರು ಮೀಯುವುದ ಕಂಡಾಗ, ಅಡುಗೆ ಮಾಡುವುದು ದಿವ್ಯ ಆನಂದ ಎಂದುಕೊಂಡಿದ್ದೆವು. ಅಜ್ಜಿ, ಮುತ್ತಜ್ಜಿಯರು ಅಡುಗೆಯನ್ನು ಒಂದು ತಪದಂತೆ ಆಚರಿಸಿ ಹಸಿವು ನೀಗಿಸುತ್ತಿದ್ದರು. ನಿಧಾನ ನಾರು ಬಿಡಿಸಿ, ಸೋಸಿ, ಸಣ್ಣಗೆ ಹೆಚ್ಚಿ, ಹುರಿದು, ಕರಿದು ಅಡುಗೆಯಲ್ಲಿ ತಮ್ಮ ನೈಪುಣ್ಯವನ್ನು ಒರೆಗೆ ಹಚ್ಚುತ್ತಿದ್ದರು. ಒರಳು ಕಲ್ಲಿನ ಮುಂದೆ ನಿಮೀಲಿತ ನೇತ್ರಗಳಲ್ಲಿ ಧ್ಯಾನದಂತೆ ಅರೆಯುತ್ತಾ, ಅರಿಯುತ್ತಾ ಬದುಕಿನ ಸ್ವಾದ ಹೆಚ್ಚಿಸಿದ್ದರು.

ಹಿಟ್ಟು ಬೀಸುವ, ರೊಟ್ಟಿ ತಟ್ಟುವ, ಗಂಜಿ ಬಸಿಯುವ, ಮುದ್ದೆ ತಿರುವುವ ಎಷ್ಟೊಂದು ಅವ್ವಂದಿರು ಅಡುಗೆ ಮನೆಯನ್ನು ಶ್ರಮ ಹಾಗೂ ಸೃಜನಶೀಲತೆಯ ಪರಾಕಾಷ್ಠೆಗೆ ಕೊಂಡೊಯ್ಯುತ್ತಿದ್ದರು. ಅಲ್ಲಿ ಹಾಡು ಹುಟ್ಟುತ್ತಿದ್ದವು. ಕತೆಗಳು ಸುರುಳಿ ಬಿಚ್ಚುತ್ತಿದ್ದವು. ಆ ಮಡಿಲುಗಳಲ್ಲಿ ಲಾಲಿ ಕೇಳುತ್ತ ಮಲಗಿದಾಗ ಲೋಕ ಎಷ್ಟು ಚಿಕ್ಕದೆನಿಸುತ್ತಿತ್ತು. ಅವರ ಮಮತೆಗೆ ಬ್ರಹ್ಮಾಂಡವನ್ನೇ ತೂಗಿ ಮಲಗಿಸುವ ಲಯವಿತ್ತು. ಅವರು ಪಾತ್ರೆ ತೊಳೆಯುವುದನ್ನು, ನೆಲ ಸಾರಿಸುವುದನ್ನು ಎಂದೂ ಕೀಳೆಂದುಕೊಂಡಿರಲಿಲ್ಲ. ಪಾತ್ರೆ 'ಬೆಳಗುವುದು' ಎಂಬ ಶಬ್ದವೇ ಎಷ್ಟು ಚೆಂದ!


ನೆಲಕ್ಕೆ ಸೆಗಣಿಯ ಕಪ್ಪು ಸಾರಿಸಿ, ಕೆಮ್ಮಣ್ಣಿನ ಅಂಚು ಬಳಿದು, ಬೆಳ್ಳಗಿನ ಶೇಡಿಯಲ್ಲಿ ನೆಲವನ್ನೇ ಸಿಂಗರಿಸಿ ಸಂಭ್ರಮಿಸುತ್ತಿದ್ದರು. ಯಾವಾಗ ಈ ಜೀವಪೋಷಣೆಯ ಸ್ವಭಾವವನ್ನು ಪುರುಷಾಧಿಕಾರ ನಿಯಂತ್ರಿಸಲು ತೊಡಗಿತೋ, ಯಾವಾಗ ಅವನು 'ಅಡುಗೆ ಮಾಡುತ್ತ ಬಿದ್ದಿರು' ಅಂದನೋ, 'ಎಲ್ಲ ಸಾಕು ನಡಿ, ಪಾತ್ರೆ ತಿಕ್ಕುತ್ತ ಸವೆಯುತ್ತಿರು' ಅಂತ ದರ್ಪ ತೋರಿದನೋ ಆಗ ಲಿಂಗರಾಜಕಾರಣ ಉದಿಸಿತು. ಅವಳ ಸೃಜನಶೀಲತೆ, ಸೌಂದರ್ಯಪ್ರಜ್ಞೆ, ಸಲಹುವ ಅದಮ್ಯ ಜೀವನಪ್ರೀತಿ- ಯನ್ನು, ಕೊನೆಗೆ ಅವಳ ದೇಹ, ಮನಸ್ಸು ಎಲ್ಲವನ್ನೂ ನಿಯಂತ್ರಿಸತೊಡಗಿದನೋ ಆಗ ಅವಳು ಕೊಡವಿ ಎದ್ದು ಹೊರಡಲೇಬೇಕಾಯಿತು. ಬದುಕು ನಿರಂತರ ಅನ್ವೇಷಣೆಯ ಮೂಲಕ ರೂಪುಗೊಳ್ಳುತ್ತಲೇ ಇರುವ ಪ್ರಕ್ರಿಯೆಯೇ ಹೊರತು ಪೂರ್ವಗ್ರಹಗಳಿಂದ ನಿರ್ದೇಶಿಸಲ್ಪಡುವ ಜಡ ಸಂಗತಿಯಲ್ಲ.

ಹೆಣ್ಣಿನ ಪ್ರಾಕೃತಿಕ ಸ್ವರೂಪವನ್ನು ವಿರೂಪಗೊಳಿಸಿದ ಪಿತೃಪ್ರಧಾನ ವ್ಯವಸ್ಥೆ ಅದನ್ನು ವಿವಾಹ ಸಂಸ್ಥೆಯ ಮೂಲಕ ಮುಂದುವರಿಸುತ್ತಿದೆ. ಅವಳ ದೇಹ ಸುಂದರವಾಗಿಯೂ ಗಟ್ಟಿಮುಟ್ಟಾಗಿಯೂ ಇರಬೇಕು. ಏಕೆಂದರೆ ಅದೊಂದು ಪುನರುತ್ಪಾದನೆಯ ಕಾರ್ಖಾನೆ. ಏನನ್ನೂ ಪ್ರಶ್ನಿಸದೆ ಗೇಯಲು ಸಿದ್ಧವಾದ ಯಂತ್ರ. ವಧುಪರೀಕ್ಷೆಯೆಂಬ ಪ್ರಹಸನಗಳಲ್ಲಿ ಪರೀಕ್ಷೆಗೊಳಪಡುತ್ತಿದ್ದ ಅವಳ ಅಂಗಭಂಗಿ, ಮಾತು ಎಲ್ಲವೂ ಅವಳು ಎಷ್ಟು ಬಾಗಲು ಸಿದ್ಧಳಿದ್ದಾಳೆ ಎಂಬುದನ್ನು ನಿರ್ಧರಿಸಲೆಂದೇ ಆಗಿರುತ್ತಿತ್ತು. ಹೆಣ್ಣು ಕೊಡುವುದು, ಹೆಣ್ಣು ತೆಗೆದುಕೊಂಡು ಬರುವುದು ಎಂಬ ವ್ಯಾಪಾರದ ಪರಿಭಾಷೆಗಳೇ ಅಲ್ಲಿ ಬಳಕೆಯಾ- ಗುತ್ತಿದ್ದುದು. ವಿಧೇಯತೆ ಮೈವೆತ್ತವಳನ್ನೇ ಸುಸಂಸ್ಕೃತ ಹೆಣ್ಣೆಂದು ತನ್ನ ನಿರೂಪಣೆಗಳ ಮೂಲಕ ಸಮರ್ಥಿಸುತ್ತಾ, ಅವಳನ್ನು ಅಧಿಕಾರ ರಚನೆಗಳಿಂದ ಹೊರಗಿಟ್ಟು ದುರ್ಬಲಗೊಳಿಸಲಾಯಿತು.

ಪುರುಷ ಶ್ರೇಷ್ಠತೆಯ ಪ್ರಜ್ಞೆ ಅವನಿಗೆ ತಂದುಕೊಡುವ ಅಧಿಕಾರವು ವಿವಾಹ ಹಾಗೂ ಕುಟುಂಬದಾಚೆ ಬದುಕಿನ ಎಲ್ಲ ಸ್ತರಗಳಿಗೂ ವಿಸ್ತರಿಸುತ್ತ ಹೋಗಿದ್ದು ಇತಿಹಾಸ. ಅಧೀನತೆ ವಿಧಿಯಲ್ಲ, ಹೇರಲ್ಪಟ್ಟ ನಾಜೂಕು, ಮೋಸ ಎಂಬುದು ಶಿಕ್ಷಣದ ಹೊಸ ಗಾಳಿ ಬೆಳಕುಗಳ ಮೂಲಕ ಅರಿವಾದಾಗ ಅವರು ಕಟ್ಟುಬಿಚ್ಚಿ ಕಲಕಲ ಹರಿಯ ತೊಡಗಿದರು. ತಮಗೊಂದು ಆಯ್ಕೆಯ ಬದುಕಿದೆಯೆಂದು ಹೆಣ್ಣಿಗೆ ಅರಿವಾದುದೇ ಆವಾಗ.

ಹೆಣ್ಣು ತನ್ನ ಆಯ್ಕೆ ಸ್ವಾತಂತ್ರ್ಯವನ್ನು ಬಳಸಿಕೊಳ್ಳಲು ಯತ್ನಿಸಿದಾಗಲೆಲ್ಲ ಅವಳನ್ನು ಸ್ವಾರ್ಥಿಯೆಂದು ಬಿಂಬಿಸ- ಲಾಗುತ್ತದೆ. ಮದುವೆಯನ್ನು ನಿರಾಕರಿಸಿ ಸ್ವತಂತ್ರವಾಗಿರಲು ಬಯಸಿದರೆ ಅದು ಸ್ವೇಚ್ಛೆ ಎನಿಸಿಕೊಳ್ಳುತ್ತದೆ. ಅವಳು ಕುಟುಂಬ ವಿರೋಧಿ ಎನಿಸಿಕೊಳ್ಳುತ್ತಾಳೆ. ಅವಳೇನೇ ಸಾಧಿಸುವುದಿದ್ದರೂ ಕುಟುಂಬ ವಿಧಿಸಿದ ಗೃಹಿಣಿತ್ವದ ಕರ್ತವ್ಯವನ್ನೆಲ್ಲ ನಿಭಾಯಿಸಿಯೇ ತೀರಬೇಕು. ಅದೂ ಹಾಗೆ ಮಾಡುವುದು ಅವಳಿಗೆ ಕೊಟ್ಟ ಉದಾರ ಅವಕಾಶವೆಂದು ಬದುಕಿಡೀ ಅದಕ್ಕಾಗಿ ಅವಳು ಋಣಿಯಾಗಿರಬೇಕು! ಹಾರಲು ಬಿಟ್ಟರೂ ಸೂತ್ರ ನಮ್ಮ ಕೈಲಿದೆಯೆಂಬ ಅಹಂ ತೃಪ್ತಿಗೊಳಿಸಿಯೇ ಆಕೆ ತನ್ನ ಕಾರ್ಯಕ್ಷೇತ್ರವನ್ನು ಪ್ರವೇಶಿಸಬೇಕು. ಅಡುಗೆ ಮಾಡದಿದ್ದರೆ, ಮಕ್ಕಳು ಮನೆ- ವಾರ್ತೆಯಲ್ಲಿ ತೊಡಗದಿದ್ದರೆ ಆಕೆ ಅತೀವ ಅಪರಾಧಿ- ಪ್ರಜ್ಞೆಯಲ್ಲಿ ನರಳಬೇಕು. ಆಕೆ ತನ್ನ ವೃತ್ತಿ ಜಗತ್ತಿನ ಎಲ್ಲ ಸವಾಲುಗಳಿಗೆ ಎದೆಗೊಟ್ಟು ನಿಭಾಯಿಸಿ ಸಮಯಕ್ಕೆ ಸರಿಯಾಗಿ ನಗುನಗುತ್ತ ಮನೆಗೆ ಹಾಜರಾಗಬೇಕು. ತನ್ನ ದೇಹಭಾಷೆಯಲ್ಲಿ, ಮಾತಿನಲ್ಲಿ, ಎಲ್ಲಿಯೂ ಹೊರಗೆ ಗಳಿಸಿಕೊಂಡ ಆತ್ಮವಿಶ್ವಾಸದ ಪಸೆಯಿರದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಅವಳು ಬದಲಾಗಿ ಬಿಟ್ಟಿದ್ದಾಳೆ, ಅಹಂಕಾರ ತಲೆಗೇರಿದೆ ಎಂಬ ಬಿರುದು ಧರಿಸಬೇಕು.

ತಾನು ಒಳ್ಳೆಯ ತಾಯಿಯಾಗಲಿಲ್ಲವೇನೋ ಎಂಬ ಅಪರಾಧಿಭಾವ ಉದ್ಯೋಗಸ್ಥ ಮಹಿಳೆಗೆ ಯಾಕೆ ಆ ಪರಿ ಕಾಡಬೇಕು? ಅದು ತಂದೆಯನ್ನೇಕೆ ಎಂದೂ ಬಾಧಿಸುವುದಿಲ್ಲ? ಅವನಿಗಿರುವ ಅವನದೇ ಸ್ಪೇಸ್, ಅವನದೇ ಚಾಯ್ಸ್ ಅವಳಿಗೇಕೆ ಭಿಕ್ಷೆಯಂತೆ ಭಾಸವಾಗಬೇಕು? ಅವಳು ಇದನ್ನೆಲ್ಲ ಪ್ರಶ್ನಿಸದೇ ಮೌನವಾಗಿರಬೇಕು. ಏಕೆಂದರೆ ಪುರುಷಅಹಂ ಕೆರಳಿಸಿದಷ್ಟೂ ಮನೆ ಯುದ್ಧರಂಗವಾಗಿಬಿಡುತ್ತದೆ.



ಹೊರಗಾದರೂ ಏನಿದೆ ಮತ್ತೆ? ಅವಳು ತನ್ನ ವಿದ್ಯೆ ಹಾಗೂ ಕಾರ್ಯಕ್ಷಮತೆಯ ಬಲದಿಂದ ತಮಗೆ ಸರಿಸಮನಾಗಿ ಕುಳಿತುಕೊಳ್ಳುವುದನ್ನು ಅನೇಕ ಪುರುಷರು ಸಹಿಸುವುದಿಲ್ಲ. ಅವಳ ಕೆಳಗಿನವರಿಗೂ ಅವಳ ಆಜ್ಞೆಗಳನ್ನು ಪಾಲಿಸುವುದು ಮರ್ಮಾಘಾತ ವೆನಿಸುತ್ತದೆ. ಅವಳು ತನ್ನ ಸಾಂಪ್ರದಾಯಿಕ ಪಾತ್ರಗಳಾಚೆ ಬೆಳೆದಾಗ ಅದನ್ನು ಕತ್ತರಿಸಬೇಕೆನಿಸುತ್ತದೆ. ನೇರವಾಗಿ ಸಾಧ್ಯವಾಗದಿದ್ದಾಗ ಕ್ಷುದ್ರ ತಂತ್ರಗಾರಿಕೆ ಆರಂಭವಾಗಿ- ಬಿಡುತ್ತದೆ. ಮನೆಯ ಒಳಹೊರಗೂ ಈ ಅಂತರ್ಯುದ್ಧಗಳಲ್ಲಿ ಹೈರಾಣಾಗುವ ಅವಳು ಒಂದೋ ಖಿನ್ನತೆಗೆ ಜಾರಬೇಕು, ಇಲ್ಲ ಮೊಂಡು ಬೀಳಬೇಕು.

ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನವು ಕೊಟ್ಟ ಅವಕಾಶಗಳಿಂದಾಗಿ ಹೆಣ್ಣಿನ ಕಾರ್ಯಕ್ಷೇತ್ರವಿಂದು ವಿಸ್ತಾರವಾಗಿದೆ. ಅವಳ ಅಂತರಂಗದ ಜಗತ್ತು ಹಿಗ್ಗಿದೆ. ಇದುವರೆಗೂ ನಡೆಯಲಾಗದ ಹೊಸ ದಾರಿಗಳನ್ನು ಅನ್ವೇಷಿಸುತ್ತ ಅವಳು ನಡೆಯುತ್ತಿದ್ದಾಳೆ. ಮದುವೆಯೆಂಬುದು ಅವಳ ಏಕೈಕ ಆದ್ಯತೆಯಾಗಿ ಇಂದು ಉಳಿದಿಲ್ಲ. ಅಡುಗೆ ಹಾಗೂ ಮಕ್ಕಳ ಪೋಷಣೆ ಇಡೀ ಕುಟುಂಬದ ಹೊಣೆಯಾಗಿರುವುದರಿಂದ ಶ್ರಮ ವಿಭಜನೆಯ ಸ್ವರೂಪವು ಇಂದಿನ ಕಾಲಕ್ಕೆ ತಕ್ಕಂತೆ ಬದಲಾದರೆ ಮಾತ್ರ ಮದುವೆಯೆಂಬ ವ್ಯವಸ್ಥೆ ಉಳಿಯಬಹುದು. ಯಾವ ಅಹಮ್ಮುಗಳೂ ಅವಳನ್ನು ಕಟ್ಟಿಕೆಡವಲು ಇನ್ನು ಸಾಧ್ಯವಿಲ್ಲ. ಇಂಥವಳನ್ನು ಮತ್ತೆ ಹಿಮ್ಮೊಗವಾಗಿ ಚಲಿಸುವಂತೆ ನಮ್ಮ ಧರ್ಮ ಹಾಗೂ ರಾಜಕಾರಣಗಳು ನಿರ್ದೇಶಿಸುತ್ತಿರುವುದು ವಿಪರ್ಯಾಸ.

ಸ್ವಜಾತಿಯಲ್ಲಿ ಮದುವೆಗೆ ಹೆಣ್ಣು ಸಿಗುತ್ತಿಲ್ಲವೆಂಬ ಹತಾಶೆಯಲ್ಲಿ ಸಮುದಾಯವೊಂದು 'ಅವಳನ್ನು ಜಾಸ್ತಿ ಓದಿಸಿದ್ದಕ್ಕೇ ಹೀಗಾಯಿತು. ಅವಳ ಆಯ್ಕೆಗಳನ್ನು ಮಿತಿಗೊಳಿಸಿ' ಎಂದು ಬೊಬ್ಬೆ ಹೊಡೆಯುತ್ತಿದೆ. ಅವಳಿಗೆ 'ಸಂಸ್ಕಾರ' ಕಲಿಸಿ ಎಂದು ಧರ್ಮಪೀಠಗಳು ಒರಲುತ್ತಿರುವುದು ಅವಳನ್ನು ಮತ್ತೆ ಬಂಧಿಸುವುದಕ್ಕಾಗಿಯೇ. ಮೊನ್ನೆ ಪ್ರಜಾಪ್ರತಿನಿಧಿಯೊಬ್ಬರು ಮಹಿಳಾ ಅಧಿಕಾರಿಗೆ 'ರಾಜೀನಾಮೆ ಕೊಟ್ಟು ಅಡುಗೆ ಮಾಡಿಕೊಂಡಿರಲಿ' ಎಂದು ಕುಹಕವಾಡಿರುವಲ್ಲಿಯೂ ಅದೇ ಅಹಂಪೀಡಿತ ಮನಃಸ್ಥಿತಿಯೇ ಕಾಣುತ್ತದೆ. ಅವರ ಆರೋಪ ಪ್ರತ್ಯಾ- ರೋಪಗಳ ಸತ್ಯಾಸತ್ಯತೆ ಏನೇ ಇರಲಿ, ಲಿಂಗಸಂವೇದನಾ ಶೀಲತೆಯಿಲ್ಲದ ರೂಕ್ಷ ರಾಜಕೀಯ ವ್ಯವಸ್ಥೆಯೊಂದು ಢಾಳಾಗಿ ಕಾಣಿಸುತ್ತಿದೆ. ವೈಯಕ್ತಿಕ ಪೂರ್ವಗ್ರಹವು ವ್ಯವಸ್ಥೆಯನ್ನೂ ಹದಗೆಡಿಸುತ್ತದೆ.

ಅಹಂಕಾರದ ನಡೆಯು ಹೆಣ್ಣು, ಗಂಡು ಇಬ್ಬರಿಗೂ ಶೋಭೆಯಲ್ಲ. ಆತ್ಮವಿಶ್ವಾಸವು ಅಹಂಕಾರವಾಗದ ಸೂಕ್ಷ್ಮ ನಡೆಯನ್ನು ನಡೆಯಲು ಅಪಾರ ಸಹಿಷ್ಣುತೆ ಬೇಕು. ಹಾಗಂತ ಅಡುಗೆ ಮಾಡುತ್ತ ಮಕ್ಕಳನ್ನು ನೋಡಿಕೊಂಡಿರುವುದು ಹೆಣ್ಣೊಬ್ಬಳ ವೈಯಕ್ತಿಕ ಆಯ್ಕೆ- ಯಾಗಿದ್ದರೆ ಅದರಲ್ಲಿ ಏನೂ ತಪ್ಪಿಲ್ಲ. ಅದು ಆಡಳಿತದಷ್ಟೇ ಘನವಾದುದು. ವ್ಯಕ್ತಿ ಘನತೆ, ವೃತ್ತಿ ಘನತೆ ಹಾಗೂ ಸಾಮಾಜಿಕ ಘನತೆಯನ್ನು ಅರಿತ ವ್ಯಕ್ತಿಗಳಿಂದ ಮಾತ್ರ ನಮ್ಮ ಸಾರ್ವಜನಿಕ ಜೀವನ ಹಸನಾಗಬಹುದು. ಹೆಣ್ಣು- ತನವನ್ನು ಈ ಗಂಡಾಳಿಕೆಯ ಫರಮಾನುಗಳಿಂದ, ಅದರ ಕುಬ್ಜ ಮಾನದಂಡಗಳಿಂದ ಬಿಡುಗಡೆಗೊಳಿಸದೇ ವಿಧಿಯಿಲ್ಲ. ಸೇವೆ ಹೆಣ್ಣಿನದು, ಅಧಿಕಾರ ಗಂಡಿನದು ಎಂಬ ಗೆರೆಗಳು ಅಳಿಸಿ ಅಧಿಕಾರಕ್ಕೆ ತಾಯ್ತನವೂ ತಾಯ್ತನಕ್ಕೆ ಸಹಜಾಧಿಕಾರವೂ ಒದಗುತ್ತ ಹೋಗುವುದು ಸರಿಯಾದ ಮಾರ್ಗ.

ಚುರುಮುರಿ



ಬೆಲ್ಲದ ಸಂತೋಷ

• ಸುಧೀಂದ್ರ

'ಸ್ವಲ್ಪ ಬೆಲ್ಲ ತಂದ್ಕೊಡ್ತೀರಾ?' ಅನ್ನುತ್ತಾ ಮಡದಿ ರೂಮಿಗೆ ಬರೋಹೊತ್ತಿಗೆ ಲ್ಯಾಪ್‌ಟಾಪ್ ಮುಂದೆ ಗಲ್ಲದ ಮೇಲೆ ಕೈಹೊತ್ತು ಕೂತಿದ್ದೆ. 'ಈ ಕೊರೊನಾ ಹೊತ್ತಲ್ಲೇ ಆಫೀಸಿನ ಲೀಡರ್‌ಶಿಪ್ ಚೇಂಜ್ ಮಾಡ್ತಾರಂತೆ. ಸಂಕಷ್ಟದಲ್ಲೂ ಬಿಸಿನೆಸ್ ತರ್ತಿರೋ ಹುಲಿರಾಜ್ ಇನ್ನೆರಡು ವರ್ಷವಾದರೂ ಟೀಮಲ್ಲಿ ಇರಬೇಕು' ಎಂದು ನನ್ನ ಸಂಕಟ ಹಂಚ್ಕೊಂಡೆ.

'ವರ್ಕ್ ಫ್ರಮ್ ಹೋಮ್ ಆದ್ರೂ ಶಿಸ್ತಿನಿಂದ ಆಫೀಸ್ ಕೆಲಸ ಮಾಡೋದ್ರಲ್ಲಿ ನೀವು ಯಾವ ಸೈನಿಕನಿಗೂ ಕಡಿಮೆಯಿಲ್ಲ' ಎನ್ನುತ್ತಾ ಬೆನ್ನು ಚಪ್ಪರಿಸಿದಳು ಮಡದಿ. ಅವಳು ಆಡಿದ ಮಾತು ಬೈದಿದ್ದೋ ಹೊಗಳಿದ್ದೋ ಅನ್ನೋದು ಸುಲಭವಾಗಿ ಗೊತ್ತಾಗೋಲ್ಲ.

ಆಫೀಸ್ ಫೋನ್ ಬರೋಷ್ಟರಲ್ಲಿ ಬೆಲ್ಲದ ಕೆಲಸ ಮುಗಿಸೋಣವೆಂದು ಅಂಗಡಿಯತ್ತ ಹೊರಟೆ.

ಅಂಗಡಿಯ ಶೆಟ್ಟರಿಗೆ 'ಬೇಗ ಒಂದು ಬೆಲ್ಲದ ಪ್ಯಾಕೆಟ್ ಕೊಡಿ, ಆಫೀಸ್ ಕೆಲಸದ ಮಧ್ಯೆ ಬಂದಿದೀನಿ' ಅಂದೆ.

'ಡೆಲ್ಲೀಲಿ ಬೆಲ್ಲದ ಡಿಮ್ಯಾಂಡ್ ಜಾಸ್ತಿ ಆಗಿರೋದ್ರಿಂದ ಸ್ಟಾಕಿಲ್ಲ, ಸಕ್ಕರೇನೇ ಕೊಡ್ತೀನಿ' ಅಂದರು. 'ಯಾವ್ದೋ ಒಂದು ಕೊಡಿ' ಅಂತ ತೂಗೊಂಡು ಬಂದೆ.

ಬ್ಯಾಗು ತೆಗೆದ ಮಡದಿ 'ಬೆಲ್ಲದ ವಿಷಯ ಮರೆತು ಸಕ್ಕರೆ ತಂದಿದೀರಲ್ಲಾ' ಎಂದು ರಾಗವೆಳೆದಳು. 'ಸ್ವೀಟ್ ಮಾಡೋಕ್ಕೆ ಅದೇ ಬೆಟರಲ್ವಾ?' ಎಂದೆ. 'ನಾನು ಬೆಲ್ಲ ಕೇಳಿದ್ದು ಸ್ವೀಟಿಗಲ್ಲ. ಡೆಲ್ಲೀಲಿರೋ ಸಂತೋಷ್ ಮಾವ ಹೇಳ್ತಿದ್ರು, ಆರೋಗ್ಯಕ್ಕೆ ಒಳ್ಳೇದೂಂತ ಬೆಲ್ಲದ ಕಾಫಿ ಅಭ್ಯಾಸ ಮಾಡಿಕೊಂಡಿದಾರಂತೆ. ನಮ್ಮನೇಲೂ ಇನ್ಮೇಲೆ ಬೆಲ್ಲದ ಕಾಫೀನೇ' ಅಂದಳು.

'ಸಕ್ಕರೆ ಬದಲು ಬೆಲ್ಲ ತಂದ್ಕೊಡ್ಲಾ?' ಎಂದೆ.

'ಎಕ್ಸ್‌ಚೇಂಜೇನೂ ಬೇಡ. ಸಂಜೆ ಅರುಣ್ ಚಿಕ್ಕಪ್ಪ ಮನೇಗೆ ಬರ್ತಿದಾರೆ. ಸಕ್ಕರೆಯಲ್ಲೇ ಕೇಸರಿಭಾತ್ ಮಾಡ್ತೀನಿ' ಎಂದಳು ಸ್ವೀಟಾಗಿ.

ಫೋನ್ ಬಂತು. 'ಲೀಡರ್‌ಶಿಪ್‌ನಲ್ಲಿ ಬದಲಾವಣೆಯಿಲ್ಲಾಂತ ಹೆಡ್ಡಾಫೀಸ್ ಮೇಯ್ಲ್ ಬಂದಿದೆ' ಅಂದ ಕಲೀಗ್ ಸೋಮಣ್ಣ, 'ನಿನ್ನ ಬಾಯಿಗೆ ಸಕ್ಕರೆ ಹಾಕಾ' ಅಂದೆ.

'ಯಾರಿಗೆ?' ಎಂದಳು ಮಡದಿ.

'ಗಲಾಟೆ ಮಾಡದವರೆಲ್ರಿಗೂ' ಅಂದೆ!

ಸಂಗತ

ಅರ್ಥನೀತಿ: ಬಿಕ್ಕಟ್ಟುಗಳ ಸುಗ್ಗಿ ಕಾಲ!

ದಿನನಿತ್ಯದ ವಸ್ತುಗಳ ಬೇಕಾಬಿಟ್ಟಿ ಬೆಲೆ ಏರಿಕೆ ವಿಷಯದಲ್ಲಿ ವ್ಯಾಪಾರೀ ವರ್ಗವು ಉದಾತ್ತ ನ್ಯಾಯಯುತ ಲಾಭ ನೀತಿ ಅಳವಡಿಸಿಕೊಳ್ಳುವ ಹೃದಯವಂತಿಕೆ ತೋರಬೇಕಿದೆ

• ದಾದಾಪೀರ್ ನವಿಲೇಹಾಳ್

ಕೊರೊನಾ ನಿಮಿತ್ತ ಜಗತ್ತು ಎದುರಿಸುತ್ತಿರುವ ಸಂಕಷ್ಟಗಳು ಒಂದೆರಡಲ್ಲ. ಆರ್ಥಿಕವಾಗಿ ಕುಸಿದು ಹೋಗುತ್ತಿರುವ ಸಮಾಜದಲ್ಲಿ ಮಧ್ಯಮ ಮತ್ತು ಕೆಳಮಧ್ಯಮ ವರ್ಗಗಳು ಇನ್ನಿಲ್ಲದಂತೆ ನೆಲಕಚ್ಚುತ್ತಿ- ದ್ದರೆ, ದಿನನಿತ್ಯದ ವಸ್ತುಗಳ ಬೆಲೆಗಳು ಮಾರುಕಟ್ಟೆ ನೀತಿಯನ್ನು ಮೀರಿ ಗಗನಮುಖಿಯಾಗುತ್ತಿವೆ. ಬೆಲೆ ಏರಿಕೆಯ ವಿರುದ್ಧ ಗಟ್ಟಿ ದನಿಯಲ್ಲಿ ಮಾತನಾಡುವ ಸಾಮಾಜಿಕ ವಾತಾವರಣ ಅಕ್ಷರಶಃ ಇಲ್ಲವಾಗಿದೆ. ಇಂಥದ್ದೊಂದು ಅಸಹಾಯಕತೆ ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ ಸರ್ವವ್ಯಾಪಿಯಾಗಿದೆ ಎನಿಸುತ್ತಿದೆ.

ಅಷ್ಟಕ್ಕೂ ಇಂಥದ್ದೊಂದು ಸ್ಥಿತಿಗೆ ಕೊರೊನಾ ಸಾಂಕ್ರಾಮಿಕವೊಂದೇ ಕಾರಣವಲ್ಲ. ದೂರದೃಷ್ಟಿ ಮತ್ತು ವಿವೇಚನಾರಹಿತ ಆಳುವ ಮನಸ್ಸಿನ ಜಡತೆಯ ಜೊತೆಗೆ ವ್ಯಾಪಾರೀ ವರ್ಗದ ಔದಾರ್ಯಹೀನ ಮನೋಧರ್ಮವೂ ಕಾರಣ. ಕೊರೊನಾದಿಂದ ಲಾಕ್‌ಡೌನ್‌ನಂತಹ ಕ್ರಮಗಳು ಅನಿವಾರ್ಯವಾದಾಗ ದೊಡ್ಡ ಕಂಪನಿಗಳಿಂದ ಹಿಡಿದು ಸಣ್ಣ ಪುಟ್ಟ ವ್ಯಾಪಾರಿಗಳವರೆಗೂ ತಮ್ಮ ಉತ್ಪನ್ನಗಳ ಬೆಲೆ ನಿಗದಿಗೆ ನಿಯಂತ್ರಣವೇ ಇಲ್ಲದಂತೆ ವರ್ತಿಸುತ್ತಿದ್ದಾರೆ.

ಹೀಗೇಕೆ ಬೆಲೆ ಹೆಚ್ಚು ಮಾಡಿದ್ದೀರಿ ಎಂದು ಪ್ರಶ್ನಿಸಿದರೆ, ಮುಖ್ಯಮಂತ್ರಿಯನ್ನೋ ಪ್ರಧಾನಿಯನ್ನೋ ಕೇಳಿ ಅನ್ನುವ ನಿರ್ಭೀತ ಉತ್ತರ ಬರುತ್ತದೆ. ಸ್ವಲ್ಪ ಏರು ದನಿಯಲ್ಲಿ ಕೇಳಿದರೆ 'ಬೇಕಾದರೆ ತಗೊಳ್ಳಿ, ಬೇಡದಿದ್ದರೆ ಹೋಗಿ' ಅನ್ನುತ್ತಾರೆ. ಅಲ್ಲದೆ 'ವರ್ಷದಿಂದ ಲಾಕ್‌ಡೌನ್ ಕಾರಣದಿಂದ ವ್ಯಾಪಾರವೇ ಇಲ್ಲ, ಬಂಡವಾಳ ಹಾಕಿದವರು ನಾವು ನಷ್ಟ ಅನುಭವಿಸಬೇಕೆ?' ಅಂತ ಗ್ರಾಹಕರ ಬಾಯಿ ಮುಚ್ಚಿಸುತ್ತಾರೆ. ಹೋಗಲಿ, ವ್ಯಾಪಾರ ವಹಿವಾಟು ಎಂದಿನಂತಾದಾಗಲಾದರೂ ಈ ಸಂಕಷ್ಟ ಕಾಲದಲ್ಲಿ ಏರಿಸಿದ ಬೆಲೆಯನ್ನು ಹಿಂಪಡೆಯುವ ನೈತಿಕತೆಯನ್ನು ತೋರುತ್ತಾರೆಯೇ? ಇಲ್ಲ.

ಇಂಥ ಸಂದರ್ಭದಲ್ಲಿ ಗ್ರಾಹಕನಿಗೆ ಆಯ್ಕೆಯೇ ಇರುವುದಿಲ್ಲ. ಹಾಗಾದರೆ ಬೆಲೆ ನಿಯಂತ್ರಣ ಮಾಡುವವರಾರು? ಬೆಲೆ ಎಷ್ಟಾದರೂ ಕೊಂಡುಕೊಳ್ಳಲೇಬೇಕಾದ ಅನಿವಾರ್ಯ ಸ್ಥಿತಿಗೆ ಪರಿಹಾರವೇನು? ಗ್ರಾಹಕನನ್ನು ಇಂಥ ನೀತಿಯಿಲ್ಲದ ಸುಲಿಗೆಯಿಂದ ಯಾರು ಕಾಪಾಡಬೇಕು? ಅದಕ್ಕೇ ಇರಬೇಕು 'ನಿತ್ಯದ್ರೋಹಂ ವ್ಯಾಪಾರ ಲಕ್ಷಣಂ' ಎನ್ನುವುದು. ಯಾವ ಸರ್ಕಾರವೂ ಈ ಬಗೆಯ ದ್ರೋಹವನ್ನು ತಡೆಯಲಾಗದು. ಅಷ್ಟೇ ಅಲ್ಲ, ಇಂಥ ದ್ರೋಹದ ವ್ಯಾಪಾರವೇ ಸರ್ಕಾರಗಳನ್ನು ನಿಯಂತ್ರಿಸುತ್ತದೆ ಅನ್ನುವುದು ಕಟುಸತ್ಯ. ಅನೇಕರು ಮಾಡಿದ ವಹಿವಾಟಿಗೆ ಅರ್ಧದಷ್ಟು ತೆರಿಗೆಯನ್ನೂ ಕಟ್ಟುವುದಿಲ್ಲ. ಉತ್ಪನ್ನಗಳ ಮೂಲ ಮಾಲೀಕನಾದ ರೈತನಿಗಾದರೂ ಇದರ ಲಾಭಾಂಶ ಸಿಗುತ್ತದೆಯೇ? ಅದೂ ಇಲ್ಲ.

ಸಾಮಾಜಿಕ ಔದಾರ್ಯಕ್ಕೆ ಆರ್ಥಿಕವಾದ ಪ್ರಾಮಾಣಿಕತೆಯೂ ಸಮಾನವಾಗಿರಬೇಕು. ಹುಟ್ಟುತ್ತಲೇ ಸಾಮ್ರಾಟನಾಗಿದ್ದ ಸಿದ್ಧಾರ್ಥ ಬಯಲಿಗೆ ಬಂದು ಭಿಕ್ಷುಕನನ್ನು ಕಂಡು, ಅವನ ಮೂಲಕ ಆರ್ಥಿಕವಾದ ಅಸಮಾನ ನೆಲೆಗಳನ್ನು ಕಾಣಲು ಸಾಧ್ಯವಾಯಿತು. ವ್ಯವಹಾರಕ್ಕೆ ನ್ಯಾಯಯುತ ಲಾಭದ ಉನ್ನತ ಮಾದರಿಯನ್ನು ಮೊಹಮ್ಮದ್ ಪೈಗಂಬರ್ ಬದುಕಿ ತೋರಿಸಿದರು. ಬಯಲಿನಿಂದ ಅಧಿಕಾರದ ಗದ್ದುಗೆಗೇರಿದ ಬಸವಣ್ಣ ಆರ್ಥಿಕ ಪ್ರಾ- ಮಾಣಿಕತೆಯನ್ನು ಜೀವನ್ಮರಣದ ಪ್ರಶ್ನೆಯಾಗಿಸಿಕೊಂಡರು. 'ಹೊನ್ನಿನೊಳಗೊಂದೊರೆಯ, ಅನ್ನದೊಳಗೊಂದಗುಳ, ವಸ್ತ್ರದೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬಯಸಿದೆನಾದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಎಂದು ಪ್ರಾಮಾಣಿಕತೆಯನ್ನು ಸಾರ್ವಜ- ನಿಕವಾಗಿ ನಿಕಷಕ್ಕೊಡ್ಡಿದರು. ನೀತಿಯಿಲ್ಲದ ವಾಣಿಜ್ಯವು ಪಾಪಕ್ಕೆ ಸಮಾನ ಎಂದ ಗಾಂಧೀಜಿ ಕೂಡ ಪ್ರಜ್ಞಾಪೂರ್ವಕವಾಗಿ ಬಡವರಾಗಿರಲು ಬಯಸಿ ಹಾಗೇ ಬದುಕಿದರು. ಇಂಥವರೆಲ್ಲರ ನೈತಿಕ ಆದರ್ಶಗಳನ್ನು ಕೇವಲ ಭಾಷಣಕ್ಕೆ ಸೀಮಿತ ಮಾಡಿ, ಬಿಕ್ಕಟ್ಟುಗಳನ್ನೂ ಸುಗ್ಗಿ ಮಾಡಿಕೊಳ್ಳುವ ಲಜ್ಜೆಗೇಡಿ ಅರ್ಥನೀತಿಯ ವಾರಸುದಾರರಾಗಿದ್ದೇವೆಯೇ ನಾವು?



ಸರ್ಕಾರದ್ದಾಗಲೀ, ವ್ಯಕ್ತಿಗತವಾದದ್ದಾಗಲೀ ಐದು ಪೈಸೆಯ ಲೆಕ್ಕವನ್ನೂ ಕೊಡುತ್ತಿದ್ದವರ ಕಾಲವೊಂದಿತ್ತು. ಅದು ಸಾರ್ವಜನಿಕವಾದದ್ದು ತಿನ್ನಬಾರದ್ದು ಅನ್ನುವ ಅರಿವಿತ್ತು. ಈ ಅರಿವು ಓದಿನಿಂದ ಬಂದಿದ್ದಾಗಿರದೆ ಎದೆಯ ದನಿಯಿಂದ ಹೊಮ್ಮುತ್ತಿತ್ತು ಅನ್ನುವುದು ಗಮನಾರ್ಹ. ನೈತಿಕ ಮಟ್ಟವನ್ನು ಎತ್ತರಿಸಬೇಕಾದ ಶಿಕ್ಷಣ ಆ ದಿಸೆಯಲ್ಲಿ ಸೋತಿದೆ ಎಂದೇ ಹೇಳಬೇಕಾಗಿದೆ.

'ಗ್ರಾಹಕ ನಮ್ಮ ದೇವರು' ಅಂತ ಬೋರ್ಡ್ ಹಾಕಿಕೊಂಡು ಅವನನ್ನು ಸಾಂಕ್ರಾಮಿಕದಂತಹ ಬೇರೆ ಬೇರೆ ನೆಪಗಳ ಹೆಸರಿನಲ್ಲಿ ದೋಚುವುದು ಯಾವ ಸೀಮೆಯ ನೈತಿಕತೆ? ಅರ್ಥನೀತಿಯ ಆಚರಣೆಯಲ್ಲಿನ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯ ಕೊರತೆಯೇ ಉಳಿದೆಲ್ಲ ಸಾಮಾಜಿಕ ಪಿಡುಗುಗಳ ಮೂಲವಾಗಿದೆ. ಅವೈಜ್ಞಾನಿಕವಾಗಿ ಏರುತ್ತಿರುವ ಬೆಲೆಗಳನ್ನು ತಡೆಯುವ ಸಂಘಟಿತ ಪ್ರಯತ್ನ ನಡೆಯದೇ ಹೋದರೆ ಬಡವ, ಶ್ರೀಮಂತರ ನಡುವಿನ ಕಂದರ ಹೆಚ್ಚಾಗುವ ಆತಂಕ ಅಪಾಯಕಾರಿಯಾಗಬಲ್ಲದು. ಅಗತ್ಯ ತತ್ವವೊಂದನ್ನು ಶಾಸನಬದ್ಧಗೊಳಿಸದ ಹೊರತು, ಎದೆದನಿಗೆ ಕಿವಿಗೊಡದ ಹೊರತು ಈ ಕಂದರದ ಆಳ, ಕರಾಳತೆಯನ್ನು ಕಡಿಮೆ ಮಾಡಲಾಗದು.

ಬೇಕಾಬಿಟ್ಟಿ ಬೆಲೆ ಏರಿಕೆಯ ವಿಷಯದಲ್ಲಿ ವ್ಯಾಪಾರೀ ವರ್ಗವು ಉದಾತ್ತ ನ್ಯಾಯಯುತ ಲಾಭ ನೀತಿಯನ್ನು ಅಳವಡಿಸಿಕೊಳ್ಳಲು ಹೃದಯವಂತಿಕೆ ಬೇಕು. ಕಳೆದ ಎರಡು– ಮೂರು ದಶಕಗಳ ರಾಜಕೀಯವೇ ವ್ಯಾಪಾರೋದ್ಯಮವಾಗಿ ಬೆಳೆದು 'ಬಿತ್ತಿ ಬೆಳೆದುಕೊಳ್ಳುವ' ನಿಧಾನ ಅಭಿವೃದ್ಧಿ ವಿಧಾನದ ಹಾದಿ 'ಚೆಲ್ಲಿ ಬಾಚಿಕೊಳ್ಳುವ' ಅವಸರದ ದಾರಿಗೆ ಹೊರಳಿರುವ ಸಮಯದಲ್ಲಿ, ಸಮಾಜ ಬಯಸುವ ನೈತಿಕತೆಯನ್ನು ಅನುತ್ಪಾದಕವೆಂದು ತಿಳಿಯಬಾರದು.

ವಾಚಕರ ವಾಣಿ

ಜೀವರಕ್ಷಕ ಹೆಲ್ಮೆಟ್: ಮಾಡೋಣ ಪ್ರತಿಜ್ಞೆ

ನಟ ಸಂಚಾರಿ ವಿಜಯ್ ಅವರು ರಸ್ತೆ ಅಪಘಾತದಲ್ಲಿ ತಲೆಗೆ ತೀವ್ರ ಪೆಟ್ಟು ಬಿದ್ದು ಪ್ರಾಣ ಕಳೆದುಕೊಂಡಿರುವುದಕ್ಕೆ ಹೆಲ್ಮೆಟ್ ಧರಿಸದೇ ಇದ್ದ ಅವರ ನಿರ್ಲಕ್ಷ್ಯವೇ ಕಾರಣ ಎಂದರೆ ತಪ್ಪಾಗಲಾರದು. ದ್ವಿಚಕ್ರ ವಾಹನ ಚಾಲಕ ಹಾಗೂ ಹಿಂಬದಿ ಸವಾರ ಇಬ್ಬರಿಗೂ ಹೆಲ್ಮೆಟ್ ಕಡ್ಡಾಯ ಎಂಬ ನಿಯಮ ರೂಪಿಸಲಾಗಿದೆ. ಹೀಗಿದ್ದರೂ ಕೆಲವರು ಹೆಲ್ಮೆಟ್ ಧರಿಸದೇ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ. ಇಂಥ ಸಣ್ಣದೊಂದು ನಿರ್ಲಕ್ಷ್ಯದಿಂದಲೇ ಇಂದು ಅಪ್ಪಟ ಪ್ರತಿಭೆಯೊಂದು ಚಿಗುರುವ ಹಂತದಲ್ಲೇ ಕಮರುವಂತಾಯಿತು.

ಪೊಲೀಸರ ಭಯಕ್ಕೆ ನಾವಿಂದು ಕೆಲ ಸಂಚಾರ ನಿಯಮಗಳನ್ನು ಪಾಲಿಸುತ್ತಿದ್ದೇವೆ. ಸಂಚಾರ ಪೊಲೀಸರು ವಾಹನ ಅಡ್ಡಗಟ್ಟಿ ದಂಡ ಹಾಕುತ್ತಾರೆಂದು ಹಿಡಿಶಾಪ ಹಾಕುತ್ತೇವೆ. ಆದರೆ ದಂಡದ ಮಹತ್ವದ ಅರಿವು ನಮಗಾಗುತ್ತಿಲ್ಲ. ಸಂಚಾರ ನಿಯಮಗಳ ಬಗ್ಗೆ ಇನ್ನಾದರೂ ನಾವು ಜಾಗೃತರಾಗಬೇಕು. ಹೆಲ್ಮೆಟ್ ಧರಿಸದೇ ಬೈಕ್ ಹತ್ತುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕು.

ಪುಷ್ಪಲತಾ ಎಂ., ಬಿಳಿಗೆರೆಹುಂಡಿ, ಮೈಸೂರು

ಇ– ಮೇಲ್ ಪತ್ರ ಗಮನಿಸಿ

ಹಳ್ಳಿಯೊಂದರ ವಿದ್ಯುತ್ ಸಂಪರ್ಕದ ವಿಚಾರಕ್ಕೆ ಸಂಬಂಧಿಸಿದಂತೆ ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಿಗೆ ಇ– ಮೇಲ್ ಮೂಲಕ ಒಂದು ಪತ್ರ ಕಳುಹಿಸಿದೆ. ಎಲ್ಲ ಇಲಾಖೆಗಳಂತೆ ಬೆಸ್ಕಾಂ ಎಂ.ಡಿ ಕಚೇರಿಯವರು ಕೂಡ ನನ್ನ ಪತ್ರ ಓದುವ ಸಾಹಸ ಮಾಡಲಾರರು ಎಂದೇ ಭಾವಿಸಿದ್ದೆ. ಆದರೆ ಪತ್ರ ಕಳುಹಿಸಿದ ಒಂದು ಗಂಟೆಯೊಳಗೆ ಕಚೇರಿಯಿಂದ 'ನೀವು ಈ ಕುರಿತು ಇಲಾಖೆಯೊಂದಿಗೆ ಮಾಡಿರುವ ಪತ್ರ ವ್ಯವಹಾರಗಳನ್ನು ಒದಗಿಸಿ' ಎಂದು ಇ– ಮೇಲ್ ಪ್ರತಿಕ್ರಿಯೆ ಬಂದಿತು!

ಕಚೇರಿಗಳಿಗೆ ಮುದ್ದಾಂ ಸಲ್ಲಿಸಿದರೂ ಒಂದು ಹಿಂಬರಹ ನೀಡದ ಇಲಾಖೆಗಳ ಸಿಬ್ಬಂದಿಯ ನಡುವೆ ಒಂದು ಇ– ಮೇಲ್ ಅನ್ನು ಆ ಕ್ಷಣಕ್ಕೆ ತೆರೆದು ನೋಡಿ ಪ್ರತಿಕ್ರಿಯಿಸಿದ್ದು ಒಳ್ಳೆಯ ಬೆಳವಣಿಗೆಯೇ ಸರಿ. ಎಲ್ಲ ಕಚೇರಿಗಳಲ್ಲೂ ಇ– ಮೇಲ್ ಪತ್ರಗಳನ್ನು ಓದಿ ಪ್ರತಿಕ್ರಿಯೆ ನೀಡಬೇಕೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಆದೇಶವೇ ಇದೆ. ಆದರೆ, ಅದು ಪಾಲನೆಯಾಗುತ್ತಿಲ್ಲವಷ್ಟೆ. ಈಗಲಾದರೂ ಈ ಆದೇಶ ಪಾಲನೆಯಾದರೆ ಜನ ಕಚೇರಿಗಳಿಗೆ ಅಲೆಯುವುದು ತಪ್ಪುತ್ತದೆ. ಈಗಿನ ಕೊರೊನಾ ಸಂದರ್ಭದಲ್ಲಂತೂ ಮತ್ತಷ್ಟು ಅನುಕೂಲವಾಗುತ್ತದೆ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ದಾರಿ ತಪ್ಪಿಸುವ ಚಿತ್ರಸಾಹಿತ್ಯ

ಕನ್ನಡ ಚಲನಚಿತ್ರ ಗೀತೆಗಳ ಸಾಹಿತ್ಯ ಎತ್ತ ಸಾಗಿದೆ ಎಂಬ ಬಗ್ಗೆ ಗೀತರಚನಕಾರರೂ ಸಾಹಿತಿಗಳೂ ಆದ ದೊಡ್ಡರಂಗೇಗೌಡ ಅವರು ಚಿಂತನ ಮಂಥನ ನಡೆಸಿದ್ದಾರೆ (ಪ್ರ.ವಾ., ಮೇ 28). ಇಂದಿನ ಚಿತ್ರಗಳಲ್ಲಿ ಅಲ್ಲಲ್ಲಿ ಸಾಹಿತ್ಯ ಗುಣವುಳ್ಳ ಚಿತ್ರಗೀತೆಗಳು ಬಂದಿವೆ. ಅದನ್ನು ಅಲ್ಲಗಳೆಯುವಂತಿಲ್ಲ. ಆದರೆ ಯುವ ಮನಸ್ಸುಗಳನ್ನು ಹುಚ್ಚೆಬ್ಬಿಸುವ, ದಾರಿ ತಪ್ಪಿಸುವ, ಸಂಸ್ಕೃತಿ ವಿಹೀನ ಚಿತ್ರಸಾಹಿತ್ಯ ನಿರ್ಮಾಣ ಆಗುತ್ತಿರುವುದೂ ಸುಳ್ಳಲ್ಲ. ಆದ್ದರಿಂದ ದೊಡ್ಡರಂಗೇಗೌಡ ಅವರ ಸಂವೇದನಾಶೀಲ ಪ್ರತಿಕ್ರಿಯೆಗೆ ನಮ್ಮ ಸ್ವಾಗತವಿದೆ.

ಪ್ರೊ. ಕೆ.ಭೈರವಮೂರ್ತಿ, ನಾ.ನಾಗಚಂದ್ರ, ಮೈಸೂರು

ಪ್ಯಾಕೇಜ್ ಹಣ: ಬೇಕು ಹೆಚ್ಚುವರಿ ಕೌಂಟರ್

ಲಾಕ್‌ಡೌನ್ ಕಾರಣದಿಂದ ಶ್ರಮಿಕ ವರ್ಗಕ್ಕೆ ಸರ್ಕಾರ ಇತ್ತೀಚೆಗೆ ಘೋಷಿಸಿರುವ ವಿಶೇಷ ಪ್ಯಾಕೇಜ್‌ನ ಹಣ ಇನ್ನು ಕೆಲವೇ ದಿನಗಳಲ್ಲಿ ಫಲಾನುಭವಿಗಳ ಖಾತೆಗಳಿಗೆ ಜಮೆಯಾಗುವ ಸಾಧ್ಯತೆ ಇದೆ. ಈ ಹಣವನ್ನು ಪಡೆದುಕೊಳ್ಳಲು ಫಲಾನುಭವಿಗಳು ಒಂದೇ ಸಮಯದಲ್ಲಿ ಬ್ಯಾಂಕಿಗೆ ತೆರಳುವ ಸಾಧ್ಯತೆ ಹೆಚ್ಚಾಗಿ ಇರುವುದರಿಂದ, ಜನಸಂದಣಿ ಉಂಟಾಗಿ ಮಾರಕ ಕೋವಿಡ್-19 ಉಲ್ಬಣಗೊಳ್ಳಬಹುದು. ಹೀಗಾಗಿ, ಬ್ಯಾಂಕುಗಳಲ್ಲಿ ತಾತ್ಕಾಲಿಕವಾಗಿ ಹೆಚ್ಚುವರಿ ಕೌಂಟರ್‌ಗಳನ್ನು ತೆರೆದು ಫಲಾನುಭವಿಗಳಿಗೆ ನಗದನ್ನು ವಿತರಿಸಬೇಕು. ಆಗ ಕೋವಿಡ್ ನಿಯಮಾವಳಿಗಳನ್ನು ಪಾಲಿಸುವುದರ ಜೊತೆಗೆ ಫಲಾನುಭವಿಗಳಿಗೆ ಶೀಘ್ರದಲ್ಲಿ ನಗದನ್ನು ವಿತರಿಸಿದಂತೆಯೂ ಆಗುತ್ತದೆ.

ಸುನೀಲ್ ಕುಮಾರ್ ಬಿ.ಎಸ್., ಬನ್ನೂರು, ಟಿ.ನರಸೀಪುರ

ಹೋರಾಟ ನೆನಪಾಗಲಿಲ್ಲವೇಕೆ?

ರಾಜ್ಯದಲ್ಲಿ ಕಾಂಗ್ರೆಸ್‌ಗೆ ಹುರುಪು ಬಂದಿದ್ದು, ನೈಜ ವಿರೋಧ ಪಕ್ಷದ ಕರ್ತವ್ಯವನ್ನು ಮಾಡುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದು ವೈ.ಗ.ಜಗದೀಶ್ ಬರೆದಿದ್ದಾರೆ (ಪ್ರ.ವಾ., ಜೂನ್ 16). ಕಾಂಗ್ರೆಸ್ ಪಕ್ಷವು ಜನರಲ್ಲಿ ತನ್ನ ಬಗ್ಗೆ ವಿಶ್ವಾಸ ಮೂಡಿಸುವ ಸ್ಥಿತಿಯಲ್ಲಿಲ್ಲ. ಇತ್ತೀಚಿನ ಬೆಳವಣಿಗೆಗಳಿಂದ ಜನರಲ್ಲಿ ಬಿಜೆಪಿ ಬಗೆಗಿನ ನಂಬಿಕೆ ಜಾರುತ್ತಾ ಹೋಗುತ್ತಿದ್ದರೂ ಪ್ರಬಲ ಪ್ರತಿಪಕ್ಷವಾಗಿ ಚಿಮ್ಮಬೇಕಾಗಿದ್ದ ಕಾಂಗ್ರೆಸ್‌ನ ಸ್ವಯಂಕೃತ ಅಪರಾಧದಿಂದಾಗಿ, ಅದು ಇನ್ನಷ್ಟು ವರ್ಷಗಳು ವನವಾಸದಲ್ಲಿ ಇರಬೇಕಾಗುವ ಸನ್ನಿವೇಶದಲ್ಲಿ ಬದಲಾವಣೆ ಕಾಣುತ್ತಿಲ್ಲ.

ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡಾಗಿನಿಂದ ಕಾಂಗ್ರೆಸ್ ಪಕ್ಷದ ನಾಯಕತ್ವ 'ಕೋಮಾ'ಕ್ಕೆ ಜಾರಿದೆ. ರಾಜ್ಯದಲ್ಲಿ ಅಧಿಕಾರ ವಂಚಿತರಾದಾಗಿನಿಂದ ರಾಜ್ಯದ ನಾಯಕರು ಬೆಲೆ ಏರಿಕೆ ಬಗ್ಗೆ, ಕೊರೊನಾ ನಿಯಂತ್ರಣ ಕ್ರಮಗಳ ಬಗ್ಗೆ ಜನರ ನಿರೀಕ್ಷೆಗೆ ತಕ್ಕಷ್ಟು ಹೋರಾಡುತ್ತಿಲ್ಲ. ಬದಲಿಗೆ, 'ಹೊಣೆಗೇಡಿ' ಆಡಳಿತಕ್ಕೆ ಪತ್ರಿಕಾ ಹೇಳಿಕೆಗಳಿಂದ ಛೀಮಾರಿ ಹಾಕುವುದಕ್ಕೆ ಸೀಮಿತರಾಗಿದ್ದಾರೆ. ಹಿಂದೆ ಬಿಜೆಪಿ ನಿರಂತರವಾಗಿ ಕೂಗು ಹಾಕುತ್ತಿದ್ದುದು, ಹೋರಾಟ ಮಾಡುತ್ತಿದ್ದು- ದಾದರೂ ಕಾಂಗ್ರೆಸ್ಸಿಗೆ ನೆನಪಾಗಲಿಲ್ಲವೇ?

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಬೆನ್ನು ಮೂಳೆ ಮುರಿದರೂ ಇನ್ನೂ ಮಮತಾ ಬ್ಯಾನರ್ಜಿ ಅವರಿಗೆ ಅದು 'ತಲೆನೋವು' ಆಗಿರುವುದು, ಬಿಹಾರದಲ್ಲಿ ಯುವನಾಯಕ ತೇಜಸ್ವಿ ಯಾದವ್, ಕಮ್ಯುನಿಸ್ಟ್ ಪಕ್ಷದ ಯುವ ಮುಂದಾಳು ಕನ್ಹಯ್ಯ ಕುಮಾರ್ ಅವರ ಗರ್ಜನೆಗಳೂ ಕಾಂಗ್ರೆಸ್ಸಿಗರ ಗಮನಕ್ಕೆ ಬರಲಿಲ್ಲವೇ? ಅಧಿಕಾರದಲ್ಲಿದ್ದಾಗಲೇ ಜನರ ವಿಶ್ವಾಸ ಕಳೆದುಕೊಂಡಿದ್ದ ಕಾಂಗ್ರೆಸ್, ಆಗೊಮ್ಮೆ ಈಗೊಮ್ಮೆ ನೀಡುವ ಪತ್ರಿಕಾ ಹೇಳಿಕೆಗಳು, ಟ್ವಿಟರ್‌ನಲ್ಲಿನ ಬಾಲಿಶ ಟೀಕೆಗಳು ಜನರ ವಿಶ್ವಾಸ ಗಳಿಸಬಲ್ಲವೇ?

ಪಿ.ಸಿ.ಕೇಶವ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಂಜಾಬ್, ರಾಜಸ್ಥಾನ ಒಳಜಗಳವೇ ಪ್ರಧಾನ

ಪಂಜಾಬ್, ರಾಜಸ್ಥಾನ ಮತ್ತು ಛತ್ತೀಸಗಡದಲ್ಲಿ ಮಾತ್ರ ಕಾಂಗ್ರೆಸ್ ನೇತೃತ್ವದ ಸರ್ಕಾರ ಈಗ ಅಸ್ತಿತ್ವದಲ್ಲಿವೆ. ಪಂಜಾಬ್ ಮತ್ತು ರಾಜಸ್ಥಾನದಲ್ಲಿ ಸರ್ಕಾರ ರಚನೆ ಆಗುವುದರ ಜತೆಗೇ ಪಕ್ಷದ ಹಿರಿಯ ಮುಖಂಡರ ನಡುವೆ ಗುದ್ದಾಟವೂ ಆರಂಭವಾಗಿತ್ತು. ವರ್ಷದೊಳಗೆ ಚುನಾವಣೆ ನಡೆಯಲಿರುವ ಪಂಜಾಬ್‌ನಲ್ಲಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಮತ್ತು ಹಿರಿಯ ಮುಖಂಡ ನವಜೋತ್ ಸಿಂಗ್ ಸಿಧು ನಡುವಣ ಕುಸ್ತಿ ತಾತ್ಕಾಲಿಕವಾಗಿ ಶಮನವಾದಂತೆ ಕಾಣಿಸುತ್ತಿದೆ. ರಾಜಸ್ಥಾನದಲ್ಲಿ ಎರಡನೇ ಹಂತದ ಬಂಡಾಯಕ್ಕೆ ಸಚಿನ್ ಪೈಲಟ್ ಬಣ ಸಜ್ಜಾಗುತ್ತಿದೆ ಎಂಬ ವರದಿಗಳಿವೆ

ರಾಜಸ್ಥಾನ ಕಾಂಗ್ರೆಸ್ ಘಟಕದಲ್ಲಿ ತೀವ್ರ ಸ್ವರೂಪದ ಭಿನ್ನಮತೀಯ ಚಟುವಟಿಕೆಗಳು ನಡೆದು ಒಂದು ವರ್ಷ ಕಳೆಯುವಷ್ಟರಲ್ಲಿ ಮತ್ತೊಂದು ಸುತ್ತಿನ ಬಂಡಾಯ ಪರ್ವ ಶುರುವಾಗುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ. ಕಳೆದ ಬಾರಿ ಪಕ್ಷದ ಮೇಲೆ ಮುನಿಸಿಕೊಂಡು ಶಾಸಕರನ್ನು ಕರೆದೊಯ್ದಿದ್ದ ಹಿರಿಯ ಮುಖಂಡ ಸಚಿನ್ ಪೈಲಟ್ ಅವರನ್ನು ಸಮಾಧಾನಪಡಿಸಲಾಗಿತ್ತು. ಇದೀಗ ಅದೇ ಬಣ ಮತ್ತೆ ಭಿನ್ನಮತದ ಹಾದಿ ತುಳಿಯುವ ಸಾಧ್ಯತೆಯಿದೆ ಎನ್ನಲಾಗಿದೆ.

ರಾಜ್ಯ ಸಚಿವ ಸಂಪುಟ ಪುನರ್‌ರಚನೆ ಸದ್ಯದಲ್ಲೇ ನಡೆಯಲಿದೆ. ಖಾಲಿ ಇರುವ 9 ಸ್ಥಾನಗಳ ಮೇಲೆ ಸುಮಾರು 25 ಶಾಸಕರು ಕಣ್ಣಿಟ್ಟಿದ್ದಾರೆ. ಇದರಲ್ಲಿ ಸಚಿನ್ ಪೈಲಟ್ ಬಣ ಮೇಲುಗೈ ಸಾಧಿಸಲು ಹವಣಿಸುತ್ತಿದೆ. ಸಂಪುಟ ವಿಸ್ತರಣೆ ಕುರಿತು ಪ್ರಿಯಾಂಕಾ ಗಾಂಧಿ ಅವರ ಭೇಟಿಗೆ ಪೈಲಟ್ ದಿನ ನಿಗದಿ ಮಾಡಿದ್ದಾರೆ. ಹಿಂದಿನ ವರ್ಷ ಮುನಿಸಿಕೊಂಡಾಗ ಅದಕ್ಕೆ ಮುಲಾಮು ಹಚ್ಚಿದ್ದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಈಗಿನ ಪರಿಸ್ಥಿತಿಯನ್ನು ಖುದ್ದಾಗಿ ಗಮನಿಸುತ್ತಿದ್ದಾರೆ. ಜಿತಿನ್ ಪ್ರಸಾದ ಅವರು ಕಳೆದ ವಾರ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದರು. ಸಚಿನ್ ಪೈಲಟ್ ಕೂಡ ಅವರ ಹಾದಿ ಹಿಡಿಯುತ್ತಾರಾ ಎಂಬ ಸಂಶಯ ಮೂಡಿದೆ.

ಗೆಹ್ಲೋಟ್‌ಗೆ ಅಗ್ನಿಪರೀಕ್ಷೆ



ಸಂಪುಟ ವಿಸ್ತರಣೆ ಎಂಬ ಅಗ್ನಿಪರೀಕ್ಷೆಯು ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ರಾಜಕೀಯ ಭವಿಷ್ಯವನ್ನು ನಿರ್ಧರಿಸಲಿದೆ ಎಂದು ವಿಶ್ಲೇಷಕರು ಹೇಳುತ್ತಾರೆ. ಇದಕ್ಕಾಗಿ ಅವರು ತಮ್ಮ ರಾಜಕೀಯ ಮುತ್ಸದ್ದಿತನ ಬಳಸಿಕೊಳ್ಳಬೇಕಿದೆ. ಪೈಲಟ್ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರನ್ನು ಸಮಾಧಾನಪಡಿಸುವ ತಂತ್ರ ಹೂಡಬೇಕಿದೆ. ತಮ್ಮ ಬೆಂಬಲಿಗರ ಜೊತೆಗೆ ಪೈಲಟ್ ಬಣದವರಿಗೂ ಸಂಪುಟದಲ್ಲಿ ಅರ್ಹ ಸ್ಥಾನಗಳನ್ನು ನೀಡಬೇಕಿದೆ.


ಆದರೆ ಬಿಎಸ್‌ಪಿ ತೊರೆದು ಕಾಂಗ್ರೆಸ್ ಸೇರಿರುವ ಆರು ಶಾಸಕರು ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಇತ್ತ ಪೈಲಟ್ ಬಣ ಮೇಲುಗೈ ಸಾಧಿಸಬಹುದು ಎಂಬ ಕಾರಣಕ್ಕೆ ಈ ಶಾಸಕರು ಗೆಹ್ಲೋಟ್ ಮೇಲೆ ಒತ್ತಡ ತಂತ್ರ ಶುರು ಮಾಡಿದ್ದಾರೆ. ತಾವು ಕಾಂಗ್ರೆಸ್ ಸೇರಿ ಬೆಂಬಲ ಸೂಚಿಸಿದ್ದರಿಂದಲೇ ಇಂದು ಗೆಹ್ಲೋಟ್ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿದಿದ್ದಾರೆ ಎಂದು ಶಾಸಕ ರಾಜೇಂದ್ರ ಗುಡಾ ಎಚ್ಚರಿಸಿದ್ದಾರೆ. ಗೆಹ್ಲೋಟ್ ಅವರು ಎಲ್ಲವನ್ನೂ ಸರಿದೂಗಿಸಿಕೊಂಡು, ಪಕ್ಷದ ವರ್ಚಸ್ಸನ್ನು ಉಳಿಸಿಕೊಂಡು, ಬಂಡಾಯಗಾರರನ್ನೂ ಮನವೊಲಿಸಿ ತಮ್ಮ ಕುರ್ಚಿಯನ್ನು ಭದ್ರಪಡಿಸಿಕೊಳ್ಳುವ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದಾರೆ.

2020ರಲ್ಲಿ ಉಂಟಾಗಿದ್ದ ಸಂಘರ್ಷದ ಬಗ್ಗೆ ವರದಿ ನೀಡಲು ಮೂವರು ಸದಸ್ಯರ ಸಮಿತಿಯನ್ನು ಹೈಕಮಾಂಡ್ ರಚಿಸಿತ್ತು. ಅಹ್ಮದ್ ಪಟೇಲ್, ಕೆ.ಸಿ. ವೇಣುಗೋಪಾಲ್, ಅಜಯ್ ಮಾಕನ್ ಅವರು ಸಮಿತಿಯಲ್ಲಿದ್ದರು. ಪಟೇಲ್ ನಿಧನಾನಂತರ ಅವರ ಸ್ಥಾನಕ್ಕೆ ಹೊಸಬರನ್ನು ಇನ್ನೂ ನೇಮಿಸಿಲ್ಲ. ಹೀಗಾಗಿ ವರ್ಷ ಕಳೆಯುತ್ತಾ ಬಂದರೂ ವರದಿ ಪೂರ್ಣಗೊಂಡಿಲ್ಲ. ಈ ಬಗ್ಗೆ ಉಪಮುಖ್ಯಮಂತ್ರಿಯೂ ಆಗಿದ್ದ ಪೈಲಟ್ ಅವರಿಗೆ ಬೇಸರವಿದೆ ಎನ್ನಲಾಗಿದೆ. ಇಷ್ಟು ದಿನ ಕಳೆದರೂ ತಮ್ಮ ಬೇಡಿಕೆಗಳು ಹಾಗೆಯೇ ಉಳಿದಿವೆ ಎಂಬುದು ಅವರ ಆಕ್ರೋಶ.

ಪತ್ರಿಕೆಯೊಂದಕ್ಕೆ ಸಂದರ್ಶನ ನೀಡಿರುವ ಅವರು, ‘10 ತಿಂಗಳ ಹಿಂದೆ ನೀಡಿದ್ದ ಭರವಸೆಗಳು ಏನಾದವು’ ಎಂದು ಅವರು ಹೈಕಮಾಂಡ್ ಅನ್ನು ಪ್ರಶ್ನಿಸಿದ್ದಾರೆ. ‘ಸಂಧಾನ ಸಮಿತಿಯು ತ್ವರಿತವಾಗಿ ಕ್ರಮ ತೆಗೆದುಕೊಳ್ಳುತ್ತದೆ ಎಂದು ನನಗೆ ಭರವಸೆ ನೀಡಲಾಗಿತ್ತು. ಆದರೆ ಅವಧಿ ಮುಗಿದರೂ ಆ ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ. ಪಕ್ಷವನ್ನು ಅಧಿಕಾರಕ್ಕೆ ತರಲು ಹಗಲು ರಾತ್ರಿ ದುಡಿದ ಕಾರ್ಯಕರ್ತರ ಮಾತುಗಳನ್ನು ಕೇಳಿಸಿಕೊಳ್ಳದಿರುವುದು ದುರದೃಷ್ಟಕರ’ ಎಂದು ಪೈಲಟ್ ಹೇಳಿದ್ದಾರೆ.

ಸಮಿತಿಯು ಕಳೆದ ಆರು ತಿಂಗಳಿನಿಂದ ಏನನ್ನೂ ಮಾಡಿಲ್ಲ. ರಾಜಸ್ಥಾನದಿಂದ ರಾಜ್ಯ ಸಭೆಗೆ ಆಯ್ಕೆಯಾಗಿರುವ ವೇಣುಗೋಪಾಲ್ ಅವರು ಕಳೆದ ಆರು ತಿಂಗಳಿನಿಂದ ರಾಜ್ಯದತ್ತ ಸುಳಿದಿಲ್ಲ. ಹೀಗಾಗಿ 10 ತಿಂಗಳಿನಿಂದ ಬೇಡಿಕೆಗಳು ಈಡೇರಿಲ್ಲ ಎಂಬುದು ಪೈಲಟ್ ಬಣದ ವಾದ.

ರಾಜ್ಯ ಕಾಂಗ್ರೆಸ್‌ನಲ್ಲಿ ದಿನಕ್ಕೊಂದು ಬೆಳವಣಿಗೆ ಸಂಭವಿಸುತ್ತಿವೆ. ಪೈಲಟ್ ಆಪ್ತರಾದ ಹೇಮಾರಾಮ್ ಚೌಧರಿ ಅವರು ಮೇ 18ರಂದು ರಾಜೀನಾಮೆ ನೀಡಿದ್ದಾರೆ. ಅಭಿವೃದ್ಧಿ ಕಾರ್ಯಗಳನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬ ಕಾರಣ ನೀಡಿದ್ದಾರೆ. ಎರಡು ದಿನಗಳ ಹಿಂದೆ, ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರನ್ನು ಹೊಗಳಿದ್ದ ಶಾಸಕ ಪಿ.ಆರ್. ಮೀನಾ ಅವರು ತಾವು ಪೈಲಟ್ ಜೊತೆ ಇರುವುದಾಗಿ ಸ್ಪಷ್ಟನೆ ನೀಡಿದ್ದರು.



ಸಚಿನ್ ಪೈಲಟ್

ಪಂಜಾಬ್: ಕಾಂಗ್ರೆಸ್‌ಗೆ ನೂರು ಚಿಂತೆ

ವಿಧಾನಸಭಾ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವ ಪಂಜಾಬ್‌ನಲ್ಲಿ ಬಿಜೆಪಿಗೆ ಒಂದು ಚಿಂತೆಯಾದರೆ ಆಡಳಿತಾರೂಢ ಕಾಂಗ್ರೆಸ್‌ಗೆ ಹತ್ತು ಚಿಂತೆ ಎಂಬಂತಾಗಿದೆ.

ಕೃಷಿ ಕಾನೂನುಗಳನ್ನು ವಿರೋಧಿಸಿ ದೆಹಲಿ ಗಡಿಯಲ್ಲಿ ಆರು ತಿಂಗಳಿಗೂ ಹೆಚ್ಚು ಕಾಲದಿಂದ ನಡೆಯುತ್ತಿರುವ ರೈತರ ಪ್ರತಿಭಟನೆಯು ಬಿಜೆಪಿಯ ಚಿಂತೆಗೆ ಕಾರಣವಾಗಿದೆ. ಪಂಜಾಬ್‌ನಲ್ಲಿ ಬಿಜೆಪಿಗೆ ಗಟ್ಟಿ ಅಡಿಪಾಯವೇನೂ ಇಲ್ಲ. ಶಿರೋಮಣಿ ಅಕಾಲಿದಳದ ಜತೆಗಿನ ಮೈತ್ರಿಯಿಂದ ಅಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವಾಗಿದೆ.

ಇನ್ನೊಂದೆಡೆ, ಕೃಷಿ ಕಾನೂನುಗಳನ್ನು ಹಿಂಪಡೆಯಲು ಕೇಂದ್ರ ನಿರಾಕರಿಸಿದ್ದನ್ನೇ ಕಾರಣವಾಗಿಟ್ಟು ಶಿರೋಮಣಿ ಅಕಾಲಿ ದಳವು ಎನ್‌ಡಿಎಯಿಂದ ಹೊರನಡೆದಿದೆ. ಇದಾದ ಬಳಿಕ ಪಂಜಾಬ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಿಜೆಪಿಯ ಸಾಧನೆಯು ಕಳಪೆಯಾಗಿತ್ತು. ಆದ್ದರಿಂದ ಬಿಜೆಪಿಗೆ ಪಂಜಾಬ್‌ನಲ್ಲಿ ಹೊಸ ಮಿತ್ರನನ್ನು ಹುಡುಕುವುದು ಅನಿವಾರ್ಯ ಎಂಬಂತಾಗಿದೆ. ಬೇರೆಬೇರೆ ಪಕ್ಷಗಳಲ್ಲಿರುವ ಅತೃಪ್ತ ಪ್ರಭಾವಿ ನಾಯಕರನ್ನು ತನ್ನತ್ತ ಸೆಳೆಯುವ ಕೆಲಸವನ್ನು ಬಿಜೆಪಿ ಈಗಾಗಲೇ ಆರಂಭಿಸಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅತ್ಯಂತ ಪ್ರಭಾವಶಾಲಿ ಪಕ್ಷವಾಗಿ ಹೊರಹೊಮ್ಮಿದ್ದರೂ, ಆ ಪಕ್ಷಕ್ಕೂ ಚಿಂತೆಗಳು ಕಡಿಮೆಯಿಲ್ಲ. ಇಲ್ಲಿ ಪ್ರಶ್ನಾತೀತ ನಾಯಕನಂತಿದ್ದ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ವಿರುದ್ಧ ಕೆಲವು ಸಚಿವರು ಧ್ವನಿ ಎತ್ತಿರುವುದು ಕಾಂಗ್ರೆಸ್‌ನ ಚಿಂತೆಗೆ ಕಾರಣವಾಗಿದೆ.

ಬಿಜೆಪಿಯಿಂದ ವಲಸೆ ಬಂದು, ಕಾಂಗ್ರೆಸ್ ಹೈಕಮಾಂಡ್‌ಗೆ ಆತ್ಮೀಯರೆನಿಸಿಕೊಂಡಿರುವ ನವಜೋತ್‌ಸಿಂಗ್ ಸಿಧು ಅವರ ಬಂಡಾಯವೂ ಕಾಂಗ್ರೆಸ್‌ಗೆ ತಲೆನೋವಾಗಿದೆ. ಭಿನ್ನಮತಕ್ಕೆ ತೇಪೆಹಾಕಲು, ಮಲ್ಲಿಕಾರ್ಜುನ ಖರ್ಗೆ ನೇತೃತ್ವದ ಮೂರು ಮಂದಿ ನಾಯಕರ ಸಮಿತಿಯನ್ನು ಹೈಕಮಾಂಡ್ ರಚಿಸಿದೆ.

ಈ ಸಮಿತಿಯು ಅಮರಿಂದರ್ ಸಿಂಗ್ ಸೇರಿದಂತೆ ರಾಜ್ಯದ ಪ್ರಮುಖ ನಾಯಕರನ್ನು ದೆಹಲಿಗೆ ಕರೆಯಿಸಿ ಮಾತುಕತೆ ನಡೆಸಿದೆ. ತನ್ನದೇ ಸಂಪುಟದ ಕೆಲವು ಸಚಿವರೂ ಸೇರಿದಂತೆ ಪ್ರಮುಖ ನಾಯಕರ ವಿರುದ್ಧ ಸಿಂಗ್ ಅವರು ಸುದೀರ್ಘ ಆರೋಪಪಟ್ಟಿಯನ್ನು ಹೈಕಮಾಂಡ್‌ಗೆ ನೀಡಿದ್ದಾರೆ. ಸಚಿವರುಗಳೂ, ಅಮರಿಂದರ್ ವಿರುದ್ಧ ಇಂಥ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಮರಿಂದರ್ ವಿರುದ್ಧ ಸಿಧು ಅವರ ಬಂಡಾಯವಂತೂ ಬಹಿರಂಗವಾಗಿ ಪ್ರದರ್ಶನಗೊಂಡಿದೆ. ತಮ್ಮನ್ನು ಉಪಮುಖ್ಯಮಂತ್ರಿ ಮಾಡಬೇಕು ಅಥವಾ ಕಾಂಗ್ರೆಸ್ ರಾಜ್ಯ ಘಟಕದ ಮುಖ್ಯಸ್ಥನ ಸ್ಥಾನ ನೀಡಬೇಕು ಎಂಬುದು ಸಿಧು ಅವರ ಬೇಡಿಕೆ. ಇದಕ್ಕೆ ಅಮರಿಂದರ್ ಸಿದ್ಧರಿಲ್ಲ.

ಒಟ್ಟಿನಲ್ಲಿ ಈಗ ಎದ್ದಿರುವ ಭಿನ್ನಮತದ ಅಲೆಯನ್ನು ಇಲ್ಲಿಯೇ ಶಮನಗೊಳಿಸಬೇಕಾದ ತುರ್ತು ಕಾಂಗ್ರೆಸ್‌ಗೆ ಇದೆ. ಹಾಗೆ ಆಗಬೇಕಾದರೆ ಸಿಧುಗೆ ನೀಡಿದ್ದ ಪ್ರಾಶಸ್ತ್ಯವನ್ನು ಕಡಿಮೆ ಮಾಡಬೇಕು ಎಂದು ಪಕ್ಷದ ಕೆಲವು ನಾಯಕರು ಹೇಳಿದ್ದಾರೆ. ಅಮರಿಂದರ್ ಅವರಂಥ ವರ್ಚಸ್ಸಿನ ಇನ್ನೊಬ್ಬ ನಾಯಕ ರಾಜ್ಯದಲ್ಲಿ ಇಲ್ಲ ಎಂಬುದು ಕಾಂಗ್ರೆಸ್‌ನ ಚಿಂತೆಯನ್ನು ಹೆಚ್ಚಿಸಿದೆ. ಆ ಕಾರಣಕ್ಕೇ ಮುಖ್ಯಮಂತ್ರಿಯ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದು ಕಾಂಗ್ರೆಸ್ ಸ್ಪಷ್ಟಪಡಿಸಿದೆ. ಇದರಿಂದಾಗಿ ಒಂದಷ್ಟು ನಾಯಕರು ಪಕ್ಷ ತ್ಯಜಿಸುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ. ಅಂಥವರನ್ನು ಬಿಜೆಪಿ ಸೆಳೆದುಕೊಂಡರೆ ಅಚ್ಚರಿ ಇಲ್ಲ.

ಬಿಎಸ್‌ಪಿ-ಅಕಾಲಿದಳ ಮೈತ್ರಿ

ಕೆಲವು ತಿಂಗಳ ಹಿಂದಿನವರೆಗೂ ಅಂದರೆ, ರೈತರ ಹೋರಾಟವು ಉತ್ತುಂಗದ ಸ್ಥಿತಿಗೆ ಬರುವವರೆಗೆ ಅಮರಿಂದರ್ ಅವರು ಪಂಜಾಬ್‌ನ ಪ್ರಶ್ನಾತೀತ ನಾಯಕನಂತಿದ್ದರು. ಆದರೆ ಕೃಷಿ ಕಾನೂನುಗಳನ್ನು ವಿರೋಧಿಸಿ ಶಿರೋಮಣಿ ಅಕಾಲಿದಳವು ಎನ್‌ಡಿಎ ದಿಂದ ಹೊರಬಂದ ನಂತರ ಜನರಿಗೆ ಇನ್ನೊಂದು ಆಯ್ಕೆ ಸಿಕ್ಕಂತಾಗಿದೆ.

ಕೃಷಿ ಕುರಿತ ಕಾಂಗ್ರೆಸ್‌ನ ನೀತಿಗಳ ಬಗ್ಗೆ ರೈತ ಮುಖಂಡರಿಗೆ ತೃಪ್ತಿ ಇರಲಿಲ್ಲ. ಆದ್ದರಿಂದ ಶಿರೋಮಣಿ ಅಕಾಲಿದಳ ಅವರಿಗೂ ಪರ್ಯಾಯ ಆಯ್ಕೆಯಾಗಬಹುದು.

ಇದರ ಜತೆಯಲ್ಲೇ ಅಕಾಲಿದಳವು ಬಿಎಸ್‌ಪಿ ಜತೆಗೆ ಮೈತ್ರಿಯನ್ನೂ ಘೋಷಿಸಿದೆ. ಇದು ಕಾಂಗ್ರೆಸ್‌ನ ಚಿಂತೆಯನ್ನು ಹೆಚ್ಚಿಸಬಲ್ಲದು. 1992ರಲ್ಲಿ ಪಂಜಾಬ್ ವಿಧಾನಸಭೆಗೆ ಬಿಎಸ್‌ಪಿಯ ಒಂಬತ್ತು ಶಾಸಕರು ಆಯ್ಕೆಯಾಗಿದ್ದರು. ಅತ್ಯಾಚಾರ ಮತ್ತು ಕೊಲೆ ಆರೋಪ ಸಾಬೀತಾಗಿ, ದೇರಾಸಚ್ಚಾ ಸೌದಾ ಮುಖಂಡ ರಾಮ್‌ರಹೀಂ ಜೈಲಿಗೆ ಹೋದ ನಂತರ ರಾಜ್ಯದಲ್ಲಿ ದಲಿತ ಸಮುದಾಯಕ್ಕೆ ಪ್ರಬಲ ನಾಯಕನಿಲ್ಲದಂತಾಗಿತ್ತು. ಬಿಎಸ್‌ಪಿಯು ಈ ಕೊರತೆಯನ್ನು ನೀಗಿಸಬಲ್ಲದೇ ಎಂಬುದನ್ನು ನೋಡಬೇಕಾಗಿದೆ. 2011ರ ಗಣತಿಯ ಪ್ರಕಾರ ಪಂಜಾಬ್‌ನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರ ಪ್ರಮಾಣವು ಶೇ 31.94ರಷ್ಟಿದೆ.

‘ಅಪಮಾನಿಸುವುದೇ ಉದ್ದೇಶ’

ಕಾಂಗ್ರೆಸ್ ಹೈಕಮಾಂಡ್, ಅಮರಿಂದರ್ ಅವರನ್ನು ದೆಹಲಿಗೆ ಕರೆಯಿಸಿ ಭಿನ್ನಮತದ ಬಗ್ಗೆ ಸ್ಪಷ್ಟನೆ ಕೇಳಿದ್ದರ ಹಿಂದೆ ಅವರನ್ನು ಅಪಮಾನಿಸುವ ಉದ್ದೇಶವೂ ಇದೆ ಎಂದು ಕೆಲವು ನಾಯಕರು ಹೇಳಿದ್ದಾರೆ.

ಇದಕ್ಕೆ ಕಾರಣವೂ ಇದೆ. ತಮ್ಮನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸದಿದ್ದರೆ ಪಕ್ಷ ವಿಭಜಿಸಿ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ 2017ರ ಚುನಾವಣೆಯ ಸಂದರ್ಭದಲ್ಲಿ ಸಿಂಗ್ ಅವರು ಹೈಕಮಾಂಡ್‌ಗೆ ಸವಾಲು ಹಾಕಿದ್ದರು. ಅಷ್ಟೇ ಅಲ್ಲ, ಪಕ್ಷವನ್ನು ಮುನ್ನಡೆಸುವ ವಿಚಾರದಲ್ಲಿ ರಾಹುಲ್ ಗಾಂಧಿ ಅವರ ಸಾಮರ್ಥ್ಯವನ್ನೂ ಅವರು ಪ್ರಶ್ನಿಸಿದ್ದರು. ಇದು ಹೈಕಮಾಂಡ್‌ಗೆ ಹಿತವೆನಿಸಿರಲಿಲ್ಲ. ಈ ಕಾರಣಕ್ಕಾಗಿಯೇ ಕೆಲವರು ಸಿಧು ಅವರನ್ನು ಸಿಂಗ್ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ ಎಂದೂ ಆರೋಪಿಸಲಾಗಿದೆ.



ಸಿಧು



ಅಮರಿಂದರ್ ಸಿಂಗ್

ನಿಯಮ ಪಾಲಿಸಲು ವಿಫಲ
ಟ್ವಿಟರ್‌ಗೆ ರಕ್ಷಣೆ ನಷ್ಟ

ನವದೆಹಲಿ (ಪಿಟಿಐ): ಮಾಹಿತಿ ತಂತ್ರಜ್ಞಾನ ಹೊಸ ನಿಯಮಗಳನ್ನು ಪಾಲಿಸದ ಕಾರಣ ಟ್ವಿಟರ್ ಸಂಸ್ಥೆಯು ಕಾನೂನು ರಕ್ಷಣೆಯನ್ನು ಕಳೆದುಕೊಂಡಿದೆ. ಪದೇ ಪದೇ ನೆನಪಿಸಿದರೂ, ಹೊಸ ನಿಯಮಗಳ ಅನುಸಾರ ನೇಮಿಸಬೇಕಿದ್ದ ಪ್ರಮುಖ ಅಧಿಕಾರಿಗಳನ್ನು ಟ್ವಿಟರ್ ನೇಮಿಸಿಲ್ಲ. ಹಾಗಾಗಿ, ಟ್ವಿಟರ್ ಬಳಕೆದಾರರ ಟ್ವೀಟ್‌ಗಳಲ್ಲಿ ಕಾನೂನುಬಾಹಿರ ಅಂಶಗಳಿದ್ದರೆ ಟ್ವಿಟರ್ ಸಂಸ್ಥೆಯ ವಿರುದ್ಧವೂ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಕ್ರಮ ಕೈಗೊಳ್ಳಲು ಅವಕಾಶ ತೆರೆದುಕೊಂಡಿದೆ.

ಮೇ 26ರಿಂದ ಈ ನಿಯಮಗಳು ಜಾರಿಗೆ ಬಂದಿದ್ದವು. ಈ ನಿಯಮಗಳನ್ನು ಪಾಲಿಸದ ಸಂಸ್ಥೆಯು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಇರುವ ವಿನಾಯಿತಿಯನ್ನು ಕಳೆದುಕೊಳ್ಳಲಿವೆ ಎಂದು ಸರ್ಕಾರವು ಎಚ್ಚರಿಕೆ ನೀಡಿತ್ತು.

ನಿಯಮಗಳ ಅನುಸಾರ ಮುಖ್ಯ ಕಾನೂನು ಪಾಲನೆ ಅಧಿಕಾರಿಯ ಕುರಿತ ಮಾಹಿತಿಯನ್ನು ಏಕೆ ಸಲ್ಲಿಸಿಲ್ಲ ಎಂದು ಸರ್ಕಾರವು ಟ್ವಿಟರ್ ಸಂಸ್ಥೆಯನ್ನು ಪ್ರಶ್ನಿಸಿತ್ತು. ಹಾಗೆಯೇ, ಟ್ವಿಟರ್ ನೇಮಿಸಿಕೊಂಡಿರುವ ನಿವಾಸಿ ಕುಂದುಕೊರತೆ ಅಧಿಕಾರಿ ಮತ್ತು ನೋಡಲ್ ಅಧಿಕಾರಿಗಳು ಟ್ವಿಟರ್‌ನ ಉದ್ಯೋಗಿಗಳಲ್ಲ ಎಂಬ ಬಗ್ಗೆಯೂ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಟ್ವಿಟರ್‌ನ ಗಮನ ಸೆಳೆದಿತ್ತು.

ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಅವರು, ನಿಯಮಗಳನ್ನು ಪಾಲಿಸದ ಟ್ವಿಟರ್ ಸಂಸ್ಥೆಯ ವಿರುದ್ಧ ಹರಿಹಾಯ್ದಿದ್ದಾರೆ. ಹಲವು ಅವಕಾಶ ಕೊಟ್ಟರೂ ಸಂಸ್ಥೆಯು ಉದ್ದೇಶಪೂರ್ವಕವಾಗಿ ನಿಯಮ ಪಾಲನೆ ಮಾಡದಿರುವ ದಾರಿಯನ್ನು ಆಯ್ಕೆ ಮಾಡಿಕೊಂಡಿದೆ ಎಂದು ಅವರು ಹೇಳಿದ್ದಾರೆ.

ವಾಕ್ ಸ್ವಾತಂತ್ರ್ಯದ ಪ್ರತಿಪಾದಕ ಎಂದು ತನ್ನನ್ನು ಬಿಂಬಿಸಿಕೊಳ್ಳುವ ಟ್ವಿಟರ್ ಸಂಸ್ಥೆಯು ಮಾರ್ಗಸೂಚಿಗಳನ್ನು ಪಾಲಿಸುವಲ್ಲಿ ತೋರಿದ ಉದ್ಧಟತನ ದಂಗುಬಡಿಸುತ್ತದೆ ಎಂದು ಅವರು ಹೇಳಿದ್ದಾರೆ.

ತನ್ನ ಸತ್ಯ ಶೋಧನೆ ವ್ಯವಸ್ಥೆಯ ಬಗ್ಗೆ ಅತ್ಯುತ್ಸಾಹ ತೋರುವ ಟ್ವಿಟರ್ ಹಲವು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲು ವಿಫಲವಾಗಿದೆ. ಸುಳ್ಳು ಸುದ್ದಿಯ ವಿರುದ್ಧದ ಹೋರಾಟದಲ್ಲಿ ಹೊಂದಾಣಿಕೆಯೇ ಇಲ್ಲ. ಮಾಹಿತಿ ತಂತ್ರಜ್ಞಾನ ಕಂಪನಿಗಳಾಗಲಿ ಔಷಧ ಕಂಪನಿಗಳಾಗಲಿ ಯಾವ ದೇಶದಲ್ಲಿ ವಹಿವಾಟು ನಡೆಸುತ್ತಿವೆಯೋ ಅಲ್ಲಿನ ನಿಯಮಗಳನ್ನು ಸ್ವಯಂಪ್ರೇರಣೆಯಿಂದಲೇ ಪಾಲಿಸಬೇಕು ಎಂದು ಅವರು ಹೇಳಿದ್ದಾರೆ.

ಟ್ವಿಟರ್ ವಿರುದ್ಧ ಪ್ರಕರಣ

ಒಂದನೇ ಪುಟದಿಂದ...

ಸಮದ್ ಅವರು ‘ತವಿಜ್’ ಎಂಬ ದಾರ ತಯಾರಿಸುತ್ತಾರೆ. ಅದಕ್ಕೆ ಮಾಂತ್ರಿಕ ಶಕ್ತಿಯಿದೆ ಎಂದು ಹೇಳಲಾಗುತ್ತದೆ. ಪರ್ವೇಶ್ ಗುಜ್ಜರ್ ಎಂಬ ವ್ಯಕ್ತಿಗೆ ಸಮದ್ ಅವರು ದಾರ ತಯಾರಿಸಿ ಕೊಟ್ಟಿದ್ದರು. ಆದರೆ, ತವಿಜ್ ತಮಗೆ ಬೇಕಾದಂತೆ ಇಲ್ಲ ಎಂಬ ಕಾರಣಕ್ಕೆ ಗುಜ್ಜರ್ ಮತ್ತು ಇತರರು ಸಮದ್ ಮೇಲೆ ಹಲ್ಲೆ ನಡೆಸಿದ್ದರು.

ಈ ಪ್ರಕರಣಕ್ಕೆ ಕೋಮು ಬಣ್ಣ ಬಳಿಯುವ ಉದ್ದೇಶಪೂರ್ವಕ ಯತ್ನ ನಡೆದಿತ್ತು ಎಂದು ಪೊಲೀಸರು ಹೇಳಿದ್ದಾರೆ. ‘ಸುಳ್ಳು ಸುದ್ದಿ ಎಂದು ಸಾಬೀತಾದ ಬಳಿಕವೂ ಸುದ್ದಿಯನ್ನು ಅಳಿಸಿ ಹಾಕಲು ಟ್ವಿಟರ್ ಮುಂದಾಗಲಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಥಳೀಯ ರಾಜಕಾರಣಿಯೊಬ್ಬರ ಕುಮ್ಮಕ್ಕಿನಿಂದ ಸಮದ್ ಸುಳ್ಳು ದೂರು ನೀಡಿದ್ದರು. ‘ಘಟನೆ ನಡೆದು ಒಂಬತ್ತು ದಿನಗಳ ಬಳಿಕ ವಿಡಿಯೊ ವೈರಲ್ ಆಗಿತ್ತು. ಧಾರ್ಮಿಕ ಘೋಷಣೆ ಕೂಗುವಂತೆ ತಮ್ಮನ್ನು ಬಲವಂತ ಮಾಡಿಲ್ಲ ಎಂದು ಸಮದ್ ಹೇಳಿದ್ದರು’ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಚಾನೆಲ್ ಆಯ್ಕೆಗೆ ಪೋರ್ಟಲ್

ನವದೆಹಲಿ (ಪಿಟಿಐ): ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಗ್ರಾಹಕರ ಅನುಕೂಲಕ್ಕಾಗಿ ಟಿವಿ ಚಾನೆಲ್ ಆಯ್ಕೆಯ ವೆಬ್ ಪೋರ್ಟಲ್ ಅನ್ನು ಪ್ರಾರಂಭಿಸಿದೆ.

ಟ್ರಾಯ್ ಕಳೆದ ವರ್ಷ ಜೂನ್ 25 ರಂದು ಟಿವಿ ಚಾನೆಲ್ ಆಯ್ಕೆಯ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿತ್ತು. ಚಂದಾದಾರಿಕೆಯನ್ನು ಪರಿಶೀಲಿಸಲು, ಅದನ್ನು ಮಾರ್ಪಡಿಸಲು, ಕೇಬಲ್ ನಿರ್ವಾಹಕರು ಯಾವೆಲ್ಲ ಚಾನೆಲ್‌ಗಳನ್ನು ಒದಗಿಸುತ್ತಿದ್ದಾರೆ ಎಂಬುದನ್ನು ನೋಡಲು, ತಮ್ಮ ನೆಚ್ಚಿನ ಚಾನೆಲ್‌ಗಳನ್ನು ಆಯ್ಕೆ ಮಾಡಲು ಬಳಕೆದಾರರಿಗೆ ಈ ಆ್ಯಪ್ ಸೌಲಭ್ಯ ಒದಗಿಸಿತ್ತು.

ಆದರೆ ಸ್ಮಾರ್ಟ್‌ಫೋನ್ ಹೊಂದಿರುವವರು ಮಾತ್ರ ಈ ಸೌಲಭ್ಯ ಪಡೆಯಲು ಅವಕಾಶ ಇತ್ತು. ಸ್ಮಾರ್ಟ್‌ಫೋನ್ ಹೊಂದಿರದ ಗ್ರಾಹಕರಿಗೆ ಅನುಕೂಲವಾಗುವಂತೆ ಟ್ರಾಯ್ ಈ ವೆಬ್ ಪೋರ್ಟಲ್ ಆರಂಭಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ನೋಡಿ, ಕೇರಳದ ವಯನಾಡಿನ ಕಾಂಗ್ರೆಸ್ ಕಚೇರಿ ಹೇಗಿದೆ ಎಂದು. ಕಾಂಗ್ರೆಸ್ ಹಿಂದೂಗಳ ಪಕ್ಷ ಎಂದು ಹೇಳುವುದನ್ನು ಇನ್ನಾದರೂ ನಿಲ್ಲಿಸುತ್ತೀರಾ’ ಎಂಬ ಆಗ್ರಹ ಇರುವ ಟ್ವೀಟ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಟ್ವೀಟ್‌ನ ಜೊತೆ ಪೂರ್ಣ ಕಡುಹಸಿರು ಬಣ್ಣದ ಕಟ್ಟಡದ ಚಿತ್ರವೂ ಇದೆ. ಆ ಕಟ್ಟಡದ ಗೋಡೆಯ ಮೇಲೆ ಅರ್ಧಚಂದ್ರ-ನಕ್ಷತ್ರ ಚಿಹ್ನೆ, ಒಂದು ಬದಿಯಲ್ಲಿ ಏಣಿಯ ಚಿತ್ರ ಇದೆ. ಉರ್ದುವಿನ ಬರಹವಿದೆ. ‘ಇದು ಪಾಕಿಸ್ತಾನವಲ್ಲ, ವಯನಾಡಿನ ಕಾಂಗ್ರೆಸ್ ಪಕ್ಷದ ಕಚೇರಿ’ ಎಂದು ಕೆಲವರು ಲೇವಡಿ ಮಾಡಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಈ ಚಿತ್ರ ರಿಟ್ವೀಟ್ ಆಗಿದೆ.



ವೈರಲ್ ಆಗಿರುವ ಚಿತ್ರ

‘ಇದು ಸುಳ್ಳು ಸುದ್ದಿ. ಕಟ್ಟಡದ ಬಲಬದಿಯಲ್ಲಿರುವ ಅರ್ಧಚಂದ್ರ ಮತ್ತು ನಕ್ಷತ್ರದ ಚಿಹ್ನೆ ಕೇರಳದ ಮುಸ್ಲಿಂ ಲೀಂಗ್ ಪಕ್ಷಕ್ಕೆ ಸೇರಿದ್ದು. ಕಟ್ಟಡದ ಎಡಬದಿಯಲ್ಲಿ ಏಣಿಯ ಚಿತ್ರ ಇದೆ. ಇದು ಚುನಾವಣಾ ಆಯೋಗವು ಮುಸ್ಲಿಂ ಲೀಗ್‌ಗೆ ನೀಡಿರುವ ಅಧಿಕೃತ ಚಿಹ್ನೆ. ಪಕ್ಷದ ನಾಯಕ ದಿ. ಸಯ್ಯದ್ ಮೊಹಮ್ಮದ್ ಅಲಿ ಶಿಹಾಬ್ ತಂಗಲ್ ಅವರ ಚಿತ್ರವನ್ನು ಕಟ್ಟಡದ ಗೋಡೆಯ ಮೇಲೆ ಹಾಕಿಸಲಾಗಿದೆ. ಹೀಗಾಗಿ ಇದು ಕಾಂಗ್ರೆಸ್ ಕಚೇರಿಯಲ್ಲ. ಬದಲಿಗೆ ಲೀಗ್ ಕಚೇರಿ ಕಟ್ಟಡ ಎಂಬುದು ಸಾಬೀತಾಗಿದೆ. ಕಾಂಗ್ರೆಸ್ ಪಾಕಿಸ್ತಾನಿಯರನ್ನು ಓಲೈಸುತ್ತದೆ ಎಂದು ತಪ್ಪು ಅಭಿಪ್ರಾಯ ಮೂಡಿಸಲು ಈ ಚಿತ್ರವನ್ನು ಬಳಸಿಕೊಂಡು ಸುಳ್ಳು ಸುದ್ದಿ ಹರಡಲಾಗಿದೆ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ



ದೈವಕೃಪೆಯಾದ ಬಾಂಧವ್ಯ

ಬಂಧನವದೇನಲ್ಲ ಜೀವಜೀವಪ್ರೇಮ |
ಒಂದೆ ನಿಲೆ ಜೀವವರೆ, ಬೆರೆತರಳೆ ಪೂರ್ಣ ||
ದಂದುಗವನ್ ಅರೆಗೆಯ್ದು, ಸಂತಸವನಿಮ್ಮಡಿಪ |
ಬಾಂಧವ್ಯ ದೈವಕೃಪೆ – ಮಂಕುತಿಮ್ಮ || 429 ||

ಪದ-ಅರ್ಥ: ಬಂಧನವದೇನಲ್ಲ = ಬಂಧನವು + ಅದೇನಲ್ಲ, ಜೀವವರೆ = ಜೀವ + ಅರೆ (ಅರ್ಧ), ಬೆರೆತರಳೆ = ಬೆರೆತಾಗ, ದಂದುಗ = ಕಷ್ಟ, ಕೋಟಲೆ, ಅರೆಗೆಯ್ದು = ಅರ್ಧಮಾಡಿ, ಸಂತಸವನಿಮ್ಮಡಿಪ = ಸಂತಸವನು + ಇಮ್ಮಡಿಪ (ಎರಡು ಪಟ್ಟಾಗಿಸುವ).

ವಾಚ್ಯಾರ್ಥ: ಜೀವ-ಜೀವಗಳ ಪ್ರೇಮ ಬಂಧನವಲ್ಲ. ಜೀವ ಒಂದೇ ಇದ್ದರೆ ಅದು ಕೇವಲ ಅರ್ಧಮಾತ್ರ. ಮತ್ತೊಂದರೊಡನೆ ಬೆರೆತಾಗ ಅದಕ್ಕೆ ಪೂರ್ಣತ್ವ. ನಮ್ಮ ಆತಂಕಗಳನ್ನು ಕಡಿಮೆಮಾಡಿ, ಸಂತೋಷವನ್ನು ಇಮ್ಮಡಿಗೊಳಿಸುವ ಬಾಂಧವ್ಯ ನಿಜವಾಗಿಯೂ ದೈವಕೃಪೆ.

ವಿವರಣೆ: ಜೀವಜೀವಗಳ ನಡುವಿನ ಬಾಂಧವ್ಯ ಬಂಧನವಲ್ಲ, ಅದೊಂದು ಸೇತುವೆ. ಒಂದು ಹೃದಯವನ್ನು ಮತ್ತೊಂದಕ್ಕೆ ಬೆಸೆಯುವ ಸಂಪರ್ಕಸೇತು. ಎಲ್ಲಿಯ ಕಿಷ್ಕಿಂಧೆಯ ಆಂಜನೇಯ ಎಲ್ಲಿಯ ಅಯೋಧ್ಯೆಯ ರಾಮ! ಅವರಿಬ್ಬರ ಬಾಂಧವ್ಯ ಲೋಕಕ್ಕೆ ಮಾದರಿಯಾಯಿತು, ರಾಮಾಯಣ ಸುಂದರವಾಯಿತು. ರಾಮ ಆಂಜನೇಯರ ಸಂಬಂಧ, ಬಂಧನವಾಗಲಿಲ್ಲ, ಅನೇಕರನ್ನು ಬಂಧಮುಕ್ತರನ್ನಾಗಿಸಿತು. ಎಲ್ಲಿ ಒಲವಿದೆಯೋ ಅಲ್ಲಿ ಬಾಂಧವ್ಯ ಸುಂದರ, ಸರಸ. ಅದಕ್ಕೆ ಕಾಲ, ದಿಕ್ಕು, ಅಂತಸ್ತುಗಳ ಪರಿವೆಯಿಲ್ಲ. ಬಡತನ ಜೀವಜೀವಗಳ ಬಾಂಧವ್ಯಕ್ಕೆ ಅಡ್ಡಿ ಬರಲಾರದು. ‘ನಾನು ಬಡವಿ ಆತ ಬಡವ, ಒಲವೆ ನಮ್ಮ ಬದುಕು, ಬಳಸಿಕೊಂಡೆವದನೆ ನಾವು, ಅದಕು ಇದಕು ಎದಕು’ ದ.ರಾ.ಬೇಂದ್ರೆಯವರ ಕವನದ ಈ ನಾಲ್ಕು ಸಾಲುಗಳು ಎರಡು ಜೀವಗಳು ಒಲವಿನಿಂದ ಸೇರಿದಾಗ ಆಗುವ ಸಾರ್ಥಕತೆಯನ್ನು, ಧನ್ಯತೆಯನ್ನು ತೋರುತ್ತವೆ. ಅವರ ಬಳಿ ಹಣವಿಲ್ಲ, ಆದರೆ ಒಲವಿದೆ. ಅದೇ ಬದುಕಾಗಿದೆ. ಎಲ್ಲದಕ್ಕೂ ಅವರು ಬಳಸಿಕೊಂಡಿದ್ದು ಆ ಒಲವನ್ನೇ. ಆದ್ದರಿಂದ ಒಲವಿನ ಬಂಧ, ಬಂಧನವಾಗದೆ ಮುಕ್ತಿಯಾಯಿತು.

ನಿರ್ಗುಣ, ನಿರಾಕಾರ, ಅನಂತವಾದ ಭಗವಂತ ಒಬ್ಬನೇ ಇದ್ದನಂತೆ. ಆನಂತರ ಒಬ್ಬನೇ ಇದ್ದರೆ ಏನು ಸೊಗಸು ಎಂದುಕೊಂಡು ಇಬ್ಬರಾದ. ಪ್ರಕೃತಿ-ಪುರುಷರ ಮೂಲಕ ಇಡೀ ಪ್ರಪಂಚದ ಜಾಲವನ್ನು ಹೆಣೆದ. ಅದಕ್ಕೆ ಕಗ್ಗ ಹೇಳುತ್ತದೆ, ಒಬ್ಬರೇ ಇದ್ದರೆ ಅದು ಅರೆಬಾಳು. ಅದೊಂದು ದೂರದ ಮಾನವ ಸಂಪರ್ಕವಿರದ ದ್ವೀಪವಿದ್ದಂತೆ. ಅಲ್ಲಿಯ ಭೋಗ, ಭಾಗ್ಯ, ಸೌಂದರ್ಯಗಳು ಬೇರೆಯವರಿಗೆ ಹಂಚದೆ ಉಳಿಯುತ್ತವೆ. ಮತ್ತೊಂದು ತೀರದಿಂದ ಅದಕ್ಕೊಂದು ಸೇತುವೆ ಕಟ್ಟಿದರೆ ಅಲ್ಲಿಯ ಸೌಂದರ್ಯ ಇಮ್ಮಡಿಯಾಗುತ್ತದೆ. ಅಂತೆಯೇ ಒಂದು ಜೀವಕ್ಕೆ ಸಾಂತ್ವನ, ಸಹಕಾರ ದೊರಕುವುದು ಮತ್ತೊಂದು ಜೀವದೊಂದಿಗೆ ಬೆರೆತಾಗಲೇ. ಹೀಗೆ ನಮ್ಮ ಆತಂಕ, ಸಂಕಟಗಳನ್ನು ಕಡಿಮೆ ಮಾಡುವ, ಸಂತೋಷವನ್ನು ಅನೇಕ ಮಡಿ ಹೆಚ್ಚಿಸುವ ಈ ಜೀವ ಜೀವಗಳ ಬಾಂಧವ್ಯ ಒಂದು ದೈವಕೃಪೆಯೇ ಸರಿ. ❖

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಜೂನ್ 17, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ಸಪ್ತಮೀ ಗಂ. 28-53 (ಸಾ. 5-35) ಗುರುವಾರ ನಿತ್ಯ ನಕ್ಷತ್ರ ಪೂರ್ವಫಲ್ಗುಣೀ ಗಂ. 31-28 (ಸಾ. 6-37) ಸಿದ್ಧಿ ನಾಮ ಯೋಗ ಗಂ. 50-8 ಗರಜ ಕರಣ ಗಂ. 0-9 ಉಪರಿ ವಣಿಜ ಕರಣ ಗಂ. 28-44 ವಿಷ ಗಂ. 49-0 ಅಮೃತ ಗಂ. 15-4 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 5-57 **ಸೂರ್ಯಾಸ್ತ:** 6-43 **ಅದೃಷ್ಟ ಸಂಖ್ಯೆ** 14

ಮೇಷ: ಅಭಿರುಚಿಗೆ ತಕ್ಕಂತೆ ಸ್ವಾವಲಂಬಿ ಕಾರ್ಯಗಳಲ್ಲಿ ತೊಡಗುವಿರಿ. ಆದರ್ಶ ಹೊಂದಿದ ಕೆಲಸಕಾರ್ಯಗಳಿಗೆ ಸಹಾಯ ದೊರಕಿ ಕಾರ್ಯಸಾಧನೆ ಮಾಡಲಿದ್ದೀರಿ. ಘನತೆ ಗೌರವಗಳು ನಿಮ್ಮದಾಗಲಿವೆ.

ವೃಷಭ: ಸದಾಚಾರ ಕಾರ್ಯಗಳಲ್ಲಿ ಸ್ವಸ್ಥ ಮನಸ್ಸಿನಿಂದ ತೊಡಗುವಿರಿ. ಇಷ್ಟ ಮಿತ್ರರ ಮಧ್ಯಸ್ಥಿಕೆಯಲ್ಲಿ ಗಂಭೀರ ಸಮಾಲೋಚನೆಗಳು ನಡೆಯುವ ಸಾಧ್ಯತೆಯಿದ್ದು ಶುಭದಾಯಕವಾಗಿ ಪರಿಣಮಿಸಲಿದೆ.

ಮಿಥುನ: ನಿಮ್ಮ ವಿರುದ್ಧ ಪಿತೂರಿ ನಡೆಸುತ್ತಿರುವವರ ಬಣ್ಣ ಇಂದು ಬಯಲಾಗಲಿದೆ. ಮೇಧಾವಿ ತನದಿಂದಾಗಿ ಹಿತಕರ ವಾತಾವರಣ ನಿಮ್ಮದಾಗುವುದು. ಗೊಂದಲದ ನಿವಾರಣೆಗಾಗಿ ವೆಚ್ಚ ಮಾಡುವ ಸಾಧ್ಯತೆ ಇದೆ.

ಕರ್ಕಾಟಕ: ಭರವಸೆಗಳ ಮಹಾಪೂರವೇ ಹರಿದುಬಂದು ಸಂತೋಷ ಮೂಡುವುದು. ಸೇವಾಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಸವಾಲುಗಳು ಎದುರಾಗಲಿದ್ದು ಎದೆಗುಂದದೇ ಮುನ್ನುಗ್ಗಿ. ಯಶಸ್ಸು ನಿಮ್ಮದಾಗಲಿದೆ.

ಸಿಂಹ: ಹೊಂದಿಕೊಳ್ಳುವ ಮನೋಭಾವದಿಂದಾಗಿ ಮಹತ್ವದ ವಿಷಯಗಳಲ್ಲಿ ಒಡಂಬಡಿಕೆಗೆ ಬರುವ ಸಾಧ್ಯತೆ. ವಿಪರೀತ ಸನ್ನಿವೇಶಗಳು ಎದುರಾಗಬಹುದು. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯ ಚರ್ಚೆ ನಡೆಯುವ ಸಾಧ್ಯತೆ.

ಕನ್ಯಾ: ನಿಮ್ಮ ಬಹುದಿನಗಳ ಬಯಕೆ ಇಡೇರುವ ಸಾಧ್ಯತೆ. ವೃತ್ತಿಯಲ್ಲಿ ಬದಲಾವಣೆ ಮಾಡುವ ಸಾಧ್ಯತೆ. ಉತ್ತಮ ಕೆಲಸ ಕಾರ್ಯಗಳಿಂದಾಗಿ ಮನ್ನಣೆ ಗಳಿಸುವಿರಿ. ಮನೆಯವರ ಆರೋಗ್ಯದ ಬಗ್ಗೆ ನಿಗಾ ವಹಿಸಿ.

ತುಲಾ: ಸಮಸ್ಯೆಗಳ ಪರಿಹಾರಕ್ಕಾಗಿ ನಿಮ್ಮ ಹೊಸ ಜಾಣ್ಮೆಯನ್ನು ಬಳಸಬೇಕಾದ ಸಂದರ್ಭ ಬರಬಹುದು. ನಿಮ್ಮ ದಿಟ್ಟ ಮಾತುಗಳಿಂದಾಗಿ ಅನಾವಶ್ಯಕ ಹೊರೆ ಹೊರಬೇಕಾದೀತು. ಸಾಂಸಾರಿಕ ಸಂತೋಷ ಅನುಭವಿಸುವಿರಿ.

ವೃಶ್ಚಿಕ: ಕಷ್ಟಗಳೆಲ್ಲವೂ ಕರಗಿ ಹೋಗಿ ಕಾರ್ಯ ಯೋಜನೆಗಳು ಸುಲಭವಾಗಿ ಸಾಕಾರಗೊಳ್ಳುವವು. ಕೆಲಸಕಾರ್ಯಗಳಿಗೆ ಸ್ಫೂರ್ತಿ ದೊರಕುವುದು. ಬಂಧು-ವರ್ಗದವರಿಂದ ಸಕಾಲಿಕ ನೆರವು ದೊರೆಯುವ ಸಾಧ್ಯತೆ.

ಧನು: ಬೇರೆಯವರ ಸಲಹೆಯಿಂದಾಗಿ ಅಪಾಯದಲ್ಲಿ ಸಿಲುಕಿಕೊಳ್ಳುವ ಸಾಧ್ಯತೆ. ಹಿರಿಯರ ಮಾತುಗಳನ್ನು ಗೌರವಿಸುವುದರಿಂದ ಆಪತ್ತಿನಿಂದ ಪಾರಾಗುವಿರಿ. ಛಲಕ್ಕೊಂದು ಬಲದೊರೆತು ಯಶಸ್ಸು ನಿಮ್ಮದಾಗಲಿದೆ.

ಮಕರ: ಬಹುದಿನಗಳಿಂದ ಬಾಕಿ ಇರುವ ಕೆಲಸ ಕಾರ್ಯಗಳು ಇಂದು ವಿಳಂಬವಿಲ್ಲದೇ ನೆರವೇರುವ ಸಾಧ್ಯತೆ. ಸಮಾಜದ ಗೌರವಾದರಗಳು ನಿಮ್ಮನ್ನರಸಿ ಬರುವವು.

ಕುಂಭ: ಬಂಧುಗಳ ಸಲಹೆ ಮತ್ತು ಆಶ್ವಾಸನೆಗಳಲ್ಲಿ ವಿಶ್ವಾಸ ವಿಡಿ. ಹೊಸ ಕೆಲಸಕಾರ್ಯಗಳಲ್ಲಿ ತೊಡಗಲು ಪ್ರಶಸ್ತವಾಗಿದೆ. ಷರತ್ತು ಬದ್ಧ ಅವಕಾಶಗಳು ದೊರಕುವ ಸಾಧ್ಯತೆ. ಉದ್ಯೋಗರಂಗದಲ್ಲಿ ಬದಲಾವಣೆ.


ಮೀನ: ನಂಬಿ ಬಂದವರಿಗೆ ಉತ್ತಮ ಆಸರೆ ನೀಡಿ ಹರ್ಷದಾಯಕ ಸಂದೇಶ ನೀಡುವ ಸಾಧ್ಯತೆ. ಚಮತ್ಕಾರಿಕವಾಗಿ ಸತ್ಕಾರ್ಯಗಳಲ್ಲಿ ತೊಡಗಿ ನಿರ್ವಹಿಸುವ ಅವಕಾಶ ನಿಮ್ಮದಾಗಲಿದೆ. ಪ್ರಶಂಸೆಗೆ ಪಾತ್ರರಾಗುವಿರಿ.

ನಿಮ್ಮ ಜನ್ಮದಿನ 17-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವ್ಯವಹಾರದಲ್ಲಿ ಉತ್ಕೃಷ್ಟತೆಯಲ್ಲದಿದ್ದರೂ ಸಾಮಾನ್ಯ ರೀತಿಯಲ್ಲಿ ನಡೆಯುವುದು. ನಿಮ್ಮ ನಡವಳಿಕೆಗಳ ಬಗ್ಗೆ ಗೌರವಾದರ ದೊರಕುವುದು. ದಾಂಪತ್ಯದಲ್ಲಿ ಸದಾ ಸಂತೋಷವನ್ನನುಭವಿಸುವಿರಿ.

ಪದಬಂಧ 4630 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗರ ಸೆನ್ಸಸ್! (5)
4.ಈತ ಪಾಶ್ಚಾತ್ಯ ದೇಶದವನು (3)
5.ದಿಕ್ಕು ತೋಚದಿರುವುದು (3)
6.ವನದ ಕೊನೆಗೆ ಮಾಡಿದ ಯಜ್ಞ (3)
8.ಇದು ಶ್ರೇಷ್ಠವಾದುದು (3)
9.ನೋಡುಗ ಇಲ್ಲಿದ್ದಾನೆ (3)
11.ದೇಗುಲದ ಗೋಪುರದ ತುದಿ (3)
12.ಜೂಜಿನಲ್ಲಿ ಒಡ್ಡುವ ಪಣ (3)
13.ಕುಶನ ಸಹೋದರ ಹಿಡಿದಿರುವ ಉಪ್ಪು (3)
15.ಆನೆಯ ಮರಿಯಿದು (3)
17.ಶಿವಭಕ್ತರಿಗೆ ಮಾಡುವ ಆರೋಗಣೆ (3)
18.ಯಾತ್ರಾಸ್ಥಳದಲ್ಲಿ ಸತಿ ತಂಗಿರುವ ಮನೆ(5)

ಮೇಲಿಂದ ಕೆಳಕ್ಕೆ
1.ಬಾಯಲ್ಲಿ ನುರಿಸು (2)
2.ಗಡಕ್ಕನೆ ಬಂದೆರಗಿದ ಗಂಡು ಬೆಕ್ಕು (3)
3.ಚರ್ಮದ ಊದುಚೀಲ (2)
6.ಕೈಚಳಕವನ್ನು ಇಲ್ಲಿ ನೋಡಬಹುದು (5)
7.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)
8.ಪ್ರತಿಮೆಯ ಹತ್ತಿರವಿರುವ ಚಿಹ್ನೆ ಕಾಣುತ್ತಿದೆಯೇ? (3)
10.ಕಣದಲ್ಲಿ ನೆರವೇರಿದ ವಿವಾಹ (3)
14.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
16.ಭವನದಲ್ಲಿರುವ ಸಂಸಾರ (2)
17.ಉದಾಹರಣೆ ನೀಡುವಾಗ ಆದ ತೃಷೆ (2)



4629ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರವರ್ತಕ 2.ಅನುಪಮ 4.ಚಕ್ರವಾಕ 7.ಜಕಾತಿ 8.ಗಾಣ 9.ವಲ್ಲಭ 10.ಭಟ 11.ಹಾವಸೆ 12.ತಲೆಗಾಪು 14.ಹಗೆತನ 15.ಜಪಮಾಲೆ

ಮೇಲಿಂದ ಕೆಳಕ್ಕೆ: 1.ಪ್ರಪಂಚ 3.ಪದ್ಧತಿ 5.ಕ್ರಮೇಣ 6.ಕತ್ತಿವರಸೆ 7.ಜಡಭರತ 10.ಭದ್ರಗಾ 11.ಹಾವುಗೆ 13.ಪುರಲೆ

ಸುಡೊಕು 5016

1		9		2			8	
	6				9		5	2
	8			4	5			
2							6	
		4		3				1
5					2			
		5		9			7	6
7			2		6	8		
9	4			7			3	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5015 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ನೇಪಾಳದಲ್ಲಿ ಭಾರಿ ಮಳೆ: 7 ಮಂದಿ ಸಾವು

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಭಾರಿ ಮಳೆಯಾಗಿದ್ದು, 7 ಮಂದಿ ಮೃತಪಟ್ಟಿದ್ದಾರೆ. ಪ್ರವಾಹದಿಂದಾಗಿ 50 ಮಂದಿ ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಕಳೆದ 48 ಗಂಟೆಗಳ ಅವಧಿಯಲ್ಲಿ ಭಾರಿ ಮಳೆ ಆಗಿದೆ. ಕೇಂದ್ರ ನೇಪಾಳದ ಸಿಂಧುಪಾಲ್ಚೋಕ್ ಜಿಲ್ಲೆಯಲ್ಲಿ ಅಪಾರ ಹಾನಿ ಮತ್ತು ಸಾವುಗಳು ಸಂಭವಿಸಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು


Log on to : https://homages.deccanherald.com
or
Scan QR code to access booking form

8ನೇ ವರ್ಷದ ಸವಿನೆನಪು



ಹೆಚ್.ಕೆ ವೇಣುಗೋಪಾಲ್ ರೆಡ್ಡಿ
ನಿಧನ: 17-06-2013
ನಿಮ್ಮ ನೆನಪು ನಮ್ಮ ಮನ ಮನಗಳಲ್ಲಿ ನಿತ್ಯ ನೂತನ, ನಿರಂತರ ಹಾಗೂ ಅಮರ.
ಸದಾ ನಿಮ್ಮ ನೆನಪಿನಲ್ಲಿ: ಪತ್ನಿ, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

SAD DEMISE



Machamada Pemmaiah Naveen
(Passed away on 14th June 2021)
Sadly missed along life's way...
Lovingly remembered every day...
No longer in our life to share...
But in our hearts you're always there
Deeply mourned by:
Ramesh Muddappa, Nisi Poonamma, Samanth Poovaiah & Hemanth Subbaiah
Family and Friends

NAME CHANGE ANNOUNCEMENT

Log on to : dhclassifieds.com

ವೈಕುಂಠ ಸಮಾರಾಧನೆ



ಜನನ: 06.12.1965
ಮರಣ: 07.06.2021

ವಿ.ಕೆ ಗೋಪಾಲ್ ರವರು
S/o ಲೇಟ್ ವೇಲೂರಿ ಕೃಷ್ಣಪ್ಪ ನಾಯ್ಡು
ಅಧ್ಯಕ್ಷರು – ಬಿಡಿಎ ಗುತ್ತಿಗೆದಾರರ ಸಂಘ
ಅಧ್ಯಕ್ಷರು –ಜಾತ್ಯಾತೀತ ಜನತಾದಳ (ಪದ್ಮನಾಭನಗರ ವಿದಾನಸಭಾ ಕ್ಷೇತ್ರ), ಮಾಜಿ ಆಂತರಿಕ ಲೆಕ್ಕ ಪರಿಶೋಧಕರು–ಕಮ್ಮವಾರಿ ಸಂಘ
ಮಾಜಿ ನಿರ್ದೇಶಕರು – ಕಮ್ಮವಾರಿ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ಲಿಮಿಟೆಡ್
ನೀವು ಕುಟುಂಬದೆಡೆಗೆ ತೋರಿಸಿದ ಪ್ರೀತಿ, ಕಾಳಜಿ, ಸಂತೋಷ ನಮ್ಮನ್ನು ಮೂಕವಿಸ್ಮಿತರನ್ನಾಗಿಸಿದೆ. ನಿಮ್ಮ ಸದಾ ನಗುಮುಖದ ಹೊಳಪು ಎಲ್ಲರನ್ನು ಪ್ರೇರೇಪಿಸುತ್ತಿತ್ತು. ಯಾವಾಗಲೂ ಸರಿಯಾದ ಸಮಯದಲ್ಲಿ ಸರಿಯಾದ ಕೆಲಸವನ್ನು ಮಾಡುತ್ತಿದ್ದಿರಿ. ನೀವು ನಮಗೆ ತಿಳಿಸದೆ ಆಕಸ್ಮಿಕವಾಗಿ ವಿರಮಿಸಿದಿರಿ. ನಿಮ್ಮ ಜೀವನ ಆಶೀರ್ವಾದವಾಗಿತ್ತು. ನಿಮ್ಮ ನೆನಪು ಒಂದು ನಿಧಿ ಇದ್ದಂತೆ. ನಿಮ್ಮ ಪ್ರೀತಿಯನ್ನು ಪದಗಳಿಂದ ವರ್ಣಿಸಲು ಸಾಧ್ಯವಿಲ್ಲ. ನಿಮ್ಮ ಆತ್ಮಕ್ಕೆ ಸ್ವರ್ಗದಲ್ಲಿ ದೇವರು ಶಾಶ್ವತ ಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ವೈಕುಂಠ ಸಮಾರಾಧನೆ ದಿ. 17.06.2021ರಂದು ಗುರುವಾರ ಬೆಳಗ್ಗೆ 10 ಘಂಟೆಗೆ ಸಂಕ್ರಾಂತಿ ಕಲ್ಯಾಣ ಮಂಟಪ, (ಸೇವಾ ಕ್ಷೇತ್ರ ಹಾಸ್ಪಿಟಲ್ ಮುಂಭಾಗ), ಕೆ.ಆರ್. ರಸ್ತೆ, ಬೆಂಗಳೂರು–70
ದುಃಖತಪ್ತರು
ಧರ್ಮಪತ್ನಿ ಕೆ.ಗಾಯಿತ್ರಿ, ಮಗಳು ಜಿ.ವಂದನಾ, ಮಗ ವಿ.ಜಿ.ಹೇಮಂತ್ ಮತ್ತು ಕುಟುಂಬವರ್ಗ
ಫೋನ್: 99001 55908

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
Others

Yodha ವಾಹನದ ಮೊತ್ತೊಂದು ಹೆಸರು ಉತ್ಕೃಷ್ಟ ಶಕ್ತಿ ಮತ್ತು ಬಲ
TATA YODHA ವಾಹನದ ಮೇಲೆ ಆಕರ್ಷಕ ಕೊಡುಗೆಗಳು

ಇಂದೇ ಕೊಳ್ಳಿರಿ
ನಿಮ್ಮ ಮಾಸಿಕ ಕಂತನ್ನು 2 ತಿಂಗಳ ನಂತರ ಪ್ರಾರಂಭಿಸಿ
ಕೊಡುಗೆಗಳು ₹25,000/-
ಎಕ್ಸ್‌ಚೇಂಜ್ ₹20,000/-
Bangalore 72597 84441
95389 35533
Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 9880142353
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 73899 44057
Hubli/Belgaum- 91088 64572

ಉದ್ಯೋಗಾವಕಾಶ
Part-Time Jobs
ಲಾಕ್-ಡೌನ್ ಸಮಯದಲ್ಲಿ ಸುವರ್ಣಾವಕಾಶ ... ಮಾಸಿಕ ಗಳಿಸಿ 15,000-25,000/- ... 9108059956, 9901929956
ಕನ್ನಡ ಮತ್ತು ಇಂಗ್ಲಿಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ ... ಮಾಸಿಕ ತಿಂಗಳಿಗೆ 12,000-15,000 ... 8884777502, 8884777503
General
WORK FROM HOME ... 12,000- 15,000 ... 8884875553/ 8884875554
Wanted
OPPORTUNITY DURING PANDEMIC: Exclusively for FEMALES, Business Opportunity Presentation through Zoom on Sunday June 20. Qualified aged above 30 years preferred. Interested call for registration Dinesh 9686568279

Security & Detectives
REQUIRED SECURITY supervisor & guards at Devanahalli 8 hrs duty 25000 & 21000 sal. Training uniform & registration will charged extra. Age 25- 45. Supervisor ex service man required Contact No 9901066214 Peter Pinto 9620396577 Balaji

ಭವಿಷ್ಯ
Astrology
... 9686007334
... 9008711329

ಕ್ಲಾಸಿಫೈಡ್ಸ್ BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
9880856233
9845114560
9606912256

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಹುಮನಾಬಾದ್‌ನ ದುಬಲಗುಂಡಿಯ ಶಿಕ್ಷಕ ದಂಪತಿ ಸಾವು: ಖಾಲಿಯಾಗಿದೆ ಸಂತಸ ತುಂಬಿದ ಮನೆ

‘ತಂಗಿ, ತಮ್ಮನಿಗೆ ಹೇಗೆ ಧೈರ್ಯ ಹೇಳಲಿ?’

• ಚಂದ್ರಕಾಂತ ಮಸಾನಿ




ಮಕ್ಕಳ ಆಸರೆ ಕಸಿದ ಕೊರೊನಾ

ಬೀದರ್: ‘ಶಿಕ್ಷಕರಾಗಿದ್ದ ತಂದೆ–ತಾಯಿ ಇಬ್ಬರೂ ಕೋವಿಡ್‌ನಿಂದ ನಮ್ಮನ್ನು ಅಗಲಿದ್ದಾರೆ. ಸಂತಸ ತುಂಬಿದ ಮನೆ ಖಾಲಿಯಾಗಿದೆ. ತಾಯಿ ನೆನಪಾಗುತ್ತಲೇ ತಮ್ಮ ಕಣ್ಣೀರಿಡುತ್ತಿದ್ದಾನೆ. ತಂಗಿ, ತಮ್ಮ ಇನ್ನೂ ಚಿಕ್ಕವರು. ಅವರಿಗೆ ಹೇಗೆ ಧೈರ್ಯ ಹೇಳಬೇಕು ಎನ್ನುವುದು ಅರ್ಥವಾಗುತ್ತಿಲ್ಲ. ನನಗೂ ದಿಕ್ಕು ತೋಚುತ್ತಿಲ್ಲ...’

‘ತಂದೆ– ತಾಯಿಯ ಮದುವೆಯ ಬೆಳ್ಳಿ ಮಹೋತ್ಸವದಲ್ಲಿ ಪಾಲ್ಗೊಳ್ಳಲು ರಜೆ ಪಡೆದು ಬೆಂಗಳೂರಿನಿಂದ ಮನೆಗೆ ಬಂದಿದ್ದೆ. ತಾಯಿ ಮೀನಾಕ್ಷಿ ಕೋವಿಡ್‌ನಿಂದ ಕೊನೆಯುಸಿರೆಳೆದ ಒಂದು ತಿಂಗಳಲ್ಲಿ ತಂದೆಯೂ ಕೋವಿಡ್‌ನಿಂದಲೇ ಮೃತಪಟ್ಟರು. ಕುಟುಂಬವೇ ಶೋಕ ಸಾಗರದಲ್ಲಿ ಮುಳುಗುವಂತಾಯಿತು’ ಎಂದು ಹುಮನಾಬಾದ್ ತಾಲ್ಲೂಕಿನ ದುಬಲಗುಂಡಿಯ ಶಿಕ್ಷಕ ದಂಪತಿಯ ಹಿರಿಯ ಮಗಳು ಸುಷ್ಮಾ ಕಣ್ಣೀರು ಹಾಕಿದರು.

‘ತಂದೆ–ತಾಯಿ ಇಬ್ಬರೂ ನಮಗೆ ಆಸರೆಯಾಗಿದ್ದರು. ಕೆಲ ತಿಂಗಳ ಹಿಂದೆಯಷ್ಟೇ ನಾನು ಬೆಂಗಳೂರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ. ಒಂದಿಷ್ಟು ಹಣ ಕೂಡಿಟ್ಟು ಮದುವೆಯ ಬೆಳ್ಳಿ ಮಹೋತ್ಸವಕ್ಕೆ ಅಮ್ಮನಿಗೆ ಚಿನ್ನದ ಆಭರಣವನ್ನೇ ಉಡುಗೊರೆ ನೀಡಬೇಕೆಂದಿದ್ದೆ. ಆದರೆ, ನಾನು ಅಂದುಕೊಂಡಂತೆ ಆಗಲಿಲ್ಲ’ ಎಂದು ಮೌನಕ್ಕೆ ಜಾರಿದರು.

‘ಮನೆ ಮನೆ ಸಮೀಕ್ಷೆ ಕೆಲಸದಲ್ಲಿ ತೊಡಗಿದ್ದ ತಂದೆಗೆ ಮೊದಲು ಕೋವಿಡ್ ತಗುಲಿತು. ಅವರಿಂದ ನನಗೂ ಕೋವಿಡ್ ಬಂತು. ನಮ್ಮನ್ನು ಉಪಚರಿಸುತ್ತಿದ್ದ ತಾಯಿಗೆ ಯಾವಾಗ ಸೋಂಕು ತಗುಲಿತು ಗೊತ್ತಾಗಲಿಲ್ಲ. ಒಂದು ದಿನ ಯಾಕೋ ಮೈಕೈ ನೋವು ಆಗುತ್ತಿದೆ ಎಂದು ಹೇಳಿದಳು. ಎರಡು ದಿನಗಳ ನಂತರ ಹಠಾತ್ ಉಸಿರಾಟದಲ್ಲಿ ಏರುಪೇರಾಗಿ ಕೊನೆಯುಸಿರೆಳೆದಳು’ ಎಂದು ತಿಳಿಸಿದರು.



ಸುರೇಶ ನೀಲಂಗಿ ಹಾಗೂ ಮೀನಾಕ್ಷಿ

‘ತಾಯಿ ಸಾವಿಗೀಡಾದ ಸುದ್ದಿ ಕೇಳಿ ತಂದೆಗೆ ಹೃದಯಾಘಾತವಾದೀತು ಎನ್ನುವ ಭಯದಿಂದ ಮನೆಮಂದಿಯಲ್ಲ ವಿಷಯವನ್ನು ಬಚ್ಚಿಟ್ಟಿದ್ದೆವು. ತಾಯಿಯನ್ನು ಕಳೆದುಕೊಂಡ ದುಃಖದಲ್ಲಿದ್ದ ನಾವು ತಂದೆಯನ್ನಾದರೂ ಉಳಿಸಿಕೊಳ್ಳೋಣ ಎಂದು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದೆವು. ಚಿಕಿತ್ಸೆಗಾಗಿ ₹10 ಲಕ್ಷ ಖರ್ಚಾಯಿತು’ ಎಂದು ಹೇಳಿದರು.

‘ತಂದೆ ಆಸ್ಪತ್ರೆಯಲ್ಲಿದ್ದಾಗ ಮೀನಾಕ್ಷಿಯನ್ನು ಫೋನ್‌ನಲ್ಲಿ ಮಾತನಾಡಿಸಿ ಎಂದು ಪದೇ ಪದೇ ಹೇಳುತ್ತಿದ್ದರು. ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಮನೆಗೆ ಬಂದಿದ್ದರು. ಅಮ್ಮ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಅಲ್ಲಿ ಮೊಬೈಲ್‌ನಲ್ಲಿ ಮಾತನಾಡಿಸಲು ಅವಕಾಶ ಇಲ್ಲ ಎಂದು ಸ್ವಲ್ಪ ದಿನ ತಳ್ಳಿದೆವು. ನಂತರ ಅವರು ಮತ್ತೆ ಹಾಸಿಗೆ ಹಿಡಿದವರು ಏಳಲೇ ಇಲ್ಲ’ ಎಂದು ಹೇಳಿದರು.

ಸುರೇಶ ನೀಲಂಗಿ ಅವರು ಭಾಲ್ಕಿ ತಾಲ್ಲೂಕಿನ ನಾವದಗಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಹಾಗೂ ಅವರ ಪತ್ನಿ ಮೀನಾಕ್ಷಿ ಅವರು ದುಬಲಗುಂಡಿಯ ಅನುದಾನ ರಹಿತ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಏಪ್ರಿಲ್ 21 ರಂದು ಮೀನಾಕ್ಷಿ ಹಾಗೂ ಮೇ 24 ರಂದು ಸುರೇಶ ಮೃತಪಟ್ಟಿದ್ದಾರೆ.

12 ವರ್ಷದ ಗಗನ್ ದುಬಲಗುಂಡಿಯ ಬಸವತೀರ್ಥ ವಿದ್ಯಾಪೀಠದ ಶಾಲೆಯಲ್ಲಿ ನಾಲ್ಕನೇ ತರಗತಿಯಲ್ಲಿ ಹಾಗೂ 17 ವರ್ಷದ ಸಹನಾ ಬೀದರ್‌ನ ಶಾಹೀನ್ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಪಿಯುಸಿ ದ್ವಿತೀಯ ವರ್ಷದಲ್ಲಿ ಓದುತ್ತಿದ್ದಾರೆ. ಸುರೇಶ ಅವರು ಹಿರಿಯ ಮಗಳಿಗೆ ಭಾಲ್ಕಿಯ ಭೀಮಣ್ಣ ಖಂಡ್ರೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಶಿಕ್ಷಣ ಕೊಡಿಸಿ ಎಂಜಿನಿಯರ್ ಮಾಡಿದ್ದಾರೆ. ಮಕ್ಕಳು ಈಗ ದುಬಲಗುಂಡಿಯಲ್ಲಿ ಚಿಕ್ಕದಾದ ಕಿರಾಣಿ ಅಂಗಡಿ ಇಟ್ಟುಕೊಂಡಿರುವ ಅಜ್ಜಿ ಜಗದೇವಿ ಅವರ ಸುಪರ್ದಿಯಲ್ಲಿ ಇದ್ದಾರೆ.

ಕೋವಿಡ್ ಕೆಲಸದಿಂದ ಶಿಕ್ಷಕರ ಬಿಡುಗಡೆಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021-22ನೇ ಸಾಲಿನ ಶೈಕ್ಷಣಿಕ ಚಟುವಟಿಕೆ ಆರಂಭವಾಗಿರುವುದರಿಂದ ಕೋವಿಡ್ ನಿಯಂತ್ರಣದ ಕರ್ತವ್ಯಕ್ಕೆ ನಿಯೋಜಿಸಲಾಗಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು, ಮುಖ್ಯ ಶಿಕ್ಷಕರು ಮತ್ತು ಸಿಬ್ಬಂದಿಯನ್ನು ಕರ್ತವ್ಯದಿಂದ ತಕ್ಷಣ ಬಿಡುಗಡೆ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಹಾಗೂ ಎಲ್ಲ ಜಿಲ್ಲಾಧಿಕಾರಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ವಿ. ಅನ್ಬುಕುಮಾರ್ ಪತ್ರ ಬರೆದಿದ್ದಾರೆ.

ಇದೇ 15ರಿಂದ 2021-22ನೇ ಸಾಲಿನ ಶೈಕ್ಷಣಿಕ ವರ್ಷದ ದಾಖಲಾತಿ ಪ್ರಕ್ರಿಯೆ ಆರಂಭವಾಗಿದ್ದು, ಶಾಲೆಗಳಿಗೆ ಶಿಕ್ಷಕರು ತೆರಳಬೇಕಿದೆ. ಆದರೆ, ಬಹುತೇಕ ಶಿಕ್ಷಕರು ಕೋವಿಡ್ ಕರ್ತವ್ಯದಲ್ಲಿ ನಿರತರಾಗಿರುವುದರಿಂದ ಶಾಲೆಗೆ ಹೋಗುವುದು ಕಷ್ಟವಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ನೇರ ತರಗತಿಗಳು ಆರಂಭ ಆಗದೇ ಇದ್ದರೂ, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಆನ್‌ಲೈನ್, ಆಫ್‌ಲೈನ್, ದೂರದರ್ಶನ, ಬಾನುಲಿ, ಸ್ಮಾರ್ಟ್ ಫೋನ್, ಲ್ಯಾಪ್‌ಟಾಪ್‌ನಂಥ ಪರ್ಯಾಯ ಮಾರ್ಗಗಳ ಮೂಲಕ ಮಕ್ಕಳ ಕಲಿಕೆಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳಲು ಶಿಕ್ಷಕರು ಕಾರ್ಯನಿರ್ವಹಿಸುವುದು ಅನಿವಾರ್ಯವಾಗಿದೆ ಎಂದು ಪತ್ರದಲ್ಲಿ ಅವರು ವಿವರಿಸಿದ್ದಾರೆ.

‘ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗಳನ್ನು ಜುಲೈ ಮೂರನೇ ವಾರದಲ್ಲಿ ನಡೆಸಬೇಕಾಗಿದೆ. ಅಲ್ಲದೆ, ಕೋವಿಡ್ ಕಾರಣದಿಂದ ಈ ಬಾರಿ ಪರೀಕ್ಷಾ ಕೇಂದ್ರಗಳನ್ನು ಹೆಚ್ಚಿಸಬೇಕಿದೆ. ಈ ಕೆಲಸಗಳಿಗೆ ಶಿಕ್ಷಕರು, ಮುಖ್ಯ ಶಿಕ್ಷಕರು ಮತ್ತು ಸಿಬ್ಬಂದಿಯ ಸೇವೆ ಅಗತ್ಯವಾಗಿದೆ’ ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ಇಂಡೋನೇಷ್ಯಾದಲ್ಲಿ ಭೂಕಂಪ: ಸುನಾಮಿ ಆತಂಕದಲ್ಲಿ ಜನ

ಜಕಾರ್ತಾ (ಎಪಿ): ಇಂಡೋನೇಷ್ಯಾದ ಪೂರ್ವ ಭಾಗದ ಸಮುದ್ರದ ಆಳದಲ್ಲಿ ಬುಧವಾರ ರಿಕ್ಟರ್ ಮಾಪಕದಲ್ಲಿ 5.8 ತೀವ್ರತೆಯ ಭೂಕಂಪನ ಸಂಭವಿಸಿದೆ.

ಭೂಕಂಪನದ ತೀವ್ರತೆಗೆ ಕೆಲವೆಡೆ ಮನೆಗಳ ಗೋಡೆಗಳು ಬಿರುಕು ಬಿಟ್ಟಿವೆ. ಮಾಲುಕು ಪ್ರಾಂತ್ಯದಲ್ಲಿ ಸುನಾಮಿ ಏಳುವ ಆತಂಕದಿಂದ ಭಯಭೀತರಾದ ಕರಾವಳಿ ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಕಡಲ ತೀರಕ್ಕೆ ತೆರಳದಂತೆ ಜನರಿಗೆ ಎಚ್ಚರಿಸಲಾಗಿದೆ.

ದೊಡ್ಡ ಸುನಾಮಿ ಉಂಟಾಗುವ ಅಪಾಯವಿಲ್ಲ. ಆದರೂ ಸಮುದ್ರ ಮಟ್ಟವು ಸುಮಾರು 0.5 ಮೀಟರ್ ಏರಿಕೆಯಾಗಿದೆ. ಬಹುಶಃ ಸಮುದ್ರದ ಆಳದಲ್ಲಿ ಆಗಿರುವ ಸ್ಫೋಟದಿಂದಾಗಿ ಇದು ಆಗಿರಬಹುದು ಎಂದು ಹವಾಮಾನ ಇಲಾಖೆ ಮತ್ತು ಭೂಗರ್ಭ ವಿಜ್ಞಾನ ಇಲಾಖೆ ತಿಳಿಸಿವೆ.


‘ಟೆಹೋರು ಉಪವಿಭಾಗದಲ್ಲಿ ಕೆಲವು ಕಟ್ಟಡಗಳ ಗೋಡೆಗಳು ಮತ್ತು ಮಹಡಿಗಳು ಬಿರುಕು ಬಿಟ್ಟಿವೆ. ಕರಾವಳಿಯ ನಿವಾಸಿಗಳು ಭೂಕಂಪನದಿಂದಾಗಿ ಭಯಭೀತರಾಗಿದ್ದಾರೆ. ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಅವರಿಗೆ ಸೂಚಿಸಲಾಗಿದೆ’ ಎಂದು ಮಾಲುಕು ವಿಪತ್ತು ನಿಯಂತ್ರಣ ಏಜೆನ್ಸಿಯ ಮುಖ್ಯಸ್ಥ ಹೆನ್ರಿ ಫಾರ್ ಫಾರ್ ಹೇಳಿದರು.

ಮಾಲುಕು ಪ್ರಾಂತ್ಯದ ಸೆರಾಮ್ ದ್ವೀಪದಲ್ಲಿರುವ ಅಮಾಹೈ ನಗರದಿಂದ 70 ಕಿಲೋಮೀಟರ್ ದೂರದಲ್ಲಿ ಸಮುದ್ರದ ಆಳದಲ್ಲಿ ಸುಮಾರು 10 ಕಿಲೋಮೀಟರ್ (6 ಮೈಲಿ) ವ್ಯಾಪ್ತಿಯಲ್ಲಿ ಭೂಕಂಪನ ಕೇಂದ್ರೀಕೃತವಾಗಿತ್ತು ಎಂದು ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆ ತಿಳಿಸಿದೆ.

ಕೋವಿಡ್ ಯೋಧರಿಗಾಗಿ ಕೌಶಲಾಭಿವೃದ್ಧಿ ತರಬೇತಿ

ನವದೆಹಲಿ (ಪಿಟಿಐ): ಕೋವಿಡ್ ಮುಂಚೂಣಿ ಕಾರ್ಯಕರ್ತರ ಕೌಶಲ ಹೆಚ್ಚಿಸಲು ಕಸ್ಟಮೈಸ್ಡ್ ಕ್ರ್ಯಾಶ್ ಕೋರ್ಸ್ (ಪ್ರಸಕ್ತ ಸನ್ನಿವೇಶಕ್ಕೆ ರೂಪಿಸಿರುವ) ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಇದೇ 18ರಂದು (ಶುಕ್ರವಾರ) ಚಾಲನೆ ನೀಡಲಿದ್ದಾರೆ.

ಅಂದು ಬೆಳಿಗ್ಗೆ 11 ಗಂಟೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಈ ಕಾರ್ಯಕ್ರಮವನ್ನು ಪ್ರಧಾನಿ ಉದ್ಘಾಟಿಸಲಿದ್ದು, ದೇಶದ 111 ತರಬೇತಿ ಕೇಂದ್ರಗಳಲ್ಲಿ ಇದು ಆರಂಭವಾಗಲಿದೆ.



ನರೇಂದ್ರ ಮೋದಿ

ದೇಶದಾದ್ಯಂತ ಒಂದು ಲಕ್ಷ ಕೋವಿಡ್ ಯೋಧರ ಕೌಶಲ ಹೆಚ್ಚಿಸುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ. ಸದ್ಯದ ಸನ್ನಿವೇಶ ಆಧರಿಸಿ ರೂಪಿಸಿರುವ ಹೋಮ್ ಕೇರ್ ಸಪೋರ್ಟ್, ಬೇಸಿಕ್ ಕೇರ್ ಸಪೋರ್ಟ್, ಅಡ್ವಾನ್ಸ್ಡ್ ಕೇರ್ ಸಪೋರ್ಟ್, ಎಮರ್ಜೆನ್ಸಿ ಕೇರ್ ಸಪೋರ್ಟ್, ಸ್ಯಾಂಪಲ್ ಕಲೆಕ್ಷನ್ ಸಪೋರ್ಟ್, ಮೆಡಿಕಲ್ ಎಕ್ವಿಪ್ಮೆಂಟ್ ಸಪೋರ್ಟ್ ಎಂಬ ಆರು ಕೋರ್ಸ್‌ಗಳಲ್ಲಿ ಕೋವಿಡ್ ಯೋಧರಿಗೆ ತರಬೇತಿ ನೀಡಲಾಗುತ್ತದೆ.

ಪ್ರಧಾನಮಂತ್ರಿ ಕೌಶಲ ವಿಕಾಸ್ ಯೋಜನೆಯಡಿ ಈ ಕಾರ್ಯಕ್ರಮ ರೂಪಿಸಲಾಗಿದೆ. ಇದು ₹276 ಕೋಟಿ ವೆಚ್ಚದ ಯೋಜನೆ. ಇದು ಆರೋಗ್ಯ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲದ ಪ್ರಸ್ತುತ ಮತ್ತು ಭವಿಷ್ಯದ ಅಗತ್ಯಗಳನ್ನು ಪೂರೈಸಲು ನುರಿತ ವೈದ್ಯಕಿಯೇತರ ಆರೋಗ್ಯ ಕಾರ್ಯಕರ್ತರನ್ನು ಸಜ್ಜುಗೊಳಿಸಲಿದೆ.

ಮೂರನೇ ಅಲೆ ತಡೆಗೆ 5000 ಯುವ ಅಭ್ಯರ್ಥಿಗಳಿಗೆ ತರಬೇತಿ: ಕೇಜ್ರಿವಾಲ್

ನವದೆಹಲಿ (ಪಿಟಿಐ): ‘ಕೋವಿಡ್ ಮೂರನೇ ಅಲೆಯ ಸಿದ್ಧತೆಯ ಭಾಗವಾಗಿ 5,000 ಯುವಕರನ್ನು ಆರೋಗ್ಯ ಸಹಾಯಕರಾಗಿ ತರಬೇತಿ ನೀಡಲು ನಿರ್ಧರಿಸಲಾಗಿದೆ’ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬುಧವಾರ ತಿಳಿಸಿದರು.

‘ವೈದ್ಯರು ಮತ್ತು ದಾದಿಯರಿಗೆ ನೆರವಾಗುವ ನಿಟ್ಟಿನಲ್ಲಿ ಈ ಕ್ರಮವನ್ನು ಕೈಗೊಳ್ಳಲಾಗಿದೆ. ಯುವ ಅಭ್ಯರ್ಥಿಗಳಿಗೆ ಆರೋಗ್ಯ ಸಹಾಯಕರು ಅಥವಾ ಸಮುದಾಯ ಶೂಶ್ರೂಷಕರಾಗಿ ಎರಡು ವಾರಗಳ ಕಾಲ ತರಬೇತಿಯನ್ನು ನೀಡಲಾಗುವುದು. ಪ್ರತಿ ಬ್ಯಾಚ್‌ನಲ್ಲಿ 500 ಅಭ್ಯರ್ಥಿಗಳಿರಲಿದ್ದು, ಜೂನ್ 28 ರಿಂದ ತರಬೇತಿ ಪ್ರಾರಂಭವಾಗಲಿದೆ’ ಎಂದು ಅವರು ಹೇಳಿದರು.



ಕೇಜ್ರಿವಾಲ್

‘ಅಭ್ಯರ್ಥಿಗಳು ಕಡ್ಡಾಯವಾಗಿ 12ನೇ ತರಗತಿ ಉತ್ತೀರ್ಣರಾಗಿರಬೇಕು ಮತ್ತು 18 ವರ್ಷ ಮೇಲ್ಪಟ್ಟವರಾಗಿರಬೇಕು. ಆನ್‌ಲೈನ್ ಅರ್ಜಿಗಳನ್ನು ಜೂನ್ 17ರಿಂದ ಆಹ್ವಾನಿಸಲಾಗುವುದು. ಮೊದಲು ಅರ್ಜಿ ಸಲ್ಲಿಸಿದವರಿಗೆ, ಮೊದಲ ಆದ್ಯತೆ’ ಎಂದು ಮಾಹಿತಿ ನೀಡಿದರು.

‘ಮೂರನೇ ಅಲೆಯ ವೇಳೆ ಅಗತ್ಯವಿದ್ದಾಗ ಆರೋಗ್ಯ ಸಹಾಯಕರನ್ನು ಸೇವೆಗೆ ಕರೆಸಿಕೊಳ್ಳುತ್ತೇವೆ. ಕೆಲಸ ಮಾಡಿದ ದಿನಕ್ಕೆ ಅನುಗುಣವಾಗಿ ಅವರಿಗೆ ವೇತನ ನೀಡಲಾಗುವುದು’ ಎಂದು ಅವರು ತಿಳಿಸಿದರು.

ಕುಲಭೂಷಣ್ ಜಾಧವ್ ಪ್ರಕರಣ ವಿಚಾರಣೆ ಅ.5ಕ್ಕೆ ಮುಂದೂಡಿಕೆ

ಇಸ್ಲಾಮಾಬಾದ್ (ಪಿಟಿಐ): ಗಲ್ಲು ಶಿಕ್ಷೆಗೆ ಗುರಿಯಾಗಿರುವ ಭಾರತೀಯ ನೌಕಾಪಡೆಯ ನಿವೃತ್ತ ಅಧಿಕಾರಿ ಕುಲಭೂಷಣ್ ಜಾಧವ್ ಪರ ವಾದ ಮಂಡಿಸಲು ವಕೀಲರನ್ನು ನೇಮಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿ ವಿಚಾರಣೆಯನ್ನು ಇಸ್ಲಾಮಾಬಾದ್ ಹೈಕೋರ್ಟ್ ಅಕ್ಟೋಬರ್ 5ಕ್ಕೆ ಮುಂದೂಡಿದೆ.

ಪಾಕಿಸ್ತಾನದ ಅಟಾರ್ನಿ ಜನರಲ್ ಖಾಲೀದ್ ಜಾವೇದ್ ಖಾನ್ ಅವರು ಕುಲಭೂಷಣ್ ಜಾದವ್ ಪರವಾಗಿ ವಕೀಲರನ್ನು ನೇಮಿಸುವಂತೆ ಕೋರಿ ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.



ಕುಲಭೂಷಣ್ ಜಾಧವ್

‘ಈ ಸಂಬಂಧ ಅಕ್ಟೋಬರ್ 5ರಂದು ವಿಚಾರಣೆ ನಡೆಸುವುದಾಗಿ ಇಸ್ಲಾಮಾಬಾದ್ ಹೈಕೋರ್ಟ್ (ಐಎಚ್‌ಸಿ) ಹೇಳಿದೆ. ಅಲ್ಲದೆ ಮುಂದಿನ ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಹಾಜರಾಗುವಂತೆ ಭಾರತೀಯ ಹೈಕಮಿಷನ್‌ನ ವಕೀಲರಿಗೂ ನ್ಯಾಯಾಲಯ ನೋಟಿಸ್ ಜಾರಿ ಮಾಡಿದೆ’ ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಆಸ್ಪತ್ರೆಯಲ್ಲೇ ಅತ್ಯಾಚಾರ ಯತ್ನಕ್ಕೆ ಒಳಗಾದ ಮಹಿಳಾರೋಗಿ ಸಾವು

ಕಲಬುರ್ಗಿ: ಇಲ್ಲಿನ ಜಿಮ್ಸ್ ಆಸ್ಪತ್ರೆಯಲ್ಲಿ ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲೇ ಖಾಸಗಿ ಆಂಬುಲೆನ್ಸ್ ಚಾಲಕನಿಂದ ಅತ್ಯಾಚಾರ ಯತ್ನಕ್ಕೊಳಗಾಗಿದ್ದ 25 ವರ್ಷದ ಮಹಿಳೆ ಬುಧವಾರ ಸಾವಿಗೀಡಾಗಿದ್ದಾರೆ.

ಜೂನ್ 8ರಂದು ರಾತ್ರಿ ಆಂಬುಲೆನ್ಸ್ ಚಾಲಕ, ನಗರದ ಫಿಲ್ಟರ್ ಬೆಡ್ ನಿವಾಸಿ ಪ್ರೇಮಕುಮಾರ ಅಲಿಯಾಸ್ ಪಿಂಟು (25) ಅತ್ಯಾಚಾರಕ್ಕೆ ಯತ್ನಿಸಿದ್ದ. ಇದರಿಂದ ಎಚ್ಚರಗೊಂಡ ಮಹಿಳೆ ಜೋರಾಗಿ ಕೂಗಿಕೊಂಡಿದ್ದರಿಂದ ಸುತ್ತಮುತ್ತಲಿನ ಬೆಡ್‌ಗಳಲ್ಲಿದ್ದ ರೋಗಿಗಳು ಹಾಗೂ ಸಿಬ್ಬಂದಿ ಹಿಡಿಯಲು ಯತ್ನಿಸಿದ್ದರು. ಆಗ ತಪ್ಪಿಸಿಕೊಂಡಿದ್ದ. ಬ್ರಹ್ಮಪುರ ಠಾಣೆ ಪೊಲೀಸರು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು.

ಭದ್ರತಾ ಲೋಪ: ‘ಬೌನ್ಸರ್‌ಗಳ ಕಾವಲು ಇಲ್ಲಿನ ಜಿಮ್ಸ್ ಆಸ್ಪತ್ರೆಗೆ ಇದೆ. ಬೌನ್ಸರ್‌ಗಳ ಬದಲು ಪೊಲೀಸರು ಅಥವಾ ಖಾಸಗಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂಬ ಒತ್ತಾಯ ಕೇಳಿಬಂದರೂ ಆಡಳಿತ ಮಂಡಳಿ ಅವರ ಸೇವೆ ರದ್ದುಗೊಳಿಸಿಲ್ಲ. ಇಷ್ಟೆಲ್ಲ ನಡೆದರೂ ಹಿರಿಯ ಅಧಿಕಾರಿಗಳು ಏಕೆ ಸುಮ್ಮನಿದ್ದಾರೆ’ ಎಂದು ದಲಿತ ಮಾದಿಗ ಸಮನ್ವಯ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಲಿಂಗರಾಜ ತಾರಫೈಲ್ ಪ್ರಶ್ನಿಸಿದರು.

ಮಾಹಿತಿ ಪಡೆಯಲು ಜಿಮ್ಸ್ ನಿರ್ದೇಶಕಿ ಡಾ. ಕವಿತಾ ಪಾಟೀಲ ಅವರನ್ನು ಹಲವು ಬಾರಿ ‘ಪ್ರಜಾವಾಣಿ’ ಸಂಪರ್ಕಿಸಿದರೂ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಜಿಯುಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಉಡಾವಣೆ

ಇಂದು ಬಾಹ್ಯಾಕಾಶ ನಿಲ್ದಾಣಕ್ಕೆ ಚೀನಾದ ಗಗನಯಾನಿಗಳು

ಬೀಜಿಂಗ್ (ಪಿಟಿಐ): ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸಾಧಿಸುವ ಆಶಯದೊಂದಿಗೆ ಮೂವರು ಪುರುಷ ಗಗನಯಾತ್ರಿಗಳನ್ನು ಗುರುವಾರ ಹೊಸ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲು ಸಜ್ಜಾಗಿರುವುದಾಗಿ ‘ಚೀನಾ ಮ್ಯಾನ್ಡ್ ಸ್ಪೇಸ್ ಏಜೆನ್ಸಿ’ (ಸಿಎಂಎಸ್‌ಎ) ಬುಧವಾರ ತಿಳಿಸಿದೆ.

‘ನಿಯೆ ಹೈಶೆಂಗ್, ಲಿಯು ಬೊಮಿಂಗ್ ಮತ್ತು ಟ್ಯಾಂಗ್ ಹಾಂಗ್ಬೊ ಎಂಬ ಮೂವರು ಗಗನಯಾತ್ರಿಗಳನ್ನು ಹೊತ್ತ ಶೆನ್‌ಶಾವ್–12 ಆಕಾಶನೌಕೆ ಜಿಯುಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಉಡಾವಣೆಯಾಗಲಿದೆ. ಟಿಯಾಂಗಾಂಗ್ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳುವ ಈ ಮೂವರು ಗಗನ ಯಾತ್ರಿಗಳು ಮೂರು ತಿಂಗಳ ಕಾಲ ಹೊಸ ಬಾಹ್ಯಾಕಾಶ ನಿಲ್ದಾಣದಲ್ಲಿ ಉಳಿಯಲಿದ್ದಾರೆ‘ ಎಂದು ಸಿಎಮ್‌ಎಸ್‌ಎ ನಿರ್ದೇಶಕ ಸಹಾಯಕ ಜಿ ಕಿಮಿಂಗ್ ಉಡಾವಣಾ ಕೇಂದ್ರದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.



ಚೀನಾ ಗುರುವಾರ ತನ್ನ ಹೊಸ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲಿರುವ ಮೂವರು ಗಗನಯಾತ್ರಿಗಳು (ಎಡದಿಂದ) ಟಾಂಗ್ ಹೊಂಗ್ಬೊ, ನಿಯೆ ಹೈಶೆಂಗ್ ಮತ್ತು ಲಿಯು ಬೊಮಿಂಗ್

ಬಾಹ್ಯಾಕಾಶ ಕೇಂದ್ರ ನಿರ್ಮಾಣದ ಸಮಯದಲ್ಲಿ ಇದು ಮೊದಲ ಮಾನವಸಹಿತ ಕಾರ್ಯಾಚರಣೆಯಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಂಕ್ಷಿಪ್ತ ಸುದ್ದಿ

ಕನೆಕ್ಟಿಕಟ್‌ನ ಫೆಡರಲ್ ನ್ಯಾಯಾಧೀಶರಾಗಿ ಸರಳಾ ವಿದ್ಯಾ ನೇಮಕ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಭಾರತ–ಅಮೆರಿಕನ್ ಸರಳಾ ವಿದ್ಯಾ ನಗಲಾ ಅವರನ್ನು ಕನೆಕ್ಟಿಕಟ್‌ನ ಫೆಡರಲ್ ನ್ಯಾಯಾಧೀಶರನ್ನಾಗಿ ನಾಮನಿರ್ದೇಶನ ಮಾಡಿದ್ದಾರೆ.



ಸರಳಾ ವಿದ್ಯಾ ನಗಲಾ

ಇದನ್ನು ಸೆನೆಟ್ ದೃಢಪಡಿಸಿದರೆ, ಫೆಡರಲ್ ಪ್ರಾಸಿಕ್ಯೂಟರ್ ಸರಳಾ ವಿದ್ಯಾ ಅವರು ಜಿಲ್ಲಾ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸಲಿರುವ ಮೊದಲ ದಕ್ಷಿಣ ಏಷ್ಯಾ ಮೂಲದ ವ್ಯಕ್ತಿಯಾಗಲಿದ್ದಾರೆ.

ಪ್ರಸ್ತುತ, ನಗಲಾ ಅವರು ಕನೆಕ್ಟಿಕಟ್‌ನಲ್ಲಿರುವ ಅಟಾರ್ನಿ ಕಚೇರಿಯಲ್ಲಿ ಅಪರಾಧ ವಿಭಾಗದ ಉಪ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 2012ರಲ್ಲಿ ಸರಳಾ ಅವರು ಅಮೆರಿಕದ ಅಟಾರ್ನಿ ಕಚೇರಿಗೆ ಸೇರ್ಪಡೆಯಾದರು.

ಆಹಾರ ಕೊರತೆ ಎಚ್ಚರಿಕೆ ನೀಡಿದ ಕಿಮ್

ಸೋಲ್ (ಎಪಿ, ಎಎಫ್‌ಪಿ): ಕೋವಿಡ್, ಚಂಡಮಾರುತ ಮತ್ತು ಪ್ರವಾಹದಿಂದಾಗಿ ದೇಶದಲ್ಲಿ ಆಹಾರ ಕೊರತೆಯಾಗುವ ಸಾಧ್ಯತೆ ಇದೆ ಎಂದು ಉತ್ತರ ಕೊರಿಯಾ ಅಧ್ಯಕ್ಷ ಕಿಮ್ ಜೋಂಗ್ ಉನ್ ಎಚ್ಚರಿಕೆ ನೀಡಿದ್ದಾರೆ.




ಕಿಮ್ ಜೋಂಗ್

ಅಣ್ವಸ್ತ್ರ ಮತ್ತು ಕ್ಷಿಪಣಿ ಯೋಜನೆಗಳಿಂದಾಗಿ ಹಲವು ದೇಶಗಳು ವಿಧಿಸಿರುವ ನಿರ್ಬಂಧದಿಂದಾಗಿ ಉತ್ತರ ಕೊರಿಯಾ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಈಗ ಸಾಂಕ್ರಾಮಿಕ ರೋಗದ ಕಾರಣದಿಂದ ದೇಶದ ಗಡಿಗಳನ್ನು ಮುಚ್ಚಿದ್ದರಿಂದ ಉತ್ತರ ಕೊರಿಯಾದ ಆರ್ಥಿಕತೆಯು ಮತ್ತಷ್ಟು ಕ್ಷೀಣಿಸಿದೆ. ಇದು ಚೀನಾದೊಂದಿಗಿನ ವ್ಯಾಪಾರವನ್ನು ಸ್ಥಗಿತಗೊಳಿಸಿದೆ. ಜತೆಗೆ, ಕಳೆದ ಬೇಸಿಗೆಯಲ್ಲಿ ವಿನಾಶಕಾರಿ ಚಂಡಮಾರುತ ಮತ್ತು ಪ್ರವಾಹಗಳು ಬೆಳೆಗಳನ್ನು ನಾಶಪಡಿಸಿವೆ.

ಉತ್ತರ ಕೊರಿಯಾ ಆಡಳಿತಾರೂಢ ವರ್ಕರ್ಸ್ ಪಾರ್ಟಿ ಆಫ್ ಕೊರಿಯಾದ ಕೇಂದ್ರೀಯ ಸಮಿತಿ ಸಭೆಯಲ್ಲಿ ಕಿಮ್ ಮಾತನಾಡಿದರು.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 33 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch;
A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in **ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.**

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ವಿ.ಎಸ್.ಕುಮಾರ್**, 81, ನೆಲಮಹಡಿ, ಭುವನೇಶ್ವರಿ ನಗರ ಮುಖ್ಯರಸ್ತೆ, ಸಿ.ವಿ.ರಾಮನ್ ನಗರ ಅಂಚೆ, ಬೆಂಗಳೂರು	10,016
2	**ಶ್ರೀಮತಿ ಶಾಂತಾ ರಾಜ**, ಜಿ–625, ಸೇನಾ ವಿಹಾರ್, ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣ ನಗರ, ಬೆಂಗಳೂರು	10,000
3	**ರತ್ನಮ್ಮ**, ನಂ 868, 13ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಶ್ರೀನಗರ, ಬೆಂಗಳೂರು	10,000
4	**ವಿ.ರಮೇಶ್**, ನಂ 868, 13ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಶ್ರೀನಗರ, ಬೆಂಗಳೂರು	10,000
5	**ಡಾ.ಧ್ರುವಕುಮಾರ್ ಮೇದಾ**, 171/ಎ, 18ನೇ ಮುಖ್ಯರಸ್ತೆ, 3ನೇ ಸೆಕ್ಟರ್, ಎಚ್‌ಎಸ್‌ಆರ್ ಬಡಾವಣೆ, ಬೆಂಗಳೂರು	10,000
6	**ಲಕ್ಷ್ಮಿ ಶೇಷನ್**, 302, ಆದರ್ಶ ಕೋರ್ಟ್, 480, 7ನೇ ಅಡ್ಡರಸ್ತೆ, ಜಯನಗರ, ಬೆಂಗಳೂರು	10,000
7	**ಕೆ.ಜಿ.ರಾಮಪ್ರಕಾಶ್**, ನಂ 432, ಮೊದಲ ಮಹಡಿ, 64ನೇ ಅಡ್ಡರಸ್ತೆ, 5ನೇ ಹಂತ, ರಾಜಾಜಿನಗರ, ಬೆಂಗಳೂರು	10,000
8	**ದೇವರಸಮ್ಮ ಚಿಂದೇಗೌಡಾ ಸ್ಮರಣಾರ್ಥ ಸಿ.ಹನುಮಕುಮಾರ್**, ನಂ–ಕೆ.ಟಿ–156, 3ನೇ ಅಡ್ಡರಸ್ತೆ, ಮರಿಗೌಡ ಬಡಾವಣೆ, ಮಂಡ್ಯ	5,013
9	**ಸರಳಾ ಜಿ.** W/O ಲೇಟ್ ಎಸ್. ನಾಗರಾಜ, ನಂ 97, 1ನೇ ಮುಖ್ಯರಸ್ತೆ, ಸುಶೀಲಮ್ಮ ಬಡಾವಣೆ, ದೊಡ್ಡಬಳ್ಳಾಪುರ ಮುಖ್ಯರಸ್ತೆ, ಬೆಂಗಳೂರು	5,001
10	**ವಿ.ಬುಧ್ಯಾ**, ಸಂಗಾತಿ, 11–3–75 ಡಿ.ವಿಶ್ವೇಶ್ವರಯ್ಯ 1ನೇ ಅಡ್ಡರಸ್ತೆ, ಇನ್‌ಸ್ಪೆಕ್ಷನ್ ಬಂಗಲೆ ಬಳಿ, ಉಡುಪಿ	5,000
11	**ಮನ್ಸೂರ್ ಅಹ್ಮದ್ ಪಟೇಲ್**, 231, 5ನೇ ಎ ಮುಖ್ಯರಸ್ತೆ, ಎಚ್‌ಆರ್‌ಬಿಆರ್ ಬಡಾವಣೆ, 2ನೇ ಹಂತ, ಬೆಂಗಳೂರು	5,000
12	ಶಾಂತಿ ಪಿ. ರಾಮನ್ ಮತ್ತು ಎಚ್.ಕೆ.ಪಟ್ಟಾಭಿರಾಮನ್, ಬೆಂಗಳೂರು	5,000
13	**ಗೋವಿಂದ ರಾಜು ಎಂ.ಪಿ.** ,ನಂ 778 ಮಂಜು ಮ್ಯಾನ್ಷನ್, 80 ಅಡಿ ರಸ್ತೆ, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು	5,000
14	**ಜಯಶಂಕರ್ ಆರ್.** ತುಮಕೂರು	5,000
15	**ಮುರಳಿರಾವ್ ಕೆ.** ನಂ 7ಎ, ರೋಹಿತ್ ಅಪಾರ್ಟ್‌ಮೆಂಟ್ ಲೇನ್, ಶಿಕ್ಷಕರ ಕಾಲೊನಿ, ಬೆಂಗೇರಿ, ಹುಬ್ಬಳ್ಳಿ	4,000
16	**ವಿಜಯಕುಮಾರ್ ಹನುಮಂತಯ್ಯ**, ನಂ 76, ಮೈತ್ರಿ, 5ನೇ ಮುಖ್ಯರಸ್ತೆ, 4ನೇ ಎ ಅಡ್ಡರಸ್ತೆ, ಶಂಕರನಗರ, ನಂದಿನಿ ಬಡಾವಣೆ ಅಂಚೆ ಕಚೇರಿ ಬಳಿ, ಬೆಂಗಳೂರು	3,001
17	**ಎಸ್.ಸೂರ್ಯನಾರಾಯಣ**, 370/ಬಿ, 12ನೇ ಎ ಅಡ್ಡರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ರಾಜಾಜಿನಗರ ಎರಡನೇ ಹಂತ, ಬೆಂಗಳೂರು	3,000
18	**ಎಚ್.ಆರ್.ರಮೇಶ್ ಕುಮಾರ್**, ನಂ 870, 8ನೇ ಬ್ಲಾಕ್, ಕೋರಮಂಗಲ, ಬೆಂಗಳೂರು	3,000
19	**ಉಮೇಶ್ ಅಡಿಗ**, ನಂ 151, ವಿಶೇಷ್, 4ನೇ ಮುಖ್ಯರಸ್ತೆ, ವಿಠಲ ನಗರ, ಇಸ್ರೊ ಬಡಾವಣೆ ಬಳಿ, ಬೆಂಗಳೂರು	2,500
20	**ಐ.ಎಸ್.ಬೆಳವಿ**, 2304, ಬೆಳವಿಗಲ್ಲಿ, ಸಂಕೇಶ್ವರ	2,500
21	**ಬಿ.ವಿ.ಲಲಿತಮ್ಮ**, ನಿವೃತ್ತ ಹಿಂದಿ ಶಿಕ್ಷಕಿ W/O ವೆಂಕಟರಾಮ್ ಟಿ.ಎಸ್, ಆರ್.ಕೆ.ನಗರ, ಮೈಸೂರು	2,001
22	**ಬಿ.ಲಲಿತಾ ಬಾಯಿ**, 21/1, 4ನೇ ಮಾಡೆಲ್ ಹೌಸ್ ಸ್ಟ್ರೀಟ್, ಎನ್.ಆರ್. ಕಾಲೊನಿ ಬಳಿ, ಬೆಂಗಳೂರು	2,001
23	**ಎಂ.ಸಿದ್ಧಮಲ್ಲಪ್ಪ**, ನಿವೃತ್ತ ಪೊಲೀಸ್ ಇನ್‌ಸ್ಪೆಕ್ಟರ್, ನಂ 264, 'ನೇಚರ್ ಹಾಲ್' ತ್ಯಾಗ ಮಾರ್ಗ, ಸಿದ್ಧಾರ್ಥನಗರ, ಮೈಸೂರು	2,001
24	**ನಾಗರಾಜ ಜಿ. ಉಪಕಾರಿ**, ನಂ 69, ಅರ್ಜುನ್ ವಿಹಾರ್, ಗೋಕುಲ ರಸ್ತೆ, ಹುಬ್ಬಳ್ಳಿ	2,000
25	**ಅಶ್ರಫ್ ವಜೀರ್**, ಮುದ್ದಮ್ಮ ಗಾರ್ಡನ್, ಬೆಂಗಳೂರು	2,000
26	**ಸಿದ್ಧರಾಜಯ್ಯ**, **ಶಿಕ್ಷಕರು**, 4ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಜಯನಗರ ವೆಸ್ಟ್, ತುಮಕೂರು	2,000
27	**ಭಾರ್ಗವಿ ಸತ್ಯನ್**, ಬಸವನಗುಡಿ, ಬೆಂಗಳೂರು	2,000
28	**ಕೆ.ಎಸ್.ರವಿ ಕುಮಾರ್**, 176, ಇಂದಿರಾನಗರ 1ನೇ ಹಂತ, 9ನೇ ಅಡ್ಡರಸ್ತೆ, ಬೆಂಗಳೂರು	2,000
29	**ಚೇತನ್ ರಮೇಶ್**, ನಂ 37, 15ನೇ ಬಿ ಅಡ್ಡರಸ್ತೆ, ಜೆ.ಸಿ.ನಗರ, ಮಹಾಲಕ್ಷ್ಮಿಪುರ ಅಂಚೆ, ಕುರುಬರಹಳ್ಳಿ, ಬೆಂಗಳೂರು	2,000
30	**ಶ್ರೀವಾಸ್ತವ ಓಂ ಪ್ರಕಾಶ್**, ಎ–6, ಅಪಾರ್ಟ್‌ಮೆಂಟ್ 10–02, ಎಎಲಿಟಾ ಪ್ರೊಮೆನೇಡ್, ಬ್ರಿಗೇಡ್ ಮಿಲೇನಿಯಂ ಬಳಿ, ಜೆ.ಪಿ.ನಗರ 7ನೇ ಹಂತ, ಬೆಂಗಳೂರು	2,000
31	**ಬಿ.ಎಸ್.ಗುರುಮೂರ್ತಿ**, ಕೌಸ್ತುಭಾ, ನಂ 2–3–213/12 ಕೋಟೆಕಣಿ ರಸ್ತೆ, 3ನೇ ಅಡ್ಡರಸ್ತೆ, ಬೆಜೈ ಅಂಚೆ, ಮಂಗಳೂರು	2,000
32	**ಎಂ.ಎನ್.ಶಶಿ ಕುಮಾರ್**, ನಂ 8, 1ನೇ ಮುಖ್ಯರಸ್ತೆ, ರಾಯಲ್ ಲೇಕ್ ಫ್ರಂಟ್ ರೆಸಿಡೆನ್ಸಿ, ಜೆ.ಪಿ.ನಗರ, 8ನೇ ಹಂತ, ಬೆಂಗಳೂರು	1,500
33	**ರಾಮಕೃಷ್ಣೇಗೌಡ ಎಸ್.ಟಿ**. ನಂ 159, 6ನೇ ಅಡ್ಡರಸ್ತೆ, ಟೆಲಿಕಾಂ ಬಡಾವಣೆ, ಬೋಗಾದಿ 2ನೇ ಹಂತ (ಉತ್ತರ), ಮೈಸೂರು	1,251
34	**ವಿಶಾಲಾ ನಾಯಕ್**, ಕುವೆಂಪುನಗರ, ಮೈಸೂರು	1,101
35	**ಸತೀಶ್ ಎಚ್.** ನಂ 409, 14ನೇ ಬಿ ಅಡ್ಡರಸ್ತೆ, ಯಲಹಂಕ ನ್ಯೂಟೌನ್, ಬೆಂಗಳೂರು	1,101
36	**ಸೈಯದ್ ಅಮ್ಜದ್ ಅಹ್ಮದ್**, ನಂ 11, 2ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಅಂಬೇಡ್ಕರ್ ಬಡಾವಣೆ, ಕೆ.ಬಿ.ಸಂದ್ರ, ಆರ್.ಟಿ.ನಗರ ಅಂಚೆ, ಬೆಂಗಳೂರು	1,100
37	**ಗಿರೀಶ್ ಎನ್.** ಶ್ರೀ ವಿನಾಯಕ, 5ನೇ ಅಡ್ಡರಸ್ತೆ, ತೆಳ್ಳಾರು ರಸ್ತೆ, ಕಾರ್ಕಳ, ಉಡುಪಿ	1,005
38	**ಎಚ್. ವಸಂತ್**, ಪ್ಲಾಟ್ ನಂ. 5, ಅನುಗ್ರಹ, ಪವನ ಗಂಗಾ ಕಾಲೊನಿ, ರಾಜಾಪುರ ಬಳಿ, ಕಲಬುರ್ಗಿ	1,001
39	**ಪಂಪಾಪತಿ ಎ.** ಎಲ್.ಬಿ.ಕಾಲೊನಿ, 14ನೇ ವಾರ್ಡ್, ಸಂಡೂರು, ಬಳ್ಳಾರಿ	1,001
40	**ಎಸ್.ಜೆ.ಕೃಷ್ಣಸಿಂಗ್**, ನಂ 877/ಎ, 14ನೇ ಮುಖ್ಯರಸ್ತೆ, ಗೋಕುಲ್ ಮೊದಲನೇ ಹಂತ, ಮೊದಲನೇ ಘಟ್ಟ, ಮತ್ತಿಕೆರೆ, ಬೆಂಗಳೂರು	1,001
41	**ಕೆ.ಭಾಸ್ಕರ ನಾಯ್ಡು**, ನಿವೃತ್ತ ರೈಲ್ವೆ ಸಿಬ್ಬಂದಿ, ಸುಬ್ರಮಣ್ಯ ನಗರ, ಅರಸೀಕೆರೆ	1,001
42	**ಸತೀಶ ಆರ್.** ಮುಖ್ಯಶಿಕ್ಷಕರು, ಪಾರ್ವತಿ ಕೃಪಾ, ಎರಡನೇ ಅಡ್ಡರಸ್ತೆ, ಕೇಶವಪುರ, ಭದ್ರಾವತಿ	1,001
43	**ಬಿ.ಎಸ್.ಭಾಗ್ಯ**, ನಂ 1586, ಶ್ರೀಹಂಪಿ ವಿರೂಪಾಕ್ಷಾ ಕೃಪಾ, ಕೇಶವಪುರ ಎಕ್ಸ್‌ಟೆನ್ಷನ್, ಭದ್ರಾವತಿ	1001
44	**ಆರ್.ಗಾಯತ್ರಿ**, ನಂ 775, 16ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು	1,000
45	**ಎನ್.ಸಿದ್ಧರಾಮಪ್ಪ**, ನಂ 290, 6ನೇ ಅಡ್ಡರಸ್ತೆ, 2ನೇ ಬ್ಲಾಕ್, ಎಚ್‌ಎಂಟಿ ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು	1,000
46	**ನಾಮಗಿರಿ ರಾವ್**, ಎ2ಸಿ, ಐ.ಎಲ್ ಕಾಲೊನಿ, ಸಂಜಯನಗರ, ಬೆಂಗಳೂರು	1,000
47	**ಪ್ರದೀಪಾ ಜಿ.ಸಿ.**, ವಿದ್ಯಾನಗರ, ಟಿ. ನರಸಿಪುರ ತಾಲ್ಲೂಕು, ಮೈಸೂರು ಜಿಲ್ಲೆ	1,000
48	**ಸರ್ವಮಂಗಳಾ ಎಸ್.** ಬೆಂಗಳೂರು	1,000
49	**ದ್ವಿತೀಯ ವರ್ಷದ ಎಂ.ಕಾಂ ವಿದ್ಯಾರ್ಥಿಗಳು**, ಅರುಣೋದಯ ಕಾಲೇಜು, ನಂ 57, 80 ಅಡಿ ರಿಂಗ್ ರಸ್ತೆ, ಮರಿಯಪ್ಪನಪಾಳ್ಯ, ಜ್ಞಾನಭಾರತಿ ಅಂಚೆ, ಬೆಂಗಳೂರು	1,000
50	**ವಿಶಾಲಾ**, ಕುವೆಂಪುನಗರ, ಮೈಸೂರು	1,000
	ಇದುವರೆಗೆ ಸಂಗ್ರಹವಾದ ಮೊತ್ತ :	**1,11,66,772**

ಸರ್ಕಾರದ ಬೊಕ್ಕಸಕ್ಕೆ ₹ 14,775 ಕೋಟಿ ಹೆಚ್ಚುವರಿ ಹೊರೆ

ರಸಗೊಬ್ಬರ ಸಬ್ಸಿಡಿ ಹೆಚ್ಚಿಸಿದ ಕೇಂದ್ರ

ನವದೆಹಲಿ (ಪಿಟಿಐ): ಡಿಎಪಿ ಮತ್ತು ಯೂರಿಯಾ ರಹಿತ ಇತರ ಕೆಲವು ರಸಗೊಬ್ಬರಗಳಿಗೆ ₹14,775 ಕೋಟಿ ಸಬ್ಸಿಡಿ ನೀಡಲು ಕೇಂದ್ರ ಸಚಿವ ಸಂಪುಟ ಬುಧವಾರ ನಿರ್ಧರಿಸಿದೆ. ಕೋವಿಡ್ ಸಾಂಕ್ರಾಮಿಕದ ಈ ಹೊತ್ತಿನಲ್ಲಿ ಕೇಂದ್ರದ ಈ ತೀರ್ಮಾನದಿಂದ ರೈತರಿಗೆ ರಸಗೊಬ್ಬರದ ಮೇಲಿನ ಹೊರೆ ಕಡಿಮೆಯಾಗಲಿದೆ.



ಸಾಂದರ್ಭಿಕ ಚಿತ್ರ

ಯೂರಿಯಾವನ್ನು ಹೊರತುಪಡಿಸಿ-ದರೆ, ದೇಶದಲ್ಲಿ ಡಿಎಪಿ ಗೊಬ್ಬರವನ್ನು ಅತಿಹೆಚ್ಚಾಗಿ ಬಳಸಲಾಗುತ್ತದೆ.

ಕಳೆದ ತಿಂಗಳು ಡಿಎಪಿ ಗೊಬ್ಬರದ ಮೇಲಿನ ಸಬ್ಸಿಡಿಯನ್ನು ಶೇ 140ರಷ್ಟು ಹೆಚ್ಚಿಸಲು ಕೇಂದ್ರ ನಿರ್ಧರಿಸಿತ್ತು.

ರೈತರ ಅನುಕೂಲಕ್ಕಾಗಿ ಡಿಎಪಿ ಗೊಬ್ಬರಕ್ಕೆ ಸಬ್ಸಿಡಿ ಮೊತ್ತವನ್ನು ಹೆಚ್ಚಿಸಲು ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ (ಸಿಸಿಇಎ) ಅನುಮೋದನೆ ನೀಡಿದೆ ಎಂದು ರಾಸಾಯನಿಕ ಮತ್ತು ರಸಗೊಬ್ಬರಗಳ ರಾಜ್ಯ ಸಚಿವ ಮನ್ಸುಖ್ ಮಾಂಡವಿಯಾ ಹೇಳಿದರು.

'ರೈತರು ಪ್ರತೀ ಚೀಲಕ್ಕೆ ಹಳೆಯ ದರ ₹1,200ಕ್ಕೆ ಡಿಎಪಿ ಗೊಬ್ಬರ ಪಡೆಯಬಹುದು' ಎಂದು ಅವರು ಹೇಳಿದರು. ಒಂದು ಚೀಲವು 50 ಕೆ.ಜಿ ತೂಕವಿರುತ್ತದೆ.

ರೈತರಿಗೆ ಪರಿಹಾರ ನೀಡುವ ಉದ್ದೇಶದಿಂದ ಡಿಎಪಿ ಗೊಬ್ಬರದ ಸಬ್ಸಿಡಿಯನ್ನು ಪ್ರತಿ ಚೀಲಕ್ಕೆ ₹500ದಿಂದ ₹1,200ಕ್ಕೆ ಹೆಚ್ಚಿಸಲಾಗಿದೆ. ಕೇಂದ್ರದ ಈ ನಿರ್ಧಾರದಿಂದ ಬೊಕ್ಕಸಕ್ಕೆ ಹೆಚ್ಚುವರಿಯಾಗಿ ₹14,775 ಕೋಟಿ ಹೊರೆ ಬೀಳಲಿದೆ.

ರಸಗೊಬ್ಬರ ಸಹಾಯಧನಕ್ಕಾಗಿ 2021-22ರ ಬಜೆಟ್‌ನಲ್ಲಿ ಸರ್ಕಾರ ಸುಮಾರು ₹79,600 ಕೋಟಿ ಹಂಚಿಕೆ ಮಾಡಿದೆ.

ಕಳೆದ ವರ್ಷ ಡಿಎಪಿ ನೈಜ ಬೆಲೆ ಪ್ರತಿ ಚೀಲಕ್ಕೆ ₹1,700 ಇತ್ತು. ಇದರ ಮೇಲೆ ಕೇಂದ್ರ ಸರ್ಕಾರ ₹500 ಸಬ್ಸಿಡಿ ನೀಡುತ್ತಿದೆ. ಆದ್ದರಿಂದ ಕಂಪನಿಗಳು ಗೊಬ್ಬರವನ್ನು ರೈತರಿಗೆ ಚೀಲಕ್ಕೆ ₹1,200ರಂತೆ ಮಾರಾಟ ಮಾಡುತ್ತಿದ್ದವು.

ಜಾಗತಿಕ ಬೆಲೆಗಳ ಏರಿಕೆಯಿಂದ ಡಿಎಪಿ ನಿಜವಾದ ಬೆಲೆ ಪ್ರತಿ ಚೀಲಕ್ಕೆ ₹2,400ಕ್ಕೆ ಏರಿಕೆಯಾಗಿದೆ. ಆದರೆ ಹಳೆಯ ದರವಾದ ₹1,200ಕ್ಕೆ ಡಿಎಪಿ ನೀಡಲು ಸರ್ಕಾರ ನಿರ್ಧರಿಸಿದೆ. ಹೀಗಾಗಿ ಸಬ್ಸಿಡಿಯನ್ನು ಪ್ರತಿ ಚೀಲಕ್ಕೆ ₹1,200ಗೆ ಹೆಚ್ಚಿಸಲು ಕೇಂದ್ರ ನಿರ್ಧರಿಸಿದೆ.

ಸರ್ಕಾರವು ಯೂರಿಯಾದ ಪ್ರತಿ ಚೀಲಕ್ಕೆ ₹900 ಸಬ್ಸಿಡಿ ನೀಡುತ್ತಿದೆ. ಆದರೆ, ಡಿಎಪಿ ಸೇರಿದಂತೆ ಯೂರಿಯಾ ರಹಿತ ರಸಗೊಬ್ಬರಗಳಿಗೆ ಸರ್ಕಾರ ನಿಗದಿತ ಪ್ರಮಾಣದ ಸಹಾಯಧನ-ವನ್ನು ನೀಡುತ್ತದೆ ಎಂದು ಸಚಿವರು ಹೇಳಿದರು.

ಎನ್ ಗೊಬ್ಬರಕ್ಕೆ (ನೈಟ್ರೋಜನ್) ₹18.7, ಪಿ. ಗೊಬ್ಬರಕ್ಕೆ (ರಂಜಕ) ₹45.3, ಕೆ. ಗೊಬ್ಬರಕ್ಕೆ (ಪೊಟ್ಯಾಶ್) ₹10.1 ಮತ್ತು ಎಸ್ ಗೊಬ್ಬರಕ್ಕೆ (ಸಲ್ಫರ್) ₹2.3 ಸಹಾಯಧನ (ಪ್ರತಿ ಕೆ.ಜಿ.ಗೆ) ನೀಡಲಾಗುತ್ತದೆ.

ದಾಸ್ತಾನಿರುವ ಡಿಎಪಿ ಗೊಬ್ಬರವನ್ನು ಹಳೆಯ ದರಕ್ಕೆ ಮಾರಾಟ ಮಾಡುವಂತೆ ರಸಗೊಬ್ಬರ ಉತ್ಪಾದಕ ಸಂಸ್ಥೆಗಳಿಗೆ ಸರ್ಕಾರ ಈಗಾಗಲೇ ತಿಳಿಸಿದೆ.

ಆಂಧ್ರ: 6 ಮಾವೋವಾದಿಗಳ ಹತ್ಯೆ, ಒಬ್ಬ ಪೊಲೀಸ್ ಹುತಾತ್ಮ

ಅಮರಾವತಿ (ಪಿಟಿಐ): ಆಂಧ್ರಪ್ರ-ದೇಶದ ವಿಶಾಖಪಟ್ಟಣಂ ಜಿಲ್ಲೆಯ ಬೇಗಲಮೆಟ್ಟ ಅರಣ್ಯ ಪ್ರದೇಶದಲ್ಲಿ ಬುಧವಾರ ನಡೆದ ಎನ್‌ಕೌಂಟರ್ ನಲ್ಲಿ ಆರು ಮಂದಿ ನಿಷೇಧಿತ ಸಿಪಿಐ ಮಾವೋವಾದಿಗಳು ಮೃತಪಟ್ಟಿದ್ದು, ಒಬ್ಬ ಪೊಲೀಸ್ ಸಿಬ್ಬಂದಿ ಹುತಾತ್ಮ ರಾಗಿದ್ದಾರೆ.

ಮಾಂಪಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಎನ್‌ಕೌಂಟರ್ ನಲ್ಲಿ ಹತರಾದವರಲ್ಲಿ ಮಾವೋವಾದಿ ಸಂಘಟನೆಯ ಹಿರಿಯ ನಾಯಕ ಮತ್ತು ಒಬ್ಬ ಮಹಿಳಾ ಸದಸ್ಯೆ ಇದ್ದಾಳೆ.

ಸ್ಥಳದಿಂದ ಎ.ಕೆ 47 ಬಂದೂಕು, ಎಸ್‌ಎಲ್‌ಆರ್ ಬಂದೂಕು, ಮೂರು .303 ಬಂದೂಕುಗಳು, ಒಂದು ಕಂಟ್ರಿ ರಿವಾಲ್ವರ್ ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಗುಂಡಿನ ಚಕಮಕಿಯ ನಂತರ ಕೆಲವು ನಕ್ಸಲರು ಅರಣ್ಯದೊಳಗೆ ಪರಾರಿ-ಯಾಗಿದ್ದಾರೆ. ಈ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ ಎಂದು ಡಿಜಿಪಿ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.



ಉತ್ತರ ಪ್ರದೇಶದಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಲಾಗಿದ್ದು, ಬುಧವಾರ ಆಗ್ರಾದ ತಾಜ್‌ಮಹಲ್‌ಗೆ ಭೇಟಿ ನೀಡಿದ್ದ ಕುಟುಂಬವೊಂದರ ಸದಸ್ಯರು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು —ಪಿಟಿಐ ಚಿತ್ರ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,869
ಇಂದಿನ ಅಂತ್ಯ	15,767
▼	102
ದಿನದ ಕನಿಷ್ಠ	15,742

ವಿನಿಮಯ ದರ

$ ಡಾಲರ್	73.32
£ ಪೌಂಡ್	103.5
€ ಯೂರೊ	88.92
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹553

ಐ.ಟಿ. ಕ್ಷೇತ್ರದಲ್ಲಿ 30 ಲಕ್ಷ ಉದ್ಯೋಗ ಕಡಿತ ಸಾಧ್ಯತೆ

ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತಂತ್ರಜ್ಞಾನ ಅಳವಡಿಕೆಯ ವೇಗ ಹೆಚ್ಚಾಗುತ್ತಿದೆ. ಇದರಿಂದಾಗಿ ದೇಶದ ಸಾಫ್ಟ್‌ವೇರ್ ಕಂಪನಿಗಳು 2022ರ ಒಳಗಾಗಿ 30 ಲಕ್ಷ ಉದ್ಯೋಗ ಕಡಿತ ಮಾಡಲು ಮುಂದಾಗಿವೆ ಎಂದು ಸಾಫ್ಟ್‌ವೇರ್ ಮತ್ತು ಸೇವಾ ಸಂಸ್ಥೆಗಳ ರಾಷ್ಟ್ರೀಯ ಒಕ್ಕೂಟ (ನಾಸ್ಕಾಂ) ಹೇಳಿದೆ.

ಈ ನಿರ್ಧಾರದಿಂದ ಕಂಪನಿಗಳು ವಾರ್ಷಿಕವಾಗಿ ನೀಡುವ ವೇತನದಲ್ಲಿ ಸರಿಸುಮಾರು ₹ 7.33 ಲಕ್ಷ ಕೋಟಿಗಳಷ್ಟು ಉಳಿತಾಯ ಆಗಲಿದೆ ಎಂದೂ ತನ್ನ ವಾರ್ಷಿಕ ವರದಿಯಲ್ಲಿ ತಿಳಿಸಿದೆ.

ದೇಶದ ಐ.ಟಿ ಕ್ಷೇತ್ರದಲ್ಲಿ 1.6 ಕೋಟಿ ಮಂದಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ 90 ಲಕ್ಷ ಕಡಿಮೆ ಕೌಶಲ ಬಯಸುವ ಸೇವೆಗಳು ಮತ್ತು ಬಿಪಿಒ ಹುದ್ದೆ ನಿಭಾಯಿಸುತ್ತಿದ್ದು, ಇವರಲ್ಲಿ 2022ರ ಒಳಗಾಗಿ ಅಂದಾಜು 30 ಲಕ್ಷ ಮಂದಿ ಕೆಲಸ ಕಳೆದು-ಕೊಳ್ಳಲಿದ್ದಾರೆ ಎಂದು ನಾಸ್ಕಾಂ ವಿವರಿಸಿದೆ.

ಟಿಸಿಎಸ್, ಇನ್ಫೊಸಿಸ್, ವಿಪ್ರೊ, ಎಚ್‌ಸಿಎಲ್, ಟೆಕ್ ಮಹೀಂದ್ರಾ ಮತ್ತು ಕಾಗ್ನಿಜಂಟ್ ಹಾಗೂ ಇತರೆ ಕಂಪನಿಗಳು ತಂತ್ರಜ್ಞಾನ ಅಳವಡಿಕೆಯ ಮೂಲಕ ಕಡಿಮೆ ಕೌಶಲ ಬೇಡುವ ಕೆಲಸಗಳಲ್ಲಿ ಇರುವವರನ್ನು ಕೈಬಿಡುವ ಯೋಜನೆ ಹೊಂದಿರುವಂತೆ ಕಾಣುತ್ತಿದೆ ಎಂದು ಅದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಪಿಎಫ್ ಖಾತೆಗೆ ಆಧಾರ್ ಜೋಡಣೆ: ಸೆ. 1ರವರೆಗೆ ಅವಕಾಶ

ನವದೆಹಲಿ (ಪಿಟಿಐ): ಪಿಎಫ್ ಖಾತೆಗೆ ಆಧಾರ್ ಜೋಡಣೆಯನ್ನು ಕಡ್ಡಾಯ ಮಾಡುವುದನ್ನು ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಸೆಪ್ಟೆಂಬರ್ 1ರವರೆಗೂ ತಡೆ ಹಿಡಿದಿದೆ. ಇದರಿಂದಾಗಿ ಉದ್ಯೋ-ಗದಾತರಿಗೆ ತಮ್ಮ ಉದ್ಯೋಗಿಗಳ ಆಧಾರ್ ಸಂಖ್ಯೆಯನ್ನು ಪಿಫ್ ಖಾತೆಗೆ ಜೋಡಿಸಲು ಹೆಚ್ಚಿನ ಕಾಲಾವಕಾಶ ಸಿಕ್ಕಿದೆ.

ಇ–ಸ್ಕೂಟರ್ ಬೆಲೆ ತಗ್ಗಿಸಿದ ಒಕಿನಾವಾ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ತಯಾರಿಸುವ ಒಕಿನಾವಾ ಕಂಪನಿಯು ತನ್ನೆಲ್ಲಾ ಸ್ಕೂಟರ್‌ಗಳ ಮೇಲಿನ ಬೆಲೆಯನ್ನು ₹ 7,209 ರಿಂದ ₹ 17,892ರವರೆಗೆ ಇಳಿಕೆ ಮಾಡಿದೆ.

ಕೇಂದ್ರ ಸರ್ಕಾರವು ಫೇಮ್–2 ನಿಯಮದ ಅಡಿಯಲ್ಲಿ ಇ–ಸ್ಕೂಟರ್‌ಗಳ ಮೇಲಿನ ಸಬ್ಸಿಡಿ ಹೆಚ್ಚಳ ಮಾಡಿದೆ. ಇದಕ್ಕೆ ಅನುಗುಣವಾಗಿ ಬೆಲೆಯನ್ನು ತಗ್ಗಿಸಿರುವುದಾಗಿ ಕಂಪನಿ ತಿಳಿಸಿದೆ.

ನೇರ ತೆರಿಗೆಯ ನಿವ್ವಳ ಸಂಗ್ರಹ ಹೆಚ್ಚಳ

ನವದೆಹಲಿ (ಪಿಟಿಐ): 2021–22ನೇ ಹಣಕಾಸು ವರ್ಷದ ಏಪ್ರಿಲ್ 1 ರಿಂದ ಜೂನ್ 15ವರೆಗಿನ ಅವಧಿಯಲ್ಲಿ ನೇರ ತೆರಿಗೆಯ ನಿವ್ವಳ ಸಂಗ್ರಹವು ₹ 1,85,871 ಕೋಟಿ ಆಗಿದೆ ಎಂದು ಸಿಬಿಡಿಟಿ ತಿಳಿಸಿದೆ.

ಹಿಂದಿನ ಹಣಕಾಸು ವರ್ಷ ಇದೇ ಅವಧಿಯಲ್ಲಿ ₹ 92,762 ಕೋಟಿ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಶೇ 100ರಷ್ಟು ಏರಿಕೆ ಆಗಿದೆ.

ಚಿನ್ನಾಭರಣಕ್ಕೆ ಹಾಲ್‌ಮಾರ್ಕ್ ಕಡ್ಡಾಯ: ಆಗಸ್ಟ್‌ವರೆಗೆ ದಂಡ ಇಲ್ಲ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಬುಧವಾರದಿಂದ 256 ಜಿಲ್ಲೆಗಳಲ್ಲಿ ಹಾಲ್‌ಮಾರ್ಕ್ ಇರುವ ಚಿನ್ನಾಭರಣಗಳ ಮಾರಾಟವನ್ನು ಕಡ್ಡಾಯಮಾಡಿದೆ. ಆದರೆ, ನಿಯಮ ಪಾಲಿಸದೇ ಇದ್ದರೆ ಆಗಸ್ಟ್‌ವರೆಗೂ ದಂಡ ವಿಧಿಸುವುದಿಲ್ಲ ಎಂದು ಹೇಳಿದೆ.

ಗ್ರಾಹಕರು BISCARE ಆ್ಯಪ್ ಅಥವಾ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಜಾಲತಾಣದ ಮೂಲಕ ದೂರು ಸಲ್ಲಿಸಬಹುದು ಎಂದು ತಿಳಿಸಿದೆ.

ಉದ್ಯಮದಲ್ಲಿ ಬಹುದೊಡ್ಡ ಬದಲಾವಣೆ ಆಗುತ್ತಿದೆ. ಲಕ್ಷಕ್ಕೂ ಅಧಿಕ ವರ್ತಕರು ನೋಂದಣಿ ಮಾಡಿಸಿಕೊಳ್ಳಲು ಸಮಯ ಹಿಡಿಯುತ್ತದೆ. ಹೀಗಾಗಿ ಆಗಸ್ಟ್‌ವರೆಗೂ ದಂಡ ವಿಧಿಸದೇ ಇರಲು ನಿರ್ಧರಿಸಲಾಗಿದೆ ಎಂದು ಬಿಐಎಸ್‌ನ ಪ್ರಧಾನ ನಿರ್ದೇಶಕ ಪ್ರಮೋದ್ ಕುಮಾರ್ ತಿವಾರಿ ತಿಳಿಸಿದ್ದಾರೆ.

ಒಟ್ಟಾರೆ 715 ಜಿಲ್ಲೆಗಳಿದ್ದು, ಅವುಗಳಲ್ಲಿ 256 ಜಿಲ್ಲೆಗಳಲ್ಲಿ ಬುಧವಾರದಿಂದ 14,18 ಮತ್ತು 22 ಕ್ಯಾರಟ್‌ನ ಚಿನ್ನಾಭರಣಗಳನ್ನು ಮಾತ್ರವೇ ಮಾರಾಟ ಮಾಡಬೇಕು ಎಂದು ತಿಳಿಸಿದ್ದಾರೆ.

'ಗ್ರಾಹಕರು, ಮಾರಾಟಗಾರರಿಗೆ ಅನುಕೂಲ'

ಬೆಂಗಳೂರು: ಹಾಲ್‌ಮಾರ್ಕ್ ಕಡ್ಡಾಯ ಮಾಡಿರುವುದರಿಂದ ಗ್ರಾಹಕರು ಮತ್ತು ವರ್ತಕರಿಬ್ಬ-ರಿಗೂ ಅನುಕೂಲ ಆಗುತ್ತದೆ' ಎಂದು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಅಧ್ಯಕ್ಷ ಎಂ.ಪಿ. ಅಹಮದ್ ಹೇಳಿದರು.

'ನಾವು 21 ವರ್ಷದಿಂದಲೂ ಬಿಐಎಸ್ ಹಾಲ್‌ಮಾರ್ಕ್ ಇರುವ ಚಿನ್ನಾಭರಣಗಳನ್ನೇ ಮಾರಾಟ ಮಾಡುತ್ತಿದ್ದು, ಗ್ರಾಹಕರು ನೀಡುವ ಹಣಕ್ಕೆ ಶೇ 100ರಷ್ಟು ಮೌಲ್ಯ ಖಾತರಿಗೊಳಿಸುತ್ತಿದ್ದೇವೆ' ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ


ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಹೊಸತು	23500-40500
ಹಳತು	42500-50500
ಕುಮಟ	
ಚಿಪ್ಪು	29269-31869
ಕೋಕ	19869-29019
ಫ್ಯಾಕ್ಟರಿ	13569-18999
ಹಳೆಚಾಲಿ	40569-42009
ಹೊಸಚಾಲಿ	36589-39099
ಸಿದ್ದಾಪುರ	
ಬಿಳಿಗೋಟು	28399-32299
ಚಾಲಿ	35689-39689
ಕೋಕ	21699-31399
ಕೆಂಪುಗೋಟು	24911-31669
ರಾಶಿ	39899-42029
ತಟ್ಟಿಬೆಟ್ಟೆ	28809-40689
ತಟ್ಟಿಬೆಟ್ಟೆ	33499-38700
ರಾಮನಗರ ರೇಷ್ಮೆ	
ಮಿಶ್ರತಳಿ	315-361
ದ್ವಿತಳಿ	355-498

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10900	10600	10550	151.15 ಸೆಂಟ್ಸ್
ಎಸಿ	4675	4100	4050	
ಆರ್‌ಪಿ	5250	5100	5250	ಲಂಡನ್
ಆರ್‌ಸಿ	3125	3100	3075	1573 ಡಾಲರ್ಸ್

ನಿಧನ ವಾರ್ತೆ

ರಾಮಾಯಣದ 'ಆರ್ಯ ಸುಮಂತ್' ಪಾತ್ರಧಾರಿ ಚಂದ್ರಶೇಖರ್



ಮುಂಬೈ (ಪಿಟಿಐ): 'ಚಾ ಚಾ ಚಾ' ಮತ್ತು 'ಸುರಂಗ್' ನಂತಹ ಹಲವು ಚಲನಚಿತ್ರಗಳು ಹಾಗೂ ಕಿರುತೆರೆಯ ಜನಪ್ರಿಯ ಧಾರಾವಾಹಿ 'ರಾಮಾ-ಯಣ'ದಲ್ಲಿ 'ಆರ್ಯ ಸುಮಂತ್' ಪಾತ್ರದ ಮೂಲಕ ಚಿರಪರಿಚಿತರಾ-ಗಿದ್ದ ಹಿರಿಯ ನಟ ಚಂದ್ರಶೇಖರ್ (98) ವಯೋಸಹಜ ಅನಾರೋಗ್ಯ ಕಾರಣದಿಂದ ಬುಧವಾರ ನಿಧನರಾದರು. ಅವರಿಗೆ ಮೂವರು ಮಕ್ಕಳಿದ್ದಾರೆ.

ಅವರು 1954ರಲ್ಲಿ ವಿ.ಶಾಂತಾರಾಮ್ ನಿರ್ದೇಶನದ 'ಸುರಂಗ್' ಚಿತ್ರದ ಮೂಲಕ ಮೊದಲ ಬಾರಿಗೆ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದರು. ನಂತರ 'ಕವಿ', 'ಮಸ್ತಾನ', 'ಬಸಂತ್ ಬಹಾರ್', 'ಕಾಲಿ ಟೋಪಿ ವಾಲಾ ರುಮಾಲ್', 'ಬರ್ಸಾತ್ ಕಿ ರಾತ್' ಸಹಿತ 250ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದಾರೆ. ಅವರು ನಿರ್ಮಾಣ ಮಾಡಿ ನಿರ್ದೇ ಶಿಸಿದ ಮೊದಲ ಸಿನಿಮಾ 'ಚಾ ಚಾ ಚಾ'.

ಮುಂಬೈ ಧಾರಣೆ

ಶೇಂಗಾ

16-6-2021


ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಸೋಯಾ ಕಚ್ಚಾ	1260 (1260)
ಪಾಮ್ ವಾರದ ಡೆಲಿವರಿ	1138 (1138)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,250 (48,300)
ಬೆಳ್ಳಿ ಕೆ.ಜಿ 71,400 (71,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಉದ್ಯಮದ ಹಾದಿಯಲ್ಲಿ ತಪ್ಪುಗಳಾಗುತ್ತವೆ...'



ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೀನರ್‌ಷಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

ಸ್ಮಾರ್ಟ್‌ಫೋನ್‌ಗಳು ಬಳಕೆಗೆ ಬಂದಾಗಿನಿಂದ ನಗರ ಪ್ರದೇಶಗಳ ಹಲವರು ಆನ್‌ಲೈನ್ ಮೂಲಕವೇ ತರಕಾರಿ, ಹಣ್ಣು ಖರೀದಿಸುತ್ತಿದ್ದಾರೆ. ಲಾಕ್‌ಡೌನ್‌ನಿಂದಾಗಿ ಕಳೆದೊಂದು ವರ್ಷದಲ್ಲಿ ಸಣ್ಣ ನಗರಗಳಲ್ಲಿಯೂ ಜನ ಹೊರಗೆ ಹೋಗಿ ಖರೀ-ದಿಸುವುದನ್ನು ಕಡಿಮೆ ಮಾಡಿದ್ದಿದೆ. ದಿನಸಿ ಮತ್ತು ಅಗತ್ಯ ವಸ್ತುಗಳು ಮನೆ ಬಾಗಿಲಿಗೇ ಬರುತ್ತಿವೆ. ಅಗತ್ಯ ವಸ್ತುಗಳನ್ನು ಮನೆಗೇ ತರಿಸಿಕೊಳ್ಳುವುದರ ಅನುಕೂಲಗ-ಳನ್ನು ನೋಡುತ್ತಿರುವ ಅನೇಕರಿಗೆ ಆ ಸಾಮಗ್ರಿಗಳು ಮಾರುಕಟ್ಟೆಗೆ ಹೇಗೆ ಬರುತ್ತವೆ ಎಂಬುದು ಗೊತ್ತಿಲ್ಲ.

'ನಾವು ಸೇವಿಸುವ ವಸ್ತುಗಳ ಬಗ್ಗೆ ನನಗೆ ಸದಾ ಕುತೂಹಲ. ಅದು ಕೇವಲ ರುಚಿಗೆ ಸಂಬಂಧಿಸಿದ್ದ-ಲ್ಲ. ಆ ಆಹಾರ ಎಲ್ಲಿಂದ ಬರುತ್ತದೆ, ಅದನ್ನು ಹೇಗೆ ಬೆಳೆಯಲಾಗುತ್ತದೆ, ಹೇಗೆ ಸಂಸ್ಕರಿಸಲಾಗುತ್ತದೆ ಇತ್ಯಾದಿ... ಆ ಕುರಿತು ನಾನೇ ಸ್ವಲ್ಪ ಸಂಶೋಧನೆ ನಡೆಸಿದೆ. ಅದನ್ನು ಜನರೊಂದಿಗೆ ಹಂಚಿಕೊಳ್ಳಲು ಬಯಸಿದೆ. ಆದರೆ ಗೊತ್ತಿದ್ದನ್ನು ಹಂಚಿಕೊಳ್ಳುವುದು ಮಾತ್ರ ಮುಖ್ಯವಲ್ಲ ಎಂದು 2013ರಲ್ಲಿ ಜೀವನ್ ಆರ್ಗ್ಯಾನಿಕ್ಸ್ ಕಂಪನಿ ಆರಂಭಿಸಿದೆ. ಇಲ್ಲಿ ಗ್ರಾಹಕರಿಗೆ ಆರೋಗ್ಯಕರ ಆಹಾರವನ್ನು ಖರೀದಿಸುವ ಅವಕಾಶ ನೀಡಲಾಗುತ್ತಿದೆ' ಎಂದು ಹೇಳುತ್ತಾರೆ ಕಂಪನಿಯ ಸ್ಥಾಪಕಿ ಎಸ್.ಎಸ್. ಸರಿತಾ.

'ಗುಣಮಟ್ಟದ ಆಹಾರ ವಸ್ತು ಪೂರೈಸುವುದು, ಜನರಿಗೆ ಉತ್ತಮ ಆಹಾರ ಸೇವಿಸಲು ನೆರವಾಗುವುದೇ ನನಗೆ ಪ್ರೇರಣೆ' ಎನ್ನುತ್ತಾರೆ.

ಭಾರತದ ಸಾವಯವ ಆಹಾರ ಕ್ಷೇತ್ರದಲ್ಲಿ ಅನೇಕ ಕಂಪನಿಗಳಿವೆ. ಆದರೆ ವಿಭಿನ್ನವಾಗಿ ನಿಂತಿದ್ದೇ ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಸರಿತಾ ಅವರು ಅಸ್ತಿತ್ವ ಉಳಿಸಿಕೊಳ್ಳಲು ನೆರವಾಯಿತು. ಅಷ್ಟೇ ಅಲ್ಲ, ಲಾಭವನ್ನೂ ತಂದುಕೊಟ್ಟಿತು. 'ನಮ್ಮದು ಆಹಾರ ವಸ್ತುಗಳನ್ನು ಮಾರುವ ಸಾವಯವ ಆಹಾರ ಮಳಿಗೆಯಷ್ಟೇ ಅಲ್ಲ. ಆಹಾರ ವಸ್ತುಗಳ ಗುಣಮ-ಟ್ಟವನ್ನು ಖಾತ್ರಿಪಡಿಸಲು ನಾವು ಭೇಟಿ ಕೊಡುವ ಸ್ಥಳಗಳಿಂದಲೇ ತರಕಾರಿ ಮತ್ತು ಇತರ ಆಹಾರ ಉತ್ಪನ್ನಗಳನ್ನು ತರುತ್ತೇವೆ. ಹಾಗಾಗಿ ನಾವು ವಿಭಿನ್ನ' ಎಂದು ಸರಿತಾ ವಿಶ್ವಾಸದಿಂದ ಹೇಳುತ್ತಾರೆ.

ಪ್ರಸ್ತುತ ಜಗತ್ತು ಎದುರಿಸುತ್ತಿರುವ ವಿಷಮ ಪರಿಸ್ಥಿತಿಯಲ್ಲಿ ಉಳಿಯಲು ಹಾಗೂ ಬೆಳೆಯಲು ಉದ್ಯಮಿಗಳು ಕೆಲವೊಂದು ಗುಣಗಳನ್ನು ಹೊಂದಿರ-ಬೇಕಾಗುತ್ತದೆ. ಸರಿತಾ ಅವರ ಪ್ರಕಾರ, 'ಉದ್ಯಮಿಯಲ್ಲಿ ತಾಳ್ಮೆ, ಭರವಸೆ ಮತ್ತು ಸಕಾರಾತ್ಮಕ ಆಲೋಚನೆಗಳು ಇರಬೇಕು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಈ ಮೂರು ಗುಣಗಳು ಉದ್ಯಮಿಯಲ್ಲಿ ಮಾತ್ರವಲ್ಲ ಎಲ್ಲರಲ್ಲಿಯೂ ಇರಬೇಕು. ನೀವೇನು ಮಾಡಿದರೂ ಅದು ಅತ್ಯುತ್ತಮ ಆಗಿರಬೇಕು. ಮಾಡುವ ಕೆಲಸದಲ್ಲಿ ಶೇಕಡ ನೂರರಷ್ಟು ಪರಿಶ್ರಮ ಇರಬೇಕು. ಆಗ ಯಶಸ್ವಿಯಾಗುತ್ತೀರಿ'.

ಕೋವಿಡ್–19ರ ರೂಪದಲ್ಲಿ ವಿಪತ್ತು ಎದುರಾದಾಗ ದೇಶದಲ್ಲಿರುವ ಅನೇಕ ಉದ್ಯಮಗಳು ಮುಚ್ಚಿದವು. ಆದರೆ ಕೆಲವು ಉದ್ಯಮಗಳು ಬಿರುಗಾಳಿಗೆ ಎದೆಯೊಡ್ಡಿ ಉಳಿದವು. ಅದೃಷ್ಟವಶಾತ್, ಸರಿತಾ ಅವರ ಉದ್ಯಮ ಸಹ ಹಾಗೆ ಉಳಿದುಕೊಂಡಿತು. 'ಕೋವಿಡ್ ಸಾಂ-ಕ್ರಾಮಿಕದಿಂದಾಗಿ ನಮ್ಮ ಉದ್ಯಮವು ಇತರ ಉದ್ಯಮಗಳು ಅನುಭವಿಸಿದಂತಹ ಏಟು ತಿನ್ನಲಿಲ್ಲ. ಆದರೆ ಪರಿಸ್ಥಿತಿಯನ್ನು ನಿಭಾಯಿಸುವ ಕಲೆ ಕಲಿಯಬೇಕಾಯಿತು. ನಾವು ದುರ್ಬಲರಾ-ಗಿದ್ದು ಎಲ್ಲಿ ಎಂಬುದನ್ನು ವಿಶ್ಲೇಷಿಸಿದೆವು. ಕೆಲವು ಆಡಳಿತಾತ್ಮಕ ಬದಲಾವಣೆಗಳನ್ನು ತಂದುಕೊಂಡು ಗ್ರಾಹಕರನ್ನು ತಲುಪಲು, ನಮ್ಮಲ್ಲಿನ ದಾಸ್ತಾನು ಖಾಲಿಯಾಗದಂತೆ ಮುನ್ನೆಚ್ಚರಿಕೆ ವಹಿಸಿದೆವು. ಸಕಾಲದಲ್ಲಿ ಇಂಥ ಕ್ರಮಗಳನ್ನು ಕೈಗೊಂಡ ಕಾರಣ ಕೋವಿಡ್ ಪರಿಣಾಮ ತೀವ್ರಗೊಳ್ಳದಂತೆ ಮಾಡಿತು' ಎಂದು ಸರಿತಾ ಅವರು ನೆಮ್ಮದಿಯಿಂದ ನಿಟ್ಟುಸಿರು ಬಿಡುತ್ತಾರೆ.

ಸರಿತಾ ಅವರು ಉದ್ಯಮಿಗಳಿಗೆ ನೀಡುವ ಮುಖ್ಯ ಸಲಹೆ ಇದು: 'ಉದ್ಯಮ ಬೆಳೆಸುವ ಹಾದಿಯಲ್ಲಿ ತಪ್ಪುಗಳೇ ಆಗುವುದಿಲ್ಲ ಎಂದೇನಲ್ಲ. ಆದರೆ ಅದನ್ನು ಸರಿಪಡಿಸಬೇಕು. ನಾವು ಹಲವು ಸವಾಲುಗಳನ್ನು ಎದುರಿಸಿದ್ದೇವೆ. ಆದರೆ ನಮ್ಮ ನಂಬಿಕಸ್ಥ ಗ್ರಾಹಕರು ಮತ್ತು ಪಾಲುದಾರರ ಬೆಂಬಲದಿಂದಾಗಿ ನಾವು ಅದನ್ನು ನಿಭಾಯಿಸಿದೆವು'.



ಎಸ್.ಎಸ್. ಸರಿತಾ




ರೊನಾಲ್ಡೊ ‘ಜಲಪ್ರೇಮ’ ಸೃಷ್ಟಿಸಿದ ‘ಕೋಲಾ’ಹಲ

ಬುಡಾಪೆಸ್ಟ್ (ಪಿಟಿಐ): ‘ನೀರು ಕುಡಿಯಿರಿ, ಆರೋಗ್ಯವಾಗಿರಿ..’

ಪೋರ್ಚುಗಲ್ ಫುಟ್‌ಬಾಲ್ ತಂಡದ ದಿಗ್ಗಜ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಮಂಗಳವಾರ ರಾತ್ರಿಯ ಸುದ್ದಿಗೋಷ್ಠಿಯಲ್ಲಿ ಹೇಳಿದ ಈ ಮೂರು ಪದಗಳ ಬೆಲೆ ₹ 29 ಸಾವಿರ ಕೋಟಿ!

ಹೌದು; ಯುರೋ ಕಪ್ –2020 ಫುಟ್‌ಬಾಲ್ ಟೂರ್ನಿಯಲ್ಲಿ ‘ಇ’ ಗುಂಪಿನಲ್ಲಿ ಪೋರ್ಚುಗಲ್–ಹಂಗರಿ ಪಂದ್ಯದ ಸಂದರ್ಭದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರೊನಾಲ್ಡೊ ಹಾಜರಾಗಿದ್ದರು. ಅವರು ಮಾತು ಆರಂಭಿಸುವ ಮುನ್ನ ತಮ್ಮ ಮುಂದಿನ ಟೇಬಲ್ ಮೇಲಿದ್ದ ಕೊಕಾ ಕೋಲಾ ಪಾನೀಯದ ಎರಡು ಬಾಟಲಿಗಳನ್ನು ದೂರ ಸರಿಸಿಟ್ಟರು. ಇನ್ನೊಂದು ಬದಿಯಲ್ಲಿದ್ದ ನೀರಿನ ಬಾಟಲಿ ಎತ್ತಿಕೊಂಡು ‘ನೀರು ಕುಡಿಯಿರಿ, ಆರೋಗ್ಯವಾಗಿರಿ’ ಎಂದರು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಕಾಳ್ಗಿಚ್ಚಿನಂತೆ ಹರಡಿತು.



ಕ್ರಿಸ್ಟಿಯಾನೊ ರೊನಾಲ್ಡೊ –ಎಎಫ್‌ಪಿ ಚಿತ್ರ

ಇದರಿಂದಾಗಿ ಕೊಕಾ ಕೋಲಾ ಕಂಪನಿಯು ಬುಧವಾರ ಷೇರು ಮಾರುಕಟ್ಟೆಯಲ್ಲಿ ಸುಮಾರು 29 ಸಾವಿರ ಕೋಟಿ ರೂಪಾಯಿಯಷ್ಟು ನಷ್ಟ ಅನುಭವಿಸಿದೆ. ಶೇರು ಮೌಲ್ಯವು ಶೇ 1.6ರಷ್ಟು ಕುಸಿದಿದೆ. ಪ್ರತಿ ಷೇರು ಬೆಲೆಯು 56.10 ಡಾಲರ್‌ನಿಂದ 55.22 ಡಾಲರ್‌ಗೆ ಕುಸಿಯಿತು.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕೊಕಾ ಕೋಲಾ, ‘ಪ್ರತಿಯೊಬ್ಬರೂ ತಮಗಿಷ್ಟವಾದ ಪಾನೀಯವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅವರವರ ಅಗತ್ಯ ಮತ್ತು ರುಚಿಗೆ ಅದು ಬಿಟ್ಟಿದ್ದು’ ಎಂದಿದೆ.

ಕೆಲವು ದಿನಗಳ ಹಿಂದೆ ರೊನಾಲ್ಡೊ ಕಾರ್ಬೊನೇಟೆಡ್ ಪಾನೀಯಗಳ ಕುರಿತು ತಮ್ಮ ಅಸಮಾಧಾನವನ್ನು ಹೊರಹಾಕಿದ್ದರು.

‘ನನ್ನ ಮಗನಲ್ಲಿ ಉತ್ತಮ ಸಾಮರ್ಥ್ಯವಿದೆ. ಅವನು ಶ್ರೇಷ್ಠ ಫುಟ್‌ಬಾಲ್ ಆಟಗಾರನಾಗುತ್ತಾನೋ ಇಲ್ಲವೋ ಕಾದು ನೋಡೋಣ. ಆದರೆ, ಅವನು ಕೆಲವೊಮ್ಮೆ ಕೋಕ್ ಕುಡಿತಾನೆ ಮತ್ತು ಕುರುಕಲು ತಿಂಡಿ ಮೆಲ್ಲುತ್ತಾನೆ. ಅದು ನನಗೆ ಕಿರಿಕಿರಿಯಾಗುತ್ತದೆ’ ಎಂದಿದ್ದರು.

ಕೊಕಾ ಕೋಲಾ ಕಂಪೆನಿಯು ಯುರೋ ಕಪ್ ಫುಟ್‌ಬಾಲ್ ಟೂರ್ನಿಯ ಸಹಪ್ರಾಯೋಜಕತ್ವ ವಹಿಸಿದೆ.

ರಷ್ಯಾಗೆ ಮಣಿದ ಫಿನ್‌ಲೆಂಡ್

ಸೇಂಟ್ ಪೀಟರ್ಸ್‌ಬರ್ಗ್ (ಎಎಫ್‌ಪಿ/ಎಪಿ): ಅಲೆಕ್ಸಿ ಮಿರಾನ್‌ಚುಕ್ ಗಳಿಸಿದ ಗೋಲಿನ ನೆರವಿನಿಂದ ರಷ್ಯಾ ತಂಡವು ಯುರೋ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಬುಧವಾರ ಇಲ್ಲಿ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ರಷ್ಯಾ 1–0ಯಿಂದ ಫಿನ್‌ಲೆಂಡ್ ಎದುರು ಗೆದ್ದಿತು. ಮಿರಾನ್‌ಚುಕ್ 45ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ವೇಲ್ಸ್ ತಂಡವು 2–0ಯಿಂದ ಟರ್ಕಿ ತಂಡದ ಎದುರು ಗೆಲುವು ಸಾಧಿಸಿತು.

ಮ್ಯೂನಿಚ್‌ನಲ್ಲಿ ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಮ್ಯಾಟ್ಸ್ ಹಮ್ಮೆಲ್ಸ್ ನೀಡಿದ ‘ಉಡುಗೊರೆ ಗೋಲು’ ಫ್ರಾನ್ಸ್ ತಂಡದ ಗೆಲುವಿಗೆ ಕಾರಣವಾಯಿತು. ಫ್ರಾನ್ಸ್ 1–0 ಅಂತರದಿಂದ ಜರ್ಮನಿಯ ವಿರುದ್ಧ ಜಯಿಸಿ ಶುಭಾರಂಭ ಮಾಡಿತು.

‘ಎಫ್’ ಗುಂಪಿನ ಈ ಪಂದ್ಯದ 20ನೇ ನಿಮಿಷದಲ್ಲಿ ಚೆಂಡು ತಡೆಯುವ ಯತ್ನದಲ್ಲಿ ಮ್ಯಾಟ್ಸ್ ಚೆಂಡನ್ನು ತಮ್ಮದೇ ಗೋಲುಪೆಟ್ಟಿಗೆಯೊಳಗೆ ಸೇರಿಸಿದರು.

52 ಮಂದಿಗೆ ಕೊರೊನಾ ಸೋಂಕು ದೃಢ

ಸಾವೊ ಪಾಲೊ (ಎಪಿ): ಕೋಪಾ ಅಮೆರಿಕ ಫುಟ್‌ಬಾಲ್ ಲೀಗ್‌ಗೆ ಸಂಬಂಧಿಸಿದ 33 ಆಟಗಾರರು ಸೇರಿದಂತೆ 52 ಮಂದಿಯಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಬ್ರೆಜಿಲ್‌ನ ಆರೋಗ್ಯ ಸಚಿವಾಲಯ ಈ ವಿಷಯ ತಿಳಿಸಿದೆ.

ಈ ಮೊದಲು 41 ಸೋಂಕು ಪ್ರಕರಣಗಳು ಇದ್ದವು. ಈಗ ಟೂರ್ನಿಗಾಗಿ ನೇಮಿಸಿರುವ 19 ಸಿಬ್ಬಂದಿಯಲ್ಲಿ ಕೋವಿಡ್ ದೃಢಪಟ್ಟಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಕ್ರಿಕೆಟ್: ಭಾರತ ಎರಡು ತಂಡಗಳಾಗಿ ಆಡುವ ಸಾಧ್ಯತೆ ಹೆಚ್ಚು– ಧುಮಾಲ್

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕ ಸೃಷ್ಟಿಸಿರುವ ಬಿಕ್ಕಟ್ಟಿನಿಂದಾಗಿ ಭಾರತವು ಎರಡು ವಿಭಿನ್ನ ತಂಡಗಳನ್ನು ಭಿನ್ನ ತಾಣಗಳಲ್ಲಿ ಕಣಕ್ಕಿಳಿಸುವುದು ಮುಂದುವರಿಯಬಹುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಖಜಾಂಚಿ ಅರುಣ್ ಧುಮಾಲ್ ಬುಧವಾರ ಅಭಿಪ್ರಾಯಪಟ್ಟಿದ್ದಾರೆ.

ಇದರಿಂದಾಗಿ ದ್ವಿಪಕ್ಷೀಯ ಕ್ರಿಕೆಟ್‌ಗೆ ಹೆಚ್ಚು ಅವಕಾಶ ನೀಡಿದಂತಾಗುತ್ತದೆ ಮತ್ತು ಬಯೋ-ಬಬಲ್ ಆಯಾಸದಿಂದ ಎಲ್ಲ ಮಾದರಿಯ ಆಟಗಾರರಿಗೆ ಸ್ವಲ್ಪ ಬಿಡುವು ಸಿಗುತ್ತದೆ ಎಂದು ಅವರು ಹೇಳಿದ್ದಾರೆ.

ವಿರಾಟ್-ಕೊಹ್ಲಿ ನೇತೃತ್ವದ ಪ್ರಮುಖ ತಂಡವು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿ ಹಾಗೂ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗಾಗಿ ಸದ್ಯ ಇಂಗ್ಲೆಂಡ್‌ನಲ್ಲಿದೆ. ಶಿಖರ್ ಧವನ್ ನಾಯಕತ್ವದ ಇನ್ನೊಂದು ತಂಡವು ಮುಂದಿನ ತಿಂಗಳು ಶ್ರೀಲಂಕಾದಲ್ಲಿ ನಡೆಯಲಿರುವ ಸೀಮಿತ ಓವರ್‌ಗಳ ಸರಣಿಗಾಗಿ ಆ ದೇಶಕ್ಕೆ ತೆರಳಲಿದೆ. ಭಾರತದ ಕ್ರಿಕೆಟ್‌ನಲ್ಲಿ ಇದೊಂದು ಅಪರೂಪದ ನಿದರ್ಶನವಾಗಿದೆ.

ಆಟಗಾರರಿಗೆ ಬಬಲ್ ಜೀವನದಿಂದ ಸ್ವಲ್ಪ ವಿರಾಮ ನೀಡುವ ಅಗತ್ಯತೆಯ ಬಗ್ಗೆ ಕೊಹ್ಲಿ ಈಗಾಗಲೇ ಮಾತನಾಡಿದ್ದಾರೆ.

‘ಮುಖ್ಯ ತಂಡದ ಆಟಗಾರರು ಬೇರೆಡೆ ಆಡುತ್ತಿರುವಾಗ ಅಥವಾ ವಿರಾಮ ಅಗತ್ಯವಿದ್ದಾಗ ಭಾರತದ ಯುವ ತಂಡವು ಮತ್ತೊಂದು ಟೂರ್ನಿಯಲ್ಲಿ ಆಡುವ ಸಾಧ್ಯತೆ ಇದೆ’ ಎಂದು ಧುಮಾಲ್ ಹೇಳಿದ್ದಾರೆ.

ಟೆಸ್ಟ್: ಇಂಗ್ಲೆಂಡ್ ಉತ್ತಮ ಮೊತ್ತ

ಬ್ರಿಸ್ಟಲ್ (ಪಿಟಿಐ): ಏಳು ವರ್ಷಗಳ ನಂತರ ಟೆಸ್ಟ್ ಕ್ರಿಕೆಟ್ ಆಡಲು ಬುಧವಾರ ಕಣಕ್ಕಿಳಿದ ಭಾರತ ಮಹಿಳಾ ತಂಡವು ಇಂಗ್ಲೆಂಡ್ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಲು ಹರಸಾಹಸಪಡಬೇಕಾಯಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಆತಿಥೇಯ ತಂಡವು ಟ್ಯಾಮಿ ಬೇಮೌಂಟ್ (66) ಮತ್ತು ಐದು ರನ್‌ಗಳಿಂದ ಶತಕ ತಪ್ಪಿಸಿಕೊಂಡ ಹೀಥರ್ ನೈಟ್ (95 ರನ್) ಅವರ ಆಟದ ಬಲದಿಂದ ಮೊದಲ ದಿನದಾಟದಲ್ಲಿ 92 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 269 ರನ್ ಗಳಿಸಿದೆ.

ಇಂಗ್ಲೆಂಡ್ ತಂಡದ ಆರಂಭಿಕ ಜೋಡಿ ಲಾರೆನ್ ವಿನ್‌ಫೀಲ್ಡ್ ಹಿಲ್ (35 ರನ್) ಮತ್ತು ಟ್ಯಾಮಿ ಮೊದಲ ವಿಕೆಟ್ ಜೊತೆಯಾಟದಲ್ಲಿ 69 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಲಾರೆನ್ 21ನೇ ಓವರ್‌ನಲ್ಲಿ ಪೂಜಾ ವಸ್ತ್ರಕರ್ ಎಸೆತದಲ್ಲಿ ಔಟಾದರು. ಆಗ ಟ್ಯಾಮಿ ಜೊತೆಗೂಡಿದ ನೈಟ್ ಬೌಲರ್‌ಗಳನ್ನು ದಂಡಿಸಿದರು.



ವಿಕೆಟ್ ಪಡೆದ ಖುಷಿಯಲ್ಲಿ ಭಾರತ ತಂಡದ ಆಟಗಾರ್ತಿಯರು

ಇವರಿಬ್ಬರೂ ಎರಡನೇ ವಿಕೆಟ್‌ಗೆ 71 ರನ್‌ಗಳನ್ನು ಪೇರಿಸಿದರು.

ಭಾರತ ತಂಡದ ಸ್ನೇಹಾ ರಾಣಾ (77ಕ್ಕೆ 3) ಹಾಗೂ ದೀಪ್ತಿ ಶರ್ಮಾ (50ಕ್ಕೆ 2) ಬೌಲಿಂಗ್‌ನಲ್ಲಿ ಪರಿಣಾಮಕಾರಿ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 92 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 269 (ಲಾರೆನ್ ವಿನ್‌ಫೀಲ್ಡ್ ಹಿಲ್ 35, ಟಾಮಿ ಬೇಮಾಂಟ್ 66, ಹೀಥರ್ ನೈಟ್ 95, ನಥಾಲಿಯಾ ಸಿವರ್ 42, ಸೋಫಿ ಡಂಕ್ಲಿ ಔಟಾಗದೆ 12; ಸ್ನೇಹಾ ರಾಣಾ 77ಕ್ಕೆ3, ದೀಪ್ತಿ ಶರ್ಮಾ 50ಕ್ಕೆ2, ಪೂಜಾ ವಸ್ತ್ರಕರ್ 43ಕ್ಕೆ 1)

ಮುಷ್ಫಿಕುರ್, ಕ್ಯಾಥ್ರಿನ್ ಐಸಿಸಿ ತಿಂಗಳ ಆಟಗಾರರು

ದುಬೈ (ಪಿಟಿಐ): ಬಾಂಗ್ಲಾದೇಶ ತಂಡದ ಮಾಜಿ ನಾಯಕ ಮುಷ್ಫಿಕುರ್ ರಹೀಮ್ ಮತ್ತು ಸ್ಕಾಟ್ಲೆಂಡ್ ಮಹಿಳಾ ತಂಡದ ಆಲ್‌ರೌಂಡರ್ ಕ್ಯಾಥ್ರಿನ್ ಬ್ರೈಸ್ ಅವರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಮೇ ತಿಂಗಳ ಆಟಗಾರರನ್ನಾಗಿ ಸೋಮವಾರ ಆಯ್ಕೆ ಮಾಡಿದೆ.

ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಮುಷ್ಫಿಕುರ್ ರಹೀಮ್ ಮೇ ತಿಂಗಳಲ್ಲಿ ಶ್ರೀಲಂಕಾ ಎದುರು ಒಂದು ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಏಕದಿನ ಸರಣಿಯಲ್ಲಿ ಒಟ್ಟು 125 ರನ್ ಗಳಿಸಿ ಶ್ರೀಲಂಕಾ ವಿರುದ್ಧ ತಮ್ಮ ತಂಡ ಮೊದಲ ಬಾರಿ ಏಕದಿನ ಸರಣಿ ಗೆಲ್ಲಲು ನೆರವಾಗಿದ್ದರು.

ಐಸಿಸಿ ವೋಟಿಂಗ್ ಅಕಾಡೆಮಿಯ ವಿವಿಎಸ್ ಲಕ್ಷ್ಮಣ್ ಅವರು ಮುಷ್ಫಿಕುರ್ ಸಾಮರ್ಥ್ಯದ ಬಗ್ಗೆ ಪ್ರತಿಕ್ರಿಯಿಸುತ್ತ ‘15 ವರ್ಷ ಉತ್ತಮ ಗುಣಮಟ್ಟದ ಕ್ರಿಕೆಟ್ ಆಡುತ್ತಿದ್ದರೂ ರನ್ ಗಳಿಸುವ ಅವರ ದಾಹ ಕಡಿಮೆಯಾಗಿಲ್ಲ’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಾಜಿ ಕ್ರಿಕೆಟಿಗ ವಿವಿಎಸ್ ಲಕ್ಷ್ಮಣ್ ಅಭಿಪ್ರಾಯ

‘ಆಸ್ಟ್ರೇಲಿಯಾ ತಂಡವನ್ನು ಅದರ ತವರು ನೆಲದಲ್ಲಿಯೇ ಸೋಲಿಸಿದ್ದು ಬಹುದೊಡ್ಡ ಸಾಧನೆ’ ಎಂದು ಅವರು ಹೇಳಿದರು.

ವಿಶ್ವ ಟೆಸ್ಟ್ ಫೈನಲ್: ಭಾರತವೇ ನೆಚ್ಚಿನ ತಂಡ

ಮುಂಬೈ (ಪಿಟಿಐ) : ನ್ಯೂಜಿಲೆಂಡ್ ಎದುರಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತವೇ ಜಯಿಸುವ ನೆಚ್ಚಿನ ತಂಡವಾಗಿದೆ ಎಂದು ಮಾಜಿ ಕ್ರಿಕೆಟಿಗ ವಿವಿಎಸ್ ಲಕ್ಷ್ಮಣ್ ಅಭಿಪ್ರಾಯಪಟ್ಟಿದ್ದಾರೆ.



‘ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಕಳೆದೆರಡು ವರ್ಷಗಳ ಅವಧಿಯಲ್ಲಿ ಭಾರತ ತಂಡವು ಸ್ಥಿರ ಪ್ರದರ್ಶನ ನೀಡಿದೆ. ಉತ್ತಮವಾಗಿ ಆಡುತ್ತ ಫೈನಲ್ ಪ್ರವೇಶಿಸಿದೆ. ಸ್ವದೇಶ ಮತ್ತು ವಿದೇಶಗಳ ಪಿಚ್‌ಗಳಲ್ಲಿ ಸಾಧನೆ ಮಾಡಿರುವುದು ವಿಶೇಷ‘ ಎಂದು ಮಂಗಳವಾರ ‘ಸ್ಟಾರ್ ಸ್ಪೋರ್ಟ್ಸ್‘ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಹೇಳಿದರು.

‘ಆಸ್ಟ್ರೇಲಿಯಾ ವಿರುದ್ಧದ ಸರಣಿಯ ಮೊದಲ ಪಂದ್ಯದಲ್ಲಿ ಭಾರತವು ಅತ್ಯಂತ ಹೀನಾಯವಾಗಿ ಸೋತಿತ್ತು. ಅದರ ನಂತರ ಪುಟಿದೆದ್ದ ರೀತಿ ಅನನ್ಯವಾದದ್ದು. ನಾಯಕ ವಿರಾಟ್ ಕೊಹ್ಲಿ ಅವರ ಗೈರುಹಾಜರಿಯಲ್ಲಿಯೂ ಯುವ ಆಟಗಾರರು ದಾಖಲೆ ಬರೆದರು‘ ಎಂದು ಲಕ್ಷ್ಮಣ್ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ನ್ಯೂಜಿಲೆಂಡ್‌ನ ಮಾಜಿ ಆಟಗಾರ ಶೇನ್ ಬಾಂಡ್, ಸ್ಟಾರ್ ಮತ್ತು ಡಿಸ್ನಿ ಇಂಡಿಯಾದ ಕ್ರೀಡಾ ಮುಖ್ಯಸ್ಥ ಸಂಜೋಗ್ ಗುಪ್ತಾ ಇದ್ದರು.

ಐಸಿಸಿ ಟೆಸ್ಟ್ ಬ್ಯಾಟ್ಸ್‌ಮನ್‌ಗಳ ರ್‍ಯಾಂಕಿಂಗ್

ನಾಲ್ಕನೇ ಸ್ಥಾನಕ್ಕೆ ವಿರಾಟ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದಾರೆ.

ಬುಧವಾರ ಪ್ರಕಟವಾಗಿರುವ ಪಟ್ಟಿಯಲ್ಲಿ ಆಸ್ಟ್ರೇಲಿಯಾದ ಬ್ಯಾಟ್ಸ್‌ಮನ್ ಸ್ಟೀವನ್ ಸ್ಮಿತ್ ಅವರು ಮತ್ತೊಮ್ಮೆ ಅಗ್ರಸ್ಥಾನಕ್ಕೇರಿದ್ದಾರೆ. ಇದರಿಂದಾಗಿ ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಅವರು ಎರಡನೇ ಸ್ಥಾನಕ್ಕೆ ಇಳಿದಿದ್ದಾರೆ.

ಕೇನ್‌ಗಿಂತ ಐದು ಪಾಯಿಂಟ್ಸ್ ಹೆಚ್ಚು ಗಳಿಸಿರುವ ಸ್ಮಿತ್ (891 ಪಾಯಿಂಟ್ಸ್) ಮೊದಲ ಸ್ಥಾನ ಗಳಿಸಿದ್ದಾರೆ. ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ (878) ಮೂರನೇ ಸ್ಥಾನದಲ್ಲಿದ್ದಾರೆ. ಒಂದು ಸ್ಥಾನ ಬಡ್ತಿ ಪಡೆದಿರುವ ಕೊಹ್ಲಿ (814) ನಾಲ್ಕನೇ ಸ್ಥಾನಕ್ಕೇರಿದ್ದಾರೆ.

ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಮತ್ತು ರೋಹಿತ್ ಶರ್ಮಾ ಅವರು ಕ್ರಮವಾಗಿ ಆರು ಮತ್ತು ಏಳನೇ ಸ್ಥಾನದಲ್ಲಿದ್ದಾರೆ. ಇಬ್ಬರೂ ತಲಾ 747 ಪಾಯಿಂಟ್ಸ್ ಗಳಿಸಿದ್ದಾರೆ.



ವಿರಾಟ್ ಕೊಹ್ಲಿ ಮತ್ತು ಆರ್. ಅಶ್ವಿನ್

ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಐದನೇ ಸ್ಥಾನ ಪಡೆದಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಭಾರತದ ಆರ್. ಅಶ್ವಿನ್ ಎರಡನೇ ಸ್ಥಾನ ಗಳಿಸಿದ್ದಾರೆ. ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಅಗ್ರಸ್ಥಾನದಲ್ಲಿದ್ದಾರೆ.

ಆಲ್‌ರೌಂಡರ್‌ಗಳ ವಿಭಾಗದಲ್ಲಿ ಭಾರತದ ರವೀಂದ್ರ ಜಡೇಜ ಎರಡನೇ ಸ್ಥಾನ ಮತ್ತು ಅಶ್ವಿನ್ ನಾಲ್ಕನೇ ಸ್ಥಾನ ಪಡೆದಿದ್ದಾರೆ. ವೆಸ್ಟ್ ಇಂಡೀಸ್‌ನ ಜೇಸನ್ ಹೋಲ್ಡರ್ ಮೊದಲ ಸ್ಥಾನದಲ್ಲಿದ್ದಾರೆ.

ಶುಕ್ರವಾರ ಸೌತಾಂಪ್ಟನ್‌ನಲ್ಲಿ ಆರಂಭವಾಗಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಲಿವೆ.

ಡೆಕ್ಕನ್ ಚಾರ್ಜರ್ಸ್ ಪ್ರಕರಣ: ಬಿಸಿಸಿಐ ಮೇಲುಗೈ

ಮುಂಬೈ (ಪಿಟಿಐ): ಡೆಕ್ಕನ್ ಚಾರ್ಜರ್ಸ್ ಹೈದರಾಬಾದ್ ಫ್ರ್ಯಾಂಚೈಸ್ ಎದುರಿನ ಕಾನೂನು ಹೋರಾಟದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಮೇಲುಗೈ ಸಾಧಿಸಿದೆ.

ಡೆಕ್ಕನ್ ಚಾರ್ಜರ್ಸ್‌ಗೆ ₹ 4800 ಕೋಟಿ ಪರಿಹಾರದ ಮೊತ್ತವನ್ನು ಕೊಡುವುದರಿಂದ ಬಿಸಿಸಿಐ ತಪ್ಪಿಸಿಕೊಂಡಂತಾಗಿದೆ.

2012ರಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಿಂದ ಡೆಕ್ಕನ್ ಚಾರ್ಜರ್ಸ್ ತಂಡವನ್ನು ವಜಾಗೊಳಿಸಲಾಗಿತ್ತು. ಈ ಕ್ರಮವನ್ನು ಪ್ರಶ್ನಿಸಿದ್ದ ತಂಡದ ಮಾಲೀಕತ್ವದ ಸಂಸ್ಥೆ ಡೆಕ್ಕನ್ ಕ್ರಾನಿಕಲ್ ಹೋಲ್ಡಿಂಗ್ಸ್ ಲಿಮಿಟೆಡ್ (ಡಿಸಿಎಚ್‌ಎಲ್) ನಷ್ಟ ಪರಿಹಾರವಾಗಿ ₹8000 ಕೋಟಿ ಕೊಡುವಂತೆ ಮುಂಬೈ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿತ್ತು.

2020ರ ಜುಲೈನಲ್ಲಿ ಬಿಸಿಸಿಐ 4814.67 ಕೋಟಿ ಪರಿಹಾರ ನೀಡುವಂತೆ ಏಕಸದಸ್ಯ ಪೀಠವು ತೀರ್ಪು ನೀಡಿತ್ತು. ಬಿಸಿಸಿಐ ಮೇಲ್ಮನವಿ ಸಲ್ಲಿಸಿತ್ತು. ಅದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಟೇಲ್ ಪರ, ವಿರೋಧ ವಾದಗಳನ್ನು ಪರಿಶೀಲಿಸಿ ಬುಧವಾರ ಬಿಸಿಸಿಐ ಪರವಾಗಿ ತೀರ್ಪು ನೀಡಿದರು.

ಫ್ರ್ಯಾಂಚೈಸಿಯು ಒಪ್ಪಂದದ ನಿಯಮಗಳನ್ನು ಪಾಲಿಸದ ಕಾರಣ ಬಿಸಿಸಿಐ ಮತ್ತು ಐಪಿಎಲ್ ಆಡಳಿತ ಸಮಿತಿಗಳು ವಜಾ ಕ್ರಮ ಕೈಗೊಂಡಿದ್ದು ಸರಿ ಇದೆ ಎಂದು ಮಂಡಳಿಯ ಪರ ವಕೀಲರು ವಾದ ಮಂಡಿಸಿದರು.



ರೋಹನ್ ಬೋಪಣ್ಣ (ಎಡ) ಮತ್ತು ದಿವಿಜ್ ಶರಣ್ –ಪಿಟಿಐ ಸಂಗ್ರಹ ಚಿತ್ರ

ನೊವೆಂಟಿ ಓಪನ್ ಟೆನಿಸ್: ಕ್ವಾರ್ಟರ್‌ಗೆ ಬೋಪಣ್ಣ– ದಿವಿಜ್

ಹಾಲೆ, ಜರ್ಮನಿ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ದಿವಿಜ್ ಶರಣ್ ಜೋಡಿಯು ನೊವೆಂಟಿ ಓಪನ್ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದೆ.

ಬುಧವಾರ ಇಲ್ಲಿ ನಡೆದ ಪುರುಷರ ಡಬಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಭಾರತದ ಜೋಡಿಯು 7-6, 6-4ರಿಂದ ಎರಡನೇ ಶ್ರೇಯಾಂಕದ, ಫ್ರಾನ್ಸ್, ಪೋಲೆಂಡ್ ಜೋಡಿ ಲೂಕಾಸ್ ಕುಬೊಟ್– ಎಡ್ವರ್ಡ್ ರೋಜರ್ ವ್ಯಾಸೆಲಿನ್ ಅವರನ್ನು ಪರಾಭವಗೊಳಿಸಿದರು. ಡಬಲ್ಸ್ ವಿಭಾಗದಲ್ಲಿ ಟೋಕಿಯೊ ಒಲಿಂಪಿಕ್ಸ್ ಅರ್ಹತೆಯ ಮೇಲೆ ಬೋಪಣ್ಣ–ದಿವಿಜ್ ಕಣ್ಣಿಟ್ಟಿದ್ದಾರೆ. ಒಲಿಂಪಿಕ್ಸ್ ಪ್ರವೇಶಕ್ಕೆ ಪರಿಗಣಿಸಲು ಕಟ್‌ಆಫ್ ರ್‍ಯಾಂಕಿಂಗ್‌ಗೆ ನಿಗದಿಪಡಿಸಿದ್ದ ಜೂನ್ 14ರ ಅಂತ್ಯಕ್ಕೆ ಬೋಪಣ್ಣ (38) ಹಾಗೂ ದಿವಿಜ್ (75) ಜೊತೆಗೂಡಿ 113ನೇ ರ್‍ಯಾಂಕ್ ಗಳಿಸಿದ್ದಾರೆ.

ಮಿಲ್ಖಾ ಸಿಂಗ್ ಐಸಿಯುನಿಂದ ಸ್ಥಳಾಂತರ

ಚಂಡೀಗಡ (ಪಿಟಿಐ): ಭಾರತದ ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಅವರ ಆರೋಗ್ಯ ಸ್ಥಿರವಾಗಿದೆ. ಕೋವಿಡ್ ತೀವ್ರ ನಿಗಾ ಘಟಕ ವಾರ್ಡ್‌ನಿಂದ ಅವರನ್ನು ಬೇರೆ ವಿಭಾಗಕ್ಕೆ ಸ್ಥಳಾಂತರ ಮಾಡಲಾಗಿದೆ ಎಂದು ಕುಟುಂಬದ ವಕ್ತಾರರು ಹೇಳಿದ್ದಾರೆ.

ಕೊರೊನಾ ಸೋಂಕಿತರಾಗಿರುವ 91 ವರ್ಷದ ಮಿಲ್ಖಾ ಸಿಂಗ್, ಸದ್ಯ ಇಲ್ಲಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಮಿಲ್ಖಾ ಸಿಂಗ್ ಆರೋಗ್ಯವಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಕೋವಿಡ್ ಐಸಿಯುನಿಂದ ಸ್ಥಳಾಂತರಗೊಂಡ ಬಳಿಕ ಅವರ ಪರೀಕ್ಷಾ ವರದಿ ನೆಗೆಟಿವ್ ಬಂದಿದೆ’ ಎಂದು ಆಸ್ಪತ್ರೆಯ ಮೂಲಗಳೂ ತಿಳಿಸಿವೆ. ಮಿಲ್ಖಾ ಸಿಂಗ್ ಪತ್ನಿ, ಭಾರತ ವಾಲಿಬಾಲ್ ತಂಡದ ಮಾಜಿ ನಾಯಕಿ ನಿರ್ಮಲ್ ಕೌರ್ ಅವರು ಕೋವಿಡ್‌ನಿಂದಲೇ ಭಾನುವಾರ ನಿಧನರಾಗಿದ್ದಾರೆ.

ವಿಂಬಲ್ಡನ್: ವೀನಸ್‌ಗೆ ವೈಲ್ಡ್ ಕಾರ್ಡ್

ಲಂಡನ್ (ಎಪಿ): ಮಾಜಿ ಚಾಂಪಿಯನ್‌ಗಳಾದ ಅಮೆರಿಕದ ವೀನಸ್ ವಿಲಿಯಮ್ಸ್ ಹಾಗೂ ಇಂಗ್ಲೆಂಡ್‌ನ ಆ್ಯಂಡಿ ಮರೆ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಗೆ ವೈಲ್ಡ್ ಕಾರ್ಡ್ ಪ್ರವೇಶ ಗಿಟ್ಟಿಸಿದ್ದಾರೆ.

ಟೂರ್ನಿಯ ಬಹುಮಾನ ಮೊತ್ತವನ್ನೂ 2019ರಲ್ಲಿ ಇದ್ದುದ್ದಕ್ಕಿಂತ ಶೇಕಡಾ 28ರಷ್ಟು ಕಡಿತ ಮಾಡಲಾಗಿದೆ.

ಪ್ರಜಾವಾಣಿ ಅಂಗೈಯಲ್ಲಿ ಅದೃಷ್ಟ
ಊಹಿಸಿ...ಗಳಿಸಿ!
112 ರಿಂದ 127ರಲ್ಲಿ ಯಾವ 6 ಸಮ ಸಂಖ್ಯೆಗಳು ನಾಳೆ ಪ್ರಕಟವಾಗಲಿವೆ
ನಮ್ಮ ಹಾಗೂ ನಿಮ್ಮ ಉತ್ತರ ಒಂದೇ ಇದ್ದರೆ, ನಂತರ ನಡೆಯುವ ಲಕ್ಕಿ ಡ್ರಾನಲ್ಲಿ ಬಹುಮಾನ ಪಡೆಯುವಿರಿ.
www.bit.ly/adhrusta ಗೆ ಲಾಗಿನ್ ಆಗಿ, ಸಂಜೆ 6 ಗಂಟೆಯೊಳಗೆ ನಿಮ್ಮ ಉತರ ಕಳುಹಿಸಿ
ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ ₹500 ಗಿಫ್ಟ್ ವೌಚರ್
ಬಂಪರ್ ಬಹುಮಾನ*
₹25000 ಮೌಲ್ಯದ ಗೋಲ್ಡ್ ವೌಚರ್
ಹಿಂದಿನ ಪ್ರಶ್ನೆಗೆ ಉತ್ತರ
69 71 77 79



